prajavani.net prajavani www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ


**ಮಲ್ಡರ್ ತ್ರಿಶತಕ**



ದಕ್ಷಿಣ ಆಫ್ರಿಕಾ ತಂಡದ ನಾಯಕ ವಿಯಾನ್ ಮಲ್ಡರ್ ಅವರು ಜಿಂಬಾಬ್ವೆ ವಿರುದ್ಧದ ಎರಡನೇ ಟೆಸ್ಟ್ ಪಂದ್ಯದಲ್ಲಿ ಸೋಮವಾರ ಅಜೇಯ ತ್ರಿಶತಕ ದಾಖಲಿಸಿದರು

ರನ್ 367* | ಎಸೆತ 334 | ಬೌಂಡರಿ 49 | ಸಿಕ್ಸರ್ 4

**ಮಹೇಶ್ ಬಾಬುಗೆ ನೋಟಿಸ್**



ನಟ ಮಹೇಶ್ ಬಾಬು ಅವರಿಗೆ ರಂಗಾರೆಡ್ಡಿ ಜಿಲ್ಲಾ ಗ್ರಾಹಕ ಆಯೋಗವು ನೋಟಿಸ್ ಜಾರಿ ಮಾಡಿದೆ. ರಿಯಲ್ ಎಸ್ಟೇಟ್ ಕಂಪನಿ ಸಾಯಿ ಸೂರ್ಯ ಡೆವಲಪರ್ಸ್‌ಗೆ ಅವರು ಬ್ರಾಂಡ್ ರಾಯಭಾರಿಯಾಗಿದ್ದ ಪ್ರಕರಣವಿದು

ಸೆನ್ಸೆಕ್ಸ್ 83,442 | ನಿಫ್ಟಿ 25,461 | $/₹ 85.94 | ಚಿನ್ನ (Std. 10g) ₹1.01 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.14 ಲಕ್ಷ (ಬೆಂಗಳೂರು)

# ಹುಟ್ಟೂರಿನ ಸರ್ಕಾರಿ ಶಾಲೆಗೆ ₹14 ಕೋಟಿ ವೆಚ್ಚದ ಕಟ್ಟಡ

• ಓದೇಶ ಸಕಲೇಶಪುರ

**ಚನ್ನಪಟ್ಟಣ (ರಾಮನಗರ):** ಅಕ್ಷರ ಕಲಿಸಿದ ಸರ್ಕಾರಿ ಶಾಲೆಯ ಶಿಥಿಲಾವಸ್ಥೆ ಕಂಡ ವೈದ್ಯರೊಬ್ಬರು ₹14 ಕೋಟಿ ವೆಚ್ಚದಲ್ಲಿ ತಮ್ಮೂರಿನ ಶಾಲೆಗೆ ಹೈಟೆಕ್ ಕಟ್ಟಡ ನಿರ್ಮಿಸಿ ಕೊಟ್ಟಿದ್ದಾರೆ.

ಅತ್ಯುತ್ತಮ ಸೌಲಭ್ಯಗಳಿರುವ ಹೊಂಗನೂರಿನ ಸರ್ಕಾರಿ ಶಾಲೆಯ ಸುಸಜ್ಜಿತ ಕಟ್ಟಡ ಯಾವ ಖಾಸಗಿ ಇಂಟರ್ ನ್ಯಾಷನಲ್ ಶಾಲೆಗಳ ಕಟ್ಟಡಗಳಿಗೂ ಕಡಿಮೆ ಇಲ್ಲ. ಹೊಂಗನೂರಿನ ಡಾ. ಎಚ್.ಎಂ. ವೆಂಕಟಪ್ಪ ಅವರು ತಂದೆ–ತಾಯಿ ಸ್ಮರಣಾರ್ಥ ತಮ್ಮದೇ ಕಣ್ವ ಫೌಂಡೇಷನ್‌ನಿಂದ ಶಾಲೆಗೆ ಹೊಸ ರೂಪ ಕೊಟ್ಟಿದ್ದಾರೆ.

‘ಶ್ರೀಮತಿ ಚನ್ನಮ್ಮ ಮಂಚೇಗೌಡ ಕರ್ನಾಟಕ ಪಬ್ಲಿಕ್ ಸ್ಕೂಲ್’ಗೆ ಸುತ್ತಮುತ್ತಲಿನ ಗ್ರಾಮಗಳ ಹೆಚ್ಚಿನ ಪೋಷಕರು ಪೈಪೋಟಿಗೆ ಬಿದ್ದು ತಮ್ಮ ಮಕ್ಕಳನ್ನು ಸೇರಿಸುತ್ತಿದ್ದಾರೆ. ಈ ವರ್ಷ ಬೇಸಿಗೆ ರಜೆ ಮುಗಿಯುವ ಹೊತ್ತಿಗೆ ಹಳೆ ಶಿಥಿಲ ಕಟ್ಟಡಗಳನ್ನು ಕೆಡವಿ ಹೊಸ ಕಟ್ಟಡಕ್ಕೆ ತರಗತಿಗಳನ್ನು ಸ್ಥಳಾಂತರಿಸಲಾಗಿದೆ.

ಎರಡು ಪ್ರತ್ಯೇಕ ಕಟ್ಟಡಗಳ ಈ ಹೈಟೆಕ್ ಶಾಲೆ 1,500 ವಿದ್ಯಾರ್ಥಿಗಳ ಸಾಮರ್ಥ್ಯ ಹೊಂದಿದೆ. ಎಲ್‌ಕೆಜಿಯಿಂದ ದ್ವಿತೀಯ ಪಿಯುಸಿವರೆಗೆ ಒಂದೇ ಸೂರಿನಡಿ ಗುಣಮಟ್ಟದ ಶಿಕ್ಷಣಕ್ಕೆ ವ್ಯವಸ್ಥೆ ಇದೆ. ಗ್ರಾಮದ ಸುತ್ತಲಿನ 12 ಹಳ್ಳಿಗಳ ಮಕ್ಕಳು ಇಲ್ಲಿ ಓದುತ್ತಿದ್ದಾರೆ.

ಸದ್ಯ ಪೂರ್ವ ಪ್ರಾಥಮಿಕ, ಕಿರಿಯ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಒಳಗೊಂಡಂತೆ ಸುಮಾರು 850 ವಿದ್ಯಾರ್ಥಿಗಳು ಇಲ್ಲಿ ಓದುತ್ತಿದ್ದಾರೆ. ಪ್ರಸಕ್ತ ಸಾಲಿನಿಂದ ಎಲ್‌ಕೆಜಿ, ಯುಕೆಜಿ ಆರಂಭಿಸಲಾಗಿದೆ. ದ್ವಿತೀಯ ಪಿಯುವರೆಗೆ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ಶಿಕ್ಷಣಕ್ಕೆ ಇಲ್ಲಿ ಸೌಲಭ್ಯ ಕಲ್ಪಿಸಲಾಗಿದೆ. ಈ ವರ್ಷ 150ಕ್ಕೂ ಅಧಿಕ ವಿದ್ಯಾರ್ಥಿಗಳ ದಾಖಲಾತಿಯಾಗಿದೆ.

‘ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳಲ್ಲೂ ಕಾನ್ವೆಂಟ್ ಮಾದರಿ ಶಿಕ್ಷಣ ಸಿಗಬೇಕು ಎಂಬ ಆಶಯದೊಂದಿಗೆ ಶಾಲೆ ಕಟ್ಟಿಸಿದ್ದೇನೆ. ಜನರಿಂದಲೂ ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ. ಶಾಲೆ ನಿರ್ವಹಣೆಗಾಗಿ ಫೌಂಡೇಷನ್‌ನಿಂದ ಪ್ರತಿ ವರ್ಷ ₹10 ಲಕ್ಷ ನೀಡಲಾಗುವುದು. ಖಾಸಗಿ ಶಾಲೆ ಮಾದರಿಯಲ್ಲಿ ನಿರ್ವಹಣೆ ಮಾಡಿಕೊಂಡು ಹೋಗಬೇಕು. ಅಕ್ಕಪಕ್ಕದ 12 ಗ್ರಾಮಗಳ ಮಕ್ಕಳು ಎರಡ್ಮೂರು ಕಿಲೋ ಮೀಟರ್ ನಡೆದುಕೊಂಡು ಶಾಲೆಗೆ ಬರುತ್ತಾರೆ. ಅವರಿಗಾಗಿ ಎರಡು ಶಾಲಾ ಬಸ್ ಸೌಲಭ್ಯ ಕಲ್ಪಿಸಲಾಗುವುದು’ ಎಂದು ಡಾ. ವೆಂಕಟಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

**ಒಳ್ಳೆ ಸುದ್ದಿ**



**ಶಾಲೆ ಕಟ್ಟಿಸಿದ್ದರಿಂದ ನಿಮಗೇನು ಲಾಭ ಎಂದು ಕೆಲವರು ಕೇಳುತ್ತಾರೆ. ಈ ಶಾಲೆಯ ವಿದ್ಯಾರ್ಥಿಗಳು ಚೆನ್ನಾಗಿ ಓದಿ ಉನ್ನತ ಹುದ್ದೆಗೆ ಹೋಗಬೇಕು. ಅದೇ ನನಗೆ ಸಿಗುವ ದೊಡ್ಡ ಲಾಭ. ಆಗಲೇ ನನ್ನ ಶ್ರಮ ಸಾರ್ಥಕವಾಗುತ್ತದೆ**
**ಡಾ. ಎಚ್.ಎಂ.ವೆಂಕಟಪ್ಪ,** ಸಂಸ್ಥಾಪಕ, ಕಣ್ವ ಫೌಂಡೇಷನ್

‘ಶಾಲೆಯಲ್ಲಿ ಕೆಲ ಶಿಕ್ಷಕರ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನಿಯೋಜಿಸಿಕೊಳ್ಳಲಾಗಿದೆ. ಸರ್ಕಾರ ಅವರಿಗೆ ನಿಗದಿಪಡಿಸಿರುವ ಸಂಬಳ ಕಡಿಮೆ ಇದೆ. ಹಾಗಾಗಿ, ನಮ್ಮ ಶಾಲೆಗೆ ನೇಮಕವಾಗಿರುವವರಿಗೆ ಫೌಂಡೇಷನ್‌ನಿಂದ ಹೆಚ್ಚುವರಿಯಾಗಿ ₹5 ಸಾವಿರ ಪಾವತಿಸಲಾಗುವುದು’ ಎಂದರು.

8ನೇ ತರಗತಿವರೆಗೆ ತಮ್ಮೂರಿನ ಈ ಸರ್ಕಾರಿ ಶಾಲೆಯಲ್ಲಿ ಕಲಿತ ವೆಂಕಟಪ್ಪ, ಮುಂದೆ ಸರ್ಕಾರಿ ವೈದ್ಯರಾಗಿ 24 ವರ್ಷ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದರು. ನಂತರ, ಬೆಂಗಳೂರಿನಲ್ಲಿ ಕಣ್ವ ಡಯಾಗ್ನಾಸ್ಟಿಕ್ ಕೇಂದ್ರ ಆರಂಭಿಸಿದ ಅವರು ಕಣ್ವ ಫೌಂಡೇಷನ್ ಆರಂಭಿಸಿ ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡಿದ್ದಾರೆ.

### ಎಲ್ಲ ಸೌಲಭ್ಯಗಳಿವೆ



‘ಶ್ರೀಮತಿ ಚನ್ನಮ್ಮ ಮಂಚೇಗೌಡ ಕರ್ನಾಟಕ ಪಬ್ಲಿಕ್ ಸ್ಕೂಲ್’

ಒಟ್ಟು 51 ಕೊಠಡಿಗಳ ಶಾಲೆಯಲ್ಲಿ 10 ಸಾವಿರ ಪುಸ್ತಕಗಳ ಸಾಮರ್ಥ್ಯದ ಗ್ರಂಥಾಲಯ ಇದೆ. 40 ಕಂಪ್ಯೂಟರ್ ಹೊಂದಿರುವ ಲ್ಯಾಬ್, ವಿಜ್ಞಾನ ಹಾಗೂ ಗಣಿತ ಪ್ರಯೋಗಾಲಯ, ಸುಸಜ್ಜಿತ ಡೆಸ್ಕ್ ಹಾಗೂ ಡಿಜಿಟಲ್ ಬೋರ್ಡ್‌ಗಳಿವೆ.

ಕಟ್ಟಡದ ಪ್ರತಿ ಅಂತಸ್ತಿನಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯಗಳಿವೆ.

ಮಕ್ಕಳಿಗೆ ಆಟಿಕೆ, ಸಭಾಂಗಣ, ಬಾಸ್ಕೆಟ್‌ಬಾಲ್ ಮೈದಾನ ಸೇರಿದಂತೆ ವಿವಿಧ ಅಂಕಣಗಳನ್ನು ಒಳಗೊಂಡ ಮೈದಾನವಿದೆ. ಶುದ್ಧ ಕುಡಿಯುವ ನೀರಿಗಾಗಿ ಆರ್‌ಒ ಘಟಕ ಸೇರಿದಂತೆ ಖಾಸಗಿ ಶಾಲೆಗಳನ್ನು ಮೀರಿಸುವ ಸೌಲಭ್ಯಗಳನ್ನು ವೆಂಕಟಪ್ಪನವರು ಕಲ್ಪಿಸಿಕೊಟ್ಟಿದ್ದಾರೆ ಎಂದು ಪ್ರೌಢಶಾಲೆ ವಿಭಾಗದ ಮುಖ್ಯ ಶಿಕ್ಷಕಿ ಬಾಲಸರಸ್ವತಿ ಹೇಳಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

# ಎಸ್ಸೆಸ್ಸೆಲ್ಸಿ ತೇರ್ಗಡೆಗೆ 33 ಅಂಕ

## ಸಿಬಿಎಸ್‌ಇ ಮಾದರಿ ಅಳವಡಿಕೆ: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಪ್ರಸ್ತಾವ

• ಚಂದ್ರಹಾಸ ಹಿರೇಮಳಲಿ

**ಬೆಂಗಳೂರು:** ರಾಜ್ಯ ಪಠ್ಯಕ್ರಮ ಅನುಸರಿಸುವ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳ ಮಕ್ಕಳು ಇನ್ನು ಮುಂದೆ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮಾದರಿಯಲ್ಲೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎದುರಿಸಲಿದ್ದಾರೆ.

ಸಿಬಿಎಸ್‌ಇ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಆಂತರಿಕ ಅಂಕಗಳೂ ಸೇರಿ ಒಟ್ಟಾರೆ ಶೇ 33 ಅಂಕ ಪಡೆದರೂ ತೇರ್ಗಡೆಯಾಗುತ್ತಾರೆ. ಪ್ರತಿ ವಿಷಯಕ್ಕೂ 20 ಆಂತರಿಕ ಅಂಕಗಳಿದ್ದು, 80 ಅಂಕಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗುತ್ತದೆ. ಎರಡೂ ಸೇರಿ 100ಕ್ಕೆ ಕನಿಷ್ಠ 33 ಅಂಕ ಪಡೆದವರು ಉತ್ತೀರ್ಣರಾಗುತ್ತಾರೆ. ಇದೇ ಮಾದರಿಯನ್ನು ಎಸ್‌ಎಸ್‌ಎಲ್‌ಸಿಯಲ್ಲೂ ಅಳವಡಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ಸೇರಿ ಪ್ರಥಮ ಭಾಷೆಯನ್ನು 125ಕ್ಕೆ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ದ್ವಿತೀಯ ಹಾಗೂ ತೃತೀಯ ಭಾಷಾ ವಿಷಯಗಳ ಪರೀಕ್ಷೆಯನ್ನು 100 ಅಂಕಗಳಿಗೆ ನಡೆಸಲಾಗುತ್ತದೆ. ಇದರಲ್ಲಿ ಪ್ರಥಮ ಭಾಷೆ 25 ಹಾಗೂ ಉಳಿದ ಇತರೆ ವಿಷಯಗಳಲ್ಲಿ ತಲಾ 20 ಅಂಕಗಳು ಆಂತರಿಕ ಮೌಲ್ಯಮಾಪನಕ್ಕೆ ನಿಗದಿ ಮಾಡಲಾಗಿದೆ. ಸಿಬಿಎಸ್‌ಇ ಮಾದರಿಯ ಹೊಸ ನಿಯಮ ಜಾರಿಯಾದರೆ ಒಬ್ಬ ವಿದ್ಯಾರ್ಥಿ ಒಂದು ವಿಷಯದಲ್ಲಿ 20 ಆಂತರಿಕ ಅಂಕ ಪಡೆದರೆ, ಲಿಖಿತ ಪರೀಕ್ಷೆಯಲ್ಲಿ 13 ಬಂದರೂ ಸಾಕು ಆ ವಿಷಯದಲ್ಲಿ ತೇರ್ಗಡೆಯಾಗುತ್ತಾನೆ.

**35 ಅಂಕ ಕಡ್ಡಾಯ:** ಈಗಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷಾ ನಿಯಮದ ಪ್ರಕಾರ ಒಬ್ಬ ವಿದ್ಯಾರ್ಥಿ ಉತ್ತೀರ್ಣರಾಗಲು ಶೇ 35 ಅಂಕಗಳನ್ನು ಪಡೆಯಬೇಕು.

3B

**ಪರೀಕ್ಷಾ ಮಂಡಳಿ ಪ್ರಸ್ತಾವ ಸಲ್ಲಿಸಿದೆ. ಈ ಕುರಿತು ವಿಸ್ತೃತ ಚರ್ಚೆ ನಡೆಸಿ, ಮಕ್ಕಳ ಹಿತದೃಷ್ಟಿಗೆ ಅನುಗುಣವಾಗಿ ನಿರ್ಧಾರ ತೆಗೆದುಕೊಳ್ಳಲಾಗುವುದು**
**ಮಧು ಬಂಗಾರಪ್ಪ**
ಶಾಲಾ ಶಿಕ್ಷಣ ಸಚಿವ

**ಕೇಂದ್ರೀಯ ಪರೀಕ್ಷಾ ಪದ್ಧತಿಗೂ, ರಾಜ್ಯಕ್ಕೂ ವ್ಯಾತ್ಯಾಸವಿದೆ. ಒಂದೇ ಪರೀಕ್ಷಾ ಮಾದರಿ ಪರಿಚಯಿಸಿದರೆ ಮಕ್ಕಳಲ್ಲಿನ ಕೀಳರಿಮೆ ದೂರವಾಗುತ್ತದೆ.**
**ಡಿ. ಶಶಿಕುಮಾರ್,** ಸಂಚಾಲಕ, ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿ



| ವಿಷಯ | ಲಿಖಿತ ಪರೀಕ್ಷೆ | ಆಂತರಿಕ ಅಂಕ |
|---|---|---|
| ಪ್ರಥಮ ಭಾಷೆ | 80 | 20 |
| ದ್ವಿತೀಯ ಬಾಷೆ | 80 | 20 |
| ತೃತೀಯ ಭಾಷೆ | 80 | 20 |
| ಗಣಿತ | 80 | 20 |
| ವಿಜ್ಞಾನ | 80 | 20 |
| ಸಮಾಜ ವಿಜ್ಞಾನ | 80 | 20 |
| ಒಟ್ಟು | 480+120 = 600 | |

### ಪ್ರಥಮ ಭಾಷೆ: 125ರ ಬದಲು 100ಕ್ಕೆ

ಕನ್ನಡ ಸೇರಿದಂತೆ ಎಸ್‌ಎಸ್‌ಎಲ್‌ಸಿ ಪ್ರಥಮ ಭಾಷಾ ಪರೀಕ್ಷೆಯ ಅಂಕವನ್ನು 125ರ ಬದಲು 100ಕ್ಕೆ ಸೀಮಿತಗೊಳಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ನಿರ್ಧರಿಸಿದೆ.

2026ರ ಮಾರ್ಚ್/ಏಪ್ರಿಲ್‌ನಲ್ಲಿ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇತರೆ ಐದು ವಿಷಯಗಳಂತೆ ಕನ್ನಡಕ್ಕೂ 100 ಅಂಕ ಇರುತ್ತದೆ. ಒಟ್ಟಾರೆ ಅಂಕಗಳು 600 ಇರುತ್ತವೆ. ಇದುವರೆಗೂ 625 ಅಂಕಗಳು ಇದ್ದವು. ಪ್ರತಿ ವಿಷಯದಲ್ಲೂ 20 ಅಂಕ ಆಂತರಿಕ ಮೌಲ್ಯಮಾಪನ ಹಾಗೂ 80 ಅಂಕ ಲಿಖಿತ ಪರೀಕ್ಷೆ ಒಳಗೊಂಡಿರುತ್ತದೆ. ನಿವೃತ್ತ ಪ್ರಾಧ್ಯಾಪಕ ಗಣೇಶ್ ಭಟ್ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಪರೀಕ್ಷೆ ಸುಧಾರಣಾ ಸಮಿತಿಯು, ಮುಂಬರುವ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಒಂದು ಅಂಕದ, ಬಹು ಆಯ್ಕೆಯ ಪ್ರಶ್ನೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಅಳವಡಿಸಲು, ಪ್ರತಿ ವಿಭಾಗದಲ್ಲೂ ಹೆಚ್ಚು ಪ್ರಶ್ನೆಗಳನ್ನು ನೀಡಿ, ಯಾವುದಾದರೂ ಎರಡು, ಮೂರು, ನಾಲ್ಕು ಪ್ರಶ್ನೆಗಳನ್ನು ಆಯ್ಕೆ ಮಾಡಿಕೊಂಡು ಉತ್ತರ ಬರೆಯುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ನೀಡಲು ಸಮಿತಿ ಚರ್ಚೆ ನಡೆಸಿದೆ.

### ಕೋವಿಡ್ ಅವಧಿಯ ಕೃಪಾಂಕ ರದ್ದು

ಕೋವಿಡ್ ಅವಧಿಯಲ್ಲಿನ ಕಲಿಕಾ ನಷ್ಟ ಸರಿದೂಗಿಸಲು ಕೃಪಾಂಕ ನೀಡುವ ಪದ್ಧತಿ ಆರಂಭಿಸಲಾಗಿತ್ತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೂರು ವಿಷಯಗಳಲ್ಲಿ 35 ಅಂಕ ಪಡೆದಿದ್ದು, ಉಳಿದ ಮೂರು ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದರೆ ಪ್ರತಿ ವಿಷಯದಲ್ಲೂ ಗರಿಷ್ಠ 10 ಕೃಪಾಂಕ ನೀಡಿ ತೇರ್ಗಡೆ ಮಾಡಲಾಗುತ್ತಿತ್ತು.

2024ರಲ್ಲಿ ವೆಬ್‌ಕಾಸ್ಟಿಂಗ್ ಪರಿಚಯಿಸಿದ ನಂತರ ಕೃಪಾಂಕ ಪಡೆಯಲು ಇದ್ದ ಶೇ 35 ಅರ್ಹ ಅಂಕಗಳನ್ನು 25ಕ್ಕೆ ಇಳಿಸಿ, ಗರಿಷ್ಠ 20 ಕೃಪಾಂಕ ನೀಡಲಾಗಿತ್ತು. ಇದರಿಂದ ಪರೀಕ್ಷೆ ಬರೆದಿದ್ದ 8.59 ಲಕ್ಷ ವಿದ್ಯಾರ್ಥಿಗಳಲ್ಲಿ 1.69 ಲಕ್ಷ ವಿದ್ಯಾರ್ಥಿಗಳು ಕೃಪಾಂಕದ ಆಧಾರದಲ್ಲೇ ತೇರ್ಗಡೆಯಾಗಿದ್ದರು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾದ ನಂತರ 20 ಕೃಪಾಂಕ ಕೈಬಿಟ್ಟು, ಹಿಂದಿನಂತೆ 10 ಕೃಪಾಂಕ ಮುಂದುವರಿಸಲಾಗಿತ್ತು. ಮುಂಬರುವ ಪರೀಕ್ಷೆಯಲ್ಲಿ ಸಿಬಿಎಸ್‌ಇ ಮಾದರಿ ಅಳವಡಿಕೆಯಿಂದಾಗಿ ಕೃಪಾಂಕ ಪದ್ಧತಿ ಸಂಪೂರ್ಣ ಸ್ಥಗಿತವಾಗಲಿದೆ.

# ಹಠಾತ್ ಸಾವು ಇನ್ನು ‘ಅಧಿಸೂಚಿತ ಕಾಯಿಲೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಹಠಾತ್ ಸಾವನ್ನು ಇನ್ನು ಮುಂದೆ ‘ಅಧಿಸೂಚಿತ ಕಾಯಿಲೆ’ ಎಂದು ಪರಿಗಣಿಸಲು ಮತ್ತು ಆಸ್ಪತ್ರೆಯಿಂದ ಹೊರಗೆ ಹೃದಯಾಘಾತದಿಂದ ಮೃತಪಟ್ಟವರ ಮರಣೋತ್ತರ ಪರೀಕ್ಷೆ ಕಡ್ಡಾಯಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ. ಕೆ.ಎಸ್. ರವೀಂದ್ರನಾಥ್ ನೇತೃತ್ವದ ತಾಂತ್ರಿಕ ಸಲಹಾ ಸಮಿತಿ ಸಲ್ಲಿಸಿರುವ ವರದಿಯಲ್ಲಿರುವ ಶಿಫಾರಸುಗಳ ಆಧಾರದಲ್ಲಿ ತೆಗೆದುಕೊಂಡಿರುವ ನಿರ್ಧಾರಗಳ ಕುರಿತು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಸೋಮವಾರ ಮಾಹಿತಿ ನೀಡಿದರು.

ತಾಂತ್ರಿಕ ಸಲಹಾ ಸಮಿತಿಯ ವರದಿ ಸ್ವೀಕರಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಿನೇಶ್ ಗುಂಡೂರಾವ್, ‘ಯುವ ವರ್ಗದಲ್ಲಿ ಹೃದಯಾಘಾತ, ಹಠಾತ್ ಸಾವು ಸಂಭವಿಸುತ್ತಿರುವ ಕಾರಣ, ಮುಂದಿನ ಶೈಕ್ಷಣಿಕ ವರ್ಷದಿಂದ ಹೃದಯಾಘಾತ ಹಾಗೂ ಹೃದಯದ ಆರೋಗ್ಯ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ವಿಚಾರವನ್ನು ಪಠ್ಯಪುಸ್ತಕದಲ್ಲಿ ಅಳವಡಿಸಲು ಚಿಂತನೆ ನಡೆದಿದೆ. ತಜ್ಞರ ಸಮಿತಿಯ ಶಿಫಾರಸಿನಂತೆ ಕೈಗೊಳ್ಳಲಿರುವ ಎಲ್ಲ ಕ್ರಮಗಳ ಕುರಿತು ಮುಖ್ಯಮಂತ್ರಿ ಜೊತೆ ಸಮಾಲೋಚನೆ ನಡೆಸಿ ಮುಂದುವರಿಯಲಾಗುವುದು’ ಎಂದರು.

‘ಜಯದೇವ ಸಂಸ್ಥೆಯಲ್ಲಿರುವ ದಾಖಲೆಗಳನ್ನು ಆಧರಿಸಿ ಕೋವಿಡ್ ಪೂರ್ವ ಮತ್ತು ನಂತರದ ಪರಿಸ್ಥಿತಿಯ ಅಧ್ಯಯನ ನಡೆಸಿ ಸಮಿತಿಯು ವರದಿ ನೀಡಿದೆ. ಕೋವಿಡ್ ಕಾಣಿಸಿಕೊಂಡವರಲ್ಲಿ ಹೃದಯಾಘಾತ, ಇತರೆ ಕಾಯಿಲೆಗಳು ಸ್ವಲ್ಪ ಹೆಚ್ಚಾಗಿರುವುದು ಕಂಡುಬಂದಿದೆ. ಇದು ಕೋವಿಡ್ ಲಸಿಕೆಯಿಂದ ಅಲ್ಲ. ಕೊರೊನಾ ಸೋಂಕಿನಿಂದ ಆಗಿದೆ.

3B

### ಆರೋಗ್ಯ ಇಲಾಖೆಯ ತೀರ್ಮಾನ

- ಪುನೀತ್ ರಾಜ್‌ಕುಮಾರ್ ‘ಹೃದಯ ಜ್ಯೋತಿ’ ಯೋಜನೆ ಎಲ್ಲ ತಾಲ್ಲೂಕು ಆಸ್ಪತ್ರೆಗಳಿಗೆ ವಿಸ್ತರಣೆ
- ವರ್ಷಕ್ಕೊಮ್ಮೆ ಸರ್ಕಾರಿ ನೌಕರರು ಮತ್ತು ಗುತ್ತಿಗೆ ನೌಕರರಿಗೂ ಕನಿಷ್ಠ ಆರೋಗ್ಯ ತಪಾಸಣೆಗೆ ವ್ಯವಸ್ಥೆ
- ಖಾಸಗಿ ಕಂಪನಿ, ಕಾರ್ಖಾನೆ, ಉದ್ದಿಮೆಗಳ ನೌಕರರಿಗೆ ವರ್ಷಕ್ಕೊಮ್ಮೆ ಯಾದರೂ ಆರೋಗ್ಯ ತಪಾಸಣೆಗೆ ನಿರ್ದೇಶನ
- 15 ವರ್ಷದ ಶಾಲಾ ಮಕ್ಕಳಿಗೆ ವರ್ಷಕ್ಕೊಮ್ಮೆ ಇಲಾಖೆಯಿಂದಲೇ ಆರೋಗ್ಯ ತಪಾಸಣೆ
- ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲಾ ಪಠ್ಯದಲ್ಲಿ ಹೃದಯ ಸಂಬಂಧಿ ಪಾಠ ಅಳವಡಿಕೆ

### ‘ಅಧಿಸೂಚಿತ ಕಾಯಿಲೆ’ ಎಂದರೇನು?

ಕಾನೂನಿನ ಪ್ರಕಾರ ಸರ್ಕಾರಕ್ಕೆ ವರದಿ ಮಾಡಬೇಕಾದ ಕಾಯಿಲೆಯನ್ನು ‘ಅಧಿಸೂಚಿತ ಕಾಯಿಲೆ’ ಎಂದು ಕರೆಯಲಾಗುತ್ತದೆ.

ಹಠಾತ್ ಸಾವನ್ನು ‘ಅಧಿಸೂಚಿತ ಕಾಯಿಲೆ’ ಎಂದು ಘೋಷಿಸಿರುವುದರಿಂದ ರಾಜ್ಯದ ಎಲ್ಲ ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಕೇಂದ್ರಗಳು ಶಂಕಿತ ಮತ್ತು ದೃಢಪಟ್ಟ ಪ್ರಕರಣಗಳನ್ನು ಆರೋಗ್ಯ ಇಲಾಖೆಗೆ ಕಡ್ಡಾಯವಾಗಿ ವರದಿ ಮಾಡಬೇಕಿದೆ.



## ₹250 ಕೋಟಿ ಬಿಲ್ ಬಾಕಿ: ಆಹಾರ ಧಾನ್ಯ ಸಾಗಣೆ ಸ್ಥಗಿತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅನ್ನಭಾಗ್ಯ ಹಾಗೂ ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ (ಎನ್‌ಎಫ್‌ಎಸ್‌ಎ) ಯೋಜನೆಗಳ ಆಹಾರ ಧಾನ್ಯ ಸಾಗಣೆ ವೆಚ್ಚದ ಬಿಲ್ ಐದು ತಿಂಗಳಿನಿಂದ ಪಾವತಿ ಮಾಡದೇ ಇರುವುದನ್ನು ಖಂಡಿಸಿ, ರಾಜ್ಯ ಪಡಿತರ ಆಹಾರ ಧಾನ್ಯಗಳ ಸಗಟು ಹಾಗೂ ಚಿಲ್ಲರೆ ಸಾಗಾಣಿಕೆ ಗುತ್ತಿಗೆದಾರರ ಸಂಘವು ಆಹಾರಧಾನ್ಯ ಪೂರೈಕೆಯನ್ನು ಸೋಮವಾರದಿಂದ ಸ್ಥಗಿತಗೊಳಿಸಿದೆ.

‘ಫೆಬ್ರುವರಿಯಿಂದ ಜೂನ್‌ವರೆಗೆ ‘ಅನ್ನಭಾಗ್ಯ ಯೋಜನೆ’ ಹಾಗೂ ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಎನ್‌ಎಫ್‌ಎಸ್‌ಎ ಯೋಜನೆಯಡಿಯಲ್ಲಿ ಆಹಾರ ಧಾನ್ಯ ಸಾಗಣೆಗೆ ಮಾಡಿರುವ ವೆಚ್ಚವನ್ನು ಸರ್ಕಾರ ಪಾವತಿ ಮಾಡಿಲ್ಲ. ಹೀಗಾದರೆ ಗುತ್ತಿಗೆ ಪಡೆದಿರುವ ಲಾರಿ ಮಾಲೀಕರು ಬದುಕುವುದು ಹೇಗೆ’ ಎಂದು ಸಂಘದ ಅಧ್ಯಕ್ಷ ಜಿ.ಆರ್. ಷಣ್ಮುಗಪ್ಪ ಪ್ರಶ್ನಿಸಿದ್ದಾರೆ.

‘4,500 ಲಾರಿಗಳು ಪ್ರತಿ ತಿಂಗಳಿಗೆ 4.5 ಲಕ್ಷ ಟನ್‌ನಂತೆ ಐದು ತಿಂಗಳು ಸುಮಾರು 25 ಲಕ್ಷ ಟನ್ ಆಹಾರ ಧಾನ್ಯ ಸಾಗಣೆ ಮಾಡಿವೆ. ಬಾಕಿ ಮೊತ್ತ ಪಾವತಿಸುವಂತೆ ನಾವು ಕಳೆದ ತಿಂಗಳು ಕೋರಿದಾಗ ನಮ್ಮನ್ನು ಮಾತುಕತೆಗೆ ಕರೆದಿದ್ದರು. ಜೂನ್ 25ರ ಒಳಗೆ ₹250 ಕೋಟಿಯಲ್ಲಿ ₹100 ಕೋಟಿ ಪಾವತಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ, ಒಂದು ರೂಪಾಯಿಯನ್ನು ಕೂಡ ಬಿಡುಗಡೆ ಮಾಡಿಲ್ಲ’ ಎಂದು ತಿಳಿಸಿದ್ದಾರೆ.

9 ತಿಂಗಳ ಹಿಂದೆ ಸಾಗಾಣಿಕೆ ಟೆಂಡರ್‌ಗಳಲ್ಲಿ ಭಾಗವಹಿಸುವಾಗ ನೀಡಿದ್ದ ಇಎಂಡಿ ಮೊತ್ತವನ್ನು ಬ್ಯಾಂಕ್ ಗ್ಯಾರಂಟಿ ನೀಡಿದ ಮೇಲೂ ಗುತ್ತಿಗೆದಾರರಿಗೆ ಮರುಪಾವತಿ ಮಾಡಿಲ್ಲ. ಟೆಂಡರ್ ಆಗದವರಿಗೂ ಇಎಂಡಿ ಹಣ ಹಿಂತಿರುಗಿಸಿಲ್ಲ. ಇದುವೇ ಸುಮಾರು ₹25 ಕೋಟಿ ಮರು ಪಾವತಿ ಬಾಕಿ ಇದೆ ಎಂದು ಹೇಳಿದ್ದಾರೆ.

‘₹250 ಕೋಟಿ ಬಿಡುಗಡೆ ಆಗುವವರೆಗೂ ನಾವು ಆಹಾರ ಧಾನ್ಯ ಪೂರೈಸುವುದಿಲ್ಲ. ಮುಷ್ಕರವು ಅನಿರ್ದಿಷ್ಟಾವಧಿ ಮುಂದುವರಿಯಲಿದೆ’ ಎಂದು ತಿಳಿಸಿದ್ದಾರೆ.

## ರಾಷ್ಟ್ರೀಯ ರೈತರ ಸಮಾವೇಶ



ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಬೆಂಗಳೂರಿನ ಗಾಂಧಿ ಭವನದಲ್ಲಿ ಸೋಮವಾರ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಆಯೋಜಿಸಿದ ರಾಷ್ಟ್ರೀಯ ರೈತ ಸಮಾವೇಶದ ಉದ್ಘಾಟನೆ ಕಾರ್ಯಕ್ರಮದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಜಗಜಿತ್ ಸಿಂಗ್ ಡಲ್ಲೇವಾಲ್, ಸತನಾಮ್ ಸಿಂಗ್ ಬೇಹು, ಬಲದೇವ್ ಸಿಂಗ್ ಸಿಸ್ರಾ, ಸಂದೀಪ್ ಸಿಂಗ್, ಅಭಿಮನ್ಯು ಕೋಹರ್, ಸುಖದೇವ್ ಸಿಂಗ್ ಭೋಜರಾಜ್, ವೆಂಕಟೇಶ್ವರ ರಾವ್ ಮತ್ತು ರೈತರು ಹಸಿರು ಶಾಲು ಬೀಸಿದರು

## ಜನಗಣತಿ: ಜನರಿಂದಲೇ ದತ್ತಾಂಶಕ್ಕೆ ಪೋರ್ಟಲ್

**ನವದೆಹಲಿ (ಪಿಟಿಐ):** ‘ಕೇಂದ್ರ ಸರ್ಕಾರ ನಡೆಸಲಿರುವ ಜನಗಣತಿಗೆ ನಾಗರಿಕರು ಸ್ವಯಂ ದತ್ತಾಂಶ ದಾಖಲಿಸುವ ಸೌಕರ್ಯ ಒದಗಿಸುವಂತಹ ವೆಬ್ ಪೋರ್ಟಲ್ ಸಿದ್ಧಗೊಳ್ಳುತ್ತಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೇಶದಲ್ಲಿಯೇ ಮೊದಲ ಬಾರಿಗೆ ಡಿಜಿಟಲ್ ಗಣತಿ ನಡೆಯಲಿದ್ದು, ಗಣತಿದಾರರು ನಾಗರಿಕರ ಮಾಹಿತಿಗಳನ್ನು ಮೊಬೈಲ್ ಅಪ್ಲಿಕೇಶನ್ ಮೂಲಕ ದಾಖಲಿಸಲಿದ್ದಾರೆ. ಮನೆಗಳ ಪಟ್ಟಿ ಹಾಗೂ ಮನೆಗಳ ಗಣತಿ (ಎಚ್‌ಎಲ್‌ಒ) ಮತ್ತು ಜನಗಣತಿಯ (ಪಿಇ) ಸಂದರ್ಭದಲ್ಲಿಯೂ ಇಂತಹುದೇ ಅವಕಾಶ ನಾಗರಿಕರಿಗೆ ಸಿಗಲಿದೆ.

‘ಡಿಜಿಟಲ್ ಗಣತಿಯು ಪರಿವರ್ತನೆಯ ಹೆಜ್ಜೆಯಾಗಿದೆ. ದತ್ತಾಂಶಗಳನ್ನು ಸಂಗ್ರಹಿಸಿ, ಎಲೆಕ್ಟ್ರಾನಿಕ್ ಮಾದರಿಯಲ್ಲಿ ಕೇಂದ್ರೀಕೃತ ಸರ್ವರ್‌ಗೆ ವರ್ಗಾಯಿಸಲಾಗುತ್ತದೆ. ಇದರಿಂದ ಗಣತಿ ದತ್ತಾಂಶಗಳನ್ನು ಕಡಿಮೆ ಅವಧಿಯಲ್ಲಿ ಕ್ರೋಡೀಕರಿಸಲು ಸಾಧ್ಯವಾಗಲಿದೆ’ ಎಂದು ಅವರು ವಿವರಿಸಿದರು.

ದತ್ತಾಂಶ ಸಂಗ್ರಹ, ವರ್ಗಾವಣೆ ಹಾಗೂ ಶೇಖರಣೆ ವೇಳೆ ಅತ್ಯಂತ ಕಟ್ಟುನಿಟ್ಟಾಗಿ ಸುರಕ್ಷತೆಗೆ ಕ್ರಮ ಕೈಗೊಳ್ಳಲಾಗುವುದು.

11

**ಮುಖ್ಯಾಂಶಗಳು**

- ದೇಶದಲ್ಲಿಯೇ ಮೊದಲ ಬಾರಿಗೆ ಮೊಬೈಲ್ ಬಳಸಿ ಡಿಜಿಟಲ್ ಗಣತಿ ಪ್ರಕ್ರಿಯೆ
- ಇಂಗ್ಲಿಷ್, ಹಿಂದಿ, ಪ್ರಾದೇಶಿಕ ಭಾಷೆಗಳಲ್ಲಿ ಮೊಬೈಲ್ ಆ್ಯಪ್ ರಚನೆ

## ಮದುವೆಗೆ ನಿರಾಕರಣೆ ಯುವತಿಗೆ ಇರಿದು ಯುವಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

**ಬಂಟ್ವಾಳ (ದಕ್ಷಿಣ ಕನ್ನಡ):** ಫರಂಗಿಪೇಟೆಯ ಯುವತಿಯನ್ನು ಪ್ರೀತಿಸುತ್ತಿದ್ದ ಯುವಕ, ತನ್ನಿಂದ ಬೇರೆಯಾಗಲು ನಿರ್ಧರಿಸಿದ ಯುವತಿಗೆ ಸೋಮವಾರ ಚಾಕುವಿನಿಂದ ಇರಿದು ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಬಂಟ್ವಾಳ ತಾಲ್ಲೂಕಿನ ಕೋಡ್ಮಣ್ ಗ್ರಾಮದ ಕಾಂಜಿಲಕೋಡಿ ನಿವಾಸಿ ಸುಧೀರ್ (30) ಯುವತಿಯ ಕೊಲೆಗೆ ಯತ್ನಿಸಿ, ಆತ್ಮಹತ್ಯೆ ಮಾಡಿಕೊಂಡ ಆರೋಪಿ ಎಂದು ಪೊಲೀಸರು ತಿಳಿಸಿದ್ದಾರೆ. ‘ಸುಧೀರ್ ಹಾಗೂ ಫರಂಗಿಪೇಟೆಯ 26 ವರ್ಷದ ಯುವತಿ ಸುಮಾರು 8 ವರ್ಷಗಳಿಂದ ಪ್ರೀತಿಸುತ್ತಿದ್ದರು’ ಎಂದು ತಿಳಿಸಿದ್ದಾರೆ.

3B

**ಚಿನಕುರುಳಿ** ಪ್ರಕಾಶ್ ಶೆಟ್ಟಿ




## ಯುವಕನ ವಿವಸ್ತ್ರಗೊಳಿಸಿ, ಮರ್ಮಾಂಗಕ್ಕೆ ಹಲ್ಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಾಲಕಿಗೆ ಅಶ್ಲೀಲ ಸಂದೇಶ ಕಳುಹಿಸಿದ ಆರೋಪದ ಮೇಲೆ ಯುವಕನನ್ನು ಅಪಹರಿಸಿ ಕಾರಿನಲ್ಲಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು, ವಿವಸ್ತ್ರಗೊಳಿಸಿ ಹಲ್ಲೆ ನಡೆಸಿರುವ ಘಟನೆ ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಹಲ್ಲೆಗೊಳಗಾದ ಕೆ.ಎಂ.ಕುಶಾಲ್ ಅವರ ದೂರು ಆಧರಿಸಿ, ಬಾಲಕಿ ಹಾಗೂ ಶಿವಶಂಕರ್, ಯಶವಂತ್, ಹೇಮಂತ್, ಸಲ್ಮಾನ್ ಖಾನ್, ಎಂ.ರಾಹುಲ್, ಎಸ್.ತೇಜಸ್, ಆರ್.ರಾಕೇಶ್, ಎನ್.ಶಶಾಂಕ್ ಗೌಡ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ಕೃತ್ಯಕ್ಕೆ ಬಳಸಿದ್ದ ಕಾರು, ಮೊಬೈಲ್ ಫೋನ್, ಮೂರು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಯುವಕನಿಗೆ ಥಳಿಸಿದ ವಿಡಿಯೊಗಳು ಜಾಲತಾಣದಲ್ಲಿ ಹರಿದಾಡುತ್ತಿವೆ. ಆರೋಪಿಗಳ ಪೈಕಿ ಸಲ್ಮಾನ್ ಖಾನ್ ಬಿಟ್ಟು, ಉಳಿದವರು ಎಂಜಿನಿಯರಿಂಗ್ ಮತ್ತು ಬಿಸಿಎ ಓದುತ್ತಿದ್ದಾರೆ.

‘ನಾನು ಓದುತ್ತಿದ್ದ ಕಾಲೇಜಿನಲ್ಲಿ ಬಾಲಕಿಯನ್ನು ಪ್ರೀತಿಸುತ್ತಿದ್ದೆ’ ಎಂದು ಕುಶಾಲ್ ದೂರಿನಲ್ಲಿ ತಿಳಿಸಿದ್ದಾರೆ.

10

**ರೇಣುಕಸ್ವಾಮಿ ಕೊಲೆಯಿಂದ ಪ್ರೇರಿತರಾಗಿ ಈ ರೀತಿ ಮಾಡಿದ್ದಾರೆಯೇ ಗೊತ್ತಿಲ್ಲ. ಅಂತಹ ಘಟನೆಗಳು ಕೆಟ್ಟ ಪರಿಣಾಮ ಬೀರುತ್ತಿವೆಯೇ ಎಂಬ ಬಗ್ಗೆ ಮನಃಶಾಸ್ತ್ರಜ್ಞರು ಅಧ್ಯಯನ ನಡೆಸಬೇಕು**
**ಜಿ.ಪರಮೇಶ್ವರ,** ಗೃಹ ಸಚಿವ

**ಆಸ್ತಿ ತೆರಿಗೆ, ನೀರಿನ ಕರ ವಸೂಲಾತಿ ಹೊಣೆ ಸ್ವಸಹಾಯ ಸಂಘದ ಸದಸ್ಯೆಯರಿಗೆ**

# ದಾವಣಗೆರೆ: ತೆರಿಗೆ ಸಂಗ್ರಹಕ್ಕಿಳಿದ ಮಹಿಳಾ ಪಡೆ

• ಜಿ.ಬಿ.ನಾಗರಾಜ್

**ದಾವಣಗೆರೆ:** ಆಸ್ತಿ ತೆರಿಗೆ ಹಾಗೂ ನೀರಿನ ಕರ ವಸೂಲು ಮಾಡಲು ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರ ಪಡೆ ರಾಜ್ಯದಲ್ಲೇ ಮೊದಲ ಬಾರಿಗೆ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆಗೆ ಇಳಿದಿದೆ. ಜನರ ಮನೆ ಬಾಗಿಲಿಗೆ ತೆರಳುವ ಸ್ತ್ರೀಯರು, ತೆರಿಗೆ ಸಂಗ್ರಹಿಸುತ್ತಿದ್ದಾರೆ.

‘ಡೇ-ನಲ್ಮ್’ ಅಭಿಯಾನದಡಿ ರಚನೆಯಾಗಿರುವ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರನ್ನು ತೆರಿಗೆ ವಸೂಲಾತಿಗೆ ನೇಮಕ ಮಾಡಿಕೊಳ್ಳಲು ರಾಜ್ಯ ಸರ್ಕಾರ ಮಾರ್ಗಸೂಚಿ ಬಿಡುಗಡೆ ಮಾಡಿತ್ತು. ಸ್ತ್ರೀಶಕ್ತಿ ಸಂಘಗಳನ್ನು ಗುರುತಿಸಿ, ಅರ್ಹರನ್ನು ಆಯ್ಕೆ ಮಾಡಿಕೊಳ್ಳುವಂತೆ ಸೂಚಿಸಿತ್ತು. ಈ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಿದ ದಾವಣಗೆರೆ ಮಹಾನಗರ ಪಾಲಿಕೆಯು ತೆರಿಗೆ ಸಂಗ್ರಹಕ್ಕೆ 12 ಮಹಿಳೆಯರನ್ನು ನೇಮಕ ಮಾಡಿಕೊಂಡಿದೆ.

10 ಮಹಾನಗರ ಪಾಲಿಕೆ, 61 ನಗರಸಭೆ ಸೇರಿದಂತೆ ರಾಜ್ಯದಲ್ಲಿ 315 ನಗರ ಸ್ಥಳೀಯ ಸಂಸ್ಥೆಗಳಿವೆ. ನೀರಿನ ಕರ ಮತ್ತು ಆಸ್ತಿ ತೆರಿಗೆ ಸಂಗ್ರಹದಲ್ಲಿ ಬಹುತೇಕ ಸ್ಥಳೀಯ ಸಂಸ್ಥೆಗಳು ಹಿಂದೆ ಬಿದ್ದಿವೆ. ಬಾಕಿಯೂ ಸೇರಿದಂತೆ ಆಯಾ ವರ್ಷದ ತೆರಿಗೆ ಸಂಗ್ರಹಕ್ಕೆ ‘ಸ್ತ್ರೀ ಶಕ್ತಿ’ಯನ್ನು ಬಳಸಿಕೊಳ್ಳಲು ರಾಜ್ಯ ಸಚಿವ ಸಂಪುಟ 2024ರ ಜೂನ್‌ನಲ್ಲಿ ಅನುಮೋದನೆ ನೀಡಿತ್ತು.

ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತೆರಿಗೆ ವಸೂಲಾತಿಗೆ ಉತ್ಸುಕತೆ ತೋರಿದ ಸ್ವಸಹಾಯ ಸಂಘದ ಮಹಿಳೆಯರಿಂದ 77 ಅರ್ಜಿಗಳು ಸಲ್ಲಿಕೆಯಾಗಿದ್ದವು. ಸಂವಹನ ಸಾಮರ್ಥ್ಯ ಹಾಗೂ ಡಿಜಿಟಲ್ ಸಾಕ್ಷರತೆ ಪರಿಶೀಲಿಸಿ ಅರ್ಹ 25 ಸ್ತ್ರೀಯರನ್ನು ಗುರುತಿಸಲಾಗಿತ್ತು. ತೆರಿಗೆ ವಸೂಲಾತಿ ನಿರ್ವಹಣೆಯ ತರಬೇತಿಯ ಬಳಿಕ ಅಂತಿಮವಾಗಿ 12 ಜನ ಮಹಿಳೆಯರು ಕೆಲಸ ಆರಂಭಿಸಿದ್ದಾರೆ. ಇವರಿಗೆ ವಸೂಲಾದ ತೆರಿಗೆಯ ಮೊತ್ತದಲ್ಲಿ ಶೇ 5ರಷ್ಟನ್ನು ಪ್ರೋತ್ಸಾಹ ಧನವಾಗಿ ನೀಡಲಾಗುತ್ತಿದೆ.

ನೇಮಕಗೊಂಡ ಮಹಿಳೆಯರಿಗೆ ವಾರ್ಡ್‌ವಾರು ಹೊಣೆ ನಿಗದಿಪಡಿಸಲಾಗಿದೆ. ತೆರಿಗೆ ಸಂಗ್ರಹಕ್ಕೆ ಪಾಲಿಕೆ ವತಿಯಿಂದ ಉಪಕರಣವೊಂದನ್ನು (ಪಿಒಎಸ್) ನೀಡಲಾಗಿದೆ.

11

**ಮುಖ್ಯಾಂಶಗಳು**

- ನೇಮಕಗೊಂಡವರಿಗೆ ಒಂದು ತಿಂಗಳು ತರಬೇತಿ
- ವಸೂಲಾದ ಮೊತ್ತದಲ್ಲಿ ಶೇ 5ರಷ್ಟು ಪ್ರೋತ್ಸಾಹ ಧನ
- ಆಯ್ಕೆಯಾದವರು 25 ಮಂದಿ, ಕೆಲಸ ಆರಂಭಿಸಿದ್ದು 12 ಮಂದಿ



ದಾವಣಗೆರೆಯ ಎಸ್‌ಎಸ್ ಬಡಾವಣೆಯಲ್ಲಿ ಈಶ್ವರಿ ಮಹಿಳಾ ಸ್ವಸಹಾಯ ಸಂಘದ ಸದಸ್ಯೆಯರ ತಂಡ ಆಸ್ತಿ ತೆರಿಗೆ ಮತ್ತು ನೀರಿನ ಕಂದಾಯವನ್ನು ಸಂಗ್ರಹಿಸಿತು –ಪ್ರಜಾವಾಣಿ ಚಿತ್ರ



**ಮಹಿಳೆಯರ ಜೀವನೋಪಾಯಕ್ಕೆ ಇದೊಂದು ಹೊಸ ಮಾರ್ಗವಾಗಿದೆ. ಸಾರ್ವಜನಿಕರು ವಿನಾಕಾರಣ ದಂಡ ಕಟ್ಟುವುದು ತಪ್ಪಿದೆ. ತೆರಿಗೆ ವಸೂಲಾತಿಯಲ್ಲಿ ಪ್ರಗತಿ ಕಾಣತೊಡಗಿದೆ**
**ರೇಣುಕಾ,** ಆಯುಕ್ತೆ, ಮಹಾನಗರ ಪಾಲಿಕೆ


ಶ್ರೀ ಎಂ. ಕೃಷ್ಣಪ್ಪ
ಶಾಸಕರು
ಬೆಂಗಳೂರು ದಕ್ಷಿಣ ವಿದಾನಸಭಾ ಕ್ಷೇತ್ರ
ಡಾ|| ಮಂಜುನಾಥ್
ಸಂಸದರು,
ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ
ಬಡವರಬಂಧು, ಧೀಮಂತನಾಯಕ, ಧೀನದಲಿತರ ನಾಯಕ, ಯುವಕರ ಕಣ್ಮಣಿ
ಶ್ರೀ ಸಿ. ಮಂಜುನಾಥ್
(ಗೊಟ್ಟಿಗೆರೆ ಮಂಜಣ್ಣ) ರವರಿಗೆ
08-07-2025
ಹುಟ್ಟುಹಬ್ಬದ
ಹಾರ್ಧಿಕ
ಶುಭಾಷಯಗಳು
ಶ್ರೀ ಬಿ. ಎನ್. ಕುಮಾರ್
ಬಸವನಪುರ
ಶ್ರೀ ಜಿ.ಆರ್. ಸುನಿಲ್ ಕುಮಾರ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು
ನಾಮನಿರ್ದೇಶಿತ ಸದಸ್ಯರು, ಕರ್ನಾಟಕ ಸರ್ಕಾರ
ಬೆಂಗಳೂರು ದಕ್ಷಿಣ ತಾಲ್ಲೂಕು ಮಾಜಿ ತಾಲೂಕು ಪಂಚಾಯಿತಿ &
ಮಾಜಿ ಗ್ರಾಮ ಪಂಚಾಯತಿ ಸದಸ್ಯರು, ಗೊಟ್ಟಿಗೆರೆ
ಮಾಜಿ ಕಾರ್ಯಾಧ್ಯಕ್ಷ ಉತ್ತರಹಳ್ಳಿ, ವಿಧಾನಸಭಾ ಕ್ಷೇತ್ರ
ಜನರೊಂದಿಗೆ
ಜನತಾದಳ
ಸಶಕ್ತ ಜನತಾದಳ, ಸಮೃದ್ಧ ಕರ್ನಾಟಕ
ಶುಭ ಕೋರುವವರು:
ಗೊಟ್ಟಿಗೆರೆ ಮಂಜಣ್ಣ ಅಭಿಮಾನಿಗಳ ಬಳಗ
Give a missed call to the number to register your JDS membership : 9964002028

# ಜಲಮಂಡಳಿ ಆದಾಯ ಹೆಚ್ಚಳಕ್ಕೆ 'ಹಸಿರು ದಾರಿ'

## ಪರ್ಯಾಯ ಆದಾಯ ಮೂಲಗಳ ಅನ್ವೇಷಣೆ
## ಪಿಪಿಪಿ ಮಾದರಿಯಲ್ಲಿ ಅನುಷ್ಠಾನ

• ಗಾಣಧಾಳು ಶ್ರೀಕಂಠ

**ಬೆಂಗಳೂರು:** ತ್ವರಿತ ಆರ್ಥಿಕ ಸುಧಾರಣೆಗಾಗಿ ನೀರಿನ ದರ ಪರಿಷ್ಕರಣೆ ಯಂತಹ ಕ್ರಮ ಕೈಗೊಂಡಿರುವ ಬೆಂಗಳೂರು ಜಲಮಂಡಳಿ, ಈಗ ದೀರ್ಘಾವಧಿಯಲ್ಲಿ ಆರ್ಥಿಕ ಸ್ಥಿರತೆ ಸಾಧಿಸಲು 'ಹಸಿರು ಯೋಜನೆ'ಗಳ ಮೊರೆ ಹೋಗುತ್ತಿದೆ. ತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ (ಎಸ್‌ಟಿಪಿ) ಉತ್ಪತ್ತಿಯಾಗುವ ಒಳಚರಂಡಿ ತ್ಯಾಜ್ಯದಿಂದ ಜೈವಿಕ ಅನಿಲ ಉತ್ಪಾದನೆ ಮತ್ತು ಮಾರಾಟ, ತ್ಯಾಜ್ಯವನ್ನು ಉತ್ಕೃಷ್ಟ ಗೊಬ್ಬರವಾಗಿ ಪರಿವರ್ತಿಸಿ ಮಾರಾಟ ಮಾಡುವಂತಹ ಯೋಜನೆಗಳ ಮೂಲಕ ಆದಾಯ ಹೆಚ್ಚಿಸಿಕೊಳ್ಳುವುದು ಹಾಗೂ ಸೌರವಿದ್ಯುತ್ ಬಳಕೆ ಮೂಲಕ ವಿದ್ಯುತ್ ವೆಚ್ಚವನ್ನು ಕಡಿತಗೊಳಿಸು-ವಂತಹ ಯೋಜನೆಗಳ ಅನುಷ್ಠಾನಕ್ಕೆ ಜಲಮಂಡಳಿ ಸಿದ್ಧತೆ ನಡೆಸಿದೆ.

ಪ್ರಸ್ತುತ ಜಲಮಂಡಳಿ 33 ಎಸ್‌ಟಿ-ಪಿಗಳನ್ನು ನಿರ್ಮಿಸಿದ್ದು, ಇದರಲ್ಲಿ ಐದು ಎಸ್‌ಟಿಪಿಗಳಲ್ಲಿ ಒಳಚರಂಡಿ ತ್ಯಾಜ್ಯ ಬಳಸಿ 'ಒತ್ತಿ ತುಂಬುವ ಜೈವಿಕ ಅನಿಲ' (ಕಂಪ್ರೆಸ್ಡ್ ಬಯೋಗ್ಯಾಸ್–ಸಿಬಿಜಿ) ಉತ್ಪಾದಿಸ-ಲಾಗುತ್ತಿದೆ. ಈಗ 50 ಎಂಎಲ್‌ಡಿಗಿಂತ ಮೇಲ್ಪಟ್ಟು ತ್ಯಾಜ್ಯ ನೀರು ಸಂಸ್ಕರಿಸುವ ಆರು ಎಸ್‌ಟಿಪಿಗಳನ್ನು ಗುರುತಿಸಿ, ಅಲ್ಲಿ ಜೈವಿಕ ಅನಿಲ ಉತ್ಪಾದಿಸಿ ಕಂಪನಿಗಳಿಗೆ ಮಾರಾಟ ಮಾಡಲು ಮಂಡಳಿ ಹೊಸ ಯೋಜನೆ ರೂಪಿಸಿದೆ. ಸಾರ್ವಜನಿಕ ಖಾಸಗಿ ಪಾಲುದಾರಿಕೆ (ಪಿಪಿಪಿ) ಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

'ಈಗಾಗಲೇ ಮೂಲಸೌಲಭ್ಯ ಅಭಿವೃದ್ಧಿ ಮಂಡಳಿ(ಐಡೆಕ್) ತಂಡದವರು ಆರು ಎಸ್‌ಟಿಪಿಗಳ ತಾಂತ್ರಿಕ ಮತ್ತು ಆರ್ಥಿಕ ಸಾಧ್ಯತೆ ಕುರಿತು ಅಧ್ಯಯನ ಮಾಡಿದ್ದಾರೆ. ಆ ವರದಿ ಆಧರಿಸಿ ಟೆಂಡರ್ ಕರೆಯಲು ಸಿದ್ಧತೆ ನಡೆಸಿದ್ದೇವೆ. ಜೈವಿಕ ಅನಿಲಕ್ಕೆ ಹೆಚ್ಚಿನ ಬೇಡಿಕೆ ಇದೆ. ಈಗಾಗಲೇ ಈ ಯೋಜನೆ ಕುರಿತು ಭಾರತೀಯ ಅನಿಲ ಪ್ರಾಧಿಕಾರ ನಿಯಮಿತ (ಗೇಲ್) ಸೇರಿದಂತೆ ಕೆಲವು ಕಂಪನಿಗಳೊಂದಿಗೆ ಮಾತುಕತೆ ನಡೆಸಲಾಗಿದೆ. ಒಂದಷ್ಟು ಕಂಪನಿಗಳು ಆಸಕ್ತಿ ತೋರಿವೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಮಾಹಿತಿ ನೀಡಿದರು.

'ಜೈವಿಕ ಅನಿಲವನ್ನು ಟ್ಯಾಂಕ್ (ಬಾಟ್ಲಿಂಗ್) ಮೂಲಕ ಖರೀದಿಸಬಹುದು ಅಥವಾ ಘಟಕಗಳಿಂದ ಕೊಳವೆಗಳನ್ನು ಅಳವಡಿಸಿ ಅದರ ಮೂಲಕ ಸಮೀಪದಲ್ಲಿರುವ ಕಂಪನಿಯ ಕೊಳವೆ ಮಾರ್ಗಗಳಿಗೆ ಜೋಡಿಸಬಹುದು. ಜಲಮಂಡಳಿ ಗ್ಯಾಲನ್‌ಗೆ ಇಂತಿಷ್ಟು ದರ ಎಂದು ನಿಗದಿ-ಪಡಿಸುತ್ತದೆ' ಎಂದು ವಿವರಿಸಿದರು.

'ಈ ಯೋಜನೆಗೆ ಜಲಮಂಡಳಿ ಬಂಡವಾಳ ಹೂಡುವುದಿಲ್ಲ. ಎಲ್ಲವನ್ನೂ ಕಂಪನಿಯವರೇ ನಿರ್ವಹಿಸುತ್ತಾರೆ. ಒಪ್ಪಂದದ ಪ್ರಕಾರ ಆದಾಯದ ಪಾಲನ್ನು ಮಂಡಳಿಯೊಂದಿಗೆ ಹಂಚಿಕೊಳ್ಳು-ತ್ತಾರೆ. ಹೀಗಾಗಿ ಈ ಯೋಜನೆಯಿಂದ ಮಂಡಳಿಗೆ ಹೆಚ್ಚು ಲಾಭವಿದೆ' ಎಂದು ರಾಮ್‌ಪ್ರಸಾತ್ ತಿಳಿಸಿದರು.

**ತ್ಯಾಜ್ಯ ಗೊಬ್ಬರವಾಗಿಸಿ ಮಾರಾಟ:** 'ಎಸ್‌ಟಿಪಿ ಘಟಕಗಳಲ್ಲಿ ಜೈವಿಕ ಅನಿಲ ಉತ್ಪಾದನೆಯ ನಂತರ ಉಳಿಯುವ ತ್ಯಾಜ್ಯವನ್ನು (Sludge) ಮಾರಾಟ ಮಾಡಲಾಗುತ್ತಿದೆ. ಆದರೆ ಅದನ್ನು ಇನ್ನಷ್ಟು ಉತ್ಕೃಷ್ಟಗೊಳಿಸಬೇಕಿದೆ. ತ್ಯಾಜ್ಯದಲ್ಲಿ ತೇವಾಂಶ ಹೆಚ್ಚಿರುತ್ತದೆ. ಅದನ್ನು ಸೌರವಿದ್ಯುತ್ ಆಧಾರಿತ ಡ್ರೈಯರ್‌ನಲ್ಲಿ ಒಣಗಿಸಿ, ಉತ್ಕೃಷ್ಟ ಗೊಬ್ಬರವಾಗಿಸಿ ಮಾರಾಟ ಮಾಡಲು ಜಲಮಂಡಳಿ ನೀಲನಕ್ಷೆ ಸಿದ್ಧಪಡಿಸಿದೆ. ಇದಕ್ಕಾಗಿ ವಿಶ್ವ ಬ್ಯಾಂಕ್ ಯೋಜನೆಯಡಿ 'ಸೋಲಾರ್ ಬೇಸ್ಡ್ ಸ್ಲಡ್ಜ್ ಡ್ರೈಯರ್' ಎಂಬ ಕಾರ್ಯಕ್ರಮ ರೂಪಿಸಿದ್ದೇವೆ. ಖರ್ಚು ಕಡಿತಗೊಳಿಸಲು ಸೌರವಿದ್ಯುತ್ ಬಳಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

**ಸೌರವಿದ್ಯುತ್ ಬಳಕೆ, ವೆಚ್ಚ ಕಡಿತ:** ಪ್ರಸ್ತುತ ಜಲಮಂಡಳಿಯ ತಿಂಗಳ ವೆಚ್ಚದಲ್ಲಿ ಶೇಕಡ 70ರಷ್ಟು ವಿದ್ಯುತ್ ಶುಲ್ಕಕ್ಕೆ ವೆಚ್ಚವಾಗುತ್ತಿದೆ. ಈ ವೆಚ್ಚವನ್ನು ಕಡಿತಗೊಳಿಸಲು ಮಂಡಳಿಯ ವಿದ್ಯುತ್ ಆಧಾರಿತ ಕಾರ್ಯಾಚರಣೆಗಳಿಗೆ ನವೀಕರಿಸಬಹುದಾದ ಇಂಧನ ಬಳಸಲು ಯೋಜನೆ ರೂಪಿಸಲಾಗಿದೆ.

'ಈ ಯೋಜನೆಯಡಿ ಈಗಾಗಲೇ ಸೌರಘಟಕ ಅಳವಡಿಸಿ ವಿದ್ಯುತ್ ಉತ್ಪಾದಿಸುತ್ತಿರುವವರಿಂದ ವಿದ್ಯುತ್ ಖರೀದಿಸುತ್ತೇವೆ. ಸೌರ ವಿದ್ಯುತ್ ದರಕ್ಕೆ ಹೋಲಿಸಿದರೆ ವಿದ್ಯುತ್ ಶುಲ್ಕ ತುಸು ದುಬಾರಿ. ಜಲಮಂಡಳಿಯಲ್ಲಿ ತಿಂಗಳಿಗೆ ಸುಮಾರು 9 ಕೋಟಿ ಯೂನಿಟ್ ವಿದ್ಯುತ್ ಬಳಕೆಯಾಗುತ್ತದೆ. ಯೂನಿಟ್ ಮೇಲೆ ಕನಿಷ್ಠ ₹1 ಉಳಿದರೂ, ಜಲಮಂಡಳಿಗೆ ತಿಂಗಳಿಗೆ ₹9 ಕೋಟಿ ಹಣ ಜಲಮಂಡಳಿಗೆ ಉಳಿತಾಯವಾಗುತ್ತದೆ' ಎಂದು ಅಧಿಕಾರಿಯೊಬ್ಬರು ಲೆಕ್ಕಾಚಾರ ನೀಡಿದರು. 'ಇದಲ್ಲದೇ, ಪಿಪಿಪಿ ಮಾದರಿಯಲ್ಲಿ 'ಗ್ರೂಪ್ ಕ್ಯಾಪ್ಟಿವ್' ಎಂಬ ಮತ್ತೊಂದು ಯೋಜನೆ ಸಿದ್ಧವಾಗಿದ್ದು, ಅದಿನ್ನೂ ಡಿಪಿಆರ್ ಹಂತದಲ್ಲಿದೆ. ಅದರಿಂದಲೂ ವಾರ್ಷಿಕವಾಗಿ ನೂರಾರು ಕೋಟಿ ರೂಪಾಯಿ ಉಳಿತಾಯ ಆಗುತ್ತದೆ' ಎಂದು ಮಾಹಿತಿ ನೀಡಿದರು.



ಕೆ ಆ್ಯಂಡ್ ಸಿ ವ್ಯಾಲಿಯ ಎಸ್‌ಟಿಪಿಯಲ್ಲಿರುವ ಜೈವಿಕ ಅನಿಲ ಉತ್ಪಾದಕ ಘಟಕ (ಸಾಂದರ್ಭಿಕ ಚಿತ್ರ)



ಇಂಧನ ಬಳಕೆ ತಗ್ಗಿಸುವುದು ಮತ್ತು ಹೆಚ್ಚುವರಿ ಇಂಧನ ಉತ್ಪಾದಿಸಿ ಮಾರಾಟ ಮಾಡುವುದು ಅಥವಾ ಮಂಡಳಿಯ ಎಸ್‌ಟಿಪಿ ಕಾರ್ಯನಿರ್ವಹಣೆಗೆ ಬಳಸುವುದು. ಇದರಿಂದ ಮಂಡಳಿಗೆ ಆರ್ಥಿಕವಾಗಿ ಅನುಕೂಲವಾಗುವ ಜೊತೆಗೆ ವೆಚ್ಚವೂ ಕಡಿಮೆಯಾಗುತ್ತದೆ, ಪರಿಸ್ನೇಹಿಯಾಗಿರುತ್ತದೆ.

**ವಿ. ರಾಮ್‌ಪ್ರಸಾತ್ ಮನೋಹರ್,** ಅಧ್ಯಕ್ಷ, ಜಲಮಂಡಳಿ

### ಇತ್ತೀಚಿನ ಯೋಜನೆಗಳು

- 'ಸಂಚಾರಿ ಕಾವೇರಿ' – ಟ್ಯಾಂಕರ್ ಮೂಲಕ ಮನೆ ಮನೆಗೆ ಕಾವೇರಿ ನೀರು ಪೂರೈಕೆ
- 'ಸರಳ ಕಾವೇರಿ' ಯೋಜನೆ – ಹೊಸ ನೀರಿನ ಸಂಪರ್ಕಗಳನ್ನು ನೀಡಿ 'ಠೇವಣಿ' ಹೆಚ್ಚಿಸುತ್ತಿರುವುದು
- ತ್ಯಾಜ್ಯ ನೀರು ಸಂಸ್ಕರಿಸಿ ಮಾರಾಟದಿಂದ ಆದಾಯ

ಜಲಮಂಡಳಿ ಸುದ್ದಿ

### ಮುಖ್ಯಾಂಶಗಳು

- ಜೈವಿಕ ಅನಿಲ ಉತ್ಪಾದನೆ, ಮಾರಾಟ
- ತ್ಯಾಜ್ಯವನ್ನು ಗೊಬ್ಬರವಾಗಿಸಿ ಮಾರಾಟ
- ಸೌರವಿದ್ಯುತ್ ಬಳಕೆಯಿಂದ ವಿದ್ಯುತ್ ವೆಚ್ಚಕಡಿತ



ಬೆಳ್ಳಂದೂರು ಅಮಾನಿ ಖಾನೆಯಲ್ಲಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಸಾಂದರ್ಭಿಕ ಚಿತ್ರ)

### ಜೈವಿಕ ಅನಿಲದಿಂದ ವಿದ್ಯುತ್

ಪ್ರಸ್ತುತ ಐದು ಎಸ್‌ಟಿಪಿಗಳಿಂದ ನಿತ್ಯ 50 ಸಾವಿರ ಕ್ಯೂಬಿಕ್ ಮೀಟರ್‌ನಷ್ಟು ಜೈವಿಕ ಅನಿಲ ಉತ್ಪಾದನೆಯಾಗುತ್ತಿದೆ. ಒಂದೆರಡು ಎಸ್‌ಟಿಪಿಗಳಲ್ಲಿ ಜೈವಿಕ ಅನಿಲದಿಂದ ವಿದ್ಯುತ್ ಉತ್ಪಾದಿಸಿ, ಅದೇ ಎಸ್‌ಟಿಪಿಗಳ ಕಾರ್ಯನಿರ್ವಹಣೆಗೆ ಬಳಸಲಾಗುತ್ತಿದೆ. ಉಳಿದ ಘಟಕಗಳಲ್ಲಿ ಡೈಜಸ್ಟರ್‌ಗಳನ್ನು ಬಿಸಿ ಮಾಡಲು ಬೇಕಾದ ಬೆಂಕಿ ಉತ್ಪಾದಿಸಲು ಜೈವಿಕ ಅನಿಲವನ್ನು ಬಳಸಲಾಗುತ್ತಿದೆ. ಎಸ್‌ಟಿಪಿಗಳಿಗೆ ಬಳಸುವ ಒಟ್ಟು ವಿದ್ಯುತ್ತಿನಲ್ಲಿ ಶೇ 50ರಷ್ಟು ಪಾಲು ಜೈವಿಕ ಅನಿಲದಿಂದ ಉತ್ಪಾದಿಸಿದ ವಿದ್ಯುತ್ತಿನದು' ಎಂದು ಜಲಮಂಡಳಿಯ ತಂತ್ರಜ್ಞರೊಬ್ಬರು ವಿವರ ನೀಡಿದರು.

---

ಚಿಟಿಕೆ ಸುದ್ದಿ

### ವಾರ್ಷಿಕ ಯೋಜನಾ ಮಾರ್ಗಸೂಚಿ ಪುಸ್ತಕ ಬಿಡುಗಡೆ

**ಬೆಂಗಳೂರು:** ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕವು 2025–26ನೇ ಸಾಲಿನ ವಾರ್ಷಿಕ ಕಾರ್ಯಕ್ರಮ ಯೋಜನಾ ಪುಸ್ತಕವನ್ನು ಸೋಮವಾರ ಬಿಡುಗಡೆ ಮಾಡಿತು.


ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿ, 'ಈ ಪುಸ್ತಕ ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯಚಟುವಟಿಕೆಗಳ ಮಾರ್ಗಸೂಚಿ ಯಾಗಿದೆ. ಉತ್ತಮ ನಾಗರಿಕರ ನಿರ್ಮಾಣಕ್ಕಾಗಿ, ಬೌದ್ಧಿಕ ವಿಕಸನ, ಶಿಸ್ತು ಮತ್ತು ಮಾನವೀಯ ಮೌಲ್ಯಗಳ ಕುರಿತು ತರಬೇತಿ ನೀಡಲು ಈ ಪುಸ್ತಕ ಪೂರಕವಾಗಿದೆ' ಎಂದು ತಿಳಿಸಿದರು.

'ಪ್ರತಿ ವರ್ಷವೂ ಸಂಸ್ಥೆ ಕೈಗೊಳ್ಳಬೇಕಾದ ಸುಸ್ಥಿರ ಅಭಿವೃದ್ಧಿ ಗುರಿ ನಿಗದಿ ಮಾಡಲಾಗುತ್ತದೆ. ಅದರ ಆಧಾರದಲ್ಲಿ ವಿವಿಧ ಕಾರ್ಯಕ್ರಮ, ತರಬೇತಿ-ಕೈಗೊಳ್ಳಲಾಗುತ್ತದೆ. ಅವುಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶಕ ಪುಸ್ತಕ ಮುದ್ರಿಸಲಾಗುತ್ತದೆ' ಎಂದರು.

ರಾಜ್ಯ ಆಯುಕ್ತರಾದ ಗೀತಾ ನಟರಾಜ್, ಎಫ್. ಗಂಗಪ್ಪ ಗೌಡ, ಸಹಾಯಕ ಆಯುಕ್ತರಾದ ಎನ್. ಶ್ರೀನಿವಾಸನ್, ರಾಧಾ ವೆಂಕಟೇಶ ಉಪಸ್ಥಿತರಿದ್ದರು.

### 'ಆಟೊಗಳಿಗೆ ಪರವಾನಗಿ ನೀಡದೇ ದಂಡ ಸರಿಯಲ್ಲ'

**ಬೆಂಗಳೂರು:** ಐದು ವರ್ಷಗಳ ಹಿಂದೆ ಬಿಡುಗಡೆಯಾದ ಬಿಎಸ್–6 ಆಟೊಗಳಿಗೆ ಸಾರಿಗೆ ಇಲಾಖೆ ಪರವಾನಗಿ ನೀಡಲು ಕ್ರಮ ಕೈಗೊಳ್ಳದೇ ದಂಡ ವಿಧಿಸುತ್ತಿರು-ವುದು ಸರಿಯಲ್ಲ ಎಂದು ಆಮ್ ಆದ್ಮಿ ಪಾರ್ಟಿ ಸದಸ್ಯರು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ತಿಳಿಸಿದ್ದಾರೆ.



ಕೋವಿಡ್ ಕಾಲದಲ್ಲಿ ಬಿಎಸ್–6 ಆಟೊಗಳು ಬಿಡುಗಡೆಯಾಗಿದ್ದವು. ಆಗ ಯಾವುದೇ ಸಾಲ ಸೌಲಭ್ಯಗಳು ಸಿಗದಿದ್ದ ಕಾರಣ ಅನೇಕರು ಕಡಿಮೆ ದರದ ಬಿಎಸ್–6 ಆಟೊಗಳನ್ನು ಖರೀದಿಸಿ ಜೀವನ ನಡೆಸುತ್ತಿದ್ದರು. ಪರವಾನಗಿಗಾಗಿ ಸಾರಿಗೆ ಇಲಾಖೆಗೆ ಹಲವು ಬಾರಿ ಅಲೆದರೂ ದೊರೆತಿರಲಿಲ್ಲ. ಈಗ ಈ ಆಟೊಗಳನ್ನು ಪತ್ತೆ ಹಚ್ಚಿ ದಂಡ ವಿಧಿಸಲಾಗುತ್ತಿದೆ ಎಂದು ಎಎಪಿ ರಾಜ್ಯ ಆಟೊ ಘಟಕದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದರು.

### ಹೃದಯಾಘಾತದಿಂದ ಯೋಧ ಸಾವು

**ಗೌರಿಬಿದನೂರು:** 30 ವರ್ಷಗಳಿಂದ ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ಪಡೆಯಲ್ಲಿ ಯೋಧರಾಗಿದ್ದ ತೊಂಡೇಭಾವಿ ಗ್ರಾಮದ ಗಂಗಾಧರಪ್ಪ (54) ಪಶ್ಚಿಮ ಬಂಗಾಳದಲ್ಲಿ ಶನಿವಾರ ಕೆಲಸದ ವೇಳೆ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಹುಟ್ಟೂರಾದ ತೊಂಡೇಭಾವಿ ಗ್ರಾಮದಲ್ಲಿ ಭಾನುವಾರ ಯೋಧನ ಪಾರ್ಥಿವ ಶರೀರಕ್ಕೆ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯ ಸಂಸ್ಕಾರ ನಡೆಸಲಾಯಿತು.



ಮೃತರಿಗೆ ಪತ್ನಿ ಮತ್ತು ಇಬ್ಬರು ಮಕ್ಕಳು ಇದ್ದಾರೆ.

---



ಶಾಸಕಿ ಮಂಜುಳಾ ಲಿಂಬಾವಳಿ ಅಂಗವಿಕಲರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಹಾಯಧನದ ಚೆಕ್ ವಿತರಿಸಿದರು.

## 'ಗ್ರಾಮ ಸಭೆಯಲ್ಲಿ ಪಾಲ್ಗೊಳ್ಳಿ'

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** ಮಹದೇವಪುರ ಕ್ಷೇತ್ರದ ಶೀಗೇಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಶೀಗೇಹಳ್ಳಿ ಗ್ರಾಮ ಪಂಚಾಯಿತಿಯ ಪ್ರಸಕ್ತ ಸಾಲಿನ ಮೊದಲನೇ ಸುತ್ತಿನ ಗ್ರಾಮ ಸಭೆಯನ್ನು ಶಾಸಕಿ ಮಂಜುಳಾ ಲಿಂಬಾವಳಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ಶೀಗೇಹಳ್ಳಿ ಮತ್ತು ಕೆ.ದೊಮ್ಮಸಂದ್ರ ಗ್ರಾಮದಲ್ಲಿ ಜಲ ಜೀವನ್ ಮಿಷನ್ ಕಾಮಗಾರಿ ಪ್ರಗತಿಯಲ್ಲಿದ್ದು, ಸಾರ್ವಜನಿಕರು ಸಹಕರಿಸಬೇಕು' ಎಂದು ತಿಳಿಸಿದರು.

'ಸಾರ್ವಜನಿಕರು ಪ್ರತಿ ಗ್ರಾಮ-ಸಭೆಯಲ್ಲಿ ಪಾಲ್ಗೊಂಡು, ಗ್ರಾಮದ ಅಭಿವೃದ್ಧಿ ಬಗ್ಗೆ ಚರ್ಚಿಸಬೇಕು. ಸಮಸ್ಯೆ-ಗಳಿದ್ದರೆ ಸಭೆಯಲ್ಲಿ ತಿಳಿಸಬೇಕು, ಪರಿಹಾರ ಪಡೆಯಬೇಕು' ಎಂದು ಸಲಹೆ ನೀಡಿದರು.

ಗ್ರಾಮ ಪಂಚಾಯತಿ ಅಧ್ಯಕ್ಷೆ ಮಂಗಳಾ ಮಾತನಾಡಿ, 'ಶೀಗೆಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಗ್ರಾಮಗಳಿಗೆ ಮೂಲಸೌಕರ್ಯಗಳನ್ನು ಒದಗಿಸುವ ಪ್ರಯತ್ನ ಮಾಡಲಾಗುವುದು' ಎಂದರು.

ಇದೇ ವೇಳೆ ಅಂಗವಿಕಲರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಹಾಯಧನದ ಚೆಕ್ ವಿತರಣೆ ಮಾಡಲಾಯಿತು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ವಸಂತ ಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಂಗಳಾ, ಉಪಾಧ್ಯಕ್ಷ ಸುರೇಶ್ ಬಾಬು, ಪಿಡಿಒ ಸುರೇಶ್ ಸಭೆಯಲ್ಲಿ ಹಾಜರಿದ್ದರು.

## ರೇಬಿಸ್ ನಿರ್ಮೂಲನೆಗೆ ಜಾಗೃತಿ

### ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ಮಾಹಿತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ರೇಬಿಸ್ ನಿರ್ಮೂಲನೆಗಾಗಿ ಪ್ರತ್ಯೇಕ ವಾಹನದ ಮೂಲಕ ಜಾಗೃತಿ ಮೂಡಿಸಲಾಗುತ್ತದೆ ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರು ತಿಳಿಸಿದರು.

'ವಿಶ್ವ ಝೂನೋಸಿಸ್' ದಿನದ ಭಾಗವಾಗಿ ರೇಬಿಸ್ ರೋಗ ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಜಾಗೃತಿ ಮೂಡಿಸುವ ವಾಹನಕ್ಕೆ ಸೋಮವಾರ ಅವರು ಚಾಲನೆ ನೀಡಿದರು.

ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ವಾಹನ ಸಂಚರಿಸುವುದರ ಜೊತೆಗೆ ಪಾಲಿಕೆ, ಸರ್ಕಾರಿ ಹಾಗೂ ಖಾಸಗಿ ಶಾಲಾ- ಕಾಲೇಜುಗಳಿಗೆ ತೆರಳುತ್ತದೆ. ರೇಬಿಸ್ ರೋಗ ನಿಯಂತ್ರಣದ ಕುರಿತು ಮಕ್ಕಳಲ್ಲಿ ಸಿಬ್ಬಂದಿ ಜಾಗೃತಿ ಮೂಡಿಸಲಿದ್ದಾರೆ ಎಂದರು.

ಬಿಬಿಎಂಪಿಯ ಪಶುವೈದ್ಯಕೀಯ ಮಹಾವಿದ್ಯಾಲಯ- ಡಬ್ಲ್ಯುಒಎಎಚ್ ರೆಫೆರೆನ್ಸ್ ರೇಬಿಸ್ ರೋಗನಿರ್ಣಯ ಪ್ರಯೋಗಾಲಯ, ಚಾರ್ಲೀಸ್ ಮತ್ತು ಡಬ್ಲ್ಯುವಿಎಸ್- ಮಿಷನ್ ರೇಬಿಸ್ ಸಂಸ್ಥೆಗಳ ಜೊತೆಯಲ್ಲಿ 2030ರ ವೇಳೆಗೆ ಬೆಂಗಳೂರು ನಗರವನ್ನು ರೇಬಿಸ್ ಮುಕ್ತಗೊಳಿಸಲಾಗುತ್ತದೆ ಎಂದು ತಿಳಿಸಿದರು.

ಪಶುಪಾಲನಾ ವಿಭಾಗದ ಜಂಟಿ ನಿರ್ದೇಶಕರಾ ಡಾ. ಚಂದ್ರಯ್ಯ, ಮುಖ್ಯ ಆರೋಗ್ಯಾಧಿಕಾರಿ ಡಾ. ಎಸ್.ಎಸ್ ಮದನಿ, ಚಾರ್ಲೀಸ್ ರೆಸ್ಕ್ಯೂ ಸಂಸ್ಥೆಯ ಸ್ಥಾಪಕ ಟ್ರಸ್ಟಿ ಸುಧಾ ನಾರಾಯಣನ್, ಮಿಷನ್ ರೇಬಿಸ್ ಸಂಸ್ಥೆಯ ನಿರ್ದೇಶಕ ಡಾ. ಬಾಲಾಜಿ ಚಂದ್ರಶೇಖರ್ ಉಪಸ್ಥಿತರಿದ್ದರು.



ರೇಬಿಸ್ ಜಾಗೃತಿ ವಾಹನಕ್ಕೆ ಚಾಲನೆ ನೀಡಿ, ಮಾಹಿತಿ ಕೈಪಿಡಿಯನ್ನು ಸುರಳ್ಕರ್ ವಿಕಾಸ್ ಕಿಶೋರ್ ಬಿಡುಗಡೆ ಮಾಡಿದರು

### ಮುಖ್ಯಾಂಶಗಳು

- 2030ರ ವೇಳೆಗೆ ಬೆಂಗಳೂರು ನಗರ ರೇಬಿಸ್ ಮುಕ್ತ: ಗುರಿ
- 'ವಿಶ್ವ ಝೂನೋಸಿಸ್' ದಿನದ ಭಾಗವಾಗಿ ಕಾರ್ಯಕ್ರಮ
- ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ವಾಹನದ ಮೂಲಕ ಜಾಗೃತಿ

### ನಗರದಲ್ಲಿ ಇಂದು

**ಕ್ವಾಂಟಮ್ ಇಂಡಿಯಾ–2025ರ ಆವೃತ್ತಿ:** ಉದ್ಘಾಟನೆ: ಎನ್.ಎಸ್. ಬೋಸರಾಜು, ಅತಿಥಿ: ಏಕ್‌ರೂಪ್ ಕೌರ್, ಉಪಸ್ಥಿತಿ: ಅರಿಂದಮ್ ಘೋಷ್, ಅಕ್ಷಯ್ ನಾಯ್ಕ್, ಆಯೋಜನೆ: ಕ್ವಾಂಟಮ್ ಇಂಡಿಯಾ ಬೆಂಗಳೂರು, ಸ್ಥಳ: ಯು.ಆರ್. ರಾವ್ ಸಭಾಂಗಣ, ಜವಾಹರಲಾಲ್ ನೆಹರೂ ತಾರಾಲಯ, ಟಿ.ಚೌಡಯ್ಯ ರಸ್ತೆ, ಮಧ್ಯಾಹ್ನ 12

**ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು 'ಪದವಿ ಪ್ರದಾನ ಸಮಾರಂಭ':** ಅತಿಥಿ: ಪ್ರಶಾಂತ್ ವಿಲ್ಸನ್ ಫರ್ನಾಂಡಿಸ್, ಉಪಸ್ಥಿತಿ: ಸೊಲೊಮನ್ ಸತೀಶ್‌ಕುಮಾರ್, ಸ್ಥಳ: ಸೇಂಟ್ ಜಾನ್ಸ್ ಸಭಾಂಗಣ, ಮಧ್ಯಾಹ್ನ 3

**ಪತ್ರಿಕಾ ದಿನಾಚರಣೆ ಪ್ರಯುಕ್ತ 'ವಾರ ಪತ್ರಿಕೆ ಅಂದು–ಇಂದು' ವಿಚಾರಣ ಸಂಕಿರಣ:** ಅಧ್ಯಕ್ಷತೆ: ಕೆ.ವಿ. ಪ್ರಭಾಕರ್, ಭಾಷಣಕಾರರು: ಶಶಿಧರ್ ಭಟ್, ಆರ್.ಜಿ.ಹಳ್ಳಿ ನಾಗರಾಜ್, ಪಿ. ಕುಸುಮಾ ಆಯರಹಳ್ಳಿ, ಅತಿಥಿಗಳು: ಶಿವಾನಂದ ತಗಡೂರು, ತುರುವನೂರು ಮಂಜುನಾಥ, ಪರಶಿವ ಧನಗೂರು, ಸಿ.ಡಿ.ಬಾಬು, ಬೋರೆಗೌಡ ಎಚ್.ಸಿ, ಆಯೋಜನೆ: ಕೆಂಧೂಳಿ ಪತ್ರಿಕಾ ಬಳಗ, ಸ್ಥಳ: ಬೆಂಗಳೂರು ಪ್ರೆಸ್ ಕ್ಲಬ್, ಮಧ್ಯಾಹ್ನ 3.30

**ಗುರುಪೂರ್ಣಿಮೆ ಪ್ರಯುಕ್ತ ಧರ್ಮ ಜಾಗೃತಿ ಸಮಾರಂಭ:** ಸಾನ್ನಿಧ್ಯ: ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಮಲ್ಲಿಕಾರ್ಜುನ ದೇವರು ಸ್ವಾಮೀಜಿ, ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು: ಗುರುಸ್ವಾಮಿ ಕಲಕೆರಿ, ನಾಗರಾಜ ಶಾಸ್ತ್ರಿ, ಅತಿಥಿಗಳು ಎಸ್.ಎಸ್. ಮಲ್ಲಿಕಾರ್ಜುನ, ಮೃತ್ಯುಂಜಯ ಸ್ವಾಮಿ, ಭೀಮನಗೌಡ, ಅಣ್ಣಾಗೌಡ ಪಾಟಲ, ಗಂಗಾರೆಡ್ಡಿ, ಆಯೋಜನೆ: ಶ್ರೀಶೈಲ ಮಲ್ಲಿಕಾರ್ಜುನ ಸಮಾಜೋತ್ಥಾನ ಫೌಂಡೇಶನ್, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ ಟೆಲಿಫೋನ್ ಎಕ್ಸ್‌ಚೆಂಜ್ ಹತ್ತಿರ, ವಿಜಯನಗರ, ಸಂಜೆ 6

**ಕರ್ನಾಟಕ ಪಿಟೀಲು ಸಂಗೀತ ಕಛೇರಿ:** ಪಿಟೀಲು ವಾದನ: ಕುಮಾರೇಶ್, ಮೃದಂಗ: ರವಿಶಂಕರ್, ಘಟ: ಕೃಷ್ಣಸ್ವಾಮಿ, ಆಯೋಜನೆ ಮತ್ತು ಸ್ಥಳ: ಜೆ.ಎನ್.ಟಾಟಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ), ಸಂಜೆ 6

**ಆಂಟನ್ ಚೆಕಾವ್ ಅವರ ವಾರ್ಡ್ ನಂ:6– ಕನ್ನಡ ನಾಟಕ:** ಕನ್ನಡ ರೂಪ: ಡಿ.ಆರ್. ನಾಗರಾಜ್, ವಿನ್ಯಾಸ ಮತ್ತು ನಿರ್ದೇಶನ: ಮೈಮ್ ರಮೇಶ್ ರಂಗಾಯಣ, ಆಯೋಜನೆ: ಜಿಪಿಐಇಆರ್ ರಂಗತಂಡ ಮೈಸೂರು, ಸ್ಥಳ: ರಂಗಶಂಕರ, ಜೆ.ಪಿ.ನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ- nagaradalli_indu@prajavani.co.in

## ಐಎಂಟೆಕ್ ವಿದ್ಯಾರ್ಥಿಗೆ ₹1.45 ಕೋಟಿ ಪ್ಯಾಕೇಜ್



ಪ್ರಜಾವಾಣಿ ವಾರ್ತೆ

**ಬೊಮ್ಮನಹಳ್ಳಿ:** ಎಲೆಕ್ಟ್ರಾನಿಕ್ ಸಿಟಿಯ ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇನ್ಫಾರ್ಮೇಷನ್ ಟೆಕ್ನಾಲಜಿ - ಬೆಂಗಳೂರು (ಐಐಐಟಿ–ಬಿ) ಸಂಸ್ಥೆಯಲ್ಲಿ ನಡೆದ ಕ್ಯಾಂಪಸ್ ಆಯ್ಕೆಯಲ್ಲಿ ಐಎಂಟೆಕ್ ವಿದ್ಯಾರ್ಥಿ ಮೋಂಜಾಯಿ ನಾರಾಯಣ ಚೌಧರಿ ದಾಖಲೆಯ ವಾರ್ಷಿಕ ₹1.45 ಕೋಟಿ ಪ್ಯಾಕೇಜ್ ಪಡೆದುಕೊಂಡರು.

ಸಂಸ್ಥೆಯ 25ನೇ ಘಟಿಕೋತ್ಸವ ಮತ್ತು ಸಂಸ್ಥೆಯ ಬೆಳ್ಳಿ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಕ್ಯಾಂಪಸ್ ಆಯ್ಕೆ ಪ್ರಕ್ರಿಯೆಯಲ್ಲಿ 261 ವಿದ್ಯಾರ್ಥಿಗಳು ವಿವಿಧ ಕಂಪನಿಗಳಿಗೆ ಆಯ್ಕೆಗೊಂಡಿದ್ದಾರೆ. 14ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಾರ್ಷಿಕ ₹60 ಲಕ್ಷ, 67 ವಿದ್ಯಾರ್ಥಿಗಳು ₹40 ಲಕ್ಷ ಮತ್ತು 180 ವಿದ್ಯಾರ್ಥಿಗಳು ವಾರ್ಷಿಕ ₹20 ಲಕ್ಷ ಪ್ಯಾಕೇಜ್ ಪಡೆದಿದ್ದಾರೆ ಎಂದು ಸಂಸ್ಥೆಯ ಐಐಐಟಿ-ಬೆಂಗಳೂರಿನ ನಿರ್ದೇಶಕ ಪ್ರೊ. ದೇಬಬ್ರತ ದಾಸ್ ಹೇಳಿದರು.

'ಜಾಗತಿಕ ಹ್ಯಾಕಥಾನ್‌ಗಳು, ಪ್ರತಿಷ್ಠಿತ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಪ್ರಕಟವಾದ ಉನ್ನತ ಸಂಶೋಧನೆ ಮತ್ತು ಸ್ಪರ್ಧಾತ್ಮಕ ವಿದ್ಯಾರ್ಥಿ ವೇತನಗಳು ಮತ್ತು ಅನುದಾನಗಳನ್ನು ನಮ್ಮ ಸಂಸ್ಥೆಯ ವಿದ್ಯಾರ್ಥಿಗಳು ಸ್ವೀಕರಿಸಿರುವುದು ಅವರ ಶ್ರಮಕ್ಕೆ ಸಿಕ್ಕ ಮನ್ನಣೆಯಾಗಿದೆ' ಎಂದರು.

## ಅಂತಿಮ ಸ್ಪರ್ಧೆಗೆ 6 ನಾಟಕ

**ಬೆಂಗಳೂರು:** 'ಪ್ರವರ ಥಿಯೇಟರ್' ಮತ್ತು 'ಅಶ್ವಘೋಷ ಥಿಯೇಟರ್ ಟ್ರಸ್ಟ್' ಜಂಟಿಯಾಗಿ ಆಯೋಜಿಸುವ 'ಬೆಂಗಳೂರು ಕಿರುನಾಟಕೋತ್ಸವ 2025'ರಮೊದಲ ಹಂತದ ಸ್ಪರ್ಧೆಯಲ್ಲಿ ಆರು ತಂಡಗಳು ಅಂತಿಮ ಸ್ಪರ್ಧೆಗೆ ಆಯ್ಕೆಯಾಗಿವೆ.

ಮೊದಲ ಹಂತದ ಸ್ಪರ್ಧೆಯಲ್ಲಿ 13 ತಂಡಗಳು ಭಾಗವಹಿಸಿದ್ದವು. ಅಂತಿಮ ಸ್ಪರ್ಧೆ ಇದೇ 12ರಂದು ಸಂಜೆ 6 ಗಂಟೆಗೆ ಮಲ್ಲತ್ತಹಳ್ಳಿಯಲ್ಲಿರುವ ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ ದಲ್ಲಿ ನಡೆಯಲಿದೆ. ಮಾಹಿತಿಗೆ: 9686869676, 9902590303

**ಅಂತಿಮ ಸ್ಪರ್ಧೆಗೆ ಆಯ್ಕೆಯಾಗಿರುವ ನಾಟಕಗಳು**

| ನಾಟಕ | ತಂಡ | ರಚನೆ–ನಿರ್ದೇಶನ |
|---|---|---|
| ನೀಲಿ- ನೀರು | ದೃಶ್ಯಕಾವ್ಯ | ರಾಣಿ ಪಿ. ವಿಶ್ವನಾಥ್ |
| ಅಕ್ಕ | ರಂಗಚಿರಂತನ | ಬೇಲೂರು ರಘುನಂದನ್ |
| ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ | ಖಾಲಿರಂಗ | ನಿರಂಜನ ಖಾಲಿಕೊಡ |
| 3/4 | ವೀಕೆಂಡ್ ಥಿಯೇಟರ್, ಆನೇಕಲ್ | ಮದನ್ ರಂಗಭೂಮಿ |
| ವಿಧುರ | ರಿ-ವ್ಯೂ ಥಿಯೇಟರ್ ಕಲೆಕ್ಟಿವ್ | ಸಚಿನ್ ಭದ್ರಾವತಿ |
| ಪಲ್ಸ್ | ಸ್ಪಷ್ಟ ಥಿಯೇಟರ್ | ಸಚಿನ್ ಭದ್ರಾವತಿ |

### ಎಚ್. ಆಂಜನೇಯ ನೇತೃತ್ವದ ಮುಖಂಡರ ನಿಯೋಗದಿಂದ ಮನವಿ ಪತ್ರ

## ಒಳಮೀಸಲಾತಿ ವರದಿ ಸಲ್ಲಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಒಳಮೀಸಲಾತಿ ಕಲ್ಪಿಸಲು ದತ್ತಾಂಶ ಸಂಗ್ರಹಕ್ಕಾಗಿ ನಡೆದಿರುವ ಸಮೀಕ್ಷೆಯ ವರದಿಯನ್ನು ಶೀಘ್ರದಲ್ಲಿಯೇ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಏಕಸದಸ್ಯ ವಿಚಾರಣಾ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರಿಗೆ ಮಾದಿಗ ಸಮುದಾಯದ ಮುಖಂಡರು ಮನವಿ ಮಾಡಿದರು.

ಮಾಜಿ ಸಚಿವ ಎಚ್. ಆಂಜನೇಯ ನೇತೃತ್ವದ ಮುಖಂಡರ ನಿಯೋಗ ಸೋಮವಾರ ಭೇಟಿ ಮಾಡಿ ಮನವಿ ಸಲ್ಲಿಸಿತು. ರಾಜ್ಯದಲ್ಲಿ ಮಾದಿಗ ಮತ್ತು ಛಲವಾದಿ ಸಮುದಾಯಗಳ ಜನರು ಆದಿ ಕರ್ನಾಟಕ (ಎ.ಕೆ.), ಆದಿ ದ್ರಾವಿಡ (ಎ.ಡಿ.), ಆದಿ ಆಂಧ್ರ (ಎ.ಎ) ಎಂದು ಗುರುತಿಸಿಕೊಂಡಿರುವುದ-ರಿಂದ ಯಾರು ಯಾವ ಸಮುದಾಯ ಎಂಬುದನ್ನು ಗುರುತಿಸಲು ಗೊಂದಲ ಉಂಟಾಗಿತ್ತು. ಅದಕ್ಕಾಗಿ ಸಮೀಕ್ಷೆಯ ಮೂಲಕ ಮೂಲ ಜಾತಿಯನ್ನು ನಮೂದಿಸುವಂತೆ ಮಾಡಲಾಗಿದೆ. ಜೊತೆಗೆ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಹಿಂದುಳಿಯುವಿಕೆ ಗುರುತಿಸಲು ಗಣತಿ ಮಾಡಲಾಗಿದೆ. ಈ ಸಮೀಕ್ಷೆ ಪೂರ್ಣಗೊಂಡಿದ್ದು, ದೇಶಕ್ಕೇ ಮಾದರಿಯಾಗಿದೆ. ಆಯೋಗವು ದತ್ತಾಂಶದ ಸಮಗ್ರ ವರದಿಯನ್ನು ಶೀಘ್ರ ರಾಜ್ಯ ಸರ್ಕಾರಕ್ಕೆ ಸಲ್ಲಿಸುವ ಮೂಲಕ ಪರಿಶಿಷ್ಟ ಜಾತಿಯಲ್ಲಿನ ಎಲ್ಲ ವರ್ಗಗಳಿಗೆ ಮೀಸಲಾತಿ ಸೌಲಭ್ಯ ಹಂಚಿಕೆ ಮಾಡಲು ಸಹಕರಿಸಬೇಕು ಎಂದು ಕೋರಿದರು.

ಮಾಜಿ ಸಂಸದ ಬಿ.ಎನ್.ಚಂದ್ರಪ್ಪ, ಸಮುದಾಯದ ಮುಖಂಡರಾದ ಕೋಗಿಲು ವೆಂಕಟೇಶ್, ಮುತ್ತುರಾಜು, ದೊಡ್ಡಗುಬ್ಬಿ ಸತೀಶ್, ಅನಿಲ್ ಕೋಟಿ, ದೇವದಾಸ್, ಎಂ. ಶ್ರೀನಿವಾಸ್, ವಕೀಲರಾದ ಮೋಹನ್ ರಾಜ್, ಮಂಜುನಾಥ, ತುಳಸಿರಾಮ್, ಆದಿ-ನಾರಾಯಣಪ್ಪ ನಿಯೋಗದಲ್ಲಿದ್ದರು.



ನ್ಯಾ.ನಾಗಮೋಹನ್ ದಾಸ್ ಅವರನ್ನು ಎಚ್. ಆಂಜನೇಯ ನೇತೃತ್ವದ ಮಾದಿಗ ಸಮುದಾಯದ ಮುಖಂಡರ ನಿಯೋಗ ಸನ್ಮಾನಿಸಿತು

# 5 ನಗರ ಪಾಲಿಕೆ ರಚನೆಗೆ ಸಜ್ಜು

## ಸಿ.ಎಂ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಾರದ 'ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಗ್ರೇಟರ್ ಬೆಂಗಳೂರು ಪ್ರದೇಶ'ದ ವ್ಯಾಪ್ತಿಯಲ್ಲೇ ಐದು ನಗರ ಪಾಲಿಕೆಗಳನ್ನು ರಚಿಸಲು ಸರ್ಕಾರ ಸಜ್ಜಾಗಿದೆ.

'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ– 2024' ರಚಿಸಿದ್ದ ತಜ್ಞರ ಸಮಿತಿ ಹಾಗೂ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿಯ ಮುಖ್ಯಸ್ಥರು, ನಗರದಲ್ಲಿ ಉತ್ತಮ ಆಡಳಿತ ನಿರ್ವಹಣೆಗೆ ಐದು ನಗರ ಪಾಲಿಕೆಗಳನ್ನು ರಚಿಸಬೇಕು ಎಂದು ವರದಿ ನೀಡಿದ್ದಾರೆ. ಅದಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಹುತೇಕ ಸಮ್ಮತಿಯನ್ನೂ ನೀಡಿದ್ದಾರೆ.

ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ, ಬೆಂಗಳೂರು ಪಶ್ಚಿಮ ಹಾಗೂ ಬೆಂಗಳೂರು ಕೇಂದ್ರ ನಗರ ಪಾಲಿಕೆ ಎಂದು ಐದು ನಗರ ಪಾಲಿಕೆಗಳನ್ನು ರಚಿಸಲು ಪ್ರಸ್ತಾಪಿಸಲಾಗಿದೆ. ಈ ಮೊದಲು ಮೂರು ನಗರ ಪಾಲಿಕೆ ರಚಿಸಬೇಕು ಎಂಬ ಸಲಹೆ ಇತ್ತಾದರೂ, 'ಗ್ರೇಟರ್ ಬೆಂಗಳೂರು ಪ್ರದೇಶ'ವನ್ನು 1000ಕ್ಕೂ ಹೆಚ್ಚು ಚದರ ಕಿ.ಮೀ ವ್ಯಾಪ್ತಿಗೆ ಹಿಗ್ಗಿಸಿಕೊಳ್ಳುವ ಚಿಂತನೆ ಇದೆ. ಹೀಗಾಗಿ, ಮೂರು ನಗರ ಪಾಲಿಕೆ ರಚನೆಯಾದರೆ, ಮತ್ತೆ ಆಡಳಿತಕ್ಕೆ ತೊಡಕಾಗುತ್ತದೆ. ಆದ್ದರಿಂದ ಐದು ನಗರ ಪಾಲಿಕೆಗಳು ರಚನೆಯಾಗಬೇಕು' ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

### ಮುಖ್ಯಾಂಶಗಳು

- 708 ಚದರ ಕಿ.ಮೀ ಈಗಿನ 'ಗ್ರೇಟರ್ ಬೆಂಗಳೂರು ಪ್ರದೇಶ'
- 1000ಕ್ಕೂ ಹೆಚ್ಚು ಚದರ ಕಿ.ಮೀ ವ್ಯಾಪ್ತಿಗೆ ಹಿಗ್ಗಿಸಲು ಚಿಂತನೆ
- 6 ಉಪನಗರಗಳೊಳಗಿನ ಪ್ರದೇಶವನ್ನು ಸೇರಿಸಲು ಒತ್ತಾಯ

27 ವಿಧಾನಸಭಾ ಕ್ಷೇತ್ರಗಳನ್ನು ಅವುಗಳ ವಿಸ್ತೀರ್ಣ ಹಾಗೂ ಜನಸಂಖ್ಯೆಗೆ ಅನುಗುಣವಾಗಿ ಐದು ನಗರ ಪಾಲಿಕೆಗಳ ವ್ಯಾಪ್ತಿಗೆ ತರಲಾಗುತ್ತದೆ. ಒಂದು ವಿಧಾನಸಭಾ ಕ್ಷೇತ್ರದ ಎಲ್ಲ ಪ್ರದೇಶಗಳು ಒಂದೇ ನಗರ ಪಾಲಿಕೆಯಲ್ಲಿರುವಂತೆ ಯೋಜಿಸಲಾಗಿದೆ.

708 ಚದರ ಕಿ.ಮೀ ವ್ಯಾಪ್ತಿಯಲ್ಲಿದ್ದ ಬಿಬಿಎಂಪಿ ಪ್ರದೇಶವನ್ನೇ 'ಗ್ರೇಟರ್ ಬೆಂಗಳೂರು ಪ್ರದೇಶ' ಎಂದು ಮೇ 15ರಂದು ಅಧಿಸೂಚಿಸಲಾಗಿತ್ತು. ಅದೇ ಪ್ರದೇಶದಲ್ಲಿ ಐದು ನಗರ ಪಾಲಿಕೆಗಳನ್ನು ರಚಿಸಲಾಗುತ್ತದೆ. ನಂತರ, ಅದರ ಸುತ್ತಲಿನ ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಜಿಗಣಿ ಕೈಗಾರಿಕೆ ಪ್ರದೇಶ, ಬೊಮ್ಮಸಂದ್ರ, ಸರ್ಜಾಪುರ, ಬಾಗಲೂರು, ರಾಜಾನುಕುಂಟೆ, ಹೆಸರಘಟ್ಟ, ದಾಸನಪುರ, ಮಾಕಳಿ, ತಾವರೆಕೆರೆ, ಕುಂಬಳಗೋಡು, ಕಗ್ಗಲಿಪುರ, ಹಾರೋಹಳ್ಳಿ ಸೇರಿದಂತೆ ಹಲವು ಪ್ರದೇಶಗಳನ್ನು ಸೇರಿಸಿಕೊಳ್ಳಲು ಚಿಂತಿಸಲಾಗಿದೆ.

ದೇವನಹಳ್ಳಿ, ನೆಲಮಂಗಲ, ಹೊಸಕೋಟೆ, ದೊಡ್ಡಬಳ್ಳಾಪುರ, ಮಾಗಡಿ, ಬಿಡದಿಗಳನ್ನು ಉಪನಗರಗಳನ್ನಾಗಿ ಅಭಿವೃದ್ಧಿಪಡಿಸಲು ಈಗಾಗಲೇ ಆದೇಶ ಹೊರಡಿಸಲಾಗಿದೆ. ಈ ಆರು ಉಪನಗರಗಳ ನಡುವಿನ ಪ್ರದೇಶವನ್ನು 'ಗ್ರೇಟರ್ ಬೆಂಗಳೂರು ಪ್ರದೇಶ'ಕ್ಕೆ ಸೇರಿಸಿಕೊಳ್ಳಬೇಕು ಎಂಬ ಸ್ಥಳೀಯ ಜನಪ್ರತಿನಿಧಿಗಳ ಆಗ್ರಹವೂ ಇದೆ.

**120 ದಿನಗಳ ಗಡುವು:** 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024' ಅನ್ನು 2025ರ ಮೇ 15ರಿಂದ ಜಾರಿಗೊಳಿಸಲಾಗಿದೆ. ಈ ಕಾಯ್ದೆಯಂತೆ ಬಿಬಿಎಂಪಿ ವ್ಯಾಪ್ತಿಯನ್ನೇ 'ಗ್ರೇಟರ್ ಬೆಂಗಳೂರು ಪ್ರದೇಶ' ಎಂದು ಅಂದೇ ಅಧಿಸೂಚಿಸಲಾಗಿದೆ. ಈ ಕಾಯ್ದೆ ಜಾರಿಯಾದ 120 ದಿನಗಳಲ್ಲಿ ಮುಖ್ಯಮಂತ್ರಿ ನೇತೃತ್ವದಲ್ಲಿ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ) ರಚನೆಯಾಗಬೇಕು ಎಂದು ಕಾಯ್ದೆಯ 'ಅಧ್ಯಾಯ –3'ರಲ್ಲಿ ತಿಳಿಸಲಾಗಿದೆ.

ಶಾಸಕರು ಸೇರಿದಂತೆ ಎಲ್ಲ ಇಲಾಖೆಗಳ ಮುಖ್ಯಸ್ಥರನ್ನು ಸದಸ್ಯರನ್ನಾಗಿಸಬೇಕು. ಇದಕ್ಕೆ ಮುಖ್ಯ ಆಯುಕ್ತರನ್ನೂ ನೇಮಿಸಬೇಕು. ಆದರೆ ಈ ಬಗ್ಗೆ ಇನ್ನೂ ಅಧಿಸೂಚನೆಯಾಗಿಲ್ಲ. ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸಲು, ಬೆಂಗಳೂರು ಅಭಿವೃದ್ಧಿ ಸಚಿವರ ನೇತೃತ್ವದಲ್ಲಿ 'ಕಾರ್ಯಕಾರಿ ಸಮಿತಿ'ಯ ರಚನೆಯೂ ಆಗಬೇಕು.

'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024' ಜಾರಿಯಾದ ಮೇಲೆ, ಆದಷ್ಟು ಬೇಗ, ಗರಿಷ್ಠ ಏಳು ನಗರ ಪಾಲಿಕೆಗಳನ್ನು ರಚಿಸಬೇಕು ಎಂದು ಕಾಯ್ದೆಯ 'ಅಧ್ಯಾಯ 5'ರಲ್ಲಿ ತಿಳಿಸಲಾಗಿದೆ.

### ಸಚಿವ ಸಂಪುಟದ ಮುಂದೆ ವರದಿ: ಡಿಕೆಶಿ



'ವಿರೋಧ ಪಕ್ಷದ ನಾಯಕರನ್ನು ವಿಶ್ವಾಸಕ್ಕೆ ಪಡೆದ ನಂತರ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ ವರದಿ' ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪಿಸಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಅವರು 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ದ ಕುರಿತು ವಿಧಾನಸೌಧದಲ್ಲಿ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ ಪಾಲಿಕೆಗಳನ್ನು ಹೇಗೆ ವಿಂಗಡಿಸಬೇಕು ಎಂಬುದರ ಬಗ್ಗೆ ಸಮಿತಿಯವರು ಅಂತಿಮ ವರದಿ ನೀಡಿದ್ದಾರೆ. ಈ ವಿಚಾರವಾಗಿ ವಿರೋಧ ಪಕ್ಷದ ನಾಯಕರ ಜೊತೆ ಚರ್ಚೆ ಮಾಡಿ ಅವರನ್ನು ವಿಶ್ವಾಸಕ್ಕೆ ಪಡೆಯಬೇಕು ಎಂದು ಸಮಿತಿ ಅಧ್ಯಕ್ಷರಿಗೆ ಸೂಚಿಸಿದ್ದೇನೆ. ಇದಾದ ಬಳಿಕ ಸಚಿವ ಸಂಪುಟ ಸಭೆಯ ಮುಂದೆ ವರದಿ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಈಗ ಹಾಲಿ ಇರುವ ಪಾಲಿಕೆ ವ್ಯಾಪ್ತಿಯಲ್ಲೇ ಇದನ್ನು ಜಾರಿಗೊಳಿಸುತ್ತೇವೆ. ಮುಂದಿನ ದಿನಗಳಲ್ಲಿ ಇದನ್ನು ವಿಸ್ತರಣೆ ಮಾಡಲಾಗುವುದು. ಸಚಿವ ಸಂಪುಟ ಸಭೆಯಲ್ಲಿ ಇದನ್ನು ಪ್ರಸ್ತಾಪಿಸಿ, ಆದಷ್ಟು ಬೇಗ ಚುನಾವಣೆ ನಡೆಸಬೇಕಿದೆ' ಎಂದು ತಿಳಿಸಿದರು.

#### 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024'

- 13 ಮಾರ್ಚ್ 2025; ಮಸೂದೆಗೆ ವಿಧಾನಮಂಡಲದಲ್ಲಿ ಅಂಗೀಕಾರ
- 24 ಏಪ್ರಿಲ್ 2025; ಮಸೂದೆಗೆ ರಾಜ್ಯಪಾಲರ ಅಂಕಿತ
- 15 ಮೇ 2025; ಕಾಯ್ದೆ ಜಾರಿಗೊಳಿಸಿ ಸರ್ಕಾರದ ಅಧಿಸೂಚನೆ
- 15 ಮೇ 2025; ಬಿಬಿಎಂಪಿ ವ್ಯಾಪ್ತಿಯನ್ನು 'ಗ್ರೇಟರ್ ಬೆಂಗಳೂರು ಪ್ರದೇಶ' ಎಂದು ಘೋಷಣೆ
- 12 ಸೆಪ್ಟೆಂಬರ್ 2025; ಸಿ.ಎಂ ನೇತೃತ್ವದ 'ಜಿಬಿಎ' ರಚನೆಗೆ ಗಡುವು




'ಗ್ರೇಟರ್ ಬೆಂಗಳೂರು' ನಿರೀಕ್ಷಿತ ವ್ಯಾಪ್ತಿ



## 'ನನ್ನ ಮೆಚ್ಚಿನ ಪುಸ್ತಕ'

**ಬೆಂಗಳೂರು:** ಅಂಗವಿಕಲ ವಿದ್ಯಾರ್ಥಿಗಳಿಂದ 'ನನ್ನ ಮೆಚ್ಚಿನ ಪುಸ್ತಕ' ಎಂಬ ವಿಶೇಷ ಕಾರ್ಯಕ್ರಮವನ್ನು ಋತುಗಾನ ಪ್ರತಿಷ್ಠಾನ ಮತ್ತು ಪ್ರೇಮಾಂಜಲಿ ಫೌಂಡೇಷನ್ ಆಯೋಜಿಸಿದೆ.



ವಿಜಯನಗರದ ಗಣೇಶ ದೇವಸ್ಥಾನದ ಎದುರಿನಲ್ಲಿರುವ ಆದಿಚುಂಚನಗಿರಿ ಮಹಿಳಾ ಸಂಘದಲ್ಲಿ ಇದೇ 12ರಂದು ಮಧ್ಯಾಹ್ನ 3 ಗಂಟೆಗೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಋತುಗಾನ ಪ್ರತಿಷ್ಠಾನದ ಸಂಸ್ಥಾಪಕರಾದ ವಿಜಯಲಕ್ಷ್ಮಿ ಸತ್ಯಮೂರ್ತಿ ಅವರು ತಿಳಿಸಿದ್ದಾರೆ.

'ನನ್ನ ಮೆಚ್ಚಿನ ಪುಸ್ತಕ' ಕುರಿತು ಮೆಹಬೂಬ್ ಸಾಬ್, ಬಿ. ನರಸಪ್ಪ, ಚಂದ್ರಶೇಖರ ಡಿ. ದೇವರಮನಿ, ಕೆ. ಅಜ್ಜಯ್ಯ ಮತ್ತು ಎನ್.ಎಸ್. ನರೇಶ್ ಮಾತನಾಡಲಿದ್ದಾರೆ. ಕವಿಗಳೂ ಲೇಖಕರೂ ಆಗಿರುವ ಸುಬ್ಬು ಹೊಲೆಯಾರ್, ಕೆಎಲ್ಇಪಿಸಿ ಜಾಬಿನ್ ವಿಜ್ಞಾನ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲ ಶಿವಪ್ರಕಾಶ್ ಹಿರೇಮಠ ಅವರು ಭಾಗವಹಿಸಲಿದ್ದಾರೆ ಎಂದೂ ಅವರು ಹೇಳಿದ್ದಾರೆ.

## ಅಧ್ಯಕ್ಷರಾಗಿ ರವಿಶಂಕರ್ ಆಯ್ಕೆ

**ಬೆಂಗಳೂರು:** ಬೆಂಗಳೂರು ನಗರ ಲಾರಿ ಸಾಗಣೆ ಮತ್ತು ಏಜೆಂಟರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಸಿ.ರವಿಶಂಕರ್, ಉಪಾಧ್ಯಕ್ಷರಾಗಿ ಎಂ.ರಾಜೇಂದ್ರ ಆಯ್ಕೆ ಆಗಿದ್ದಾರೆ.

ಕಾರ್ಯದರ್ಶಿಯಾಗಿ ಕೃಷ್ಣೇಗೌಡ, ಜಂಟಿ ಕಾರ್ಯದರ್ಶಿಯಾಗಿ ಕೆ.ಎಂ. ಕದಿರಪ್ಪ ಮತ್ತು ಖಜಾಂಚಿಯಾಗಿ ಕೆ.ಶಂಕರ್ ಆಯ್ಕೆಯಾಗಿದ್ದಾರೆ. ಸಂಘಕ್ಕೆ ನಡೆದ ಚುನಾವಣೆಯಲ್ಲಿ ರವಿಶಂಕರ್ ತಂಡದ 11 ಅಭ್ಯರ್ಥಿಗಳು ಜಯಸಾಧಿಸಿದ್ದರು. ಇವರ ಅಧಿಕಾರದ ಅವಧಿ ಮುಂದಿನ 2 ವರ್ಷ ಇರಲಿದೆ.

## ವಿಪತ್ತು ನಿರ್ವಹಣೆ ಪ್ರಾಧಿಕಾರ

**ಬೆಂಗಳೂರು:** ಬಿಬಿಎಂಪಿ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಏಳು ಸದಸ್ಯರ ವಿಪತ್ತು ನಿರ್ವಹಣಾ ಪ್ರಾಧಿಕಾರವನ್ನು ಸರ್ಕಾರ ರಚಿಸಿದೆ.

ಬೆಂಗಳೂರು ನಗರ ಜಿಲ್ಲಾಧಿಕಾರಿ, ನಗರ ಪೊಲೀಸ್ ಕಮಿಷನರ್, ಜಲಮಂಡಳಿಯ ಅಧ್ಯಕ್ಷ, ಅಗ್ನಿಶಾಮಕ ದಳದ ಮುಖ್ಯ ಅಧಿಕಾರಿಗಳು ಪ್ರಾಧಿಕಾರದ ಸದಸ್ಯರಾಗಿರುತ್ತಾರೆ.

ವಿಪತ್ತು ನಿರ್ವಹಣಾ ಯೋಜನೆ ತಯಾರಿಸುವುದು, ಪ್ರವಾಹ ಸೇರಿದಂತೆ ಅತಿ ಸಂಕಷ್ಟಕ್ಕೆ ಒಳಗಾಗುವ ಪ್ರದೇಶಗಳನ್ನು ಗುರುತಿಸಿ, ಅದರ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳನ್ನು ನಿರ್ಧರಿಸುವುದು, ಸರ್ಕಾರೇತರ ಸಂಸ್ಥೆಗಳನ್ನು ವಿಪತ್ತು ನಿರ್ವಹಣಾ ಕಾರ್ಯದಲ್ಲಿ ಸ್ವಯಂಪ್ರೇರಿತವಾಗಿ ಪಾಲ್ಗೊಳ್ಳುವಂತೆ ಉತ್ತೇಜಿಸುವುದು ಪ್ರಾಧಿಕಾರದ ಜವಾಬ್ದಾರಿಯಾಗಿದೆ. ಎರಡು ವರ್ಷಕ್ಕೊಮ್ಮೆ ಯೋಜನೆಯನ್ನು ಉನ್ನತೀಕರಿಸಲು ಸೂಚಿಸಲಾಗಿದೆ.

## ಬಾಂಬ್ ಮೇಲ್ 'ಭಗ್ನ ಪ್ರೇಮಿ' ಬಂಧನ

**ಮೈಸೂರು:** ರಾಜ್ಯದ ವಿವಿಧ ಕಡೆಗಳಿಗೆ ಬಾಂಬ್ ಇಟ್ಟಿರುವುದಾಗಿ ಇ– ಮೇಲ್ ಮೂಲಕ ಬೆದರಿಕೆ ಹಾಕಿದ್ದ ಪ್ರಕರಣದಲ್ಲಿ ದೆಹಲಿಯ ನಿಖಿಲ್ ಶರ್ಮಾ ಎಂಬಾತನನ್ನು ಪೊಲೀಸರು ಭಾನುವಾರ ಬಂಧಿಸಿ, ಸೋಮವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ನಗರದ ವಿವಿಧ ಸ್ಥಳಗಳಲ್ಲಿ ಬಾಂಬ್ ಇಡಲಾಗಿದೆ ಎಂದು ಮೇ 2ರಂದು ನಗರ ಪೊಲೀಸ್ ಕಮಿಷನರ್ ಕಚೇರಿಗೆ ಇ–ಮೇಲ್ ಸಂದೇಶ ಬಂದಿತ್ತು. ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

## ಕಂಟೈನರ್‌ನಲ್ಲಿದ್ದ ಸಾಮಗ್ರಿ ಕಳ್ಳತನ

**ಗುಡಿಬಂಡೆ:** ರಾಷ್ಟ್ರೀಯ ಹೆದ್ದಾರಿ 44ರ ಜಯಂತಿ ಗ್ರಾಮದ ಬಳಿಯ ಹೋಟೆಲ್ ಬಳಿ ನಿಂತಿದ್ದ ಕಂಟೈನರ್‌ನಲ್ಲಿ ಕಳ್ಳತನವಾಗಿದೆ. ಈ ಸಂಬಂಧ ಗುಡಿಬಂಡೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಂಟೈನರ್ ಚಾಲಕರೇ ಈ ಕೃತ್ಯ ಎಸಗಿದ್ದಾರೆ ಎನ್ನುವ ಶಂಕೆ ವ್ಯಕ್ತವಾಗಿದೆ. ಸಂದೀಪ್ ಟ್ರಾನ್ಸ್‌ಪೋರ್ಟ್ ಕಂಪನಿಗೆ ಸೇರಿದ ಕಂಟೈನರ್ ಹರಿಯಾಣ ರಾಜ್ಯದ ಗುರುಗ್ರಾಮದಿಂದ ತಮಿಳುನಾಡಿನ ಹೊಸೂರಿಗೆ ಅಮೆಜಾನ್ ಕಂಪನಿಯ ಸಾಮಗ್ರಿಗಳನ್ನು ಕೊಂಡೊಯ್ಯುತ್ತಿತ್ತು. ರಾಜಸ್ತಾನದ ನಜೀರ್ ಹುಸೇನ್ ಮತ್ತು ಹಬೀದ್ ಕಂಟೈನರ್ ಚಾಲಕರಾಗಿದ್ದರು.

ಸಾಮಗ್ರಿಗಳು ನಿಗದಿತ ಸ್ಥಳ ತಲುಪಿಲ್ಲ. ಅಮೆಜಾನ್ ಕಂಪನಿಯವರು ಕಂಟೈನರ್ ಜಿಪಿಎಸ್ ಮಾಹಿತಿ ಪರಿಶೀಲಿಸಿದಾಗ ಗುಡಿಬಂಡೆ ತಾಲ್ಲೂಕಿನ ಜಯಂತಿ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 44ರ ಹೋಟೆಲ್‌ವೊಂದರ ಬಳಿ ನಿಂತಿರುವುದು ಪತ್ತೆಯಾಗಿದೆ.

ಟ್ರಾನ್ಸ್‌ಪೋರ್ಟ್ ಸಂಸ್ಥೆ ಪ್ರತಿನಿಧಿ ಸ್ಥಳಕ್ಕೆ ಬಂದಿದ್ದು ಕಂಟೈನರ್ ಬೀಗ ಮುರಿದು ಬಾಗಿಲು ತೆರೆದರು. ಪರಿಶೀಲಿಸಿದಾಗ ₹4.80 ಲಕ್ಷ ಮೌಲ್ಯದ ವಸ್ತು ಕಳ್ಳತನ ಆಗಿವೆ. ಚಾಲಕ ಪರಾರಿ ಆಗಿದ್ದಾನೆ.



## ₹4.5 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ


**ಬೆಂಗಳೂರು:** ಸಾರ್ವಜನಿಕರಿಗೆ ಮಾದಕ ವಸ್ತುಗಳನ್ನು ಮಾರಾಟ ಮಾಡಲು ಪ್ರಯತ್ನಿಸಿದ ಆರೋಪದ ಮೇರೆಗೆ ಇಬ್ಬರು ವಿದೇಶಿ ಪ್ರಜೆಗಳನ್ನು ಬಂಧಿಸಿರುವ ರಾಜಾನುಕುಂಟೆ ಠಾಣೆ ಪೊಲೀಸರು, ಆರೋಪಿಗಳಿಂದ ₹4.5 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಯಲಹಂಕ ತಾಲ್ಲೂಕಿನ ಅದ್ದಿಗಾನಹಳ್ಳಿ ಗ್ರಾಮದಲ್ಲಿ ವಿದೇಶಿ ಪ್ರಜೆಗಳು ವಾಸವಿದ್ದ ಬಾಡಿಗೆ ಮನೆ ಮೇಲೆ ಪೊಲೀಸರು ದಾಳಿ ನಡೆಸಿದ ವೇಳೆ, ಮಾದಕ ವಸ್ತುಗಳು ಪತ್ತೆಯಾಗಿವೆ. ನೈಜೀರಿಯಾದ ಅಲ್ಲೊನೆ ಪೀಟರ್ ಒಬಿಯಾಮ್ ಹಾಗೂ ಸಂಡೇ ವಿಂಡಮ್ ಅವರನ್ನು ಬಂಧಿಸಿ, ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಈ ಕುರಿತು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಕೆ. ಬಾಬಾ ಮಾತನಾಡಿ, 'ಇಬ್ಬರು ನೈಜೀರಿಯಾ ಪ್ರಜೆಗಳನ್ನು ಬಂಧಿಸಲಾಗಿದೆ. ಆರೋಪಿಗಳು ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ದೆಹಲಿಗೆ ಬಂದಿದ್ದರು. ಅಲ್ಲಿಂದ ಬೆಂಗಳೂರಿಗೆ ಬಂದು, ಅದ್ದಿಗಾನಹಳ್ಳಿಯಲ್ಲಿ ಬಾಡಿಗೆ ಮನೆ ಪಡೆದು ವಾಸವಾಗಿದ್ದರು' ಎಂದರು.

'ಅಕ್ರಮವಾಗಿ ಶೇಖರಿಸಿ ಇಟ್ಟಿದ್ದ 2 ಕೆ.ಜಿ. 820 ಗ್ರಾಂ ಎಂಡಿಎಂಎ ಕ್ರಿಸ್ಟಲ್, 7 ಮೊಬೈಲ್ ಫೋನ್‌ಗಳು, 2 ತೂಕದ ಯಂತ್ರ, ₹2,06,870 ನಗದು ಸೇರಿ ₹ 4.50 ಕೋಟಿ ಮೌಲ್ಯದ ಸ್ವತ್ತು ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

'ಆರೋಪಿಗಳು ಯಾರಿಗೂ ಗೊತ್ತಾಗದಂತೆ ಬಟ್ಟೆಗಳನ್ನು ಸಾಗಿಸುವ ರಟ್ಟಿನ ಪೆಟ್ಟಿಗೆಯಲ್ಲಿ ಡ್ರಗ್ಸ್ ತುಂಬಿ ಮಾರಾಟ ಮಾಡುತ್ತಿದ್ದರು. ಅಕ್ಕಪಕ್ಕದ ನಿವಾಸಿಗಳಿಗೆ ಅನುಮಾನ ಬಾರದೆಂಬ ಕಾರಣಕ್ಕೆ ಭದ್ರತಾ ಸಿಬ್ಬಂದಿಯ ಕೆಲಸದ ಸಮವಸ್ತ್ರಗಳನ್ನು ಹಾಕಿಕೊಂಡು ಮನೆಗೆ ಬಂದು ಹೋಗುತ್ತಿದ್ದರು. ಆರೋಪಿಗಳ ವಿಚಾರಣೆ ಮುಂದುವರಿಸಲಾಗಿದ್ದು, ಮತ್ತಷ್ಟು ಮಾಹಿತಿ ಕಲೆ ಹಾಕಿ ಡ್ರಗ್ಸ್ ಜಾಲ ಭೇದಿಸಲಾಗುವುದು' ಎಂದು ಹೇಳಿದರು.




## ಮರಗಳ ಅಕ್ರಮ ಸಂಗ್ರಹ ಅರಣ್ಯ ಇಲಾಖೆಯಿಂದ ವಶ

**ನೆಲಮಂಗಲ:** ಕೆರೆಯ ದಡದಲ್ಲಿ ಒಣಗಿ ಬಿದ್ದಿದ್ದ ಮರಗಳನ್ನು ಕಡಿದು ಅಕ್ರವಾಗಿ ಸಂಗ್ರಹಿಸಿದ್ದ ಆರೋಪದ ಮೇಲೆ ಮೂವರ ವಿರುದ್ಧ ಅರಣ್ಯ ಇಲಾಖೆ ಅಧಿಕಾರಿಗಳು ಭಾನುವಾರ ಪ್ರಕರಣ ದಾಖಲಿಸಿಕೊಂಡು ಮರಗಳನ್ನು ವಶಕ್ಕೆ ಪಡೆದಿದ್ದಾರೆ.

ಗೋರಿನಬೆಲೆ ಕೆರೆ ದಡದಲ್ಲಿ ಒಣಗಿ ಬಿದ್ದಿದ್ದ ಅಕೇಶಿಯಾ ಮತ್ತು ಹರ್ಕ್ಯುಲಸ್ ಸೇರಿ ಒಟ್ಟು ಐದು ಮರಗಳನ್ನು ಕಡಿದು ಯಂಟಗಾನಹಳ್ಳಿಯ ಹನುಮಂತಯ್ಯ ಅವರ ತೋಟದಲ್ಲಿ ಸಂಗ್ರಹಿಸಲಾಗಿತ್ತು. ಸಾರ್ವಜನಿಕರು ನೀಡಿದ ದೂರಿನ ಆಧಾರದ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿ ದಾಳಿ ನಡೆಸಿ ಮರದ ತುಂಡುಗಳನ್ನು ವಶಕ್ಕೆ ಪಡೆದಿದ್ದಾರೆ.

ಆರೋಪಿಗಳಾದ ಗೋರಿನಬೆಲೆಯ ಜಿ.ವಿನಯ್‌ಕುಮಾರ್, ಗಂಗರಾಜು, ಲಕ್ಷ್ಮಣ್ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.


'ಜಿ.ವಿನಯ್‌ಕುಮಾರ್ ಕಳೆದ ವಾರ ಮರಗಳನ್ನು ಕಡಿದು ಯಂಟಗಾನಹಳ್ಳಿಯ ಹನುಮಂತಯ್ಯ ಅವರ ತೋಟದಲ್ಲಿ ಸಂಗ್ರಹಿಸಿದ್ದ. ಆತನಿಗೆ ಗಂಗರಾಜು ಹಾಗೂ ಲಕ್ಷ್ಮಣ್ ಅವರು ನೆರವು ನೀಡಿದ್ದರು' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

# ಅಸಲಿಗೆ ಸಿಕ್ಕಿಬಿದ್ದ 'ನಕಲಿ ಪೊಲೀಸಪ್ಪ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಟೋಲ್ ಹಾಗೂ ಇತರೆ ಸ್ಥಳಗಳಲ್ಲಿ ಪೊಲೀಸ್ ಸಿಬ್ಬಂದಿಯ ನಕಲಿ ಗುರುತಿನ ಚೀಟಿ ತೋರಿಸಿ ಸಿಬ್ಬಂದಿಯನ್ನು ಬೆದರಿಸಿ ಓಡಾಡುತ್ತಿದ್ದ ಆರೋಪಿಯನ್ನು ವಲಸೆ ವಿಭಾಗದ ಅಧಿಕಾರಿಗಳು ಹಾಗೂ ಪೀಣ್ಯ ಠಾಣೆಯ ಪೊಲೀಸರು ಪತ್ತೆಹಚ್ಚಿದ್ದಾರೆ.

ಖಚಿತ ಮಾಹಿತಿ ಆಧರಿಸಿ ಕರಿಓಬನಹಳ್ಳಿಯ ರವಿ ಎಂಬಾತನನ್ನು ಕೆಲವು ದಿನದ ಹಿಂದೆ ಬಂಧಿಸಲಾಗಿತ್ತು. ಆರೋಪಿಗೆ ಜಾಮೀನು ಸಿಕ್ಕಿದ್ದು ಆತ ಬಿಡುಗಡೆ ಆಗಿದ್ದಾನೆ ಎಂದು ಪೊಲೀಸರು ಹೇಳಿದರು.



ರವಿ

ರವಿ, ರೇಣುಕಾ ಶುಗರ್ಸ್‌ನಲ್ಲಿ ಕ್ಷೇತ್ರಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದ.

'ಆರೋಪಿಗೆ ಪಿಎಸ್ಐ ಒಬ್ಬರ ಪರಿಚಯವಿತ್ತು. ಅವರ ಗುರುತಿನ ಚೀಟಿಯನ್ನು ಆರೋಪಿ ತೆಗೆದುಕೊಂಡಿದ್ದ. ಅದೇ ಮಾದರಿಯಲ್ಲಿ ನಕಲಿ ಐ.ಡಿ ಮಾಡಿಸಿಕೊಂಡು, ತನ್ನ ಫೋಟೊ ಅಂಟಿಸಿಕೊಂಡಿದ್ದ. ಟೋಲ್, ವಿಮಾನ ನಿಲ್ದಾಣದ ಪ್ರವೇಶ ದ್ವಾರದಲ್ಲಿ ಸಿಬ್ಬಂದಿಯನ್ನು ಬೆದರಿಸಿ ಓಡಾಟ ನಡೆಸುತ್ತಿದ್ದ. ಯಾರೇ ಕೇಳಿದರೂ 'ಏಯ್ ನಾನು ಪೊಲೀಸಪ್ಪ' ಎಂಬುದಾಗಿ ಹೇಳುತ್ತಿದ್ದ' ಎಂದು ಮೂಲಗಳು ತಿಳಿಸಿವೆ.

ದೇವನಹಳ್ಳಿಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ವಲಸೆ ವಿಭಾಗದ ಅಧಿಕಾರಿಗಳ ಬಳಿಯೂ ರವಿ ನಕಲಿ ಗುರುತಿನ ಚೀಟಿ ತೋರಿಸಿದ್ದ.

ಗುರುತಿನ ಚೀಟಿ ಸ್ಕ್ಯಾನ್ ಮಾಡಿದ್ದ ವಲಸೆ ವಿಭಾಗದ ಅಧಿಕಾರಿಗಳಿಗೆ ಅನುಮಾನ ಬಂದಿತ್ತು. ಅದು ನಕಲಿ ಕಾರ್ಡ್ ಎಂದು ಖಾತರಿಪಡಿಸಿಕೊಂಡು ಆತನನ್ನು ವಶಕ್ಕೆ ಪಡೆದುಕೊಂಡಿದ್ದರು. ಪೀಣ್ಯ ಪೊಲೀಸರು ಆತನನ್ನು ಬಂಧಿಸಿದ್ದರು.

## ಕೈವಾರ: ಇಂದಿನಿಂದ ಸಂಗೀತೋತ್ಸವ

**ಚಿಂತಾಮಣಿ:** ಕೈವಾರ ಯೋಗಿನಾರೇಯಣ ಯತೀಂದ್ರರ ಮಠದಲ್ಲಿ ಜುಲೈ 8ರಿಂದ 10ರವರೆಗೆ ಅಹೋರಾತ್ರಿ ನಿರಂತರವಾಗಿ 72 ತಾಸು ಸಂಗೀತ ಮಹೋತ್ಸವ ನಡೆಯಲಿದೆ.

ಸಂಗೀತೋತ್ಸವ ನಡೆಯುವ ಸಭಾಂಗಣದಲ್ಲಿ ಅಮರನಾರೇಯಣಸ್ವಾಮಿ ಮತ್ತು ಭೀಮಲಿಂಗೇಶ್ವರಸ್ವಾಮಿ ಹೆಸರಿನ ಎರಡು ವೇದಿಕೆ ನಿರ್ಮಿಸಲಾಗಿದೆ. ಮತ್ತೊಂದು ವೇದಿಕೆ ನಿರ್ಮಿಸಿ ಸದ್ಗುರು ಯೋಗಿನಾರೇಯಣ ಯತೀಂದ್ರರ ಉತ್ಸವ ಮೂರ್ತಿ ಪ್ರತಿಷ್ಠಾಪಿಸಲಾಗಿದೆ.

## ಬಿಸಿನೀರಿನ ಹಂಡೆಗೆ ಮಗು ಹಾಕಿದ ತಾಯಿ: ಸಾವು

ಪ್ರಜಾವಾಣಿ ವಾರ್ತೆ

**ನೆಲಮಂಗಲ:** ಪಟ್ಟಣದ ವಿಶ್ವೇಶ್ವರಪುರದಲ್ಲಿ ಒಂದು ತಿಂಗಳ ಮಗುವನ್ನು ತಾಯಿ ಬಿಸಿನೀರಿನ ಹಂಡೆಗೆ ಹಾಕಿದ್ದು, ಆ ಮಗು ಸಾವಿಗೀಡಾಗಿದೆ.

ಮಗು ಸಾವಿಗೆ ಕಾರಣವಾದ ತಾಯಿ ರಾಧಾ(28) ಅವರನ್ನು ನೆಲಮಂಗಲ ಠಾಣೆ ಪೊಲೀಸರು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

'ಮಗು ಅವಧಿ ಪೂರ್ವವಾಗಿ ಜನಿಸಿದೆ. ಒಂದು ತಿಂಗಳಿಂದ ಹಾಲು ಕುಡಿಯುತ್ತಿರಲಿಲ್ಲ. ಮಗು ಸಹಜವಾಗಿಲ್ಲ ಎಂದು ತಾಯಿ ರಾಧಾ ಅವರು ಭಾವಿಸಿದ್ದರು. ಹೆರಿಗೆಯ ಬಳಿಕ ಅವರು ಮಾನಸಿಕವಾಗಿ ನೊಂದಿದ್ದರು' ಎಂದು ಮೂಲಗಳು ಹೇಳಿವೆ.

'ರಾಧಾ ಸೋಮವಾರ ಬೆಳಿಗ್ಗೆ ಹಂಡೆಯ ಒಲೆಗೆ ಬೆಂಕಿ ಹಾಕಿ, ಬಿಸಿ ನೀರು ಕಾಯಿಸಿದ್ದರು. ಆ ಹಂಡೆಗೆ ಮಗುವನ್ನು ಹಾಕಿದ್ದರಿಂದ ಮಗು ಮೃತಪಟ್ಟಿದೆ' ಎಂದು ಮೂಲಗಳು ತಿಳಿಸಿವೆ.

ರಾಧಾ ಪತಿ ಆಟೊ ಚಾಲಕನಾಗಿದ್ದಾರೆ. ಅವರಿಗೆ ವಿಪರೀತ ಮದ್ಯ ಸೇವಿಸುವ ಚಟವಿದೆ ಎಂದು ಸ್ಥಳೀಯರು ತಿಳಿಸಿದರು. ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಯಿತು ಎಂದು ಪೊಲೀಸರು ಹೇಳಿದರು.

# ಮೊಬೈಲ್ ಮರಳಿ ಕೇಳಿದ್ದಕ್ಕೆ ಮಚ್ಚೇಟು

## ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಿದ ಜಯನಗರ ಠಾಣೆ ಪೊಲೀಸರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರೆ ಮಾಡಲು ನೀಡಿದ್ದ ಮೊಬೈಲ್ ಫೋನ್ ಹಿಂದಿರುಗಿಸುವಂತೆ ಕೇಳಿದ ಭದ್ರತಾ ಸಿಬ್ಬಂದಿಯೊಬ್ಬರಿಗೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಪರಾರಿ ಆಗಿದ್ದ ಆರೋಪಿಯನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಯನಗರದ ಪಟಾಲಮ್ಮ ದೇವಸ್ಥಾನದ ರಸ್ತೆಯಲ್ಲಿ ಜುಲೈ 3ರಂದು ಈ ಘಟನೆ ನಡೆದಿತ್ತು. ಭದ್ರತಾ ಸಿಬ್ಬಂದಿ ಪರ್ವಿಂದರ್ ಗಾಯಗೊಂಡು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪರಾರಿ ಆಗಿದ್ದ ಆರೋಪಿ ಅಸ್ಗರ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.



ಪರ್ವಿಂದರ್



ಅಸ್ಗರ್

ಅಪರಾಧ ಸುದ್ದಿ

ಮಿಥುನ್ ಪಟ್ಟಾಲಮ್ಮ ದೇವಸ್ಥಾನದ ರಸ್ತೆಯ ಪಕ್ಕದಲ್ಲಿ ನಿರ್ಮಾಣವಾಗುತ್ತಿದ್ದ ಕಟ್ಟಡದ ಎಂಜಿನಿಯರಿಂಗ್ ಕೆಲಸ ಮಾಡುತ್ತಿದ್ದರು. ಜುಲೈ 3ರಂದು ಇದೇ ಮಾರ್ಗವಾಗಿ ಬೈಕ್‌ನಲ್ಲಿ ಬಂದ ಅಸ್ಗರ್, 'ನನ್ನ ಮೊಬೈಲ್ ಹಾಳಾಗಿದೆ, ಒಂದು ಕರೆ ಮಾಡಬೇಕು' ಎಂದು ಮಿಥುನ್ ಬಳಿ ಫೋನ್ ಕೇಳಿದ್ದ. ಈ ವೇಳೆ ಮಿಥುನ್ ಫೋನ್ ನೀಡಿದ್ದರು.

ಬಳಿಕ ಮಿಥುನ್ ಕುಮಾರ್ ಫೋನ್ ವಾಪಸ್ ಕೇಳಿದ್ದರು. ಮೊಬೈಲ್ ಹಿಂದಿರುಗಿಸಲು ನಿರಾಕರಿಸಿದ್ದ ಆರೋಪಿ, ತನ್ನ ದ್ವಿಚಕ್ರವಾಹನದ ಮ್ಯಾಟ್ ಅಡಿಯಿಂದ ಮಾರಕಾಸ್ತ್ರ ತೆಗೆದು ಮಿಥುನ್ ಮೇಲೆ ಹಲ್ಲೆಗೆ ಯತ್ನಿಸಿದ್ದ. ಈ ವೇಳೆ ಗಲಾಟೆ ಬಿಡಿಸಲು ಬಂದ ಭದ್ರತಾ ಸಿಬ್ಬಂದಿ ಪರ್ವಿಂದರ್ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ, ಪರಾರಿಯಾಗಿದ್ದ. ಘಟನೆಯ ಸಂಪೂರ್ಣ ದೃಶ್ಯಾವಳಿ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು.

## ದೆವ್ವ ಬಿಡಿಸುವುದಾಗಿ ಥಳಿತ; ಮಹಿಳೆ ಸಾವು

ಪ್ರಜಾವಾಣಿ ವಾರ್ತೆ



ಗೀತಮ್ಮ

**ಹೊಳೆಹೊನ್ನೂರು:** ಸಮೀಪದ ಜಂಬರಗಟ್ಟೆ ಗ್ರಾಮದಲ್ಲಿ ಭಾನುವಾರ ರಾತ್ರಿ ದೆವ್ವ ಬಿಡಿಸುವ ನೆಪದಲ್ಲಿ ಮಹಿಳೆ ಒಬ್ಬರನ್ನು ಅಮಾನುಷವಾಗಿ ಥಳಿಸಲಾಗಿದೆ. ಇದರಿಂದ ತೀವ್ರವಾಗಿ ಗಾಯಗೊಂಡಿದ್ದ ಮಹಿಳೆ ಸೋಮವಾರ ನಸುಕಿನಲ್ಲಿ ಮೃತಪಟ್ಟಿದ್ದಾರೆ.

ಜಂಬರಗಟ್ಟೆ ಗ್ರಾಮದ ಗೀತಮ್ಮ (45) ಮೃತ ಮಹಿಳೆ. ದೆವ್ವ ಬಿಡಿಸುವ ನೆಪದಲ್ಲಿ ಹಲ್ಲೆ ನಡೆಸಿದ ಅದೇ ಗ್ರಾಮದ ಆಶಾ (35), ಆಕೆಯ ಪತಿ ಸಂತೋಷಕುಮಾರ್ (37) ಹಾಗೂ ತಾಯಿಯನ್ನು ಅಲ್ಲಿಗೆ ಕರೆದೊಯ್ದಿದ್ದ ಗೀತಮ್ಮ ಅವರ ಪುತ್ರ ಸಂಜಯ್ (20) ಅವರನ್ನು ಹೊಳೆಹೊನ್ನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಂಬರಗಟ್ಟೆಯ ನಿವಾಸಿ ಆಶಾ ತಮ್ಮ ಮೇಲೆ ಗ್ರಾಮದೇವತೆ ಚೌಡೇಶ್ವರಿ ಬಂದಿದ್ದಾಳೆ ಎಂದು ಕಳೆದ 15 ದಿನಗಳಿಂದ ಊರಿನವರನ್ನು ನಂಬಿಸಿದ್ದರು. ಹೀಗಾಗಿ ತನ್ನ ತಾಯಿಯ ಮೈಮೇಲೆ ಆಗಾಗ ದೆವ್ವ ಬರುತ್ತದೆ ಎಂದು ಗೀತಾ ಅವರನ್ನು ಪುತ್ರ ಸಂಜಯ ರಾತ್ರಿ 9.15ರ ವೇಳೆಗೆ ಆಶಾ ಮನೆಗೆ ಕರೆದೊಯ್ದಿದ್ದರು.

'ಗೀತಮ್ಮನ ಮೈಯಲ್ಲಿ ಆತ್ಮವೊಂದು ಹೊಕ್ಕಿದೆ. ಪೂಜೆ ಮಾಡಿ ಅದನ್ನು ಹೊರ ಹಾಕುತ್ತೇನೆ ಎಂದು ಆಶಾ ತಿಳಿಸಿದ್ದರು. ಹೀಗಾಗಿ ಅವರ ಮನೆಗೆ ಕರೆದೊಯ್ದಿದ್ದೆವು. ಮೊದಲಿಗೆ ದೇವರ ಪೂಜೆ ಮಾಡಿದ್ದರು. ನಂತರ ದೆವ್ವ ಓಡಿಸುವೆ ಎಂದು ತಲೆ ಮೇಲೆ ಕಲ್ಲು ಹೊರಿಸಿ ಗ್ರಾಮದ ಹೊರಗಿನ ಮರವೊಂದರ ಬಳಿಗೆ ಕರೆದೊಯ್ದರು. ಮರದ ಟೊಂಗೆಯೊಂದನ್ನು ಕಿತ್ತುಕೊಂಡು ಅಲ್ಲಿ ಮನಬಂದಂತೆ ಥಳಿಸಿದರು. ತಲೆ ಮೇಲೆ ದೊಡ್ಡ ಗಾತ್ರದ ಕಲ್ಲು ಹೊರಿಸಿ ಪಕ್ಕದ ಕಾಲುವೆಯಲ್ಲಿದ್ದ ತಣ್ಣೀರು ಎರಚಿದರು. ಚಳಿ ತಾಳಲಾಗದೇ ನಡುಗುತ್ತಿದ್ದ ಅಮ್ಮ ಕುಸಿದು ಬಿದ್ದರು' ಎಂದು ಸಂಜಯ್ ಪೊಲೀಸರಿಗೆ ನೀಡಿದ್ದ ದೂರಿನಲ್ಲಿ ತಿಳಿಸಿದ್ದಾರೆ.

ಗೀತಮ್ಮನ ಮೈಯಲ್ಲಿದ್ದ ಆತ್ಮ ಹೊರಹೋಗಿದೆ. ಮುಂದೆ ಯಾವುದೇ ತೊಂದರೆ ಇಲ್ಲ. ಎಲ್ಲವೂ ಸರಿಯಾಗಿದೆ ಎಂದು ಹೇಳಿದ್ದ ಆಶಾ ಅವರನ್ನು ಮನೆಗೆ ಕಳಿಸಿದ್ದಾರೆ. ಈ ವೇಳೆ ತೀವ್ರ ಅಸ್ವಸ್ಥವಾಗಿದ್ದ ಅವರನ್ನು ಹೊಳೆಹೊನ್ನೂರಿನ ಸಮುದಾಯ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ದೆವ್ವ ಬಿಡಿಸುವ ನೆಪದಲ್ಲಿ ಕೋಲಿನಿಂದ ಹಲ್ಲೆ ನಡೆಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ. ಮಿಥುನ್‌ಕುಮಾರ್ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಐಎಸ್‌ಡಿ ಡಿವೈಎಸ್‌ಪಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವರದಕ್ಷಿಣೆ ಕಿರುಕುಳ ನೀಡಿದ್ದ ಆರೋಪದಡಿ ಆಂತರಿಕ ಭದ್ರತಾ ವಿಭಾಗದ(ಐಎಸ್‌ಡಿ) ಡಿವೈಎಸ್‌ಪಿಯೊಬ್ಬರ ವಿರುದ್ಧ ಈಶಾನ್ಯ ಮಹಿಳಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಡಿವೈಎಸ್‌ಪಿ ಆರ್.ಶಂಕರಪ್ಪ ಹಾಗೂ ಮತ್ತೊಬ್ಬ ಮಹಿಳೆಯ ವಿರುದ್ಧ ದೂರು ನೀಡಲಾಗಿದ್ದು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಶಂಕರಪ್ಪ ಅವರಿಗೆ ದೂರುದಾರಳ ತಂದೆ, ಮದುವೆಯ ಸಂದರ್ಭದಲ್ಲಿ ಚಿನ್ನಾಭರಣ, ಬೈಕ್ ಹಾಗೂ ಗೃಹೋಪಯೋಗಿ ವಸ್ತುಗಳನ್ನು ಕೊಟ್ಟಿದ್ದರು. ಶಂಕರಪ್ಪ ಅವರು ಶಿಕ್ಷಕ ವೃತ್ತಿ ಬಿಟ್ಟು ಪೊಲೀಸ್ ಕೆಲಸಕ್ಕೆ ಸೇರಿದ್ದರು. ಪೊಲೀಸ್ ಇಲಾಖೆಗೆ ಸೇರಿದ ಮೇಲೆ ತನ್ನ ಸ್ಟೇಟಸ್ ಜಾಸ್ತಿಯಾಗಿದ್ದು, ಅದಕ್ಕೆ ತಕ್ಕಂತೆ ವರದಕ್ಷಿಣೆ ತೆಗೆದುಕೊಂಡು ಬರುವಂತೆ ಹೇಳುತ್ತಿದ್ದರು. ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ. ಶೌಚಾಲಯದಲ್ಲಿ ಜಾರಿ ಬೀಳುವಂತೆ ಒದ್ದಿದ್ದಾರೆ. ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿದ್ದಾರೆ. ಎರಡು ವರ್ಷಗಳಿಂದ ಬೇರೆ ಮಹಿಳೆಯ ಜತೆಗೆ ಸಲುಗೆಯಿಂದ ಇದ್ದಾರೆ. ಆಕೆಯ ಮಾತು ಕೇಳಿಕೊಂಡು ನಿಂದನೆ ಮಾಡುತ್ತಿದ್ದಾರೆ' ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

## ಹಲ್ಲೆ: ಆರೋಪಿಗಳ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ. ಅವರ ಮೇಲೆ ಹಲ್ಲೆ ಮಾಡಿರುವ ಆರೋಪಿಗಳನ್ನು ಬಂಧಿಸಬೇಕೆಂದು ಅಖಿಲ ಕರ್ನಾಟಕ ಕುಳುವ ಮಹಾ ಸಂಘ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ಭಜಂತ್ರಿ, 'ನಗರದ ಗಾಂಧಿ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಅಲೆಮಾರಿ ಸಮುದಾಯದ ಮುಖಂಡರ ಸಭೆಯಲ್ಲಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ. ಭಾಗವಹಿಸಿದ್ದರು. ಅಲೆಮಾರಿ ಸಮುದಾಯಗಳ ಪರ ಮಾತನಾಡಲು ಪ್ರಾರಂಭಿಸಿದ ವೇಳೆ, ಆರೋಪಿಗಳು ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಿದ್ದಾರೆ. ಈ ಘಟನೆ ಮಾಜಿ ಸಚಿವ ಎಚ್. ಆಂಜನೇಯ ಅವರ ಸಮ್ಮುಖದಲ್ಲಿ ನಡೆದರೂ ಅವರು, ಹಲ್ಲೆ ತಡೆಯಲಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ರಾಜ್ಯ ಘಟಕದ ಸಂಘಟನಾ ಕಾರ್ಯದರ್ಶಿ ರವಿಕುಮಾರ್, ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷೆ ಪ್ರಭಾವತಿ, ಮುಖಂಡರಾದ ಗಂಗಾಧರ, ರಮೇಶ್ ಭಜಂತ್ರಿ, ಈರಣ್ಣ ಭಜಂತ್ರಿ ಉಪಸ್ಥಿತರಿದ್ದರು.

### ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ

# ಗೌರವಧನ ಹೆಚ್ಚಿಸಿ: ಸಖಿಯರ ಒಕ್ಕೂಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗೌರವಧನ ಹೆಚ್ಚಳವೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ರಾಜ್ಯ ಗ್ರಾಮ ಪಂಚಾಯಿತಿ ಮಟ್ಟದ ಮುಖ್ಯ ಪುಸ್ತಕ ಬರಹಗಾರರು ಮತ್ತು ಸ್ಥಳೀಯ ಸಮುದಾಯದ ಸಂಪನ್ಮೂಲ ವ್ಯಕ್ತಿಗಳ ಸಖಿಯರ ಮಹಾ ಒಕ್ಕೂಟದ ಸದಸ್ಯರು ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರದಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿರುವ ಸದಸ್ಯರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಎಂದೂ ಪ್ರತಿಭಟನಕಾರರು ಆಗ್ರಹಿಸಿದರು.

ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಹಲವು ಬಾರಿ ಮನವಿ ಸಲ್ಲಿಸಲಾಗಿತ್ತು. ಆದರೂ ಬೇಡಿಕೆ ಈಡೇರಿಲ್ಲ. ಕಳೆದ ಅಕ್ಟೋಬರ್‌ನಲ್ಲಿ ಗೌರವಧನ ಪರಿಷ್ಕರಣೆಗೆ ಸಂಬಂಧಿಸಿದಂತೆ ಸರ್ಕಾರ ಆದೇಶ ಹೊರಡಿಸಿತ್ತು. ಆದೇಶಕ್ಕೆ ಸಖಿಯರ ಮಹಾ ಒಕ್ಕೂಟದ ವಿರೋಧ ಇದೆ. ಆ ಆದೇಶವನ್ನು ವಾಪಸ್ ಪಡೆದು, ಗೌರವಧನ ಹೆಚ್ಚಿಸಿ ಹೊಸ ಆದೇಶವನ್ನು ಹೊರಡಿಸಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಗ್ರಾಮ ಪಂಚಾಯಿತಿ ಮಟ್ಟದ ಮುಖ್ಯ ಪುಸ್ತಕ ಬರಹಗಾರರು ಮತ್ತು ಸ್ಥಳೀಯ ಸಮುದಾಯದ ಸಂಪನ್ಮೂಲ ವ್ಯಕ್ತಿಗಳ ಸಖಿಯರ ಮಹಾ ಒಕ್ಕೂಟದಿಂದ ಸೋಮವಾರ ಪ್ರತಿಭಟನೆ ನಡೆಯಿತು

ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರರಿಗೆ ತಿಂಗಳಿಗೆ ₹20 ಸಾವಿರ ಹಾಗೂ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಗೆ ₹15 ಸಾವಿರ ಗೌರವಧನ ನಿಗದಿ ಪಡಿಸಬೇಕು ಎಂದು ಒತ್ತಾಯಿಸಿದರು.

ಸರ್ಕಾರದಿಂದ ನೇರವಾಗಿ ಬ್ಯಾಂಕ್ ಖಾತೆಗೆ ಹಣ ಜಮೆ ಆಗಬೇಕು. ಕೆಲಸದ ಜತೆಗೆ ಗ್ರಾಮ ಪಂಚಾಯಿತಿಗಳ ಹಲವು ಕೆಲಸಗಳನ್ನು ಮಾಡಬೇಕಾಗಿದೆ. ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ವಹಿಸಬೇಕು. ವೇತನ ಸಹಿತ ಹೆರಿಗೆ ರಜೆ ಮಂಜೂರು ಮಾಡಬೇಕು. ಮಹಿಳಾ ಸಿಬ್ಬಂದಿಯ ಮೇಲೆ ನಡೆಯುತ್ತಿರುವ ಮಾನಸಿಕ ದೌರ್ಜನ್ಯ ನಿಲ್ಲಿಸಬೇಕು. ಇಎಸ್ಐ ಹಾಗೂ ಪಿಎಫ್ ಸೌಲಭ್ಯಗಳನ್ನು ಒದಗಿಸಬೇಕು ಎಂದೂ ಆಗ್ರಹಿಸಿದರು.

ಪ್ರತಿಭಟನೆಯ ನೇತೃತ್ವವನ್ನು ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಮಹಾ ಒಕ್ಕೂಟದ ರಾಜ್ಯ ಅಧ್ಯಕ್ಷೆ ರುದ್ರಮ್ಮ, ಪ್ರಧಾನ ಕಾರ್ಯದರ್ಶಿ ಕುಸುಮಾ, ರಾಜ್ಯ ಉಪಾಧ್ಯಕ್ಷ ಗುರುಬಸಮ್ಮ, ಖಜಾಂಚಿ ಪುಷ್ಪಾ ವಹಿಸಿದ್ದರು.

## ಕೆಎಸ್‌ಎಫ್‌ಸಿ ಅಧಿಕಾರಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಿವೇಶನ ಖರೀದಿಗಾಗಿ ಪಡೆದಿದ್ದ ಸಾಲದ ಹಣವನ್ನು ವಾಪಸ್ ನೀಡದೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿದ ಆರೋಪದಡಿ ರಾಜ್ಯ ಹಣಕಾಸು ಸಂಸ್ಥೆಯ (ಕೆಎಸ್‌ಎಫ್‌ಸಿ) ಉಪ ವ್ಯವಸ್ಥಾಪಕಿ ಬಿ.ಕವಿತಾ ಹಾಗೂ ಅವರ ಪತಿ ಹೇಮಂತ್ ಕುಮಾರ್ ವಿರುದ್ಧ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಜುನಾಥ್ ನಗರದಲ್ಲಿ ಕೇಬಲ್ ಉದ್ಯಮ ನಡೆಸುತ್ತಿರುವ ಪಿ.ನಾಗರಾಜು ಅವರ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಶೋಧ ಕಾರ್ಯ ಕೈಗೊಂಡಿದ್ದಾರೆ.

'ಕಮಲಾನಗರದಲ್ಲಿ ವಾಸಗಿರುವ ಕವಿತಾ ದಂಪತಿ, ನಿವೇಶನ ಖರೀದಿಗಾಗಿ ₹20 ಲಕ್ಷ ನಗದು ಕೇಳಿದ್ದರು. ಅಷ್ಟು ಹಣ ಕೊಡಲು ಸಾಧ್ಯವಿಲ್ಲ ಎಂದು ಹೇಳಿದರೂ, ಸಕಾಲದಲ್ಲಿ ಹಣ ಹಿಂತಿರುಗಿಸುವುದಾಗಿ ಮನವಿ ಮಾಡಿದ ಮೇರೆಗೆ, ಪರಿಚಿತರಾದ ಕಾರಣ ₹17 ಲಕ್ಷ ನೀಡಲು ಒಪ್ಪಿದೆ. ನಂತರ ಅವರು ಹೇಳಿದ ಎರಡು ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡಿದ್ದೆ' ಎಂದು ನಾಗರಾಜ್ ದೂರಿನಲ್ಲಿ ತಿಳಿಸಿದ್ದಾರೆ.

'ವರ್ಷದ ಬಳಿಕ ಸಾಲ ವಾಪಸ್ ನೀಡುವಂತೆ ಕೇಳಿದಾಗ, ಮತ್ತೊಂದು ವರ್ಷ ಕಾಲಾವಕಾಶ ನೀಡುವಂತೆ ಆರೋಪಿಗಳು ಕೋರಿದರು. ಕೇಳಿದಾಗ ಸಬೂಬು ಹೇಳುತ್ತಿದ್ದರು ಹೊರತು ಹಣ ವಾಪಸ್ ನೀಡಲಿಲ್ಲ. ಜೂನ್ 2ರಂದು ಕವಿತಾ ಅವರು ನೀಡಿದ ಚೆಕ್ ಅಮಾನ್ಯಗೊಂಡಿತು. ನಂತರ ಈ ವಿಷಯ ಆರೋಪಿಗಳಿಗೆ ತಿಳಿಸಿದೆ. 'ಹಣ ನೀಡುವುದಿಲ್ಲ. ರಾಜಕೀಯ ಮುಖಂಡರು, ರೌಡಿಗಳು ಗೊತ್ತು' ಎಂದು ಜೀವ ಬೆದರಿಕೆ ಹಾಕಿದರು. ಹಣ ಪಡೆದು ವಂಚಿಸಿರುವ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಅವರು ಮನವಿ ಮಾಡಿದ್ದಾರೆ.

# ‘ತುರ್ತು ಬಟನ್’ ಅಳವಡಿಕೆ ಚುರುಕು

## ಒಂದು ವರ್ಷದಲ್ಲಿ 1.17 ಲಕ್ಷ ಸಾರ್ವಜನಿಕ ವಾಹನಗಳಿಗೆ ಜೋಡಣೆ

• ಬಾಲಕೃಷ್ಣ ಪಿ.ಎಚ್.

ಪ್ರಜಾವಾಣಿ ವಿಶೇಷ

**ಬೆಂಗಳೂರು:** ರಾಜ್ಯದಲ್ಲಿ 1.17 ಲಕ್ಷ ಸಾರ್ವಜನಿಕ ವಾಹನಗಳಿಗೆ ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ ಡಿವೈಸ್ (ವಿಎಲ್‌ಟಿ) ಆ್ಯಂಡ್ ಎಮರ್ಜೆನ್ಸಿ ಬಟನ್ ಅಳವಡಿಸಲಾಗಿದೆ. ಇದು ಒಟ್ಟು ಸಾರ್ವಜನಿಕ ವಾಹನಗಳ ಶೇ 19ರಷ್ಟಿದೆ.

ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಸಾರ್ವಜನಿಕ ಸೇವಾ ವಾಹನಗಳಲ್ಲಿ ವಿಎಲ್‌ಟಿ ಮತ್ತು ಎಮರ್ಜೆನ್ಸಿ ಬಟನ್ ಅಳವಡಿಸುವ ಯೋಜನೆಯನ್ನು ಕೇಂದ್ರ ಸರ್ಕಾರವು ‘ನಿರ್ಭಯ’ ಯೋಜನೆಯಡಿ ರೂಪಿಸಿತ್ತು. ರಾಜ್ಯದಲ್ಲಿ ಸಾರಿಗೆ ಇಲಾಖೆಯು ಕಮಾಂಡ್ ಆ್ಯಂಡ್ ಕಂಟ್ರೋಲ್ ಸೆಂಟರ್ ತೆರೆದು 2024ರ ಜೂನ್‌ನಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿತ್ತು.

ಬಸ್, ಶಾಲಾ ವಾಹನ, ಖಾಸಗಿ ಸೇವಾ ವಾಹನ, ಮ್ಯಾಕ್ಸಿಕ್ಯಾಬ್, ಮೋಟಾರ್ ಕ್ಯಾಬ್, ಒಪ್ಪಂದದ ಆಧಾರದಲ್ಲಿ ಸಂಚರಿಸುವ ವಾಹನ, ರಾಷ್ಟ್ರೀಯ ರಹದಾರಿ (ಪರ್ಮಿಟ್) ಹೊಂದಿದ ಸರಕು ಸಾಗಣೆ ವಾಹನಗಳಿಗೆ ವಿಎಲ್‌ಟಿ ಮತ್ತು ಎಮರ್ಜೆನ್ಸಿ ಬಟನ್ ಅಳವಡಿಸುವ ಕಾರ್ಯ ಆರಂಭವಾಗಿತ್ತು.

‘ಕರ್ನಾಟಕದಲ್ಲಿ 6.04 ಲಕ್ಷ ಸಾರ್ವಜನಿಕ ವಾಹನಗಳಿವೆ. ಒಂದು ವರ್ಷದಲ್ಲಿ 1.17 ಲಕ್ಷ ವಾಹನಗಳಿಗೆ ಈ ಬಟನ್ ಅಳವಡಿಸಲಾಗಿದೆ. ಈ ಬಟನ್‌ಗಳ ಮೂಲಕ 18 ನೈಜ ದೂರುಗಳು ಕಮಾಂಡ್ ಸೆಂಟರ್‌ಗೆ ರವಾನೆಯಾಗಿವೆ. ಮೂರು ಪ್ರಕರಣಗಳನ್ನು ತುರ್ತು ಪ್ರತಿಕ್ರಿಯೆ ಬೆಂಬಲ ವ್ಯವಸ್ಥೆಗೆ (ಇಆರ್‌ಎಸ್‌ಎಸ್) ಕಳುಹಿಸಿಕೊಡಲಾಗಿದೆ. ಪೊಲೀಸರು ಆ ಪ್ರಕರಣಗಳನ್ನು ಪರಿಶೀಲಿಸುತ್ತಾರೆ. ವಾಹನದ ಮಾಲೀಕರೊಂದಿಗೆ ಮಾತನಾಡಿ ನಾಲ್ಕು ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ. ಉಳಿದ 11 ಪ್ರಕರಣಗಳು ಸ್ಥಳದಲ್ಲಿಯೇ ಮುಕ್ತಾಯವಾಗಿವೆ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಹೆಚ್ಚುವರಿ ಆಯುಕ್ತ (ಆಡಳಿತ) ಪಿ.ಪಿ. ಉಮಾಶಂಕರ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

**ವಿಎಲ್‌ಟಿಸಿ, ಬಟನ್ ಯಾಕೆ?:** ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳಲ್ಲಿ ಸಾರಿಗೆ ವಿಭಾಗದ ಭಾರಿ ಪ್ರಯಾಣಿಕ ವಾಹನಗಳು ಅತಿ ವೇಗದಲ್ಲಿ ಚಲಿಸಿದಾಗ ಅಪಘಾತ ಉಂಟಾ ಗುವ ಸಾಧ್ಯತೆಗಳಿರುತ್ತವೆ. ವಿಎಲ್‌ಟಿಸಿ ಆಧಾರಿತ ಜಿಪಿಆರ್‌ಎಸ್ ವ್ಯವಸ್ಥೆಯ ಉಪಕರಣ ಅಳವಡಿಸಿದಾಗ ವಾಹನದ ವೇಗ, ನಿಗದಿ ಪಡಿಸಿದ ಸ್ಥಳಗಳಲ್ಲಿ ಸರಿಯಾದ ಸಮಯಕ್ಕೆ ತಲುಪುತ್ತಿದೆಯೇ? ಆ ಸ್ಥಳಗಳಲ್ಲಿ ನಿಲುಗಡೆ ಮಾಡಲಾಗುತ್ತಿವೆಯೇ? ಸೂಚಿತ ಮಾರ್ಗದಲ್ಲಿಯೇ ಸಂಚರಿಸುತ್ತಿವೆಯೇ ಎಂದು ಪತ್ತೆ ಹಚ್ಚಲು ಸಹಾಯವಾಗುತ್ತದೆ.

ವಾಹನಗಳನ್ನು ಕದ್ದು ಸಾಗಾಟ ಮಾಡಿದಾಗ ಪತ್ತೆಹಚ್ಚಲು ಸುಲಭವಾಗಲಿದೆ. ರಹದಾರಿ ನಿಬಂಧನೆಗಳನ್ನು ಉಲ್ಲಂಘಿಸಿ ಸಂಚರಿಸುವ ವಾಹನಗಳ ಮೇಲೆ ನಿಗಾ ಇರಿಸಲು ಸಾಧ್ಯ ವಾಗಲಿದೆ. ಪ್ರಯಾಣಿಕರಿಗೆ ತೊಂದರೆ ಉಂಟಾದರೆ, ಮಹಿಳೆಯರಿಗೆ ಸಾರ್ವಜನಿಕ ವಾಹನಗಳಲ್ಲಿ ಕಿರುಕುಳ ಉಂಟಾದರೆ ಎಮರ್ಜೆನ್ಸಿ ಬಟನ್ ಒತ್ತಿದಲ್ಲಿ ಕಮಾಂಡ್ ಕೇಂದ್ರಕ್ಕೆ ಎಚ್ಚರಿಕೆ ಸಂದೇಶ ರವಾನೆಯಾಗುತ್ತದೆ. ಇದರಿಂದ ಕಿರುಕುಳ ನೀಡಿದವರನ್ನು ಕೂಡಲೇ ಪತ್ತೆ ಹಚ್ಚಲು ಸಾಧ್ಯವಾಗುತ್ತದೆ ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

### ಒಂದು ವರ್ಷದಲ್ಲಿ ಪೂರ್ಣ


ರಾಮಲಿಂಗಾ ರೆಡ್ಡಿ

‘ಸಾರ್ವಜನಿಕ ಸಾರಿಗೆ ವಾಹನಗಳಿಗೆ ಬಲವಂತವಾಗಿ ವಿಎಲ್‌ಟಿ ಮತ್ತು ಎಮರ್ಜೆನ್ಸಿ ಬಟನ್ ಅಳವಡಿಸಲು ಸಾಧ್ಯವಿಲ್ಲ. ವಾಹನ ಸದೃಢ (ಫಿಟ್‌ನೆಸ್) ಪರೀಕ್ಷೆಗೆ ಬಂದಾಗಲಷ್ಟೇ ಅಳವಡಿಸಲಾಗುತ್ತಿದೆ. ಇನ್ನೊಂದು ವರ್ಷದಲ್ಲಿ ಎಲ್ಲ ಸಾರ್ವಜನಿಕ ವಾಹನಗಳಲ್ಲಿ ವಿಎಲ್‌ಟಿ ಮತ್ತು ಎಮರ್ಜೆನ್ಸಿ ಬಟನ್ ಇರಲಿದೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

‘ಕರ್ನಾಟಕದಲ್ಲಿ ಅನುಷ್ಠಾನಗೊಳಿಸುತ್ತಿರುವ ರೀತಿ, ಕಮಾಂಡ್ ಸೆಂಟರ್‌ಗಳು ದೇಶದಲ್ಲಿಯೇ ಮಾದರಿಯಾಗಿವೆ. ಹಾಗಾಗಿ ಈಗಾಗಲೇ ಐದು ರಾಜ್ಯಗಳ ಸಾರಿಗೆ ಅಧಿಕಾರಿಗಳು ನಮ್ಮಲ್ಲಿಗೆ ಭೇಟಿ ನೀಡಿ ವಿಎಲ್‌ಟಿ ಮತ್ತು ಎಮರ್ಜೆನ್ಸಿ ಬಟನ್ ವ್ಯವಸ್ಥೆಯನ್ನು ನೋಡಿಕೊಂಡು ಹೋಗಿದ್ದಾರೆ’ ಎಂದು ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

### ದೋಷ ಕಂಡರೆ ಸಂಪರ್ಕಿಸಿ


ಯೋಗೀಶ್

ವಿಎಲ್‌ಟಿ ಸಾಧನಗಳ ತಂತಿ ತುಂಡಾಗಿರುವುದು, ಅಸಮರ್ಪಕ ಜೋಡಣೆ ಮಾಡಿರುವುದು, ಸ್ವಿಚ್ ಆನ್ ಆಗದೇ ಇರುವುದು ಮುಂತಾದ ದೋಷಗಳು ಕಂಡು ಬಂದರೆ surakshamitr-ka@cda.inಗೆ ಮೇಲ್ ಕಳುಹಿಸಬಹುದು. ಇಲ್ಲವೇ ಮೊಬೈಲ್: 9059955319 ಸಂಪರ್ಕಿಸಿ ಪರಿಹಾರ ಪಡೆದುಕೊಳ್ಳಬಹುದು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ಮಾಹಿತಿ ನೀಡಿದ್ದಾರೆ.

### ‘ವರ್ಷದಲ್ಲಿ 83,554 ಬಾರಿ ಬಳಕೆ’


ಉಮಾಶಂಕರ್

ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ಇರುವ ಎಮರ್ಜೆನ್ಸಿ ಬಟನ್‌ಗಳನ್ನು ಒಂದು ವರ್ಷದಲ್ಲಿ 83,554 ಜನರು ಬಳಸಿದ್ದಾರೆ. 18 ಪ್ರಕರಣಗಳನ್ನು ಹೊರತುಪಡಿಸಿ ಉಳಿದೆಲ್ಲವೂ ಜನರು ಪರಿಶೀಲಿಸುವುದಕ್ಕಾಗಿ ಸುಮ್ಮನೆ ಒತ್ತಿರುವುದಾಗಿದೆ. ಸಾರ್ವಜನಿಕರು ಅಗತ್ಯ ಸಂದರ್ಭ ಹೊರತುಪಡಿಸಿ ಪರೀಕ್ಷೆ ನಡೆಸಲು, ಕುತೂಹಲ ತಣಿಸಲು ಈ ಬಟನ್ ಒತ್ತಬಾರದು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಹೆಚ್ಚುವರಿ ಆಯುಕ್ತ (ಆಡಳಿತ) ಪಿ.ಪಿ. ಉಮಾಶಂಕರ್ ತಿಳಿಸಿದ್ದಾರೆ.

# ಶೇ 97 ಹಾಜರಾತಿಗೆ ಶಿಕ್ಷಕರು ಕ್ರಮವಹಿಸಿ: ಮಧು ಬಂಗಾರಪ್ಪ

## ಮುಖ ಚಹರೆ ಹಾಜರಾತಿ ‘ಪ್ರತ್ಯಕ್ಷ’ ಯೋಜನೆಗೆ ಚಾಲನೆ

ಪ್ರಜಾವಾಣಿ ವಾರ್ತೆ

**ಗದಗ:** ‘ರಾಜ್ಯದಲ್ಲಿನ 57 ಲಕ್ಷ ವಿದ್ಯಾರ್ಥಿಗಳ ಮುಖ ಚಹರೆ ಆಧರಿಸಿ ಆನ್‌ಲೈನ್ ಹಾಜರಾತಿ ವ್ಯವಸ್ಥೆಯು ಶೀಘ್ರವೇ ಜಾರಿಯಾಗಲಿದೆ. ಸರ್ಕಾರಿ ಶಾಲೆಗಳಲ್ಲಿ ಶೇ 97ರಷ್ಟು ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯ ಇರುವಂತೆ ಶಿಕ್ಷಕರು ನೋಡಿಕೊಳ್ಳಬೇಕು’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಸಚಿವ ಮಧು ಬಂಗಾರಪ್ಪ ಹೇಳಿದರು.

ನಗರದಲ್ಲಿ ಸೋಮವಾರ ಶಿಕ್ಷಕರ ಮುಖ ಚಹರೆ ಹಾಜರಾತಿ ‘ಪ್ರತ್ಯಕ್ಷ’ ಯೋಜನೆಗೆ ಚಾಲನೆ ನೀಡಿದ ಅವರು, ‘ಶಾಲಾ ಶಿಕ್ಷಕರ ಆನ್‌ಲೈನ್ ಹಾಜರಾತಿ ಅಗತ್ಯವಿದೆ. ಇದೇ ಪ್ರಕ್ರಿಯೆ ರಾಜ್ಯದಾದ್ಯಂತ ನಡೆಯಲಿದೆ’ ಎಂದರು.

ಕಾನೂನು ಸಚಿವ ಎಚ್.ಕೆ.ಪಾಟೀಲ ಮಾತನಾಡಿ, ‘ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ ಹೇಳಿದಂತೆ ರಾಜ್ಯದಲ್ಲಿ ಶಿಕ್ಷಕರು, ಇಲಾಖೆ ಸಿಬ್ಬಂದಿಯ ಆನ್‌ಲೈನ್ ಹಾಜರಾತಿಗೆ ಚಾಲನೆ ನೀಡಲಾಗಿದೆ. ಇನ್ನು ಮುಂದೆ ಖೊಟ್ಟಿ ಹಾಜರಾತಿಗೆ ತಡೆ ಬೀಳಲಿದೆ’ ಎಂದು ತಿಳಿಸಿದರು.

‘ಶಾಲೆ ತಲುಪಿದ ಬಳಿಕ ಶಿಕ್ಷಕರು ಆನ್‌ಲೈನ್ ಹಾಜರಾತಿ ಹಾಕಬೇಕು. ಇದರಿಂದ ಸಮಯಕ್ಕೆ ಸರಿಯಾಗಿ ಶಿಕ್ಷಕರು ಶಾಲೆಗೆ ಬರುತ್ತಾರೆ. ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ನೆರವಾಗಲಿದೆ. ಜಿಲ್ಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ಸೇರಿ ಒಟ್ಟು 4,789 ಮಂದಿ ಆನ್‌ಲೈನ್ ಹಾಜರಾತಿಗೆ ನೋಂದಣಿ ಮಾಡಿಕೊಂಡಿದ್ದಾರೆ’ ಎಂದು ಹೇಳಿದರು.

ಶಾಸಕ ಜಿ.ಎಸ್.ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಶಾಸಕ ಡಾ.ಚಂದ್ರು ಲಮಾಣಿ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಸಿಇಒ ಭರತ್ ಎಸ್., ಡಿಡಿಪಿಐ ಆರ್.ಎಸ್. ಬುರುಡಿ ಇದ್ದರು.

### ‘ಕೆಪಿಎಸ್ ಶಾಲೆ ಮಕ್ಕಳಿಗೆ ಉಚಿತ ಬಸ್’



**ಕುಕನೂರು (ಕೊಪ್ಪಳ ಜಿಲ್ಲೆ):** ‘ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ ರಾಜ್ಯದಾದ್ಯಂತ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಬಸ್ ವ್ಯವಸ್ಥೆ ಆರಂಭಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಪಟ್ಟಣದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕೆಪಿಎಸ್ ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಡ ಮಕ್ಕಳೇ ಓದುತ್ತಿದ್ದಾರೆ. ಅಲ್ಲಿ ಎಲ್‌ಕೆಜಿಯಿಂದ ಪಿಯುಸಿ ತನಕ ವಿದ್ಯಾಭ್ಯಾಸ ದೊರೆಯುತ್ತಿದೆ. ಅಲ್ಲಿ ಓದುವ ಮಕ್ಕಳಿಗೆ ಅನುಕೂಲ ಕಲ್ಪಿಸಲು ಈ ನಿರ್ಧಾರ ಮಾಡಲಾಗಿದೆ. ಯಾವ ಭಾಗದಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಉಚಿತ ಬಸ್ ವ್ಯವಸ್ಥೆ ಮೊದಲು ಆರಂಭಿಸಲಾಗುವುದು’ ಎಂದು ಹೇಳಿದರು.

‘ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸರ್ಕಾರ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ರಾಜ್ಯದಲ್ಲಿ 46 ಸಾವಿರ ಶಾಲೆಗಳಿದ್ದು, 57 ಲಕ್ಷ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅವರೆಲ್ಲರ ಅಭಿವೃದ್ಧಿಗೆ ನನ್ನ ಜೊತೆಗೆ ಶಿಕ್ಷಕರು ಕೂಡ ಕ್ರಮ ವಹಿಸಬೇಕು. ಎಲ್ಲರೂ ಶ್ರಮಿಸಿದರೆ ಮಾತ್ರ ಸರ್ಕಾರಿ ಶಾಲೆಗಳ ಸಬಲೀಕರಣ ಸಾಧ್ಯ’ ಎಂದರು.

### ಚಿಟಿಕೆ ಸುದ್ದಿ

#### ಕೇರಳ: ಕ್ವಾರಿಯೊಳಗೆ ಸಿಲುಕಿದ ಕಾರ್ಮಿಕರು

ತಿರುವನಂತಪುರ: ಕೇರಳದ ಪತ್ತನಂತಿಟ್ಟದ ಕ್ವಾರಿಯೊಂದರಲ್ಲಿ ಇಬ್ಬರು ವಲಸೆ ಕಾರ್ಮಿಕರು ಸೋಮವಾರ ಸಿಲುಕಿಕೊಂಡಿದ್ದಾರೆ. ವಲಸೆ ಕಾರ್ಮಿಕರನ್ನು ಬಿಹಾರದ ಅಜಿ ರಾಯ್ (38) ಮತ್ತು ಒಡಿಶಾದ ಮಹಾದೇವ್ ಎಂದು ಗುರುತಿಸಲಾಗಿದೆ. ಅವರಿಬ್ಬರು ಜೆಸಿಬಿ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದರು. ಇಬ್ಬರೂ ಕ್ವಾರಿಯೊಳಗೆ ಹೋಗಿದ್ದ ವೇಳೆ ಕಲ್ಲುಗಳು ಉರುಳಿಬಿದ್ದಿದ್ದರಿಂದ ವಾಪಸ್ ಬರಲು ಸಾಧ್ಯವಾಗುತ್ತಿಲ್ಲ. ರಕ್ಷಣಾ ಪಡೆಗಳು ಸ್ಥಳಕ್ಕೆ ಧಾವಿಸಿವೆ. ಆದರೆ ಕಾರ್ಮಿಕರನ್ನು ಪತ್ತೆಹಚ್ಚುವುದು ಕಷ್ಟಸಾಧ್ಯವಾಗಿದೆ.

#### ಮೂವರು ನಕ್ಸಲರ ಶರಣಾಗತಿ

ಫುಲ್ಬನಿ (ಒಡಿಶಾ) (ಪಿಟಿಐ): ಇಬ್ಬರು ಮಹಿಳೆಯರು ಸೇರಿದಂತೆ ಛತ್ತೀಸಗಢದ ಮೂವರು ನಕ್ಸಲರು ಸೋಮವಾರ ಒಡಿಶಾದಲ್ಲಿ ಭದ್ರತಾ ಪಡೆಗಳಿಗೆ ಶರಣಾಗಿದ್ದಾರೆ. ಶರಣಾದ ನಕ್ಸಲರಲ್ಲಿ ಒಬ್ಬರು ಸಿಪಿಐನ ಭಾಗವಾಗಿರುವ ಬಿಜಿಎನ್ ಹಾಗೂ ಮತ್ತಿಬ್ಬರು ನಿಷೇಧಿತ ಸಂಘಟನೆ ಕೆಕೆಬಿಎನ್ ಸಂಘಟನೆಯ ಸಕ್ರಿಯ ಸದಸ್ಯರಾಗಿದ್ದರು. ಅವರು ಒಡಿಶಾ ಮತ್ತು ಛತ್ತೀಸಗಢದಲ್ಲಿ ನಡೆದಿದ್ದ ಹಲವಾರು ಹಿಂಸಾಚಾರಗಳಲ್ಲಿ ಭಾಗಿಯಾಗಿದ್ದರು. ‘ತೀವ್ರ ಕಾರ್ಯಾಚರಣೆಯ ಫಲವಾಗಿ ಮತ್ತು ಸರ್ಕಾರಿ ಯೋಜನೆಯಿಂದ ಪ್ರಭಾವಿತರಾಗಿ ಮೂವರು ನಕ್ಸಲರು ಶರಣಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

#### ಸ್ಫೋಟ: ನಾಪತ್ತೆ ಆದವರ ಸುಳಿವಿಲ್ಲ

ಹೈದರಾಬಾದ್: ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯ ಸಿಗಾಚಿ ಔಷಧ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟದ ನಂತರ ನಾಪತ್ತೆಯಾದವರಿಗಾಗಿ ಅಧಿಕಾರಿಗಳು ಶೋಧ ಮುಂದುವರಿಸಿದ್ದಾರೆ. ಸ್ಫೋಟದ ನಂತರ ನಾಪತ್ತೆಯಾದ ಎಂಟು ಮಂದಿ ಬಗ್ಗೆ ಈವರೆಗೆ ಯಾವುದೇ ಕುರುಹು ಲಭ್ಯವಾಗಿಲ್ಲ. ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 42ಕ್ಕೆ ಏರಿಕೆಯಾಗಿದೆ. ಘಟನಾ ಸ್ಥಳದಲ್ಲಿ 100ಕ್ಕೂ ಹೆಚ್ಚು ದೇಹದ ಭಾಗಗಳು ಪತ್ತೆಯಾಗಿವೆ.

### ಸುರಕ್ಷಿತ ಪ್ರದೇಶದತ್ತ...

ಪಿಟಿಐ ಚಿತ್ರ



ಅಸ್ಸಾಂನ ಹೊಜಾಯ್ ಜಿಲ್ಲೆಯ ದಿಫಲ್ ಜಾರಾನಿ ಗ್ರಾಮದ ಜನರು ತೆಪ್ಪವನ್ನು ಬಳಸಿ ಪ್ರವಾಹ ಪೀಡಿತ ಪ್ರದೇಶದಿಂದ ಸುರಕ್ಷಿತ ಸ್ಥಳಕ್ಕೆ ತೆರಳಿದರು

# ಮೊಟ್ಟೆ ವಿತರಿಸದ 568 ಶಾಲೆಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಧ್ಯಾಹ್ನ ಬಿಸಿಯೂಟಕ್ಕೆ ಮಕ್ಕಳಿಂದ ಮೊಟ್ಟೆಗೆ ಬೇಡಿಕೆ ಇದ್ದರೂ, ಬಾಳೆ ಹಣ್ಣು ನೀಡುತ್ತಿರುವ ರಾಜ್ಯದಲ್ಲಿನ 568 ಶಾಲೆಗಳ ಮುಖ್ಯಸ್ಥರು, ಎಸ್‌ಡಿಎಂಸಿ ಹಾಗೂ ಮೇಲ್ವಿಚಾರಣಾ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಶಿಕ್ಷಣ ಇಲಾಖೆ ಮುಂದಾಗಿದೆ.



ಮಧ್ಯಾಹ್ನದ ಬಿಸಿಯೂಟ ಯೋಜನೆ ಅಡಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ 1ರಿಂದ 10ನೇ ತರಗತಿವರೆಗಿನ ಮಕ್ಕಳಿಗೆ ವಾರದ 6 ದಿನಗಳು ಮೊಟ್ಟೆ ವಿತರಿಸಲಾಗುತ್ತಿದೆ, ಮೊಟ್ಟೆ ಸೇವಿಸದ ಮಕ್ಕಳಿಗೆ ಬಾಳೆಹಣ್ಣು ನೀಡಲು ಅವಕಾಶ ಕಲ್ಪಿಸಲಾಗಿದೆ. ಆದರೆ, ಕೆಲ ಶಾಲೆಗಳಲ್ಲಿ ಅಲ್ಲಿನ ಎಸ್‌ಡಿಎಂಸಿ ಸ್ವಯಂ ನಿರ್ಧಾರ ಕೈಗೊಂಡು ಮೊಟ್ಟೆ ಬದಲು ಬಾಳೆಹಣ್ಣು ವಿತರಿಸುತ್ತಿದ್ದಾರೆ. ಇದು ನಿಯಮಗಳಿಗೆ ವಿರುದ್ಧ ಎಂದು ಪಿಎಂ ಪೋಷಣ್ ಶಕ್ತಿ ನಿರ್ಮಾಣ್ ಘಟಕದ ನಿರ್ದೇಶಕರು ಹೇಳಿದ್ದಾರೆ.

ಮಕ್ಕಳು, ಪೋಷಕರು ಸಲ್ಲಿಸುವ ಬೇಡಿಕೆಗೆ ಅನುಗುಣವಾಗಿಯೇ ಮೊಟ್ಟೆ ಅಥವಾ ಬಾಳೆ ಹಣ್ಣು ನೀಡಬೇಕು. ಮೊಟ್ಟೆ ನೀಡುವಂತೆ ಬೇಡಿಕೆ ಸಲ್ಲಿಸಿದ್ದರೂ, ಬಾಳೆ ಹಣ್ಣು ನೀಡುವ ತೀರ್ಮಾನ ತೆಗೆದುಕೊಳ್ಳಬಾರದು. ತಕ್ಷಣವೇ ಇಂತಹ ನಡವಳಿಕೆಗಳನ್ನು ಸರಿಪಡಿಸಿಕೊಳ್ಳಬೇಕು ಎಂದು ತಾಕೀತು ಮಾಡಿದ್ದಾರೆ.

# ‘ಕೇಸರಿ ಬಟ್ಟೆ ಧರಿಸಿದವರೆಲ್ಲ ಬಾಬಾ ಆಗಲಾರರು’



**ಲಖನೌ:** ‘ಕೇವಲ ಕೇಸರಿ ಬಟ್ಟೆ ಧರಿಸಿದವರೆಲ್ಲ ಬಾಬಾ ಆಗಲಾರರು. ಯಾವುದೇ ಬಾಬಾ ಆಗಿರಲಿ, ಅವರ ನಿಜವಾದ ಅಸ್ಮಿತೆಯು ಆಲೋಚನೆ ಮತ್ತು ನಡವಳಿಕೆಯಿಂದ ವ್ಯಕ್ತವಾಗುತ್ತದೆ’ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ವಿರುದ್ಧ ಸೋಮವಾರ ವಾಗ್ದಾಳಿ ನಡೆಸಿದರು.

‘ಸೀತೆಯನ್ನು ಅಪಹರಿಸುವಾಗ ರಾವಣ ಸಾಧು ವೇಷದಲ್ಲೇ ಇದ್ದ ಎಂಬುದನ್ನು ಮರೆಯಬಾರದು. ಆದಿತ್ಯನಾಥ ಅವರು ‘ಪ್ರಜಾಪ್ರಭುತ್ವ ವಿರೋಧಿ ಭಾಷೆ’ಯನ್ನು ಬಳಸುತ್ತಾರೆ’ ಎಂದರು.

**ಆರ್‌ಜೆಡಿಗೆ ಸಂಪೂರ್ಣ ಬೆಂಬಲ:** ಮುಂಬರುವ ಬಿಹಾರ ಚುನಾವಣೆಯಲ್ಲಿ ತಮ್ಮ ಪಕ್ಷವು ಆರ್‌ಜೆಡಿಗೆ ಸಂಪೂರ್ಣ ಬೆಂಬಲ ನೀಡಲಿದೆ ಎಂದರು.

‘ಬಿಜೆಪಿಯು ನಿತೀಶ್ ಕುಮಾರ್ ಅವರ ಹೆಸರನ್ನು ಬಳಸಿಕೊಳ್ಳುತ್ತಿದೆ. ಆದರೆ, ಅವರನ್ನು ಮತ್ತೆ ಮುಖ್ಯಮಂತ್ರಿಯಾಗಿ ಮಾಡುವುದಿಲ್ಲ. ಬಿಜೆಪಿ ಅವರನ್ನು ರಾಜೀನಾಮೆ ನೀಡುವಂತೆ ಒತ್ತಾಯಿಸುತ್ತಿದೆ’ ಎಂದರು.

# ಪಟ್ಟಿ ವಿಶೇಷ ಪರಿಷ್ಕರಣೆ: 10ಕ್ಕೆ ವಿಚಾರಣೆ

**ನವದೆಹಲಿ (ಪಿಟಿಐ):** ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಮಾಡುವ ಕೇಂದ್ರ ಚುನಾವಣಾ ಆಯೋಗದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಜುಲೈ 10ರಂದು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆ.

ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರನ್ನು ಒಳಗೊಂಡ ನ್ಯಾಯಪೀಠವು, ಹಲವು ಅರ್ಜಿದಾರರ ಪರವಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ನೀಡಿದ ಮನವಿಯನ್ನು ಸೋಮವಾರ ಪುರಸ್ಕರಿಸಿತು.

ಆರ್‌ಜೆಡಿ ಸಂಸದ ಮನೋಜ್ ಝಾ ಅವರ ಪರ ಹಾಜರಿದ್ದ ಸಿಬಲ್ ಅವರು, ಅರ್ಜಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗಕ್ಕೆ ನೋಟಿಸ್ ರವಾನಿಸುವಂತೆ ಒತ್ತಾಯಿಸಿದರು. ನಿಗದಿತ ಕಾಲಮಿತಿಯ ಒಳಗೆ ಮತದಾರ ಪಟ್ಟಿ ಪರಿಷ್ಕರಣೆ ಅಸಾಧ್ಯ ಎಂದು ಅವರು ನ್ಯಾಯಾಲಯಕ್ಕೆ ತಿಳಿಸಿದರು.

ಮತ್ತೊಬ್ಬ ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರು, ‘ರಾಜ್ಯದಲ್ಲಿ ಸುಮಾರು 8 ಕೋಟಿ ಮತದಾರರಿದ್ದಾರೆ. ಮತದಾರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಈ ಪೈಕಿ 4 ಕೋಟಿ ಮಂದಿ ಮಾತ್ರ ತಮ್ಮ ದಾಖಲೆಯನ್ನು ಸಲ್ಲಿಸಬಹುದು’ ಎಂದು ಹೇಳಿದರು.

‘ಕಾಲಮಿತಿಯು ಕಟ್ಟುನಿಟ್ಟಾಗಿದೆ. ಜುಲೈ 25ರ ಒಳಗಾಗಿ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಮತದಾರ ಪಟ್ಟಿಯಿಂದ ಹೆಸರು ತೆಗೆದುಹಾಕುತ್ತೇವೆ ಎಂಬಂತಿದೆ’ ಎಂದು ಪ್ರತಿಪಾದಿಸಿದರು.

ಹಿರಿಯ ವಕೀಲ ಗೋಪಾಲ ಶಂಕರನಾರಾಯಣ, ‘ಆಯೋಗದ ಅಧಿಕಾರಿಗಳು ಆಧಾರ್ ಕಾರ್ಡ್ ಮತ್ತು ಮತದಾರ ಗುರುತಿನ ಚೀಟಿಯನ್ನು ದಾಖಲೆಯಾಗಿ ಸ್ವೀಕರಿಸುತ್ತಿಲ್ಲ’ ಎಂದರು.

ನಂತರ ನ್ಯಾಯಮೂರ್ತಿ ಧುಲಿಯಾ ಅವರು, ‘ಗುರುವಾರ (ಜುಲೈ10) ಅರ್ಜಿಗಳ ವಿಚಾರಣೆ ನಡೆಸಲಾಗುವುದು. ಚುನಾವಣಾ ದಿನಾಂಕ ಘೋಷಣೆಯಾದ ಕಾರಣ ನಿಗದಿಪಡಿಸಿರುವ ಕಾಲಮಿತಿಗೆ ಯಾವುದೇ ಮಾನ್ಯತೆ ಇಲ್ಲ’ ಎಂದು ಸ್ಪಷ್ಟಪಡಿಸಿದರು.

ಆರ್‌ಜೆಡಿ ಸಂಸದ ಮನೋಜ್ ಝಾ, ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಸೇರಿದಂತೆ ಅನೇಕರು ಆಯೋಗದ ಕ್ರಮವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಜೂನ್ 24ರಂದು ಚುನಾವಣಾ ಆಯೋಗ ಹೊರಡಿಸಿರುವ ಆದೇಶವು ಸಂವಿಧಾನದ 14, 21, 325 ಮತ್ತು 326ನೇ ವಿಧಿಗಳನ್ನು ಉಲ್ಲಂಘಿಸುತ್ತದೆ. 1950ರ ಜನ ಪ್ರಾತಿನಿಧ್ಯ ಕಾಯ್ದೆ ಮತ್ತು 1960ರ ಮತದಾರರ ನೋಂದಣಿ ನಿಯಮಗಳ ನಿಯಮ 21ಎ ನಿಬಂಧನೆಯನ್ನೂ ಉಲ್ಲಂಘಿಸುತ್ತದೆ ಎಂದು ಅರ್ಜಿಗಳಲ್ಲಿ ವಾದಿಸಲಾಗಿದೆ.

ಲಕ್ಷಾಂತರ ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡುವ ಪ್ರಯತ್ನ ಇದು ಎಂದು ಎಡಿಆರ್ ಆತಂಕ ವ್ಯಕ್ತಪಡಿಸಿದೆ.

### ನ್ಯಾಯಾಲಯದ ಮೇಲೆ ನಂಬಿಕೆ ಇದೆ: ಕಾಂಗ್ರೆಸ್

‘ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಪರಿಶೀಲನೆಯನ್ನು ವಿರೋಧಿಸಲು ಪ್ರತಿಪಕ್ಷಗಳು ಒಗ್ಗಟ್ಟಾಗಿವೆ. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನ್ಯಾಯ ಒದಗಿಸುತ್ತದೆ ಎಂಬ ಪೂರ್ಣ ವಿಶ್ವಾಸ ನಮಗಿದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸೋಮವಾರ ಹೇಳಿದ್ದಾರೆ.

ಚುನಾವಣೆ ಹೊಸ್ತಿಲಿನಲ್ಲಿರುವಂತೆಯೇ ಮತದಾರರ ಪಟ್ಟಿ ಪರಿಶೀಲನೆಗೆ ಮುಂದಾಗಿರುವ ಚುನಾವಣಾ ಆಯೋಗದ ಕ್ರಮವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿರುವ 9 ಪಕ್ಷಗಳ ಜತೆಗೆ ಕಾಂಗ್ರೆಸ್ ಕೂಡ ಸೋಮವಾರ ಸೇರ್ಪಡೆಯಾಗಿದೆ. ಕಾಂಗ್ರೆಸ್‌ನ ಪರವಾಗಿ ತಾವು ಸುಪ್ರೀಂ ಕೋರ್ಟ್ ಮೊರೆಹೋಗುವುದಾಗಿ ವೇಣುಗೋಪಾಲ್ ತಿಳಿಸಿದ್ದಾರೆ.

ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಮತದಾರರ ಪಟ್ಟಿ ಪರಿಶೀಲನೆಯ ವಿಚಾರವು ಬಿಹಾರದ ನಗರಗಳು, ಗ್ರಾಮಗಳಲ್ಲಿ ಅವ್ಯವಸ್ಥೆ ಉಂಟುಮಾಡಿದೆ. ಕೋಟ್ಯಂತರ ಮತದಾರರಲ್ಲಿ ತಮ್ಮ ಹಕ್ಕನ್ನು ಕಸಿದುಕೊಳ್ಳಬಹುದೆಂಬ ಆತಂಕ ಮೂಡಿದೆ. ಅಧಿಕಾರದಲ್ಲಿರುವವರ ಆದೇಶದ ಮೇರೆಗೆ ಚುನಾವಣಾ ಆಯೋಗ ನಡೆಸುತ್ತಿರುವ ಅತಿದೊಡ್ಡ ವಂಚನೆ ಇದಾಗಿದೆ. ಸುಪ್ರೀಂ ಕೋರ್ಟ್ ನ್ಯಾಯ ಒದಗಿಸುವ ವಿಶ್ವಾಸವೂ ನಮಗಿದೆ’ ಎಂದು ಹೇಳಿದ್ದಾರೆ.

### ಬಿಹಾರದಲ್ಲಿ ನಾಳೆ ಪ್ರತಿಭಟನೆ: ರಾಹುಲ್ ಗಾಂಧಿ ಭಾಗಿ

ಪಟ್ನಾ (ಪಿಟಿಐ): ಮತದಾರರ ಪಟ್ಟಿ ವಿಶೇಷ ಪರಿಶೀಲನೆ ಹಾಗೂ ನೂತನ ಕಾರ್ಮಿಕ ನೀತಿಯನ್ನು ವಿರೋಧಿಸಿ ಬಿಹಾರದಲ್ಲಿ ಬುಧವಾರ (ಜುಲೈ9) ನಡೆಯಲಿರುವ ಪ್ರತಿಭಟನೆ, ರಸ್ತೆ ತಡೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾಗಿಯಾಗಲಿದ್ದಾರೆ. ವಿಧಾನಸಭೆ ಪ್ರತಿಪಕ್ಷದ ನಾಯಕ ತೇಜಸ್ವಿ ಯಾದವ್ ಉಪಸ್ಥಿತಿಯಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ‘ಇಂಡಿಯಾ’ ಒಕ್ಕೂಟದ ನಾಯಕರು ಈ ಮಾಹಿತಿ ನೀಡಿದ್ದಾರೆ.

### ಮುಖ್ಯಾಂಶಗಳು


- ‘ಸುಪ್ರೀಂ’ನಲ್ಲಿ ಮನೋಜ್ ಝಾ, ಮಹುವಾ ಅರ್ಜಿ
- ಸಂವಿಧಾನದ 14, 21ನೇ ವಿಧಿಗಳ ಉಲ್ಲಂಘನೆ ಎಂಬ ಆರೋಪ

# ₹8 ಲಕ್ಷ ಹೆಚ್ಚುವರಿ ಶುಲ್ಕ ವಾಪಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವೈದ್ಯಕೀಯ ವಿದ್ಯಾರ್ಥಿಯೊಬ್ಬರಿಂದ ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ವಸೂಲಿ ಮಾಡಿದ್ದ ₹8 ಲಕ್ಷವನ್ನು ಮಂಗಳೂರಿನ ಜಿ.ಆರ್. ವೈದ್ಯಕೀಯ ಕಾಲೇಜು ಹಿಂದಿರುಗಿಸಿದೆ.

2022-23ನೇ ಸಾಲಿನ ಪ್ರವೇಶದ ವೇಳೆ ಹೆಚ್ಚುವರಿಯಾಗಿ ₹8 ಲಕ್ಷ ವಸೂಲಿ ಮಾಡಲಾಗಿದೆ ಎಂದು ವಿದ್ಯಾರ್ಥಿ ಆರ್.ಕೆ.ಆದಿತ್ಯ ಶುಲ್ಕ ನಿಯಂತ್ರಣ ಸಮಿತಿಗೆ ದೂರು ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಸಮಿತಿ ಹೆಚ್ಚುವರಿ ಹಣ ಹಿಂದಿರುಗಿಸುವಂತೆ ಸೂಚನೆ ನೀಡಿತ್ತು.



ದೂರುದಾರ ಮತ್ತು ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರನ್ನು ವಿಚಾರಣೆ ನಡೆಸಿ ಪ್ರಕರಣವನ್ನು ಇತ್ಯರ್ಥಪಡಿಸಿದ್ದು, ವಸೂಲಿ ಮಾಡಿದ್ದ ಹೆಚ್ಚುವರಿ ಶುಲ್ಕವನ್ನು ಹಿಂದುರುಗಿಸಲು ಕಾಲೇಜು ಆಡಳಿತ ಮಂಡಳಿ ಒಪ್ಪಿದೆ ಎಂದು ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ಬಿ. ಶ್ರೀನಿವಾಸಗೌಡ ಮಾಹಿತಿ ನೀಡಿದ್ದಾರೆ.

**8ರಿಂದ ಎನ್‌ಆರ್‌ಐ ದಾಖಲೆ ಪರಿಶೀಲನೆ:** ಎನ್‌ಆರ್‌ಐ ಕೋಟಾದ ಅಡಿ ಕರ್ನಾಟಕದಲ್ಲಿ ವೈದ್ಯಕೀಯ ಸೀಟುಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ದಾಖಲೆ ಪರಿಶೀಲನೆಯನ್ನು ಜುಲೈ 8ರಿಂದ ಜುಲೈ 10ರವರೆಗೆ ನಡೆಸಲಾಗುತ್ತದೆ. ಮಲ್ಲೇಶ್ವರದಲ್ಲಿರುವ ಕೆಇಎ ಕಚೇರಿಗೆ ಹಾಜರಾಗಿ ಪರಿಶೀಲನೆ ಮಾಡಿಸಿಕೊಳ್ಳಬೇಕು ಎಂದು ಕೆಇಎ ಹೇಳಿದೆ.

# ಹಠಾತ್ ಸಾವು: ‘ಅಧಿಸೂಚಿತ ಕಾಯಿಲೆ’

ಒಂದನೇ ಪುಟದಿಂದ...

ಕೋವಿಡ್ ಪೂರ್ವ ಹಾಗೂ ನಂತರದ ಸಂದರ್ಭಕ್ಕೆ ಹೋಲಿಸಿದರೆ ಹೆಚ್ಚಿನ ಜನರಿಗೆ ಬೊಜ್ಜು, ಮಧುಮೇಹ, ರಕ್ತದೊತ್ತಡ ಸೇರಿದಂತೆ ಇತರೆ ಸಮಸ್ಯೆ ಕಾಣಿಸಿಕೊಂಡು ಅಪಾಯಕಾರಿ ಸ್ಥಿತಿಗೆ ದೂಡಿರುವ ಮಾಹಿತಿಯಿದೆ’ ಎಂದು ವಿವರಿಸಿದರು.

‘ಕೋವಿಡ್ ನಂತರ ಆರೋಗ್ಯ ಹದಗೆಡಿಸುವಂತಹ ಅಪಾಯಕಾರಿ ಸ್ಥಿತಿ (ರಿಸ್ಕ್ ಫ್ಯಾಕ್ಟರ್) ಹೆಚ್ಚಾಗಿರುವುದು ಕಂಡುಬಂದಿದೆ. ವಿವಿಧ ಔಷಧಗಳ ಸೇವನೆ, ಸ್ಟಿರಾಯ್ಡ್ ಬಳಕೆಯೂ ಪರಿಣಾಮ ಬೀರಬಹುದು. ಬೊಜ್ಜು, ರಕ್ತದೊತ್ತಡ, ಮಧುಮೇಹ ಇತರೆ ಸಮಸ್ಯೆಗಳು ಹೆಚ್ಚಾಗಿರುವುದು ಕಂಡುಬಂದಿದೆ. ಟಿವಿ, ಕಂಪ್ಯೂಟರ್ ಬಳಕೆ ಪ್ರಮಾಣದ ಹೆಚ್ಚಳವು (ಸ್ಕ್ರೀನಿಂಗ್ ಟೈಮ್) ಹೃದಯಾಘಾತ ಹೆಚ್ಚಾಗಲು ಕಾರಣ ಇರಬಹುದು. ಜನರ ಜೀವನ ಶೈಲಿಯೂ ಕಾರಣ ಆಗಿರಬಹುದು ಎಂಬ ಅಂಶ ವರದಿಯಲ್ಲಿದೆ’ ಎಂದರು.

> ಹಾಸನ ಜಿಲ್ಲೆಯಲ್ಲಿ ಸಂಭವಿಸಿದ ಹೃದಯಾಘಾತ ಪ್ರಕರಣಗಳ ಕುರಿತು ತಾಂತ್ರಿಕ ಸಲಹಾ ಸಮಿತಿಯು ಅಧ್ಯಯನ ನಡೆಸಿ ಇದೇ 10ರಂದು ಪ್ರತ್ಯೇಕ ವರದಿ ಸಲ್ಲಿಸಲಿದೆ
> **ದಿನೇಶ್ ಗುಂಡೂರಾವ್**, ಆರೋಗ್ಯ ಸಚಿವ


‘ಹೃದಯಾಘಾತಕ್ಕೆ ಕೋವಿಡ್ ಲಸಿಕೆ ನೇರ ಕಾರಣ ಎಂಬುದು ಕಂಡುಬಂದಿಲ್ಲ. ಕೋವಿಡ್ ಲಸಿಕೆ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲೂ ಸಂಶೋಧನೆಗಳಾಗಿದ್ದು, ಲಸಿಕೆ ತೆಗೆದುಕೊಂಡವರಿಗೆ ಸ್ವಲ್ಪ ಅನುಕೂಲವಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಶೋಧನೆಯಾದ ಎಂಆರ್‌ಎನ್‌ಎ ಲಸಿಕೆಯಿಂದ ಸ್ವಲ್ಪ ಅಡ್ಡ ಪರಿಣಾಮ ಆಗಿರುವ ಮಾಹಿತಿ ಇದೆ. ಆದರೆ, ನಮ್ಮ ದೇಶದಲ್ಲಿ ಈ ಲಸಿಕೆಯನ್ನು ಯಾರೂ ಪಡೆದಿಲ್ಲ’ ಎಂದು ಹೇಳಿದರು.

‘ಹಠಾತ್ ಸಾವು, ಹೃದಯಾಘಾತ ಹೆಚ್ಚಳಕ್ಕೆ ಕೋವಿಡ್ ಲಸಿಕೆ ಕಾರಣ ಇರಬಹುದು ಎಂಬ ಚರ್ಚೆ ಸಾರ್ವಜನಿಕ ವಲಯದಲ್ಲಿ ನಡೆದಿತ್ತು. ಈ ಕಾರಣಕ್ಕೆ ಅಧ್ಯಯನ ನಡೆಸಿ ವರದಿ ನೀಡುವಂತೆ ಮುಖ್ಯಮಂತ್ರಿ ಸೂಚಿಸಿದ್ದರು. ಆದರೆ, ಮುಖ್ಯಮಂತ್ರಿಯವರ ಹೇಳಿಕೆಯನ್ನು ಬೇರೆ ರೀತಿ ಅರ್ಥೈಸಲಾಯಿತು’ ಎಂದು ಸಚಿವರು ಸಮರ್ಥಿಸಿಕೊಂಡರು.

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಮೌಖಿಕ ಸಲಹೆ • ಪಿ.ಎಂ.ಹರೀಶ್ ಸಲ್ಲಿಸಿರುವ ರಿಟ್ ಅರ್ಜಿ

# ‘ಸ್ಮಾರ್ಟ್ ಮೀಟರ್ ಗೊಂದಲ ಮೂಡಿಸಬೇಡಿ’

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ‘ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಮಾರ್ಗಸೂಚಿಗಳಿಗೆ ಅನುಗುಣವಾಗಿ ಯಾವ ರೀತಿ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಬೇಕೋ ಅದೇ ರೀತಿ ಅಳವಡಿಸಲು ಮುಂದಾಗಿ. ಅದು ಬಿಟ್ಟು, ಪ್ರೀ ಪೇಯ್ಡ್–ಪೋಸ್ಟ್ ಪೇಯ್ಡ್ ಎಂದು ಗ್ರಾಹಕರನ್ನು ಅನಗತ್ಯವಾಗಿ ಗೊಂದಲದ ಗೂಡಿಗೆ ತಳ್ಳುವ ಕೆಲಸ ಮಾಡಬೇಡಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಮೌಖಿಕ ಸಲಹೆ ನೀಡಿದೆ.

‘ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದಂತೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಹೊರಡಿಸಿರುವ ಸುತ್ತೋಲೆಯನ್ನು ರದ್ದುಪಡಿಸಬೇಕು’ ಎಂದು ಕೋರಿ ದೊಡ್ಡಬಳ್ಳಾಪುರದ ಪಿ.ಎಂ. ಹರೀಶ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್ ಅವರು, ‘ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯ ಮಾಡಿ ಹೊರಡಿಸಿರುವ ಆದೇಶ ಕೆಇಆರ್‌ಸಿ ಮಾರ್ಗಸೂಚಿಗೆ ವಿರುದ್ಧವಾಗಿದೆ. ಅದರ ದರವೂ ಗ್ರಾಹಕರಿಗೆ ಹೊರೆಯಾಗಲಿದೆ. ಸರ್ಕಾರ ಇದೇ ಫೆಬ್ರುವರಿ 13ರಂದು ಹೊರಡಿಸಿರುವ ನಿರ್ದೇಶನಗಳನ್ನು ರದ್ದುಗೊಳಿಸಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ಕೆಇಆರ್‌ಸಿ ಮಾರ್ಗಸೂಚಿಗೆ ಅನುಗುಣವಾಗಿಯೇ ಸರ್ಕಾರ ನಡೆದುಕೊಳ್ಳುತ್ತಿದೆ. ಹೊಸದಾಗಿ ಯಾರು ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಿಕೊಳ್ಳುತ್ತಾರೆಯೊ ಅವರಿಗೆ ಮಾತ್ರವೇ ನಿರ್ದೇಶನಗಳು ಅನ್ವಯವಾಗಲಿವೆ. ಇದು ಪೋಸ್ಟ್ ಪೇಯ್ಡ್ ಆಗಿರುತ್ತದೆ’ ಎಂದು ಪ್ರತಿಪಾದಿಸಿದರು.

ಇದನ್ನು ಒಪ್ಪದ ನ್ಯಾಯಪೀಠ, ‘ಅರ್ಜಿದಾರರ ಪರ ವಕೀಲರು ಹೇಳುವಂತೆ ಅನ್ಯ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಿಮ್ಮ ಸ್ಮಾರ್ಟ್ ಮೀಟರ್ ದರ ಹೆಚ್ಚಾಗಿ ನಿಗದಿ ಮಾಡಿದ್ದೀರಲ್ಲಾ? ಪ್ರೀ ಪೇಯ್ಡ್ ಅಥವಾ ಪೋಸ್ಟ್ ಪೇಯ್ಡ್ ಯಾವುದೇ ರೀತಿಯ ಶುಲ್ಕ ಪಾವತಿಯಾದರೂ ಸರಿಯೇ, ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯ ಎಂಬ ನಿಮ್ಮ ನಿಲುವು ಮಾತ್ರ ಗ್ರಾಹಕರಿಗೆ ಹೊರೆ ಆಗುವಂತಿದೆಯೆಲ್ಲಾ? ಈ ರೀತಿಯ ಕ್ರಮಗಳಿಂದಾಗಿ ಸಾರ್ವಜನಿಕರು ಹೊರೆಯಿಂದ ನರಳುವಂತೆ ಮಾಡಬೇಡಿ’ ಎಂದು ಸೂಚಿಸಿತು.

ನ್ಯಾಯಪೀಠದ ಈ ಅಭಿಪ್ರಾಯವನ್ನು ಅಲ್ಲಗಳೆದ ಅಡ್ವೊಕೇಟ್ ಜನರಲ್, ‘ಕಡ್ಡಾಯ ಎಂಬುದೇನಿಲ್ಲ. ಬೇಕಿದ್ದರೆ ಈ ಕುರಿತಂತೆ ಮುಚ್ಚಳಿಕೆ ಕೊಡಲು ಸರ್ಕಾರ ಸಿದ್ಧವಿದೆ’ ಎಂದರು. ‘ಸ್ಮಾರ್ಟ್ ಮೀಟರ್‌ಗಳ ಮಾರಾಟ ಮತ್ತು ನಿರ್ವಹಣೆ ಟೆಂಡರ್ ನೀಡಿರುವುದು ಕಾನೂನು ಬಾಹಿರ’ ಎಂದು ಆಕ್ಷೇಪಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಈಗಾಗಲೇ ಹಂಗಾಮಿ ಮುಖ್ಯ ನ್ಯಾಯಮೂರ್ತಿಗಳ ಮುಂದೆ ವಿಚಾರಣೆಗೆ ಬಾಕಿ ಇವೆ’ ಎಂಬ ಅಂಶವನ್ನೂ ನ್ಯಾಯಪೀಠದ ಗಮನಕ್ಕೆ ತಂದರು. ದಿನದ ಕಲಾಪದ ವೇಳೆ ಅಂತ್ಯಗೊಳ್ಳುತ್ತಿದ್ದ ಕಾರಣ ನ್ಯಾಯಪೀಠ ವಿಚಾರಣೆಯನ್ನು ಇದೇ 9ಕ್ಕೆ ಮುಂದೂಡಿತು.

# ಎಸ್ಸೆಸ್ಸೆಲ್ಸಿ ತೇರ್ಗಡೆಗೆ 33 ಅಂಕ

ಒಂದನೇ ಪುಟದಿಂದ...

ಪ್ರತಿ ವಿಷಯದಲ್ಲೂ ಗರಿಷ್ಠ ಆಂತರಿಕ ಅಂಕಗಳನ್ನು ಪಡೆದಿದ್ದರೂ 80 ಅಂಕಗಳಿಗೆ ನಡೆಯುವ ಲಿಖಿತ ಪರೀಕ್ಷೆಯಲ್ಲಿ 28 ಅಂಕ (ಶೇ 35) ಪಡೆಯುವುದು ಕಡ್ಡಾಯ. ಸಿಬಿಎಸ್‌ಇ ಮಾದರಿ ಜಾರಿಯಿಂದ ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆಯ ಒತ್ತಡ ಕಡಿಮೆಯಾಗಲಿದೆ. ಆದರೆ, ಎಲ್ಲ ವಿಷಯಗಳಲ್ಲೂ ಆಂತರಿಕ ಅಂಕ ಸೇರಿ ಕನಿಷ್ಠ 33 ಅಂಕಗಳನ್ನು ಗಳಿಸಬೇಕು. ಇತರೆ ಎಲ್ಲ ವಿಷಯಗಳಲ್ಲೂ 100ಕ್ಕೆ 100 ಪಡೆದರೂ ಒಂದು ವಿಷಯದಲ್ಲಿ 33ಕ್ಕಿಂತ ಕಡಿಮೆ ಬಂದರೂ ಒಟ್ಟಾರೆ ಫಲಿತಾಂಶದಲ್ಲಿ ಅನುತ್ತೀರ್ಣರಾಗುತ್ತಾರೆ.

ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಫಲಿತಾಂಶ ಪಡೆಯಲು ಬಹುತೇಕ ಜಿಲ್ಲೆಗಳಲ್ಲಿ ದಶಕಗಳಿಂದ ನಡೆಯುತ್ತಿದ್ದ ಪರೀಕ್ಷಾ ನಕಲು ತಡೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ 2024ರಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಆಧಾರಿತ ವೆಬ್‌ಕಾಸ್ಟಿಂಗ್ ಪರಿಚಯಿಸಿತ್ತು. ಆ ವರ್ಷ ಫಲಿತಾಂಶ ಗಣನೀಯವಾಗಿ ಕುಸಿದಿತ್ತು. ಮೂರು ಪರೀಕ್ಷಾ ಪದ್ಧತಿ ಸೇರಿದಂತೆ ಪರೀಕ್ಷಾ ಸುಧಾರಣೆಗೆ ಸಾಕಷ್ಟು ಕ್ರಮ ಕೈಗೊಂಡಿದ್ದ ಶಾಲಾ ಶಿಕ್ಷಣ ಇಲಾಖೆ, ಕರ್ನಾಟಕ ಪರೀಕ್ಷಾ ಮಂಡಳಿ ಸಹಯೋಗದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸ್ವರೂಪ ಬದಲಾವಣೆಗೂ ಮುಂದಾಗಿದೆ.

# ಯುವತಿಗೆ ಇರಿದು ಆತ್ಮಹತ್ಯೆ

ಒಂದನೇ ಪುಟದಿಂದ...


ಸುಧೀರ್

ಕೆಲವು ತಿಂಗಳಿಂದ ಅವರಿಬ್ಬರ ನಡುವೆ ಮನಸ್ತಾಪ ಉಂಟಾಗಿತ್ತು. ಆದರೂ ಸುಧೀರ್ ಆಕೆಗೆ ಫೋನ್ ಮಾಡುತ್ತಿದ್ದ. ಆಕೆ ಹೋದಲ್ಲೆಲ್ಲ ಹಿಂಬಾಲಿಸುತ್ತಿದ್ದ. ಸೋಮವಾರ ಬೆಳಿಗ್ಗೆ ಫರಂಗಿಪೇಟೆ ಬಳಿಯ ಸುಜೀರುವಿನ ಮಲ್ಲಿ ಎಂಬಲ್ಲಿಗೆ ಬಂದಿದ್ದ ಆತ ಮದುವೆಯಾಗುವಂತೆ ಯುವತಿಯನ್ನು ಒತ್ತಾಯಿಸಿದ್ದ. ಈ ವೇಳೆ ಮಾತಿಗೆ ಮಾತು ಬೆಳೆದು ಅವರಿಬ್ಬರ ನಡುವೆ ಗಲಾಟೆ ನಡೆದಿತ್ತು. ಇದರಿಂದ ಸಿಟ್ಟಾದ ಆರೋಪಿ ಯುವತಿಗೆ ಥಳಿಸಿದ್ದ. ತಾನು ತಂದಿದ್ದ ಚಾಕುವಿನಿಂದ ಆಕೆಗೆ ಚುಚ್ಚಿದ್ದ. ಆತನಿಂದ ತಪ್ಪಿಸಿಕೊಂಡಿದ್ದ ಆಕೆ ಸ್ವಲ್ಪ ದೂರದಲ್ಲೇ ಕುಸಿದು ಬಿದ್ದಿದ್ದಳು. ಆಕೆ ಮೃತಪಟ್ಟಿರಬಹುದು ಎಂದು ಭಾವಿಸಿದ್ದ ಆರೋಪಿಯು ಅಲ್ಲಿಂದ ತೆರಳಿ, ಆ ಯುವತಿ ವಾಸವಿದ್ದ ಬಾಡಿಗೆ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಚೂರಿ ಇರಿತದಿಂದ ಗಾಯಗೊಂಡ ಯುವತಿಯ ದೇಹಸ್ಥಿತಿ ಗಂಭೀರವಾಗಿದ್ದು, ಆಕೆಯನ್ನು ಚಿಕಿತ್ಸೆಗಾಗಿ ತುಂಬೆಯ ಫಾದರ್ ಮುಲ್ಲರ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಕೆ ಸದ್ಯಕ್ಕೆ ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಈ ಕೃತ್ಯದ ಬಗ್ಗೆ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನಿಖೆ ಪ್ರಗತಿಯಲ್ಲಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಯುವತಿಯು ಬೇಕರಿಯೊಂದರಲ್ಲಿ ಕೆಲಸ ಮಾಡುತ್ತಿದ್ದಳು. ಆಗಲೇ ಆಕೆ ಹಾಗೂ ಸುಧೀರ್ ನಡುವೆ ಪ್ರೇಮಾಂಕುರವಾಗಿತ್ತು. ಈಚಿನವರೆಗೂ ಅವರು ಚೆನ್ನಾಗಿಯೇ ಇದ್ದರು. ಆದರೆ ಕೆಲ ತಿಂಗಳುಗಳಿಂದ ಆಕೆ ಆತನಿಂದ ದೂರವಾಗಲು ಬಯಸಿದ್ದಳು. ಆತನ ಜೊತೆ ಮದುವೆಗೆ ನಿರಾಕರಿಸಿದ್ದಳು. ಆ ಬಳಿಕ ಒಮ್ಮೆ ಆತ ಟವರ್ ಏರಿದ್ದು, ಮದುವೆಯಾಗದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೆದರಿಸಲು ಯತ್ನಿಸಿದ್ದ’ ಎಂದು ಸ್ಥಳೀಯರು ತಿಳಿಸಿದ್ದಾರೆ.

### ಡಿಸಿಎಂ, ಸಿ.ಎಂ ದೆಹಲಿ ಯಾತ್ರೆ

**ಬೆಂಗಳೂರು:** ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಭೇಟಿಗಾಗಿ ಮಂಗಳವಾರ ದೆಹಲಿಗೆ ತೆರಳಲಿದ್ದು, ಕೇಂದ್ರ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಅವರ ಭೇಟಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ.

ಮಂಗಳವಾರ ಬೆಳಿಗ್ಗೆ 8 ಗಂಟೆಗೆ ದೆಹಲಿಗೆ ತೆರಳಲಿರುವ ಶಿವಕುಮಾರ್ ಅವರು, ಎತ್ತಿನ ಹೊಳೆ ಯೋಜನೆಗೆ ಸಂಬಂಧಿಸಿ ತುಮಕೂರು ಹಾಗೂ ಹಾಸನ ಭಾಗದಲ್ಲಿ ಅರಣ್ಯ ಭೂಮಿಗೆ ಕುರಿತಂತೆ ಅನುಮತಿ ಬಗ್ಗೆ ಚರ್ಚಿಸಲು ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಅವರನ್ನೂ ಭೇಟಿ ಮಾಡಲಿದ್ದಾರೆ. ಜೊತೆಗೆ ಕೇಂದ್ರ ಜಲಶಕ್ತಿ ಸಚಿವರನ್ನೂ ಭೇಟಿಯಾಗಲಿದ್ದಾರೆ.




ಭಾರತೀಯ ಸ್ಟೇಟ್ ಬ್ಯಾಂಕ್ ತನ್ನ ಸಿಎಸ್ಆರ್ ಚಟುವಟಿಕೆಯ ಭಾಗವಾಗಿ, ಪೊಲೀಸ್ ಸಿಬ್ಬಂದಿಗೆ ವಿತರಿಸಲು ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಠಾಣೆಗೆ 200 ರೇನ್‌ಕೋಟ್‌ಗಳನ್ನು ನೀಡಿದೆ. ಬ್ಯಾಂಕಿನ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ ಅವರು ಸಂಚಾರ ಪೊಲೀಸ್ ಸಿಬ್ಬಂದಿಗೆ ರೇನ್‌ಕೋಟ್ ನೀಡಿದರು.

# ಇಸ್ರೊ ಚಟುವಟಿಕೆ: ಭೂ ಸ್ವಾಧೀನ ರದ್ದು

## ಅಬ್ಬಚಿಕ್ಕನಹಳ್ಳಿ ಮತ್ತು ಲಾಲಗೊಂಡನ ಹಳ್ಳಿಯಲ್ಲಿನ 81 ಎಕರೆ ಜಮೀನು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಕಾರ್ಯ-ಚಟುವಟಿಕೆ ವಿಸ್ತರಿಸಲು ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಅಬ್ಬಚಿಕ್ಕನಹಳ್ಳಿ ಮತ್ತು ಲಾಲಗೊಂಡನ ಹಳ್ಳಿಯಲ್ಲಿನ 81 ಎಕರೆ ಜಮೀನು ಸ್ವಾಧೀನ ಪ್ರಕ್ರಿಯೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಭೂ ಸ್ವಾಧೀನ ಪ್ರಕ್ರಿಯೆ ರದ್ದುಪಡಿಸುವಂತೆ ಕೋರಿ ದೇವನಹಳ್ಳಿ, ಬೆಂಗಳೂರು ಮತ್ತು ಹೈದರಾಬಾದ್‌ನ ಭೂ ಮಾಲೀಕರು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ಒಂದು ವರ್ಷದ ಅವಧಿಯಲ್ಲಿ ಅಂತಿಮ ಅಧಿಸೂಚನೆ ಹೊರಡಿಸಬೇಕಿತ್ತು. ಆದರೆ, ನಿಯಮಗಳನ್ನು ಉಲ್ಲಂಘಿಸಿ ಸ್ವಾಧೀನ ಪ್ರಕ್ರಿಯೆ ನಡೆಸಿ ಅಂತಿಮ ಅಧಿಸೂಚನೆ ಅಂಗೀಕರಿಸಲಾಗಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಅರ್ಜಿದಾರರ ಜಮೀನುಗಳ ಸ್ವಾಧೀನ 2010ರ ಜನವರಿ 28ರಂದು ಪ್ರಾಥಮಿಕ ಹಾಗೂ 2011ರ ಮೇ 30ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಭೂ ಮಾಲೀಕರಿಗೆ 2013ರ ಜುಲೈ 19ರಂದು ಪರಿಹಾರವನ್ನೂ ಘೋಷಣೆ ಮಾಡಲಾಗಿತ್ತು.

## ‘ಗಾರ್ಡನ್ ಸಿಟಿ ಅಲ್ಲ ಹೋರ್ಡಿಂಗ್ ಸಿಟಿ’

ಹೈಕೋರ್ಟ್ ಸುದ್ದಿ

‘ಬೆಂಗಳೂರು ಮಹಾನಗರದ ವ್ಯಾಪ್ತಿಯಲ್ಲಿ ಅಲ್ಲಲ್ಲಿ ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳ ನಾಯಕರ ಫ್ಲೆಕ್ಸ್‌ಗಳು ರಾರಾಜಿಸುತ್ತಿದ್ದು, ಇದು ಗಾರ್ಡನ್ ಸಿಟಿ ಅಲ್ಲ ಹೋರ್ಡಿಂಗ್ ಸಿಟಿ ಆಗಿ ಬದಲಾಗಿದೆ’ ಎಂದು ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತುಗಳು ಹಾಗೂ ಫ್ಲೆಕ್ಸ್‌ಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಬಿಬಿಎಂಪಿಗೆ ಆದೇಶಿಸಿರುವ ಹೈಕೋರ್ಟ್ ಆದೇಶ ಪಾಲನೆಯಾಗುತ್ತಿಲ್ಲ’ ಎಂದು ಆಕ್ಷೇಪಿಸಿ ಎಚ್.ಎಂ.ವೆಂಕಟೇಶ್ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಎಸ್.ಮುದಗಲ್ ಮತ್ತು ಪಿ.ಶ್ರೀಸುಧಾ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಸುನಿಲ್ ಪ್ರಸಾದ್, ನಗರದ ವಿವಿಧೆಡೆ ಜನಪ್ರತಿನಿಧಿಗಳ ಫ್ಲೆಕ್ಸ್‌ಗಳಿರುವ ಛಾಯಾಚಿತ್ರಗಳನ್ನು ನ್ಯಾಯಪೀಠಕ್ಕೆ ಮೆಮೊ ಮೂಲಕ ಸಲ್ಲಿಸಿದರು. ‘ಬಿಬಿಎಂಪಿ ಯಾವುದೇ ಕ್ರಮ ಕೈಗೊಳ್ಳದ ಪರಿಣಾಮ ನಗರದಲ್ಲಿ ಫ್ಲೆಕ್ಸ್‌ಗಳ ಹಾವಳಿ ಮಿತಿ ಮೀರುತ್ತಿದೆ. ಈ ದಿಸೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಬೇಕು’ ಎಂದು ಕೋರಿದರು.

ಇದಕ್ಕೆ ಬಿಬಿಎಂಪಿ ವಕೀಲರು, ‘ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ರಾಜಕೀಯ ನಾಯಕರು ತಮ್ಮ ಫ್ಲೆಕ್ಸ್ ಅಥವಾ ಹೋರ್ಡಿಂಗ್ ಅಳವಡಿಸಿದರೂ ಕೇಸು ದಾಖಲಿಸಿ ದಂಡ ವಿಧಿಸಲಾಗುತ್ತಿದೆ. ಅಂತಹ ನಾಯಕರ ವಿರುದ್ಧ ಎಫ್‌ಐಆರ್ ಕೂಡಾ ದಾಖಲು ಮಾಡಲಾಗುತ್ತಿದೆ’ ಎಂದರು.

‘ಈಗ ಇರುವ ಹೋರ್ಡಿಂಗ್ಸ್, ಫ್ಲೆಕ್ಸ್ ಮತ್ತು ಅನಧಿಕೃತ ಜಾಹೀರಾತುಗಳನ್ನು ಯಾವಾಗ ತೆರವುಗೊಳಿಸುತ್ತೀರಿ ಮತ್ತು ಅಂತಹವರ ವಿರುದ್ಧ ಬಿಬಿಎಂಪಿ ಏನು ಕ್ರಮ ಕೈ ಕೈಗೊಂಡಿದೆ ಎಂಬ ಬಗ್ಗೆ ಇದೇ 23ರೊಳಗೆ ವರದಿ ಸಲ್ಲಿಸಿ’ ಎಂದ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

## ಲಾಂಛನ, ಜಾಹೀರಾತು ವ್ಯಾಪ್ತಿಗೆ ಹೊರತು

‘ಹೆಸರು, ದಿಕ್ಸೂಚಿ ಅಥವಾ ನಿರ್ದಿಷ್ಟ ಲಾಂಛನ ಒಳಗೊಂಡ ಶೈಕ್ಷಣಿಕ ಸಂಸ್ಥೆಯ ಹೆಸರು ಪ್ರದರ್ಶಿಸಿದ ಮಾತ್ರಕ್ಕೆ ಅದನ್ನು ತೆರಿಗೆ ವಿಧಿಸಬಹುದಾದ ಜಾಹೀರಾತು ಎಂದು ಪರಿಗಣಿಸಲು ಆಗದು’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

ಈ ಸಂಬಂಧ ಹೊಸಕೆರೆಹಳ್ಳಿಯ ಗುಪ್ತಾ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಬಿ.ಎಸ್.ಗುಪ್ತಾ ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ವಾಣಿಜ್ಯ ಚಟುವಟಿಕೆಯ ಅಂಶ ಇರಬೇಕು ಮತ್ತು ಅಂತಹ ಜಾಹೀರಾತಿನಿಂದ ಆದಾಯ ಬರುವಂತಿದ್ದರೆ ಮಾತ್ರವೇ ತೆರಿಗೆ ವಿಧಿಸಬಹುದು’ ಎಂದು ನ್ಯಾಯಪೀಠ ಹೇಳಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಟಿ.ಪಿ. ರಾಜೇಂದ್ರ ಕುಮಾರ್ ಸುಂಗೆ ವಾದ ಮಂಡಿಸಿದ್ದರು.

# ನೀವು ಪ್ರಭಾವಿ ಅಲ್ಲವೇ: ತೇಜಸ್ವಿಗೆ ಪ್ರಶ್ನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಮೆಟ್ರೊ ರೈಲು ದರ ನಿಗದಿ ಸಮಿತಿ ಸಲ್ಲಿಸಿರುವ ವರದಿಯನ್ನು, ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್‌ನಿಂದ (ಬಿಎಂಆರ್‌ಸಿಎಲ್) ಬಿಡುಗಡೆ ಮಾಡಿಸಿಕೊಳ್ಳಲು ನಿಮಗೆ ಕಷ್ಟವೇ? ನೀವು ತುಂಬಾ ಪ್ರಭಾವಿ ವ್ಯಕ್ತಿ ಅಲ್ಲವೇ’ ಎಂದು ಸಂಸದ ತೇಜಸ್ವಿ ಸೂರ್ಯ ಅವರನ್ನು ಹೈಕೋರ್ಟ್ ಪ್ರಶ್ನಿಸಿದೆ.

‘ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ತಾರಿಣಿ ಅವರ ನೇತೃತ್ವದ ‘ಮೆಟ್ರೊ ರೈಲು ದರ ನಿಗದಿ ಸಮಿತಿ’ ಸಲ್ಲಿಸಿರುವ ವರದಿಯನ್ನು ಸಾರ್ವಜನಿಕಗೊಳಿಸಲು ನಿರ್ದೇಶಿಸಬೇಕು’ ಎಂದು ಕೋರಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ತೇಜಸ್ವಿ ಪರ ಹೈಕೋರ್ಟ್ ವಕೀಲ ಅನಿರುದ್ಧ ಎ.ಕುಲಕರ್ಣಿ ‘ವರದಿ ಬಹಿರಂಗಗೊಳಿಸುವಂತೆ ಪತ್ರ ಬರೆಯಲಾಗಿದೆ. ನಂತರದಲ್ಲಿ ಸಂಬಂಧಿಸಿದ ಬಿಎಂಆರ್‌ಸಿಎಲ್ ಅಧಿಕಾರಿಯನ್ನೂ ಭೇಟಿ ಮಾಡಲಾಗಿದೆ. ಆದರೆ, ಅವರು ಪ್ರತಿಕ್ರಿಯಿಸುತ್ತಿಲ್ಲ. ರಾಜ್ಯ ಸರ್ಕಾರದ ಅನುಮತಿಗಾಗಿ ಕಾಯುತ್ತಿದ್ದೇವೆ ಎಂದು ಬಿಎಂಆರ್‌ಸಿಎಲ್ ಉತ್ತರ ನೀಡುತ್ತಿದೆ’ ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ನೀವು ಪ್ರಭಾವಿ ವ್ಯಕ್ತಿ ಅಲ್ಲವೇ’ ಎಂದು ಕುಟುಕಿ, ಪ್ರತಿವಾದಿಗಳಾದ ಬಿಎಂಆರ್‌ಸಿಎಲ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಎರಡು ವಾರ ಮುಂದೂಡಿತು.



## ‘ಒಂದೂವರೆ ಸಾವಿರ ಸನ್ನದು ಅಮಾನತು’

ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ಕರೆಯ ಮೇರೆಗೆ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ 1,531 ವಕೀಲರು ತಮ್ಮ ಸನ್ನದು ಅಮಾನತು ಮಾಡಿಸಿಕೊಂಡಿದ್ದಾರೆ.

‘ರಾಜ್ಯದಲ್ಲಿನ 1,29,368 ವಕೀಲರ ಪೈಕಿ 59, 784 ವಕೀಲರು ಪರಿಷತ್ ಕರೆಗೆ ಯಾವುದೇ ಸ್ಪಂದನೆ ವ್ಯಕ್ತಪಡಿಸಿಲ್ಲ. ನ್ಯಾಯಮೂರ್ತಿಗಳು, ಸಚಿವರು, ವಿವಿಧ ಸಾಂವಿಧಾನಿಕ ಹುದ್ದೆಗಳು, ಪ್ರಾಸಿಕ್ಯೂಟರ್‌ಗಳು, ಸಹಾಯಕ ಪ್ರಾಸಿಕ್ಯೂಟರ್‌ಗಳು, ಲಾಡ್ಜ್, ಪೆಟ್ರೋಲ್ ಪಂಪ್, ಬಾರ್ ಆ್ಯಂಡ್ ರೆಸ್ಟೋರೆಂಟ್, ರೆಸಾರ್ಟ್, ವಿವಿಧ ಸರ್ಕಾರಿ ಮತ್ತು ಅರೆ ಸರ್ಕಾರಿ ಹುದ್ದೆ, ಉಪನ್ಯಾಸಕ ವೃತ್ತಿಯಲ್ಲಿ ಇರುವವರು 2025ರ ಜುಲೈ 15ರ ಒಳಗೆ ಸನ್ನದು ಅಮಾನತು ಮಾಡಿಸಿಕೊಳ್ಳಬೇಕು. ಇಲ್ಲದೇ ಹೋದರೆ ವಕೀಲರ ಕಾಯ್ದೆ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಕೆಎಸ್‌ಬಿಸಿ ಪ್ರಕಟಣೆಯಲ್ಲಿ ತಿಳಿಸಿದೆ. ‘ಈವರೆವಿಗೂ 68,553 ವಕೀಲರು ಸರ್ಟಿಫಿಕೇಟ್ ಆಫ್ ಪ್ರ್ಯಾಕ್ಟೀಸ್‌ಗೆ (ಸಿಒಪಿ) ಅರ್ಜಿ ಸಲ್ಲಿಸಿದ್ದಾರೆ. ಸಿಒಪಿಗೆ ಅರ್ಜಿ ಸಲ್ಲಿಸಿರುವವರು ksbc.org.inನಲ್ಲಿ ತಮ್ಮ ಹೆಸರು ಪರಿಶೀಲಿಸಿಕೊಳ್ಳಬಹುದು’ ಎಂದೂ ತಿಳಿಸಿದೆ.

## ‘ಕಳವು: ನಗರಸಭೆ ಅಧಿಕಾರಿಗಳು ಶಾಮೀಲು’

ಪ್ರಜಾವಾಣಿ ವಾರ್ತೆ

**ಶಿರಸಿ:** ‘ನಗರಸಭೆಗೆ ಸೇರಿದ್ದ ಕಾಸ್ಟ್ ಐರನ್ ಪೈಪ್‌ಗಳ ಕಳವು ಪ್ರಕರಣದಲ್ಲಿ ನಗರಸಭೆಯ ಮೂವರು ಅಧಿಕಾರಿಗಳು ಮತ್ತು ಮೂವರು ಸದಸ್ಯರು ಭಾಗಿಯಾಗಿರುವುದು ದೃಢಪಟ್ಟಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ಹೇಳಿದರು.

‘ಪ್ರಕರಣದ ಪ್ರಮುಖ ಆರೋಪಿಯಾದ ಶಿಕಾರಿಪುರದ ಗುಜರಿ ಗುತ್ತಿಗೆದಾರ ಸೈಯ್ಯದ್ ಜಕ್ರಿಯಾನನ್ನು ಹಿಂದಿನ ತನಿಖಾಧಿಕಾರಿ ಸೀತಾರಾಮ ಪಿ. ವಿಚಾರಣೆ ನಡೆಸಿ, ಕಳವಾದ ಪೈಪುಗಳನ್ನು ಮಾರಾಟ ಮಾಡಿ ಗಳಿಸಿದ್ದ ₹7.02 ಲಕ್ಷ ವಶಪಡಿಸಿಕೊಂಡಿದ್ದಾರೆ’ ಎಂದು ಅವರು ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

‘ಒಟ್ಟೂ 3 ಜೆಸಿಬಿ, ಕ್ರೇನ್ ಮತ್ತು 2 ಲಾರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಪೈಪುಗಳನ್ನು ಪುಡಿಮಾಡಿ ಮಾರಾಟ ಮಾಡಿರುವುದು ವಿಚಾರಣೆ ವೇಳೆ ಗೊತ್ತಾಗಿದೆ. ಕಳುವಾದ 116 ಪೈಪ್‌ಗಳ ಈಗಿನ ಮಾರುಕಟ್ಟೆ ಮೌಲ್ಯ ₹21.18 ಲಕ್ಷ ಎಂದು ವರದಿ ಪಡೆಯಲಾಗಿದೆ’ ಎಂದು ಹೇಳಿದರು.

‘ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದಾಗ, ಪೌರಾಯುಕ್ತ ಎಚ್. ಕಾಂತರಾಜ, ಸಹಾಯಕ ಕಾರ್ಯ-ನಿರ್ವಾಹಕ ಎಂಜಿನಿಯರ್ (ಎಇಇ) ಪ್ರಶಾಂತ ವೇರ್ಣೇಕರ್, ಕಿರಿಯ ಎಂಜಿನಿಯರ್ (ಜೆಇ) ಸುಫಿಯಾನ್ ಬ್ಯಾರಿ ಸೇರಿ ನಗರಸಭೆಯ ಹಲವು ಸದಸ್ಯರು ಪೈಪು ಒಯ್ದಿರುವುದಾಗಿ ತಿಳಿಸಿದ. ಆಗ ಎಲ್ಲರನ್ನೂ ವಿಚಾರಣೆಗೆ ಒಳಪಡಿಸಲಾಗಿತ್ತು’ ಎಂದರು.

## ಸ್ಮಾರ್ಟ್ ಕನ್ನಡಕ ಧರಿಸಿ ದೇಗುಲ ಪ್ರವೇಶ ಯತ್ನ

**ತಿರುವನಂತಪುರ (ಪಿಟಿಐ):** ಸ್ಮಾರ್ಟ್ ಕನ್ನಡಕ ಧರಿಸಿ ಪದ್ಮನಾಭಸ್ವಾಮಿ ದೇವಾಲಯಕ್ಕೆ ಪ್ರವೇಶಿಸಲು ಯತ್ನಿಸಿದ ಗುಜರಾತ್‌ನ ಸುರೇಂದ್ರ ಶಾ ಅವರನ್ನು ವಶಕ್ಕೆ ಪಡೆಯಲಾಗಿದೆ. ದೇವಾಲಯದಲ್ಲಿ ಕ್ಯಾಮೆರಾ ಹೊಂದಿದ ಕನ್ನಡಕದಂತಹ ಸಾಧನಗಳನ್ನು ನಿಷೇಧಿಸಲಾಗಿದೆ.

‘ಆರೋಪಿಯು ಮುಖ್ಯದ್ವಾರದ ಮೂಲಕ ದೇವಾಲಯ ಪ್ರವೇಶಿಸಿದ್ದರು. ಸಂಶಯಗೊಂಡ ಭದ್ರತಾ ಸಿಬ್ಬಂದಿ ತಪಾಸಣೆ ನಡೆಸಿದ್ದರು. ಈ ವೇಳೆ ಅವರ ಕನ್ನಡಕದಲ್ಲಿ ರಹಸ್ಯ ಕ್ಯಾಮೆರಾ ಇರುವುದು ಪತ್ತೆಯಾಗಿತ್ತು. ಇವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸಮಗ್ರ ತನಿಖೆ ನಡೆದಿದೆ’ ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ.

ಚಿಟಿಕೆ ಸುದ್ದಿ

## ವಾಲ್ಮೀಕಿ-ಕಬ್ಬಲಿಗ ಸಮಾಜದವರ ನಡುವೆ ಘರ್ಷಣೆ



ಶಹಾಪುರ ತಾಲ್ಲೂಕಿನ ಶಿರವಾಳ ಗ್ರಾಮದಲ್ಲಿ ಸೋಮವಾರ ಪೊಲೀಸರನ್ನು ನಿಯೋಜಿಸಲಾಗಿತ್ತು

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಶಿರವಾಳ ಗ್ರಾಮದಲ್ಲಿ ವಾಲ್ಮೀಕಿ ಹಾಗೂ ಕಬ್ಬಲಿಗ ಸಮಾಜದ ಯುವಕರ ನಡುವೆ ಸೋಮವಾರ ಘರ್ಷಣೆಯಾಗಿದ್ದು, ನಾಲ್ವರು ಗಾಯಗೊಂಡಿದ್ದಾರೆ.

ಭಾನುವಾರ ಮೊಹರಂ ಆಚರಣೆಯ ವೇಳೆ 'ಅಲಾಯಿ ದೇವರು ನಮ್ಮ ಬಡಾವಣೆಯಲ್ಲಿ ಕೂಡಿಸಿರುವಾಗ ಅನ್ಯ ಜಾತಿ ಅವರು ಆಗಮಿಸಬಾರದು' ಎಂಬ ವಿಷಯ ಮುಂದಿಟ್ಟುಕೊಂಡು ಗ್ರಾಮದ ವಾಲ್ಮೀಕಿ ಹಾಗೂ ಕಬ್ಬಲಿಗ ಸಮುದಾಯದ ನಡುವೆ ಜಗಳವಾಗಿ ಕಲ್ಲು ತೂರಾಟವಾಗಿತ್ತು. ಭೀಮರಾಯನಗುಡಿ ಠಾಣೆಯ ಪೊಲೀಸರು ಸಾರ್ವಜನಿಕ ಸ್ಥಳದಲ್ಲಿ ಗಲಾಟೆ ಆರೋಪದ ಮೇಲೆ ಎರಡು ಗುಂಪಿನವರ ವಿರುದ್ಧ ದೂರು ದಾಖಲಿಸಿದ್ದರು.

ಅದೇ ದ್ವೇಷದ ಮುಂದುವರಿದ ಭಾಗವಾಗಿ ಸೋಮವಾರ ವಾಲ್ಮೀಕಿ ಹಾಗೂ ಕಬ್ಬಲಿಗ ಸಮುದಾಯದ ನಡುವೆ ಗಲಾಟೆ ನಡೆದಿದೆ. ಅದರಲ್ಲಿ ವಾಲ್ಮೀಕಿ ಸಮುದಾಯದ ನಾಲ್ವರು ಗಾಯಗೊಂಡಿದ್ದು, ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದು ಗ್ರಾಮದ ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.

ಭೀಮರಾಯನಗುಡಿಯಲ್ಲಿ ಪೊಲೀಸ್ ಠಾಣೆಯಲ್ಲಿ ದೂರುಗಳು ದಾಖಲಾಗಿವೆ.

## ಪ್ರಧಾನಿ ಮರಳಿದ ನಂತರ ಅಧ್ಯಕ್ಷರ ಆಯ್ಕೆ ಅಂತಿಮ

ಶಿವಮೊಗ್ಗ: ಪ್ರಧಾನಿ ನರೇಂದ್ರ ಮೋದಿ ಜುಲೈ 9 ಅಥವಾ 10ರಂದು ವಿದೇಶ ಪ್ರವಾಸದಿಂದ ವಾಪಸಾಗಲಿದ್ದಾರೆ. ನಂತರವೇ ಅವರೊಂದಿಗೆ ಚರ್ಚೆ ನಡೆದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ವಿಚಾರದಲ್ಲಿ ಸ್ಪಷ್ಟನೆ ದೊರೆಯಲಿದೆ.



ವಿಜಯೇಂದ್ರ

ಶಿವಮೊಗ್ಗದಲ್ಲಿ ಸೋಮವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಕುರಿತಂತೆ ಈಗಿನ ವಿಚಾರಗಳೆಲ್ಲವೂ ಮಾಧ್ಯಮಗಳಲ್ಲಿನ ಚರ್ಚೆಯಷ್ಟೇ ಎಂದರು.

## ನಡುಗಡ್ಡೆಯಲ್ಲಿ ಜ್ವರದಿಂದ ಬಳಲುತ್ತಿರುವ ಬಾಲಕಿ

ಲಿಂಗಸುಗೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಯಳಗುಂದಿ ಗ್ರಾಮದ ಬಳಿಯ ಕರಕಲಗಡ್ಡಿಯಲ್ಲಿ 11 ವರ್ಷದ ಬಾಲಕಿ ಅನಿತಾ ಜ್ವರದಿಂದ ಬಳಲುತ್ತಿದ್ದು, ಉಕ್ಕಿ ಹರಿಯುತ್ತಿರುವ ಕೃಷ್ಣಾ ನದಿಯನ್ನು ದಾಟಲಾಗದೆ ಬಾಲಕಿಯ ಕುಟುಂಬಸ್ಥರು ಔಷಧಕ್ಕಾಗಿ ಪರದಾಡುತ್ತಿದ್ದಾರೆ.

ಬಸವಸಾಗರ ಜಲಾಶಯದಿಂದ ಸೋಮವಾರ 1.06 ಲಕ್ಷ ಕ್ಯೂಸೆಕ್ ನೀರನ್ನು ಕೃಷ್ಣಾ ನದಿಗೆ ಹರಿಸಲಾಗುತ್ತಿದೆ. ಇದರಿಂದಾಗಿ ಬಾಲಕಿಯ ಕುಟುಂಬದವರಿಗೆ ತೆಪ್ಪದಲ್ಲಿ ನದಿ ದಾಟಲು ಸಾಧ್ಯವಾಗುತ್ತಿಲ್ಲ. ಬಾಲಕಿಗೆ ಔಷಧ ವ್ಯವಸ್ಥೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಉಪವಿಭಾಗಾಧಿಕಾರಿ ಬಸವಣಪ್ಪ ಕಲಶೆಟ್ಟಿ ಭರವಸೆ ನೀಡಿದ್ದಾರೆ.

ಕರಕಲಗಡ್ಡಿಯಲ್ಲಿ ಏಳು ಜನ ಉಳಿದುಕೊಂಡಿದ್ದಾರೆ. 25 ದಿನಗಳ ಹಿಂದೆ ಲಿಂಗಸುಗೂರಿಗೆ ಬಂದು ದಿನಸಿ ಸಾಮಗ್ರಿಗಳನ್ನು ಖರೀದಿಸಿಕೊಂಡು ಹೋಗಿದ್ದಾರೆ. ಈಗ ದಿನಸಿಯೂ ಖಾಲಿಯಾಗುತ್ತಿದೆ.

# ಆ.25ಕ್ಕೆ ದೆಹಲಿಯಲ್ಲಿ ರ‍್ಯಾಲಿ

### ಸಂಯುಕ್ತ ಕಿಸಾನ್ ಮೋರ್ಚಾ ಸಂಘಟನೆಯ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ (ಎಂಎಸ್‌ಪಿ) ಕಾನೂನು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ, ದೆಹಲಿಯಲ್ಲಿ ಆಗಸ್ಟ್ 25ರಂದು ರೈತರ ರ‍್ಯಾಲಿ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ತೀರ್ಮಾನಿಸಿದೆ.

'ನಗರದಲ್ಲಿ ನಡೆದ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿ ಮಂಡಳಿ ಸಭೆ ಹಾಗೂ ರಾಜ್ಯಮಟ್ಟದ ರೈತ ಸಮಾವೇಶದಲ್ಲಿ ರ‍್ಯಾಲಿ ನಡೆಸಲು ನಿರ್ಧರಿಸಲಾಯಿತು' ಎಂದು ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರೀಯ ಮುಖಂಡ ಜಗಜಿತ್ ಸಿಂಗ್ ಡಲ್ಲೇವಾಲ್ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನಮ್ಮ ಸಂಘಟನೆಯ ರೈತರ ತಂಡ ದೇಶ ವ್ಯಾಪಿ ಪ್ರವಾಸ ಮಾಡುತ್ತಿದೆ. ತಮಿಳುನಾಡಿನ ಕೊಯಮುತ್ತೂರು ಮತ್ತು ಕೃಷ್ಣಗಿರಿಯಲ್ಲಿ ಬೃಹತ್ ಸಭೆಗಳನ್ನು ನಡೆಸಿ ರೈತರನ್ನು ಜಾಗೃತಗೊಳಿಸಿದ ನಂತರ, ಬೆಂಗಳೂರಿನಲ್ಲಿ ಎರಡು ದಿನಗಳ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ' ಎಂದು ಹೇಳಿದರು.

'ಸಂಯುಕ್ತ ಕಿಸಾನ್ ಮೋರ್ಚಾದ ರೈತ ಮುಖಂಡರು ದೇವನಹಳ್ಳಿ ಭೂಸ್ವಾಧೀನ ವಿರೋಧಿ ಹೋರಾಟ ಸ್ಥಳಕ್ಕೆ ಭೇಟಿ ನೀಡಿ, ಫಲವತ್ತಾದ ಕೃಷಿ ಭೂಮಿ ಉಳಿಸಿಕೊಳ್ಳುವ ರೈತರ ಹೋರಾಟವನ್ನು ಬೆಂಬಲಿಸಿದರು. ಮುಂದೆ ರೈತರಿಗೆ ಕೃಷಿ ಭೂಮಿ ಕಿತ್ತುಕೊಂಡರೆ ಉಗ್ರ ಹೋರಾಟಕ್ಕೂ ಸಿದ್ಧರಿದ್ದೇವೆ ಎಂದು ರೈತರಿಗೆ ಭರವಸೆ ನೀಡಲಾಯಿತು' ಎಂದರು.

'ಕರ್ನಾಟಕದ ರೈತ ಮುಖಂಡ ಕುರುಬೂರು ಶಾಂತಕುಮಾರ್ ಅವರಿಗೆ ಅಪಘಾತವಾದ ಸಂದರ್ಭದಲ್ಲಿ ಪಂಜಾಬ್ ಸರ್ಕಾರ ಅವರಿಗೆ ಚಿಕಿತ್ಸೆಯನ್ನು ಕೊಡಿಸಲು ಮುಂದಾಗಿತ್ತು. ಆದರೆ ಕರ್ನಾಟಕ ಸರ್ಕಾರ ಮಧ್ಯ ಪ್ರವೇಶಿಸಿ, ಅವರನ್ನು ಏರ್ ಆಂಬುಲೆನ್ಸ್ ಮುಖಾಂತರ ಬೆಂಗಳೂರಿಗೆ ಕರೆತಂದು ಚಿಕಿತ್ಸೆ ಕೊಡಿಸಿದೆ. ಅದಕ್ಕಾಗಿ ಸರ್ಕಾರಕ್ಕೆ ಧನ್ಯವಾದ' ಎಂದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಹಾಗೂ ಜಗಜಿತ್ ಸಿಂಗ್ ದಲ್ಲೇವಾಲ್ ಅವರು ಆಂಬುಲೆನ್ಸ್‌ನಲ್ಲಿ ರೈತರ ಸಮಾವೇಶಕ್ಕೆ ಬಂದರು.

ಸಮಾವೇಶದಲ್ಲಿ ಶಾಸಕ ಬಿ.ಆರ್. ಪಾಟೀಲ, ಸಮಾಜ ಪರಿವರ್ತನಾ ಸಂಸ್ಥೆಯ ಎಸ್.ಆರ್. ಹಿರೇಮಠ, ಮುಖಂಡರಾದ ಪ್ರಕಾಶ್ ಕಮ್ಮರಡಿ, ಯತಿರಾಜ್, ವಿ.ಗಾಯತ್ರಿ, ಹರಿಯಾಣದ ಅಭಿಮನ್ಯು ಕೊಹಾರ್, ಪಂಜಾಬ್‌ನ ಸಂದೀಪ್ ಸಿಂಗ್ ಶಿರಸಾ, ಸತನಾಂ ಸಿಂಗ್ ಬೆಹ್ರು, ಉತ್ತರ ಪ್ರದೇಶದ ಅಶೋಕ್ ಚೌಧರಿ, ರಾಜಸ್ಥಾನದ ಸಂದೀಪ್ ಸಿಂಗ್, ತಮಿಳುನಾಡಿನ ರಾಮನಗೌಡ, ಎ.ಎಸ್. ಬಾಬು, ತೆಲಂಗಾಣದ ವೆಂಕಟೇಶ್ವರ ರಾವ್, ಕರ್ನಾಟಕದ ವೀರನಗೌಡ ಪಾಟೀಲ, ಕಬ್ಬಿನಪ್ಪಗೌಡ, ಹತ್ತಳ್ಳಿ ದೇವರಾಜ್, ಪರಶುರಾಮ್ ಎತ್ತಿನಗುಡ್ಡ ರವಿಕುಮಾರ್, ಬರಡನಪುರ ನಾಗರಾಜು, ಕಿರಗಸೂರು ಶಂಕರ್, ಸುರೇಶ ಪಾಟೀಲ ರಮೇಶ್ ಹೂಗಾರ, ಜಿವಿ ಲಕ್ಷ್ಮೀದೇವಿ, ಮಹೇಶ್ ಬೆಳಗಾಂವ್ಕರ್, ಎಸ್.ಎಚ್. ದೇವರಾಜ್‌ಕುಮಾರ್ ಪಾಲ್ಗೊಂಡಿದ್ದರು.

**ಮುಖ್ಯಾಂಶಗಳು**


- ರೈತರ ತಂಡದಿಂದ ದೇಶ ವ್ಯಾಪಿ ಪ್ರವಾಸ
- ಕೃಷಿ ಭೂಮಿ ಕಿತ್ತುಕೊಂಡರೆ ಉಗ್ರ ಹೋರಾಟ
- ಸರ್ಕಾರಕ್ಕೆ ಜಗಜಿತ್ ಸಿಂಗ್ ದಲ್ಲೇವಾಲ್ ಎಚ್ಚರಿಕೆ

**ಬೇಡಿಕೆಗಳು**

- ಭಾರತ- ಅಮೆರಿಕ ನಡುವೆ ಒಪ್ಪಂದದಲ್ಲಿ ಕೋಳಿ ಸಾಕಾಣಿಕೆ ಉದ್ದಿಮೆ ಹಾಗೂ ಡೇರಿ ಉತ್ಪನ್ನಗಳನ್ನು ಒಪ್ಪಂದದಿಂದ ಹೊರಗಿಡಬೇಕು
- ಸ್ವಾಮಿನಾಥನ್ ಆಯೋಗದ ವರದಿ ಜಾರಿಗೆ ತರಬೇಕು
- ರೈತರ ಸಂಪೂರ್ಣ ಸಾಲ ಮನ್ನಾ ಆಗಬೇಕು
- ರೈತರ ಹೋರಾಟದ ಸಂದರ್ಭದಲ್ಲಿ ದಾಖಲಾಗಿರುವ ಎಲ್ಲಾ ಪೊಲೀಸ್ ಮೊಕದ್ದಮೆಗಳನ್ನು ಕೈಬಿಡಬೇಕು

## ಹಸಿರ ಸಿರಿ, ನೀರ ಝರಿ...

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.



ಹಾವು ಹರಿದಾಡುವಂತೆ ಕಾಣುವ ಚಾರ್ಮಾಡಿ ಘಾಟ್‌ನ ರಸ್ತೆಯನ್ನು ಸೀಳಿಕೊಂಡು ಪ್ರವಹಿಸುವ ತೊರೆಯ ವಿಹಂಗಮ ನೋಟ ಡ್ರೋನ್ ಕ್ಯಾಮೆರಾದಲ್ಲಿ ಸೋಮವಾರ ಸೆರೆಯಾಯಿತು

# ಕಾರ್ಖಾನೆಗಳಲ್ಲಿ ನವ ಜಾತಿವಾದ

### ಕಾರ್ಮಿಕರ ಸಮಾವೇಶದಲ್ಲಿ ಎಐಸಿಸಿಟಿಯು ಉಪಾಧ್ಯಕ್ಷ ಕ್ಲಿಫ್ಟನ್ ಡಿ' ರೊಜಾರಿಯೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಕಂಪನಿಗಳಲ್ಲಿ, ಕಾರ್ಖಾನೆಗಳಲ್ಲಿ ಮಾತ್ರವಲ್ಲ, ಸರ್ಕಾರಿ ಸ್ವಾಯತ್ತ ಸಂಸ್ಥೆಗಳಲ್ಲಿಯೂ ನವಜಾತಿವಾದ ಅಸ್ತಿತ್ವದಲ್ಲಿದೆ. ಹೋರಾಟದ ಮೂಲಕ ಈ ವ್ಯವಸ್ಥೆಯನ್ನು ಹಿಮ್ಮೆಟ್ಟಿಸಬೇಕು ಎಂದು ಎಐಸಿಸಿಟಿಯು ರಾಷ್ಟ್ರೀಯ ಉಪಾಧ್ಯಕ್ಷ ಕ್ಲಿಫ್ಟನ್ ಡಿ' ರೊಜಾರಿಯೊ ಆಗ್ರಹಿಸಿದರು.

ನಾಲ್ಕು ಕಾರ್ಮಿಕ ಕೋಡ್‌ಗಳ ವಿರುದ್ಧ ಮತ್ತು ಗುತ್ತಿಗೆ ಕಾರ್ಮಿಕ ವ್ಯವಸ್ಥೆ ರದ್ದತಿಗಾಗಿ ಸರ್ಕಾರಿ ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಕಾಯಮೇತರ ಕಾರ್ಮಿಕರ ಸಂಯುಕ್ತ ವೇದಿಕೆಯು ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಅವರು ಮಾತನಾಡಿದರು.

ಆಯಾ ಸಂಸ್ಥೆಗಳ ಬಸ್‌ಗಳಲ್ಲಿ ಕಾರ್ಮಿಕರನ್ನು ಒಯ್ಯುವಾಗ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವವರು ನಿಂತುಕೊಳ್ಳಬೇಕು. ಕುಳಿತಿದ್ದರೂ ಕಾಯಂ ನೌಕರರು ಬಂದಾಗ ಬಿಟ್ಟುಕೊಡಬೇಕು. ಕ್ಯಾಂಟೀನ್‌ಗಳಲ್ಲಿಯೂ ಕಾಯಂ ನೌಕರರಿಗೆ ಮೊದಲು ತಿಂಡಿ. ಎಚ್‌ಎಎಲ್ ಸಹಿತ ಕೆಲವು ಸಂಸ್ಥೆಗಳಲ್ಲಿ ಕಾರ್ಮಿಕರು ಇದಕ್ಕೆಲ್ಲ ಬಗ್ಗದೇ ಪ್ರತಿಭಟನೆ ನಡೆಸಿ ಬಸ್‌ಗಳಲ್ಲಿ, ಕ್ಯಾಂಟೀನ್‌ನಲ್ಲಿ ಇಂಥ ಭೇದ ಮಾಡದಂತೆ ನೋಡಿಕೊಂಡಿದ್ದಾರೆ. ಇನ್ನು ಹಲವು ಕಂಪನಿಗಳಲ್ಲಿ ಈ ಪರಿಸ್ಥಿತಿ ಇದೆ. ಜಾತಿ ಪದ್ಧತಿಗಳಲ್ಲಿ ಗೌರವ, ಅವಕಾಶಗಳಲ್ಲಿ ಯಾವ ರೀತಿಯ ತಾರತಮ್ಯ ಇದೆಯೋ ಅದರ ಇನ್ನೊಂದು ರೂಪ ಇದಾಗಿದೆ ಎಂದು ವಿವರಿಸಿದರು.

ಖಾಸಗಿ ಸಂಸ್ಥೆಗಳಲ್ಲಿ ಮೊದಲು ಗುತ್ತಿಗೆ ಪದ್ಧತಿ ಜಾರಿಗೆ ಬಂತು. ಅದನ್ನೇ ಕ್ರಮೇಣ ಸರ್ಕಾರಿ ಸಂಸ್ಥೆಗಳಲ್ಲಿಯೂ ಅಳವಡಿಸಿಕೊಳ್ಳಲಾಯಿತು. ಕಾಯಂ ಕೆಲಸಗಳಲ್ಲಿ ಗುತ್ತಿಗೆ ಪದ್ಧತಿ ಇರಬಾರದು ಎಂಬ ನಿಯಮ ಇದೆ. ಇದರ ಆಧಾರದಲ್ಲಿ ಕಾಯಂ ಮಾಡಿ ಎಂದು ಕಾರ್ಮಿಕರು ಹಕ್ಕು ಕೇಳುತ್ತಿದ್ದಾರೆ. ಕೇಂದ್ರ ಸರ್ಕಾರ ರೂಪಿಸಿರುವ ಕಾರ್ಮಿಕರ ನಾಲ್ಕು ಕೋಡ್‌ಗಳು ಜಾರಿಗೆ ಬಂದರೆ ಕಾಯಂ ಮಾಡಿ ಎಂದು ಕೇಳುವ ಹಕ್ಕು ಕೂಡ ಇಲ್ಲದಂತಾಗುತ್ತದೆ ಎಂದು ಎಚ್ಚರಿಸಿದರು.

ಹಾಲಿ ಕಾರ್ಮಿಕ ಕಾಯ್ದೆಗಳನ್ನು ತೆಗೆದು ಜಾರಿ ಮಾಡಲು ಹೊರಟಿರುವ ನಾಲ್ಕು ಕೋಡ್‌ಗಳನ್ನು ಹಿಂಪಡೆಯಬೇಕು. ಗುತ್ತಿಗೆ, ಹೊರಗುತ್ತಿಗೆ, ಅಲ್ಪ ಅವಧಿಯ ಕೆಲಸ ಪದ್ಧತಿಗಳನ್ನು ರದ್ದುಗೊಳಿಸಬೇಕು. ಇಎಸ್‌ಐ ಪರಿಮಿತಿಯನ್ನು ರದ್ದು ಮಾಡಬೇಕು. ಕನಿಷ್ಠ ವೇತನ ₹ 42,000 ನೀಡಬೇಕು. ಸಂಘಟನೆ ಮಾಡುವ ಹಕ್ಕು, ಹೋರಾಟದ ಹಕ್ಕು, ಮುಷ್ಕರದ ಹಕ್ಕುಗಳನ್ನು ಎತ್ತಿ ಹಿಡಿಯಬೇಕು ಎಂಬುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಇಟ್ಟುಕೊಂಡು ದೇಶದಾದ್ಯಂತ ಜುಲೈ 9ರಂದು ಕಾರ್ಮಿಕ ಸಂಘಟನೆಗಳು ಪ್ರತಿಭಟನೆ ನಡೆಸಲಿವೆ ಎಂದರು.

ವಿಜಯಕುಮಾರ್, ಮಣಿಯಮ್ಮ, ಗುರುವಮ್ಮ, ಮೈತ್ರೇಯಿ, ವಿರೂಪಾಕ್ಷ, ಕೃಷ್ಣನ್, ಹೇಮಂತ್ ಸೇರಿದಂತೆ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

**ಮುಖ್ಯಾಂಶಗಳು**

- ನಾಲ್ಕು ಕಾರ್ಮಿಕ ಕೋಡ್ ರದ್ದತಿಗೆ ಆಗ್ರಹ
- ಹೋರಾಟದ ಮೂಲಕ ನವ ಜಾತಿವಾದ ತೊಡೆದು ಹಾಕಿ
- ಜುಲೈ 9ರ ದೇಶದ್ಯಾಂತ ಪ್ರತಿಭಟನೆಗೆ ಕೈಜೋಡಿಸಲು ಕರೆ



ಸರ್ಕಾರಿ ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಕಾಯಮೇತರ ಕಾರ್ಮಿಕರ ಸಂಯುಕ್ತ ವೇದಿಕೆ ಭಾನುವಾರ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಎಐಸಿಸಿಟಿಯು ರಾಷ್ಟ್ರೀಯ ಉಪಾಧ್ಯಕ್ಷ ಕ್ಲಿಫ್ಟನ್ ಡಿ' ರೊಜಾರಿಯೊ ಮಾತನಾಡಿದರು

## ಗೋಕಾಕ ಜಾತ್ರೆಯಲ್ಲಿ ಬಿಜೆಪಿ ಬಂಡಾಯ ನಾಯಕರು ಭಾಗಿ

ಪ್ರಜಾವಾಣಿ ವಾರ್ತೆ

ಗೋಕಾಕ (ಬೆಳಗಾವಿ ಜಿಲ್ಲೆ): ಶಾಸಕ ರಮೇಶ ಜಾರಕಿಹೊಳಿ ಆಹ್ವಾನದ ಮೇರೆಗೆ ಸೋಮವಾರ ನಗರಕ್ಕೆ ಭೇಟಿ ನೀಡಿದ ಬಿಜೆಪಿಯ ಸಮಾನ ಮನಸ್ಕ ಶಾಸಕರು ಮತ್ತು ಮಾಜಿ ಸಚಿವರು, ಗ್ರಾಮದೇವತೆ ಜಾತ್ರೆಯಲ್ಲಿ ಪಾಲ್ಗೊಂಡರು.

ಮಾಜಿ ಸಚಿವರಾದ ಅರವಿಂದ ಲಿಂಬಾವಳಿ, ಕುಮಾರ ಬಂಗಾರಪ್ಪ, ಶ್ರೀಮಂತ ಪಾಟೀಲ, ಮಾಜಿ ಸಂಸದ ಬಿ.ವಿ.ನಾಯಕ, ಶಾಸಕ ಬಿ.ಪಿ.ಹರೀಶ, ಮಾಜಿ ಶಾಸಕ ಮಹೇಶ ಕುಮಠಳ್ಳಿ ಮತ್ತು ಮುಖಂಡ ಕಿರಣ ಜಾಧವ ಅವರು ಮಹಾಲಕ್ಷ್ಮೀ ದೇವಸ್ಥಾನಗಳಿಗೆ ಭೇಟಿ ನೀಡಿ ದೇವಿಯರ ದರ್ಶನ ಪಡೆದರು.

ವಿಧಾನ ಪರಿಷತ್ ಸದಸ್ಯ ಲಖನ್ ಜಾರಕಿಹೊಳಿ ಅವರ ಮನೆಗೆ ತೆರಳಿ, ಕೆಲ ಹೊತ್ತು ಮಾತುಕತೆ ನಡೆಸಿದರು.

## 'ಆರ್‌ಎಸ್‌ಎಸ್ ತರಬೇತಿ ಕಾರಣ'

ಕೊಪ್ಪಳ: 'ದೇಶಭಕ್ತಿ ಸಂಘಟನೆ ಎಂದು ಬಿಂಬಿಸಿಕೊಳ್ಳುವ ಆರ್‌ಎಸ್‌ಎಸ್ ತರಬೇತಿಯಿಂದಲೇ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಮಹಿಳಾ ಅಧಿಕಾರಿಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಆರೋಪಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಆರ್‌ಎಸ್‌ಎಸ್ ಅನ್ನು ಹಿಂದೆ ಮೂರು ಬಾರಿ ನಿಷೇಧಿಸಲಾಗಿತ್ತು. ಈಗಲೂ ಏಕೆ ಮಾಡಬಾರದು? ಕೋಮುಗಲಭೆ ಮಾಡುತ್ತಲೇ ಹೋದಾಗ ಕ್ರಮ ಕೈಗೊಂಡರೆ ತಪ್ಪೇನು? ಅಲ್ಲಿ ಮಹಿಳೆಯರಿಗೆ ಬೈಯುವ ತರಬೇತಿ ನೀಡಲಾಗುತ್ತದೆಯೇ' ಎಂದು ಪ್ರಶ್ನಿಸಿದರು.

# '200ಕ್ಕೂ ಹೆಚ್ಚು ಅಕ್ರಮ ವಲಸಿಗರ ಗಡಿಪಾರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: '200ಕ್ಕೂ ಹೆಚ್ಚು ಅಕ್ರಮ ಬಾಂಗ್ಲಾ ವಲಸಿಗರನ್ನು ರಾಜ್ಯದಿಂದ ಗಡಿಪಾರು ಮಾಡಲಾಗಿದೆ. ಈ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ವಿದೇಶಿಯರ ಪ್ರಾದೇಶಿಕ ನೋಂದಣಿ ಅಧಿಕಾರಿಗಳು (ಎಫ್‌ಆರ್‌ಆರ್‌ಒ) ಅಕ್ರಮ ವಲಸಿಗರನ್ನು ಗುರುತಿಸಿ ಮಾಹಿತಿ ನೀಡುತ್ತಾರೆ. ಗುಜರಾತ್ ರೀತಿಯಲ್ಲಿ ಅಕ್ರಮ ನುಸುಳುಕೋರರನ್ನು ನಾವೂ ವಾಪಸ್ ಕಳುಹಿಸುತ್ತೇವೆ' ಎಂದರು.

ಗುಜರಾತ್‌ನಲ್ಲಿ ಅಕ್ರಮವಾಗಿ ನೆಲಸಿದ್ದ ಬಾಂಗ್ಲಾ ದೇಶಿಯರನ್ನು ಪತ್ತೆ ಮಾಡಿ ಭಾರತದಿಂದ ಹೊರಗೆ ಕಳುಹಿಸುವ ಬೃಹತ್ ಕಾರ್ಯಾಚರಣೆಯನ್ನು ಕಳೆದ ಏಪ್ರಿಲ್ ತಿಂಗಳಿನಲ್ಲಿ ಅಲ್ಲಿನ ಪೊಲೀಸರು ಮಾಡಿದ್ದರು.

'ಅಕ್ರಮ ವಲಸಿಗರು ಕಟ್ಟಡ ಕಾರ್ಮಿಕರಾಗಿ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆಂಬ ಮಾಹಿತಿಯಿದೆ. ಅದನ್ನು ಪರಿಶೀಲಿಸಿ, ಅಂಥವರು ಕಂಡುಬಂದರೆ ವಶಕ್ಕೆ ತೆಗೆದುಕೊಂಡು ಗಡಿಪಾರು ಮಾಡಲಾಗುವುದು' ಎಂದು ಪರಮೇಶ್ವರ ಹೇಳಿದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, 'ಅಕ್ರಮ ನುಸುಳುಕೋರರ ಬಗ್ಗೆ ಮೃದುಧೋರಣೆ ತೋರಿ ಏನು ಪ್ರಯೋಜನವಿದೆ. ಬಾಂಗ್ಲಾ ದೇಶದವರನ್ನು ಕರೆಸಿಕೊಂಡು ಮತ ಹಾಕಿಸಿಕೊಳ್ಳುವಂಥ ಪರಿಸ್ಥಿತಿ ಕಾಂಗ್ರೆಸ್ ಪಕ್ಷಕ್ಕೆ ಬಂದಿಲ್ಲ' ಎಂದರು.

'ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಕಳೆದ ವಾರ ನನ್ನನ್ನು ಭೇಟಿಗೆ ಕರೆದಿದ್ದರು. ಆಗ ನಾನು ಊರಲ್ಲಿದ್ದೆ. ಹೀಗಾಗಿ ಭೇಟಿ ಸಾಧ್ಯವಾಗಿರಲಿಲ್ಲ. ಮತ್ತೆ ಕರೆದರೆ ಭೇಟಿಯಾಗುತ್ತೇನೆ' ಎಂದರು.

'ಡಿ.ಕೆ. ಶಿವಕುಮಾರ್ ಅವರಿಗೆ ಉನ್ನತ ಸ್ಥಾನ ಸಿಗಬೇಕು' ಎಂಬ ಬಾಳೆಹೊನ್ನೂರಿನ ರಂಭಾಪುರಿ ಶ್ರೀಗಳ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ, 'ತಮ್ಮ ಅಭಿಪ್ರಾಯವನ್ನು ಶ್ರೀಗಳು ಹೇಳಿದ್ದಾರೆ. ಅದರಲ್ಲಿ ತಪ್ಪೇನಿದೆ' ಎಂದು ಪ್ರಶ್ನಿಸಿದರು.



ಕಾಂಗ್ರೆಸ್‌ನಲ್ಲಿ ರಾಷ್ಟ್ರೀಯ ನಾಯಕರ ಕೊರತೆ: ಬಿಜೆಪಿ ಮುಖಂಡ ಬಿ.ಶ್ರೀರಾಮುಲು ಹೇಳಿಕೆ

# ಮೋದಿಗೆ ಸ್ಪರ್ಧೆ– ಸಿದ್ದರಾಮಯ್ಯ ರಾಷ್ಟ್ರ ರಾಜಕಾರಣಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂದಿನ ದಿನಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸ್ಪರ್ಧೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ರಾಷ್ಟ್ರ ರಾಜಕಾರಣಕ್ಕೆ ಕರೆತರಲು ಕಾಂಗ್ರೆಸ್ ಹೊರಟಿದೆ ಎಂದು ಬಿಜೆಪಿ ಮುಖಂಡ ಬಿ.ಶ್ರೀರಾಮುಲು ಹೇಳಿದರು.



ಬಿ. ಶ್ರೀರಾಮುಲು

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮೋದಿ ಅವರು ಒಬಿಸಿ ನಾಯಕರು. ಅವರಿಗೆ ಸ್ಪರ್ಧೆ ನೀಡಲು ಕಾಂಗ್ರೆಸ್‌ನಲ್ಲಿ ರಾಷ್ಟ್ರೀಯ ಮಟ್ಟದ ನಾಯಕರು ಇಲ್ಲ. ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾಗೂ ಸ್ಪರ್ಧೆ ನೀಡಲು ಆಗುತ್ತಿಲ್ಲ. ಹೀಗಾಗಿ, ಸಿದ್ದರಾಮಯ್ಯ ಅವರನ್ನು ರಾಷ್ಟ್ರಮಟ್ಟಕ್ಕೆ ಕರೆದುಕೊಂಡು ಬರಬಹುದು ಅನಿಸುತ್ತದೆ' ಎಂದರು.

ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ನಾಯಕ. ಪ್ರಧಾನಿ ಅವರಿಗೆ ಸರಿಸಮಾನವಾದ ನಾಯಕ ಅಲ್ಲ. ಹೈಕಮಾಂಡ್ ಮನವೊಲಿಕೆಗೆ ಮಣಿದು ಮುಖ್ಯಮಂತ್ರಿ ಸ್ಥಾನ ಬಿಟ್ಟು ಸಿದ್ದರಾಮಯ್ಯ ರಾಷ್ಟ್ರ ರಾಜಕಾರಣಕ್ಕೆ ಬರಲಿದ್ದಾರೆ ಎಂದರು.

'ಮಹರ್ಷಿ ವಾಲ್ಮಿಕಿ ನಿಗಮದಲ್ಲಿ ವ್ಯಾಪಕ ಅವ್ಯವಹಾರ ಆಗಿದೆ. ಈ ಬಗ್ಗೆ ಮಾಹಿತಿ ನೀಡಲು ಪಕ್ಷದ ವರಿಷ್ಠರನ್ನು ಭೇಟಿ ಮಾಡುತ್ತೇನೆ' ಎಂದರು.

'ನಿಗಮದಲ್ಲಿ ₹187 ಕೋಟಿ ಅವ್ಯವಹಾರ ಆಗಿದೆ. ಈ ಪೈಕಿ, ಶೇ 50ರಷ್ಟು ಮೊತ್ತವನ್ನು ನಿಗಮದ ಖಾತೆಗೆ ವಾಪಸ್ ಹಾಕಲಾಗಿದೆ ಎಂದು ರಾಜ್ಯ ಸರ್ಕಾರ ಹೇಳಿಕೊಂಡಿದೆ. ಹಾಗಿದ್ದರೆ, ಬಜೆಟ್‌ನ 3 ಲಕ್ಷ ಕೋಟಿ ಮೊತ್ತವನ್ನು ತೆಗೆದು ಸ್ವಂತ ಕೆಲಸಕ್ಕೆ ಬಳಸಿಕೊಳ್ಳಲಿ. ಮತ್ತೆ ಅದನ್ನು ಖಜಾನೆಗೆ ಹಾಕಲಿ' ಎಂದರು.

### 'ಸಿದ್ದರಾಮಯ್ಯ ಸೇವೆ ವಿಸ್ತರಣೆಗೆ ಕಾಂಗ್ರೆಸ್ ಒಲವು'

ಧಾರವಾಡ 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೇವೆಯನ್ನು ವಿಸ್ತರಿಸಲು ಕಾಂಗ್ರೆಸ್ ಪಕ್ಷ ಉದ್ದೇಶಿಸಿದ್ದು, ಇದು ಒಳ್ಳೆಯ ಬೆಳವಣಿಗೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ತಿಳಿಸಿದರು.



ಲಕ್ಷ್ಮಿ ಹೆಬ್ಬಾಳಕರ

'ಸಿದ್ದರಾಮಯ್ಯ ಅವರಿಗೆ ಸಂಬಂಧಿಸಿದಂತೆ ಏನಾದರೂ ತಪ್ಪುಗಳನ್ನು ಹುಡುಕುತ್ತಿದ್ದರೆ, ಬಿಜೆಪಿಯವರಿಗೆ ನಿಶ್ಚಿತವಾಗಿ ನಿರಾಸೆಯಾಗಲಿದೆ. ಸಿದ್ದರಾಮಯ್ಯ ಅವರು ಜನ ನಾಯಕರಾಗಿದ್ದು, ಅವರು ದೇಶದಲ್ಲಿ ಜನಪ್ರಿಯರು' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಮುಖ್ಯಮಂತ್ರಿ ಬದಲಾವಣೆಗೆ ಯಾರು, ಯಾರಿಗೆ ಮತ್ತು ಯಾವಾಗ ಗಡುವು ಕೊಟ್ಟಿದ್ದಾರೆ ಎಂಬುದು ನಮಗೆ ಗೊತ್ತಿಲ್ಲ. ಎಲ್ಲವನ್ನೂ ಪಕ್ಷದ ಹೈಕಮಾಂಡ್ ನಿರ್ಧರಿಸಲಿದೆ' ಎಂದರು.

## 'ಸಿ.ಎಂ ಬದಲಾವಣೆ: ಸದ್ಯಕ್ಕೆ ಏನನ್ನೂ ಹೇಳಲಾಗದು'

ಪ್ರಜಾವಾಣಿ ವಾರ್ತೆ

ಗದಗ: 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಾಯಿ ಮುಚ್ಚಿಕೊಂಡಿರಲು ಹೇಳಿದ್ದು, ಅದು ಹೊರತುಪಡಿಸಿದರೆ ಬೇರೇನು ಗೊತ್ತಿಲ್ಲ' ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.



ಮಧು ಬಂಗಾರಪ್ಪ

'ಮುಖ್ಯಮಂತ್ರಿ ಬದಲಾಗುವರೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ನಾನು ಸದ್ಯಕ್ಕೆ ಏನನ್ನೂ ಹೇಳಲಾಗದು' ಎಂದರು.

'ಸಿದ್ದರಾಮಯ್ಯ ಅವರನ್ನು ರಾಷ್ಟ್ರ ರಾಜಕಾರಣಕ್ಕೆ ಕಳುಹಿಸಲು ವೇದಿಕೆ ಸಿದ್ಧವಾಗಿದೆ' ಎಂಬ ಬಿಜೆಪಿ ನಾಯಕರ ಹೇಳಿಕೆಗೆ ಉತ್ತರಿಸಿದ ಅವರು, 'ಮನಸ್ಸೋಇಚ್ಛೆ ವಿಶ್ಲೇಷಣೆ ಮಾಡಿದರೆ, ನಾನೇನು ಹೇಳಲು ಸಾಧ್ಯ. ಇನ್ನೂ ಮೂರು ವರ್ಷ ಬಿಜೆಪಿಯವರಿಗೆ ಬೇರೆ ಕೆಲಸ ಇಲ್ಲ. ಅದಕ್ಕೆ ಹೀಗೆ ಹೇಳುತ್ತಾರೆ' ಎಂದರು.

'ಗ್ಯಾರಂಟಿ ಯೋಜನೆ ಘೋಷಿಸಿದಾಗ, ಕಾಂಗ್ರೆಸ್‌ನವರು ಸುಳ್ಳು ಹೇಳುವರು. ಅವುಗಳ ಅನುಷ್ಠಾನ ಅಸಾಧ್ಯ ಎಂದು ಪ್ರಶ್ನಿಸಿದವರು ಈಗ ನಾವು ಗ್ಯಾರಂಟಿ ವಿರೋಧಿಗಳಲ್ಲ ಎನ್ನುತ್ತಿದ್ದಾರೆ' ಎಂದರು.

'ಗ್ಯಾರಂಟಿ ಯೋಜನೆಗಳಿಗೆ ನಮ್ಮ ಶಾಸಕರ ವಿರೋಧವಿಲ್ಲ. ಶಾಸಕ ಬಸವರಾಜ ರಾಯರಡ್ಡಿ ಅವರಿಗೆ ಜನರು ಕೆಲವಷ್ಟು ಬೇಡಿಕೆಗಳನ್ನು ಇಟ್ಟಿರುತ್ತಾರೆ. ಅದನ್ನು ಕೊಡಬೇಕೆಂದರೆ, ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಬೇಕು ಅಂತ ಇವರು ಹೇಳಿರುತ್ತಾರೆ. ಮಾಧ್ಯಮದವರು ಅದಕ್ಕೆ ಹಿಂದಿನದ್ದು ಹಾಗೂ ಅದರ ಮುಂದಿನ ವಿಡಿಯೊ ಕಟ್ ಮಾಡಿ ಇದನ್ನು ಮಾತ್ರ ತೋರಿಸಿದ್ದಾರೆ' ಎಂದರು.

'ಆರ್‌ಎಸ್‌ಎಸ್ ನಿಷೇಧಿಸಬೇಕು' ಎಂಬ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, 'ಈ ದೇಶದಲ್ಲಿ ಯಾರೇ ಸಂವಿಧಾನದ ವಿರುದ್ಧ ಹೋದರೂ ಅವರನ್ನು ನಿಷೇಧಿಸುವುದು ಒಳ್ಳೆಯದು' ಎಂದರು.

### 2 ವರ್ಷಗಳಲ್ಲಿ ಮಾಡಿದ ಕಾಮಗಾರಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮಾಹಿತಿ ಸಲ್ಲಿಕೆ

# ಸುರ್ಜೇವಾಲಾಗೆ 'ಉತ್ತರ' ಶಾಸಕರ ಅಹವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಬೆಳಗಾವಿ, ಕಲಬುರಗಿ, ರಾಯಚೂರು ಜಿಲ್ಲೆಯ ಶಾಸಕರಿಂದ ಸೋಮವಾರ ಅಭಿಪ್ರಾಯ ಸಂಗ್ರಹಿಸಿದರು.



ಸುರ್ಜೇವಾಲಾ

ಶಾಸಕರಾದ ಆಸೀಫ್ ಸೇಠ್, ವಿಶ್ವಾಸ್ ವೈದ್ಯ, ಲಕ್ಷ್ಮಣ ಸವದಿ, ಅಜಯ್ ಸಿಂಗ್ ಮತ್ತಿತರರು ಸುರ್ಜೇವಾಲಾ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿದರು. ಕ್ಷೇತ್ರದಲ್ಲಿ ಸಾಧನೆ, ಕಳೆದ ಎರಡು ವರ್ಷಗಳಲ್ಲಿ ಮಾಡಿದ ಕಾಮಗಾರಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಮುಂತಾದ ವಿಷಯಗಳ ಬಗ್ಗೆ ಸುರ್ಜೇವಾಲಾ ಅವರಿಗೆ ಮಾಹಿತಿ ನೀಡಿದರು.

ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ ಲಕ್ಷ್ಮಣ ಸವದಿ, 'ಮುಖ್ಯಮಂತ್ರಿ ಸ್ಥಾನ ಬದಲಾವಣೆ ವಿಚಾರ ಗೊಂದಲ ಉಂಟು ಮಾಡುತ್ತಿದೆ. ಈ ಬಗ್ಗೆ ಹೈಕಮಾಂಡ್ ಗಮನಹರಿಸಬೇಕು. ಕಾರ್ಯಕರ್ತರು, ಮುಖಂಡರ ಗೊಂದಲ ನಿವಾರಿಸಬೇಕು' ಎಂದು ಮನವಿ ಮಾಡಿದ್ದಾರೆ ಎಂದು ಗೊತ್ತಾಗಿದೆ.

'ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಕೆಲವು ಸಚಿವರು ಇನ್ನಷ್ಟು ಚುರುಕಿನಿಂದ ಕೆಲಸ ಮಾಡಬೇಕು. ಗ್ಯಾರಂಟಿಗಳಿಂದ ಜನಸಾಮಾನ್ಯರಿಗೆ ಅನುಕೂಲ ಆಗಿದೆ. ಮತ್ತೊಂದು ಕಡೆ ಶಾಸಕರ ಅನುದಾನಕ್ಕೆ ಕಷ್ಟವಾಗುತ್ತಿದೆ. ನನ್ನ ಕ್ಷೇತ್ರದಲ್ಲಿಯೂ ಸಮಸ್ಯೆಗಳಿವೆ. ಬಿಜೆಪಿಯಲ್ಲಿ ನಾನು ಉಪ ಮುಖ್ಯಮಂತ್ರಿ ಆಗಿದ್ದವನು. ಸಂಪುಟ ಪುನರ್ ರಚನೆಯ ವೇಳೆ ಆದ್ಯತೆ ನೀಡಬೇಕು' ಎಂದೂ ತಮ್ಮ ಕೋರಿಕೆ ಮುಂದಿಟ್ಟಿದ್ದಾರೆ ಎಂದು ಗೊತ್ತಾಗಿದೆ.

ಸುರ್ಜೇವಾಲ ಅವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಲಕ್ಷ್ಮಣ ಸವದಿ, 'ಕ್ಷೇತ್ರದ ಅಭಿವೃದ್ಧಿ, ಪಕ್ಷ ಸಂಘಟನೆ ಬಗ್ಗೆ ಚರ್ಚೆ ನಡೆಯಿತು. ಮುಂದಿನ ದಿನಗಳಲ್ಲಿ ಹೇಗೆ ಪಕ್ಷ ಸಂಘಟನೆ ಮಾಡಬೇಕು, ಸ್ಥಳೀಯ ಚುನಾವಣೆ, ವಿಧಾನಸಭೆ ಚುನಾವಣೆ ಗೆಲ್ಲಲು ಏನೆಲ್ಲಾ ಕಾರ್ಯತಂತ್ರ ರೂಪಿಸಬೇಕು ಎಂಬ ಬಗ್ಗೆ ವಿಚಾರ ವಿನಿಮಯ ಮಾಡಿದ್ದೇವೆ' ಎಂದರು.

'ಕಲ್ಯಾಣ ಕರ್ನಾಟಕ ಅಭಿವೃದ್ಧಿ, ಪಕ್ಷ ಸಂಘಟನೆ ಕುರಿತು ಚರ್ಚೆ ಮಾಡಿದರು' ಎಂದು ಅಜಯ್ ಸಿಂಗ್ ತಿಳಿಸಿದರೆ, 'ಮುಖ್ಯಮಂತ್ರಿಯವರು ಅನುದಾನ ಚೆನ್ನಾಗಿ ನೀಡುತ್ತಿದ್ದಾರೆ. ಆದರೆ, ಜನರಿಂದ ಬಹಳಷ್ಟು ಬೇಡಿಕೆಗಳಿವೆ. ಹೀಗಾಗಿ, ಇನ್ನೊಂದಷ್ಟು ಅನುದಾನದ ಅಗತ್ಯವಿದೆ ಎಂದು ಮನವಿ ಮಾಡಿದ್ದೇನೆ' ಎಂದು ಆಸೀಫ್ ಸೇಠ್ ತಿಳಿಸಿದರು.

ವಿಧಾನ ಪರಿಷತ್ ಸ್ಥಾನದ ಆಕಾಂಕ್ಷಿಯಾಗಿರುವ ನಟರಾಜ್ ಗೌಡ ಅವರು ಸುರ್ಜೇವಾಲಾ ಅವರನ್ನು ಭೇಟಿ ಮಾಡಿ, . 'ಪರಿಷತ್‌ನಲ್ಲಿ ಖಾಲಿ ಇರುವ 4 ಸ್ಥಾನಗಳಿಗೆ ಈಗಾಗಲೇ ಆಯ್ಕೆ ಮಾಡಿರುವ ಕೆಲವರು ಪಕ್ಷದಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿಲ್ಲ. ನಾನು ಕಳೆದ 10 ವರ್ಷಗಳಿಂದ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದೇನೆ' ಎಂದೂ ಹೇಳಿಕೊಂಡಿದ್ದಾರೆ.

### ಬೀದರ್ ಕಾಂಗ್ರೆಸ್ ಒಳಜಗಳ

ಬೀದರ್ ಜಿಲ್ಲಾ ಕಾಂಗ್ರೆಸ್‌ನ ಒಳ ಜಗಳದ ಬಗ್ಗೆ ಮಾಜಿ ಶಾಸಕ ರಾಜಶೇಖರ ಪಾಟೀಲ ಹುಮ್ನಾಬಾದ್ ನೇತೃತ್ವದಲ್ಲಿ ಕೆಲವರು ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ದೂರು ನೀಡಿದ್ದಾರೆ. ಸಚಿವ ಈಶ್ವರ ಖಂಡ್ರೆ ಅವರ ನಡವಳಿಕೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. 'ಗೊಂದಲವನ್ನು ಸರಿಪಡಿಸುತ್ತೇವೆ. ಸಣ್ಣಪುಟ್ಟ ವಿಚಾರಗಳನ್ನು ಮಾಧ್ಯಮಗಳ ಮುಂದೆ ಮಾತನಾಡಬೇಡಿ' ಎಂದು ಸುರ್ಜೇವಾಲಾ ಅವರ ಎಚ್ಚರಿಕೆ ನೀಡಿದ್ದಾರೆ ಎಂದೂ ಗೊತ್ತಾಗಿದೆ.

### ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯೂಸೆಕ್‌ಗಳಲ್ಲಿ) | ಹೊರಹರಿವು (ಕ್ಯೂಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್ * | 124.80 | 122.25 | 24,903 | 23,154 |
| ಹಾರಂಗಿ | 2,859 | 2,853.25 | 7,369 | 5,000 |
| ಕಬಿನಿ | 2,284.00 | 2,280 | 13,044 | 9,375 |
| ಹೇಮಾವತಿ | 2,922 | 2,919.81 | 17,540 | 15,325 |
| ಲಿಂಗನಮಕ್ಕಿ | 1,819 | 1,793.65 | 31,684 | 2,877 |
| ಸೂಪಾ (ಮೀ) | 564 | 542.28 | 26,213.2 | 4,280.37 |
| ಮಾಣಿ | 595 | 585.50 | 3,934 | 0 |
| ತುಂಗಭದ್ರಾ | 1,633 | 1,625.07 | 54,550 | 61,645 |
| ಮಲಪ್ರಭಾ | 2,079.5 | 2,066.65 | 9,653 | 194 |
| ಘಟಪ್ರಭಾ | 2175 | 2,161 | 21,022 | 1,464 |
| ಭದ್ರಾ * | 186 | 170.9 | 20,626 | 5,198 |
| ಆಲಮಟ್ಟಿ (ಮೀ) | 519.6 | 517.31 | 1,10,612 | 1,15,045 |
| ನಾರಾಯಣಪುರ (ಮೀ) | 492.25 | 490.80 | 1,15,000 | 1,12,577 |

* ನೆಲಮಟ್ಟದಿಂದ

ಪಾಲಕ್ ಸೊಪ್ಪಿನಲ್ಲಿ ಫೋಲಿಕ್ ಆ್ಯಸಿಡ್, ಕ್ಯಾಲ್ಸಿಯಂ, ವಿಟಮಿನ್‌ಗಳಲ್ಲದೆ ನಾರಿನ ಅಂಶವೂ ಇದೆ. ದೇಹದಲ್ಲಿ ರಕ್ತದ ಹರಿವು ಸರಾಗವಾಗಿ ಆಗಲು ಇವು ಸಹಾಯಕ. ನಿಮ್ಮ ಆಹಾರ ಪದ್ಧತಿಯಲ್ಲಿ ಪಾಲಕ್ ಸೊಪ್ಪು ಇರಲಿ.



# ನೇತ್ರರಕ್ಷಣೆಯ ಕಡೆಗೆ ನಿಮ್ಮ ನೋಟ ಇರಲಿ

ಆಯುರ್ವೇದ ಸಂಹಿತೆಗಳ ಪ್ರಕಾರ ಕಣ್ಣು ಅತಿ ಪ್ರಧಾನ ಅಂಗ. ಅದರ ಸಂರಕ್ಷಣೆಗೆ ಸುಲಭ ಸರಳ ಉಪಾಯಗಳ ಬಗ್ಗೆ ಸುಶ್ರುತಸಂಹಿತೆ ಅನೇಕ ಉಪಾಯಗಳನ್ನು ಬಣ್ಣಿಸುತ್ತದೆ.



• ಡಾ. ಸತ್ಯನಾರಾಯಣ ಭಟ್ ಪಿ.

ಕ್ಯಾಮೆರಾವನ್ನು ಕಂಡಿದ್ದೀರಲ್ಲವೆ? ಬಹುತೇಕ ಕಣ್ಣಿನ ಹೋಲಿಕೆಗೆ ಇದು ಸರಳ ವಸ್ತು. ಪುಟ್ಟ ಮಗುವಾಗಿ ನಾವು ಕಣ್ಣುತೆರೆದಾಗ ನಮ್ಮ ಕ್ಯಾಮೆರಾ ಚಾಲೂ. ಕೊನೆಗೆ ನಾವು ಕಣ್ಮುಚ್ಚುವಾಗ ಈ ವ್ಯಾಪಾರ ಬಂದ್. ವಸ್ತು ಸ್ಥಿರ, ಚಲನಾಶೀಲ, ಪ್ರಖರ, ರಂಗು ರಂಗಿನದ್ದಿರಲಿ. ಇದು ನಿರಂತರ ಕೆಲಸ ಮಾಡುತ್ತಲೇ ಇರುತ್ತದೆ. ಕಂಡ ಪ್ರತಿ ಚಿತ್ರದ ಸಂಗ್ರಹಕ್ಕಿದೆ ಮಿದುಳೆಂಬ ಆಲ್ಬಂ. ನಾವು ಕಂಡ ಇತರವಸ್ತುಗಳನ್ನು ಕಂಡು ಅನುಭವಿಸಲಾಗದು. ಅಬ್ಬ! ಅದೆಂತಹ ದೈವಕೃತ ಕ್ಯಾಮೆರಾ, ಈ ಕಣ್ಣುಗಳು ಅಲ್ಲವೆ? ಕಣ್ಣಿನ ಆರೋಗ್ಯರಕ್ಷಣೆಯ ಬಗ್ಗೆ ಕೆಲವೊಂದು ಮಾಹಿತಿಗಳನ್ನು ತಿಳಿಯೋಣ:

- ಪೌಷ್ಟಿಕ ಆಹಾರದ ಕೊರತೆಯಿಂದ ಕಣ್ಣಿಗೆ ತೊಂದರೆ ಖಂಡಿತ. ಗರ್ಭಿಣಿಗಳಂತೂ ಹೇರಳ ಅನ್ನಾಂಗ ಭರಿತ ಸತ್ವಯುತ ಆಹಾರ ಸೇವಿಸುವುದು ಅನಿವಾರ್ಯ. ಅಪ್ಪ–ಅಮ್ಮನ ಕುಡಿತದ ಚಟದಿಂದ ಜೀವನಪೂರ್ತಿ ಮಕ್ಕಳು ತೊಂದರೆ ಅನುಭವಿಸಬೇಕಾಗುತ್ತದೆ. ಇದನ್ನು 'ಮಾತಾಪಿತೃ ಅಪಚಾರಜನ್ಯ ವ್ಯಾಧಿ' ಎನ್ನುತ್ತದೆ, ಆಯುರ್ವೇದ. ತಂದೆ–ತಾಯಿಯ ತಂಬಾಕು ಚಟ, ಮೂಗಿಗೆ ಸೇದುವ ತಂಬಾಕು ಪುಡಿ ನಸ್ಯ ಕೂಡ ಕಣ್ಣಿನ ತೊಂದರೆಗಳಿಗೆ ಕಾರಣವಾಗಬಲ್ಲವು.
- ಸಿರಿತನದ ಹಲವು ಕಾಯಿಲೆಗಳಿವೆ. ಇವನ್ನು ಆಯುರ್ವೇದದ ಪರಿಭಾಷೆಯಲ್ಲಿ 'ಸಂತರ್ಪಣಜನ್ಯ ವಿಕಾರ' ಎನ್ನುವರು. ಮಿತಿ ಮೀರಿದ ಬೊಜ್ಜುತನ, ಮಧುಮೇಹ, ರಕ್ತದ ಏರೊತ್ತಡದಂತಹ ಕಾಯಿಲೆಗಳಿಗೂ ನೇತ್ರರೋಗಗಳಿಗೂ ಗಾಢ ಸಂಬಂಧವಿದೆ. ನೇತ್ರಗೋಲದ ಹಿರಿ ಕಿರಿ ರಕ್ತನಾಳಗಳಲ್ಲಿ ರಕ್ತದ ಹರಿವಿಗೆ ಅಡ್ಡಿ ಆತಂಕಗಳಿಂದಾಗಿ ಹೊಸ ಪೀಳಿಗೆ ಸವಾಲುಗಳನ್ನು ಎದುರಿಸಬೇಕಿದೆ.
- ಪ್ರತಿಕೂಲ ಹವಾಮಾನ ಮತ್ತು ಕಣ್ಣಿನ ಆರೋಗ್ಯಕ್ಕೆ ಸಂಬಂಧ ಇದೆ. ದೂಳು, ಹೊಗೆ, ತುಂಬಾ ಉಷ್ಣತೆಗೆ ಒಡ್ಡಿಕೊಳ್ಳುವುದು ಸಹ ದೃಷ್ಟಿಯ ಅರೋಗ್ಯದಲ್ಲಿ ಏರುಪೇರು ಉಂಟಾಗಬಹುದು. ರೇಡಿಯೇಷನ್ ಅಥವಾ ಪ್ರಖರ ಬಿಸಿಲ ಝಳದಿಂದ ಕಣ್ಣುಗಳನ್ನು ಸಂರಕ್ಷಿಸಿಕೊಳ್ಳುವುದು ಅತ್ಯಗತ್ಯ. ಗ್ರಹಣದ ಸಂದರ್ಭದಲ್ಲಿ ಇದು ಹೆಚ್ಚು ಸ್ಪಷ್ಟ; ಬರಿಗಣ್ಣಿನಿಂದ ಗ್ರಹಣವನ್ನು ವೀಕ್ಷಿಸುವುದರಿಂದ ಅಪಾಯವಿದೆ.
- ಕೆಂಗಣ್ಣು ಎಂಬ ಸಾಂಕ್ರಾಮಿಕ ನೇತ್ರರೋಗವೂ ಕೆಲಸದ ಪರಿಸರ ಮತ್ತು ಸಾಂಕ್ರಾಮಿಕ ಬೇನೆಯ ರೂಪದಲ್ಲಿ ಕಾಡುವ ಭಯವಿದೆ. ಚಿನ್ನ–ಬೆಳ್ಳಿಯ ಕೆಲಸಗಾರರಂಥವರು ಅಮ್ಲವಸ್ತುಗಳಿಗೆ ಒಡ್ಡಿಕೊಳ್ಳುವುದು ಸಹಜ. ಔಷಧ ತಯಾರಿಕೆ ಕಂಪೆನಿ, ಪ್ಲಾಸ್ಟಿಕ್ ಇತ್ಯಾದಿ ಕೃತಕ ವಸ್ತು ತಯಾರಿಕೆ ಕಾರ್ಖಾನೆಯ ಪರಿಸರಕ್ಕೆ ಸತತ ಒಡ್ಡಿಕೊಳ್ಳುವಿಕೆ ಕೂಡ ಕಣ್ಣಿನ ಆರೋಗ್ಯಕ್ಕೆ ಮಾರಕ. ಕಬ್ಬಿಣವನ್ನು ಕತ್ತರಿಸುವ ಮತ್ತು ಬೆಸೆಯುವ ವೆಲ್ಡಿಂಗ್ ಕಾರ್ಮಿಕರ ಕಸುಬಿಗೆ ಪ್ರಖರ ಬೆಳಕು ಅನಿವಾರ್ಯ. ಇವರು ಸಹ ಎಚ್ಚರದಿಂದ ಕೆಲಸವನ್ನು ನಿರ್ವಹಿಸಬೇಕು. ಬಾಲಕಾರ್ಮಿಕರು ಖಂಡಿತ ಇಂತಹ ದುಡಿಮೆಗೆ ಪ್ರವೃತ್ತರಾಗಕೂಡದು.
- ಇಂದಿನ ದಿನಮಾನದ ಹೊಸ ಸಮಸ್ಯೆ ಮೊಬೈಲ್, ಟ್ಯಾಬ್, ಲ್ಯಾಪ್ಟಾಪ್ ಮತ್ತು ಕಂಪ್ಯೂಟರ್ ಕೆಲಸದ ರೇಡಿಯೇಷನ್. ದಿನದಿನವೂ ಕನ್ನಡಕಧಾರಿಗಳ ಸಂಖ್ಯೆ ಏರುಮುಖವಾಗುತ್ತಿದೆ.
- ಕೊರೋನೋತ್ತರ ದಿನಗಳಲ್ಲಿ 'ಆನ್‌ಲೈನ್ ತರಗತಿ' ಎಂಬ ಬೆಳವಣಿಗೆಯಂತೂ ಕಣ್ಣಿನ ಹೊಸ ಹೊಸ ಸಮಸ್ಯೆಗಳಿಗೆ ಕಾರಣೀಭೂತ. ಹಗಲಿರುಳು ದುಡಿಮೆಯ ಪಾಳಿಯ ಸಾಫ್ಟ್‌ವೇರ್ ಉದ್ಯೋಗಿಗಳಿಗೆ ದೇಹದ ಆರೋಗ್ಯವೇ ದೊಡ್ಡ ಸವಾಲಾಗುತ್ತಿದೆ.

## ಎಚ್ಚರಿಕೆಗಳು

- ಪುಸ್ತಕಗಳನ್ನು ಓದುವಿರಾ. ಮುಂದಿನ ಅಕ್ಷರ ತನಕ ಗಮನವಿಟ್ಟು ಓದಿರಿ. ಹಿಂಬದಿ ಬೆಳಕಿಗೆ ಆಸ್ಪದವಿರಲಿ.
- ಸದಾ ಕಾಲ ಸಾರ್ವದೈಹಿಕ ಆರೋಗ್ಯವನ್ನು ನಿಮ್ಮದಾಗಿಸಿಕೊಳ್ಳಿರಿ.
- ಕೇವಲ ನೋಡುವ ಕೆಲಸ ಕಣ್ಣಿನದು. ಅನುಭವ ಪ್ರಕಾರ ಕಂಡದ್ದು ಯಾವುದು ಎಂದು ಗುರುತಿಸುವುದು ಮನಸ್ಸು ಎಂಬುದು ನೆನಪಿಡಿ. ಮಾನಸಿಕ ಸ್ವಾಸ್ಥ್ಯ ಚೆನ್ನಾಗಿದ್ದರೆ ದೈಹಿಕ ಆರೋಗ್ಯವೂ ಸೈ.
- ಉದಯಾಸ್ತದ ಕೆಂಪು ಗೋಲದ ಸೂರ್ಯ ದರ್ಶನಕ್ಕೆ ಸುಶ್ರುತನ ಪ್ರಕಾರ ನಿಷೇಧ ಇದೆ.
- ಕಣ್ಣಿನ ವ್ಯಾಯಾಮಕ್ಕೆ ಪಾಣಿತಲಸ್ಪರ್ಶದ ವಿಶೇಷ ವಿಧಾನವಿದೆ. ಕುಳಿತಂತೆ ವಿಶ್ರಾಂತ ಭಂಗಿಯಿರಲಿ. ಅಂಗೈ ಉಜ್ಜುತ್ತಾ ಕಣ್ಣಿನ ಮೇಲಿರಿಸಿ. ಎರಡೂ ಕಣ್ಣುಗಳನ್ನು ಮುಚ್ಚಿ, ಅವುಗಳನ್ನು ಉಜ್ಜಿದ ಕೈಗಳಿಂದ ಮುಟ್ಟುವ ಸುಕೋಮಲ ಸ್ಪರ್ಶವೇ ಇದು. ನಿದ್ರಿಸಿದಾಗ ದೊರೆಯುವ ಉಪಚಾರಕ್ಕಿಂತ ಇದು ಮಿಗಿಲು.
- ನುಗ್ಗೆ, ಚಕ್ಕೋತ, ಹರಿವೆ, ಅಣ್ಣೆಸೊಪ್ಪು ಮತ್ತು ಪುನರ್ಕವಿ ಸೊಪ್ಪು ಬಳಸಿದರೆ ನೇತ್ರಾರೋಗ್ಯ ಖಂಡಿತ.

# ತುರಿಕೆ ಎಂದು ಮೈ ಪರಚಿಕೊಳ್ಳದಿರಿ!

• ಡಾ. ಬಿ. ಆರ್. ಸುಹಾಸ್

ಚರ್ಮದಲ್ಲಿ ಕಾಣಿಸಿಕೊಳ್ಳುವ ಮುಖ್ಯ ಸಮಸ್ಯೆಗಳಲ್ಲಿ ಒಂದು ತುರಿಕೆ. ಸಾಮಾನ್ಯ ಅಲರ್ಜಿಯಿಂದ ಹಿಡಿದು ರೋಗನಿರೋಧಶಕ್ತಿಯ ಕುಂಠಿತದ ತನಕ ಹಲವು ಕಾರಣಗಳು ತುರಿಕೆಗೆ ಕಾರಣವಾಗಬಲ್ಲವು...

ಭಾಗ 1

**ರೋಗಿಗಳು** ವೈದ್ಯರ ಬಳಿ ಹೋಗುವುದು ಏನಾದರೂ ತೊಂದರೆಯಾದಾಗಲೇ ಅಲ್ಲವೆ? ಸಾಮಾನ್ಯವಾಗಿ ದೈಹಿಕ ಕಾಯಿಲೆಗಳು ಅಥವಾ ಸಮಸ್ಯೆಗಳಲ್ಲಿ ಮುಖ್ಯವಾದ ತೊಂದರೆಯೆಂದರೆ ನೋವು. ಈ ನೋವಿನ ಪರಿಹಾರಕ್ಕಾಗಿಯೇ ರೋಗಿಗಳು ವೈದ್ಯರ ಬಳಿಗೆ ಹೋಗುತ್ತಾರೆ. ಹಾಗೆಯೇ ಚರ್ಮದ ವಿಷಯಕ್ಕೆ ಬಂದರೆ, ಚರ್ಮರೋಗಗಳು ಮತ್ತು ಸಮಸ್ಯೆಗಳಲ್ಲಿ ಮುಖ್ಯವಾದ ತೊಂದರೆ ಅಥವಾ ಲಕ್ಷಣವೆಂದರೆ ನವೆ ಅಥವಾ ತುರಿಕೆ. ನಾವು ಕೆರೆದುಕೊಳ್ಳುವಂತೆ ಪ್ರೇರೇಪಿಸುವ ಸಂವೇದನೆಯೇ ತುರಿಕೆ. ಈ ತುರಿಕೆ ಒಂದು ಸರಳವಾದ ಸಮಸ್ಯೆಯೆನಿಸಿದರೂ ಇದರ ದುಷ್ಪರಿಣಾಮಗಳು ಬಹಳ. ಸಾಮಾಜಿಕವಾಗಿ ಎಲ್ಲರೊಂದಿಗೆ ಬೆರೆಯುವುದಕ್ಕೆ ಕಷ್ಟವಾಗುವುದು, ನಿದ್ರೆಗೆ ತೊಂದರೆಯಾಗುವುದು, ಏಕಾಗ್ರತೆಗೆ ಭಂಗವಾಗುವುದು, ಕೆರೆಯುವುದರಿಂದ ಗಾಯಗಳಾಗಿ ಸೋಂಕು, ವ್ರಣಗಳಾಗುವುದು, ಕೊನೆಗೆ ದೀರ್ಘಾವಧಿ ತುರಿಕೆಯಾದರೆ ದುಃಖ, ಖಿನ್ನತೆಗಳೂ ಆಗಬಹುದು. ಹೀಗಾಗಿ ಈ ತುರಿಕೆಯನ್ನು ಬೇಗನೆ ಪರಿಹರಿಸಿಕೊಳ್ಳುವುದು ಅತ್ಯಗತ್ಯ. ಈಗ ಚರ್ಮದ ತುರಿಕೆಗೆ ಕೆಲವು ಸಾಮಾನ್ಯ ಕಾರಣಗಳು ಮತ್ತು ಪರಿಹಾರಗಳನ್ನು ನೋಡೋಣ.

## ಕೀಟಗಳ ಕಚ್ಚುವಿಕೆ

ತುರಿಕೆಗೆ ಬಹಳ ಸಾಮಾನ್ಯವಾದ ಕಾರಣ ಸೊಳ್ಳೆ ಮೊದಲಾದ ಕೀಟಗಳ ಕಚ್ಚುವಿಕೆಯೇ ಎನ್ನಬಹುದು. ಆದರೆ ಎಷ್ಟೋ ಬಾರಿ ಜನರು ಇದನ್ನು ಸುಲಭವಾಗಿ ಒಪ್ಪುವುದಿಲ್ಲ. ಕೆರೆತ ಹಾಗೂ ಕೆರೆತದಿಂದಾಗಿರುವ ಗಾಯಗಳು ಅಥವಾ ಗುಳ್ಳೆಗಳು ಬಟ್ಟೆ ಮುಚ್ಚಿರದ ತೆರೆದ ಪ್ರದೇಶಗಳು, ಅಂದರೆ ಕೈಗಳು, ಮುಖ, ಕುತ್ತಿಗೆ, ಕಾಲುಗಳು – ಇಂಥ ಕಡೆಗಳಲ್ಲಾಗಿದ್ದರೆ ಹಾಗೂ ದೂರ ದೂರ ಆಗಿದ್ದರೆ ಅದು ಕೀಟಗಳ ಕಚ್ಚುವಿಕೆ ಎಂದು ದೃಢಪಡಿಸಬಹುದು. ಸಮಸ್ಯೆ ಆರಂಭವಾದ ಸ್ವಲ್ಪ ಪೂರ್ವದಲ್ಲಿ ಉದ್ಯಾನವನ, ಅರಣ್ಯ ಪ್ರದೇಶ, ಮೊದಲಾದ ಕೀಟಗಳು ಹೆಚ್ಚಾಗಿರುವ ಪ್ರದೇಶಗಳಿಗೆ ಭೇಟಿಯಿತ್ತಿರುವವರಿಗೆ ಇದರ ಸಾಧ್ಯತೆ ಹೆಚ್ಚು. ಒಣಚರ್ಮ ಮತ್ತು ಸೂಕ್ಷ್ಮತೆಯಿರುವವರಿಗೆ ತುರಿಕೆ ಹೆಚ್ಚಾಗಿ ಹೆಚ್ಚು ದಿನಗಳೂ ಮುಂದುವರೆಯುತ್ತದೆ. ಒಂದು ಪ್ರದೇಶದಲ್ಲಿ ಸೊಳ್ಳೆಗಳ ಪ್ರಭೇದಗಳಿಗೆ ಒಗ್ಗಿರುವವರು ಬೇರೆ ಪ್ರದೇಶ ಅಥವಾ ಊರಿಗೆ ಹೋದರೆ, ಅಲ್ಲಿನ ಸೊಳ್ಳೆಗಳ ಪ್ರಭೇದಗಳ ಕಚ್ಚುವಿಕೆಗೆ ತೀವ್ರವಾಗಿ ಪ್ರತಿಕ್ರಿಯಿಸುತ್ತಾರೆ; ಆಗಲೂ ಈ ಸಮಸ್ಯೆ ಉಂಟಾಗುತ್ತದೆ.

## ಕಜ್ಜಿ

ಕಜ್ಜಿ ಅಥವಾ 'ಸ್ಕೇಬೀಸ್' ಬಹಳ ಸಾಮಾನ್ಯವಾದ ಒಂದು ಚರ್ಮರೋಗ. ಹೆಚ್ಚಾಗಿ ಮಕ್ಕಳಲ್ಲಿ ಮತ್ತು ಅತಿ ಸನಿಹದ ಗುಂಪುವಾಸ ಮಾಡುವವರಲ್ಲಿ ಕಂಡುಬರುವ, ಅಂಟುರೋಗವಾದ ಇದು 'ಸಾರ್ಕೋಪ್ಟೆಸ್ ಸ್ಕೇಬೀ' ಎಂಬ ಪರಾವಲಂಬಿ ಕೀಟದಿಂದ ಬರುತ್ತದೆ. ಬೆರಳುಸಂದುಗಳು, ಮೊಣಕೈ, ಕಂಕುಳು, ಹೊಕ್ಕಳು, ತೊಡೆಗಳು, ಗುಪ್ತಾಂಗಗಳಲ್ಲಿ ಚಿಕ್ಕ ಚಿಕ್ಕ ಗುಳ್ಳೆಗಳಾಗಿ ವಿಪರೀತವಾಗಿ, ಅದರಲ್ಲೂ ರಾತ್ರಿ ಹೆಚ್ಚು ತುರಿಸುತ್ತದೆ.

## ಫಂಗಸ್ ರೋಗಗಳು

ಫಂಗಸ್ ರೋಗಗಳು ಸಾಮಾನ್ಯವಾಗಿ ಉಂಟಾಗುವ, ಒಬ್ಬರಿಂದೊಬ್ಬರಿಗೆ ಹರಡುವ ರೋಗಗಳು. ಗಜಕರ್ಣ, ಹುಳುಕಡ್ಡಿ ಎಂದೆಲ್ಲಾ ಕರೆಯಲಾಗುವ ಇವನ್ನು ಆಂಗ್ಲಭಾಷೆಯಲ್ಲಿ 'ಟೀನಿಯ'ಗಳೆಂದು ಕರೆಯುತ್ತಾರೆ. ತೊಡೆಸಂದಿಯಲ್ಲಾದರೆ ಟೀನಿಯ ಕ್ರೂರಿಸ್ (Tinea cruris), ದೇಹದ ಮೇಲಾದರೆ ಟೀನಿಯ ಕಾರ್ಪೋರಿಸ್ (Tinea corporis) – ಹೀಗೆ ದೇಹದ ವಿವಿಧ ಭಾಗಗಳಿಗೆ ತಕ್ಕಂತೆ ಕರೆಯಲಾಗುತ್ತದೆ. 'ಫಂಗಸ್' ಅಥವಾ ಶಿಲೀಂಧ್ರಗಳೆಂಬ ಸೂಕ್ಷ್ಮಜೀವಿಗಳಿಂದ ಉಂಟಾಗುವ ಇವುಗಳಲ್ಲಿ ಕೆಂಪಾದ, ಅಂಚಿನಲ್ಲಿ ಪದರಗಳಿರುವ ಮಚ್ಚೆಗಳಾಗಿ ಬಹಳ ತುರಿಸುತ್ತವೆ. ಒದ್ದೆ ವಾತಾವರಣ, ಅಶುಚಿತ್ವ – ಈ ಸಮಸ್ಯೆಗಳಿಗೆ ಮೂಲ ಕಾರಣ ಎನ್ನಬಹುದು. ನಮ್ಮ ದೇಹದಲ್ಲೇ ಇರುವ 'ಕ್ಯಾಂಡಿಡಾ' ಎಂಬ ಫಂಗಸ್‌ನಿಂದ ಗುಪ್ತಾಂಗಗಳಲ್ಲಿ ಕೆಂಪು ಮಚ್ಚೆಗಳು ಮತ್ತು ತುರಿಕೆಗಳಾಗುವ 'ಕ್ಯಾಂಡಿಡಿಯಾಸಿಸ್' ರೋಗವಾಗಬಹುದು. ಅಶುಚಿತ್ವ ಮತ್ತು ಒದ್ದೆಯ ವಾತಾವರಣಗಳಿಂದ ಈ ಫಂಗಸ್ ಹೆಚ್ಚಿ ಸಮಸ್ಯೆ ಉಂಟಾಗುತ್ತದೆ.

## ಅರ್ಟಿಕೇರಿಯ

ತುರಿಸುವ, ಅಲ್ಪ ಕಾಲಾವಧಿಯವರೆಗೂ ಇದ್ದು ಮತ್ತೆ ಮತ್ತೆ ಬರುವ ಕೆಂಪು ಗಂಧೆಗಳಿಗೆ 'ಅರ್ಟಿಕೇರಿಯ' ಎನ್ನುತ್ತಾರೆ. ಇದು ಅಲರ್ಜಿ ಅಥವಾ ಒಗ್ಗದಿರುವಿಕೆಯಿಂದ ಆಗುತ್ತದೆ. ಅಂದರೆ, ಕೆಲವು ಪದಾರ್ಥಗಳಿಗೆ ದೇಹವು ಒಗ್ಗದೇ, 'IgE' ಎಂಬ ಆ್ಯಂಟಿಬಾಡಿಗಳು ಅಥವಾ ರೋಗನಿರೋಧಕ ಅಂಶಗಳು ಹೆಚ್ಚಾಗಿ ಉತ್ಪತ್ತಿಯಾಗಿ ಅವುಗಳ ಪ್ರಚೋದನೆಯಿಂದ 'ಮಾಸ್ಟ್ ಸೆಲ್' ಮತ್ತು 'ಬೇಸೋಫಿಲ್'ಗಳೆಂಬ ಕೋಶಗಳಿಂದ 'ಹಿಸ್ಟಮಿನ್' ಎಂಬ ರಾಸಾಯನಿಕ ಬಿಡುಗಡೆಯಾಗಿ, ದೇಹದಲ್ಲಿ ರಕ್ತಸಂಚಾರ ಹೆಚ್ಚುವುದು. ಆಗ ನರಗಳ ಪ್ರಚೋದನೆಯಾಗಿ ಕೆಂಪು ಗಂಧೆಗಳು ಎದ್ದು ತುರಿಕೆಯಾಗುತ್ತದೆ. ಆಹಾರ ಪದಾರ್ಥಗಳು, ಔಷಧಗಳು, ಹೂವುಗಳ ಪರಾಗ, ಕರುಳಿನಲ್ಲಿರುವ ಜಂತುಹುಳುಗಳು, ದೈಹಿಕ ಸೋಂಕುಗಳಿಗೆ ಕಾರಣವಾಗುವ ರೋಗಾಣುಗಳು, ಕೀಟಗಳ ಕಚ್ಚುವಿಕೆ, ಕೂದಲಿಗೆ ಬಳಸುವ ಹೇರ್ ಡೈ ಮೊದಲಾದ ಸ್ಪರ್ಶದ ವಸ್ತುಗಳು, ಮುಂತಾದವುಗಳಿಂದ ಅಲರ್ಜಿಯಾಗಬಹುದು. ಅಂತೆಯೇ ಬಿಸಿಲು, ಚಳಿಯಂಥ ಭೌತಿಕ ಅಂಶಗಳಿಂದಲೂ ಅರ್ಟಿಕೇರಿಯ ಆಗಬಹುದು.

## ಔಷಧಗಳ ಅಲರ್ಜಿ

ಕೆಲವು ಔಷಧಗಳ ಸೇವನೆಯಿಂದ ಕೆಲವರಿಗೆ ಅಲರ್ಜಿಯಾಗಿ ಕೆಂಪಾದ ಸಣ್ಣ ಗುಳ್ಳೆಗಳು ಮತ್ತು ನವೆಯುಂಟಾಗುತ್ತವೆ. ಇದು ಅರ್ಟಿಕೇರಿಯ ಅಲ್ಲದೇ ಬೇರೆ ರೀತಿ ಕಾಣಿಸಿಕೊಳ್ಳುವ 'ಔಷಧ ಅಲರ್ಜಿ'.

## ಎಟೋಪಿಕ್ ಡರ್ಮಟೈಟಿಸ್

ಇದೊಂದು ಸಾಮಾನ್ಯ ತೊಂದರೆ. ಚರ್ಮದ ಸೂಕ್ಷ್ಮತೆಯಿಂದ ಇದು ಉಂಟಾಗುತ್ತದೆ. ಎರಡು ವರ್ಷದೊಳಗಿನ ಮಕ್ಕಳಲ್ಲಿ ಮುಖ ಮತ್ತು ಕೈಕಾಲುಗಳಲ್ಲಿ ಕೆಂಪು ಮಚ್ಚೆಗಳಾದರೆ, ಅನಂತರದ ವಯೋಮಾನದ ಮಕ್ಕಳಿಗೆ ಹಾಗೂ ಯುವಕರಲ್ಲಿ ತೋಳಿನ ಮತ್ತು ಕಾಲಿನ ಹಳ್ಳಗಳಲ್ಲಿ ಗಟ್ಟಿಯಾದ ತುರಿಸುವ ಮಚ್ಚೆಗಳಾಗುತ್ತವೆ. ವಯಸ್ಕರಾದಂತೆ ಇದು ನಿಧಾನವಾಗಿ ಕಡಿಮೆಯಾಗುತ್ತದೆ. ಕೆಲವೊಮ್ಮೆ ಯಾವುದೇ ಮಚ್ಚೆಗಳಿರದೇ ಬರಿದೇ ತುರಿಕೆಯಾಗುತ್ತದೆ. ಚಳಿ, ದೂಳು, ಒಣಚರ್ಮ, ಪುಷ್ಪಗಳ ಪರಾಗ ಮತ್ತು ಕೆಲವು ಆಹಾರ ಪದಾರ್ಥಗಳು ಇದನ್ನು ಉದ್ರೇಕಿಸುತ್ತದೆ.

(ಮುಂದುವರಿಯಲಿದೆ)



# ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಗಣಿತ

## ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

### ರೇಖಾತ್ಮಕ ಸಮೀಕರಣಗಳ ಜೋಡಿಯನ್ನು ಬಿಡಿಸುವ ಬೀಜಗಣಿತೀಯ ವಿಧಾನಗಳು

**2) ಕೆಳಗಿನ ಸಮೀಕರಣಗಳ ಜೋಡಿಯನ್ನು ಆದೇಶ ವಿಧಾನದ ಮೂಲಕ ಬಿಡಿಸಿರಿ.**

$$7x - 15y = 2 \ldots\ldots\ldots\ (1)$$
$$x + 2y = 3 \ldots\ldots\ldots\ldots\ (2)$$

ಪರಿಹಾರ: (..........ಹಿಂದಿನ ಸಂಚಿಕೆಯಿಂದ)

**ಹಂತ 3:** y ಯ ಈ ಬೆಲೆಯನ್ನು ಸಮೀಕರಣ (3) ರಲ್ಲಿ ಆದೇಶಿಸಿದಾಗ,

$$x = 3 - 2\left(\frac{19}{29}\right) = \frac{49}{29}$$

ಆದ್ದರಿಂದ, ಪರಿಹಾರವೆಂದರೆ, $x = \frac{49}{29}$, $y = \frac{19}{29}$

**2. ಅಫ್ತಾಬ್ ತಮ್ಮ ಮಗಳಲ್ಲಿ ಹೇಳುತ್ತಾರೆ, "ಏಳು ವರ್ಷಗಳ ಹಿಂದೆ, ಆಗಿನ ನಿನ್ನ ವಯಸ್ಸಿಗಿಂತ ನನ್ನ ವಯಸ್ಸು ಏಳು ಪಟ್ಟು ಹೆಚ್ಚಾಗಿತ್ತು. ಇನ್ನು ಮೂರು ವರ್ಷಗಳ ಬಳಿಕ ಕೂಡಾ ಆವತ್ತಿನ ನಿನ್ನ ವಯಸ್ಸಿಗಿಂತ ನನ್ನ ವಯಸ್ಸು ಮೂರು ಪಟ್ಟು ಹೆಚ್ಚಾಗುತ್ತದೆ'**

**ಪರಿಹಾರ:–** ಅಫ್ತಾಬ್ ಮತ್ತು ಅವಳ ಮಗಳ ವಯಸ್ಸು(ವರ್ಷಗಳಲ್ಲಿ) ಕ್ರಮವಾಗಿ S ಮತ್ತು t ಎಂದಿರಲಿ, ಆಗ, ಈ ಸಂದರ್ಭವನ್ನು ಪ್ರತಿನಿಧಿಸುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

$s - 7 = 7(t - 7)$, ಅಂದರೆ, $s - 7t + 42 = 0$ (1)

ಮತ್ತು $s + 3 = 3(t + 3)$, ಅಂದರೆ, $s - 3t = 6$ (2)

ಸಮೀಕರಣ(2)ನ್ನು ಉಪಯೋಗಿಸಿದಾಗ $S = 3t + 6$

Sನ ಈ ಬೆಲೆಯನ್ನು ಸಮೀಕರಣ(1)ರಲ್ಲಿ ಆದೇಶಿಸಿದಾಗ

$$(3t + 6) - 7t + 42 = 0$$
$$4t = 48,$$

ಅಂದರೆ $t = 12$

t ಯ ಈ ಬೆಲೆಯನ್ನು ಸಮೀಕರಣ (2)ರಲ್ಲಿ ಆದೇಶಿಸಿದಾಗ ಆದ್ದರಿಂದ ಆಫ್ತಾಬ್ ಮತ್ತು ಮಗಳ ವಯಸ್ಸು ಕ್ರಮವಾಗಿ 42 ಮತ್ತು 12 ವರ್ಷಗಳಾಗಿವೆ.

**3) 2 ಪೆನ್ಸಿಲ್ ಮತ್ತು 3 ರಬ್ಬರ್‌ಗಳ ಬೆಲೆ ರೂ 9 ಮತ್ತು 4 ಪೆನ್ಸಿಲ್ ಮತ್ತು 6 ರಬ್ಬರ್‌ಗಳ ಬೆಲೆ ರೂ 18. ಪ್ರತಿಯೊಂದು ಪೆನ್ಸಿಲ್ ಮತ್ತು ಪ್ರತಿಯೊಂದು ರಬ್ಬರ್‌ನ ಬೆಲೆಯನ್ನು ಕಂಡುಹಿಡಿಯಿರಿ.**

**ಪರಿಹಾರ:–** ಉಂಟಾದಂತಹ ರೇಖಾತ್ಮಕ ಸಮೀಕರಣಗಳ ಜೋಡಿ ಎಂದರೆ

$2x + 3y = 9$ (1)

$4x + 6y = 18$ (2)

ನಾವು ಮೊದಲಿಗೆ $x$ ನ ಬೆಲೆಯನ್ನು yಗೆ ಅನುಸಾರವಾಗಿ ಸಮೀಕರಣ $2x + 3y = 9$ ರಲ್ಲಿ ವ್ಯಕ್ತಪಡಿಸಿದಾಗ

$$x = \frac{9 - 3y}{2} \quad (3)$$

ಈಗ ನಾವು $x$ನ ಬೆಲೆಯನ್ನು ಸಮೀಕರಣ(2)ರಲ್ಲಿ ಆದೇಶಿಸಿದರೆ

$$\frac{4(9 - 3y)}{2} + 6y = 18$$

ಅಂದರೆ, $18 - 6y + 6y = 18$

ಅಂದರೆ, $18 = 18$

yಯ ಎಲ್ಲಾ ಬೆಲೆಗಳಿಗೂ ಈ ಹೇಳಿಕೆ ನಿಜವಾಗಿದೆ, ಹಾಗಿದ್ದರೂ yಗೆ ಒಂದು ನಿರ್ದಿಷ್ಟವಾದ ಬೆಲೆ ಪರಿಹಾರವಾಗಿ ಸಿಗುವುದಿಲ್ಲ ಆದ್ದರಿಂದ $x$ ಗೆ ಒಂದು ನಿರ್ದಿಷ್ಟವಾದ ಬೆಲೆಯನ್ನು ಪಡೆಯಲು ಸಾಧ್ಯವಿಲ್ಲ. ದತ್ತ ಸಮೀಕರಣಗಳೆರಡೂ ಸಮಾನವಾಗಿರುವುದರಿಂದ ಈ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಸಮೀಕರಣ (1) ಮತ್ತು (2)ಕ್ಕೆ ಅಪರಿಮಿತ ಸಂಖ್ಯೆಯ ಪರಿಹಾರಗಳಿವೆ. ಒಂದು ಪೆನ್ಸಿಲ್ ಮತ್ತು ಒಂದು ರಬ್ಬರ್‌ನ ಅನನ್ಯ ಬೆಲೆಯನ್ನು ಕಂಡುಹಿಡಿಯಲು ಸಮಗೆ ಸಾಧ್ಯವಿಲ್ಲ ಯಾಕೆಂದರೆ ದತ್ತ ಸಂದರ್ಭಕ್ಕೆ ಹೊಂದಾಣಿಕೆಯಾಗುವ ಅನೇಕ ಸಾಮಾನ್ಯ ಪರಿಹಾರಗಳಿವೆ

### ಅಭ್ಯಾಸ 3.2

1. ಕೆಳಗಿನ ರೇಖಾತ್ಮಕ ಸಮೀಕರಣಗಳ ಜೋಡಿಗಳನ್ನು ಆದೇಶ ವಿಧಾನದಿಂದ ಬಿಡಿಸಿ

(i) $x + y = 14$, $x - y = 4$

(ii) $s - t = 3$, $\frac{s}{3} + \frac{t}{2} = 6$

(iii) $3x - y = 3$, $9x - 3y = 9$

(iv) $0.2x + 0.3y = 1.3$, $0.4x + 0.5y = 2.3$

(v) $\sqrt{2}x + \sqrt{3}y = 0$, $\sqrt{3}x - \sqrt{8}y = 0$

(vi) $\frac{3x}{2} - \frac{5y}{3} = -2$, $\frac{x}{3} + \frac{y}{2} = \frac{13}{6}$

ಪರಿಹಾರ:– $x + y = 14$ ಮತ್ತು $x - y = 4$ (ದತ್ತ)

ಸಮೀಕರಣ (1)ರಿಂದ

$$x = 14 - y$$

ಈಗ ಸಮೀಕರಣ (2)ರಲ್ಲಿ x ನ ಬೆಲೆಯನ್ನು ಹಾಕಿದಾಗ

$$(14 - y) - y = 4$$
$$14 - 2y = 4$$
$$2y = 10$$

ಅಥವಾ $y = 5$

y ನ ಬೆಲೆಯನ್ನು ಹಾಕಿದಾಗ

$$\because x = 14 - y$$
$$\therefore x = 14 - 5$$

ಅಥವಾ $x = 9$

ಹೀಗಾಗಿ

$x = 9$ ಮತ್ತು $y = 5$.

(ii)

$s - t = 3$

$\frac{s}{3} + \frac{t}{2} = 6$ (ದತ್ತ)

ಸಮೀಕರಣ (1)ರಿಂದ

$s = 3 + t$ ______________ (1)

ಈಗ ಸಮೀಕರಣ (2)ರಲ್ಲಿ S ನ ಬೆಲೆಯನ್ನು ಹಾಕಿದಾಗ

$$(3+t)/3 + (t/2) = 6$$
$$\Rightarrow (2(3+t) + 3t)/6 = 6$$
$$\Rightarrow (6+2t+3t)/6 = 6$$
$$\Rightarrow (6+5t) = 36$$
$$\Rightarrow 5t = 30$$
$$\Rightarrow t = 6$$

tನ ಬೆಲೆಯನ್ನು ಸಮೀಕರಣ (1)ರಲ್ಲಿ ಹಾಕಿದಾಗ

$$s = 3 + 6 = 9$$

ಆದ್ದರಿಂದ

$s = 9$ ಮತ್ತು $t = 6$.

(iii) $3x - y = 3$ ಮತ್ತು $9x - 3y = 9$ (ದತ್ತ)

ಸಮೀಕರಣ (1)ರಿಂದ

$$x = (3+y)/3$$

ಈಗ ಸಮೀಕರಣ (2)ರಲ್ಲಿ x ನ ಬೆಲೆಯನ್ನು ಹಾಕಿದಾಗ

$$9(3+y)/3 - 3y = 9$$
$$\Rightarrow 9 + 3y - 3y = 9 \Rightarrow 9 = 9$$

y ನ ಬೆಲೆಯನ್ನು ಹಾಕಿದಾಗ

(ಮುಂದುವರಿಯುವುದು)

# ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

MATHS

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

## *DETERMINANTS*

***Applications of Determinants***

a) To find the Area of the triangle:

Area of the triangle whose vertices are – $A(x_1, y_1), B(x_2, y_2), C(x_3, y_3)$

$$= \frac{1}{2}\begin{vmatrix} x_1 & y_1 & 1 \\ x_2 & y_2 & 1 \\ x_3 & y_3 & 1 \end{vmatrix}$$

$$= \frac{1}{2}(x_1y_2 - x_2y_1 + x_2y_3 - x_3y_2 + x_3y_1 - x_1y_3)$$

b) The three points $A(x_1, y_1), B(x_2, y_2), C(x_3, y_3)$ are collinear if and only if the area of the triangle is zero.

That is iff $\frac{1}{2}\begin{vmatrix} x_1 & y_1 & 1 \\ x_2 & y_2 & 1 \\ x_3 & y_3 & 1 \end{vmatrix} = 0$

***Problems:-***

**1. Using determinants, find the area of the triangle whose vertices are**

$(1, 4), (2, -3), (-5, -3)$

**Soln:-** Area of the triangle = absolute value of

$$\frac{1}{2}\begin{vmatrix} 1 & 4 & 1 \\ 2 & -3 & 1 \\ -5 & -3 & 1 \end{vmatrix}$$

$$= \frac{1}{2}|1(-3+3) - 4(2+5) + 1(-6-15)|$$
$$= \frac{1}{2}|1(0) - 4(7) + 1(-21)|$$
$$= \frac{1}{2}|0 - 28 - 21| = \frac{1}{2}|-49| = \frac{49}{2} \text{ sq.units}$$

**2. Using determinants, find the area of the triangle whose vertices are -**

$(1, -1), (2, 4), (-3, 5)$

**and also find whether the points are collinear.**

**Soln:-** Area of the triangle = absolute value of

$$\frac{1}{2}\begin{vmatrix} 1 & -1 & 1 \\ 2 & 4 & 1 \\ -3 & 5 & 1 \end{vmatrix}$$

$$= \frac{1}{2}|1(4-5) + 1(2+3) + 1(10+12)|$$
$$= \frac{1}{2}|-1+5+22| = \frac{1}{2}|26|$$
$$= 13 \text{ sq.units}$$

Since the area of the triangle is not equal to zero, the three given points are not collinear.

**3. Find the value of x, if the area of the triangle is 35 sq.units with vertices**

$(x, 4), (2, -6), (5, 4)$

Soln:– Absolute value of $\frac{1}{2}\begin{vmatrix} x & 4 & 1 \\ 2 & -6 & 1 \\ 5 & 4 & 1 \end{vmatrix} = 35$

$$R_1 - R_3 \rightarrow \frac{1}{2}\begin{vmatrix} x-5 & 0 & 0 \\ 2 & -6 & 1 \\ 5 & 4 & 1 \end{vmatrix} = 35$$

$$\Rightarrow 70 = |(x-5)(-6-4)|$$
$$= 10|(x-5)|$$
$$\Rightarrow |(x-5)| = \frac{70}{10} = 7$$
$$\Rightarrow x - 5 = 7 \text{ (or) } -7$$
$$\therefore x = 12, -2$$

**4. A Δle has its three sides equal to a, b & c. If the coordinates of its vertices are A $(x_1, y_1)$,**

$B(x_2, y_2)$ and $C(x_3, y_3)$, show that $\begin{vmatrix} x_1 & y_1 & 2 \\ x_2 & y_2 & 2 \\ x_3 & y_3 & 2 \end{vmatrix}^2$

$= (a+b+c)(b+c-a)(c+a-b)(a+b-c)$.

Soln:– Let Δ be the area of the triangle ABC.

$$\therefore \Delta = \frac{1}{2}\begin{vmatrix} x_1 & y_1 & 1 \\ x_2 & y_2 & 1 \\ x_3 & y_3 & 1 \end{vmatrix} \ldots\ldots\ldots (1)$$

$$\text{L.H.S.} = \begin{vmatrix} x_1 & y_1 & 2 \\ x_2 & y_2 & 2 \\ x_3 & y_3 & 2 \end{vmatrix}^2 = \left(2\begin{vmatrix} x_1 & y_1 & 1 \\ x_2 & y_2 & 1 \\ x_3 & y_3 & 1 \end{vmatrix}\right)^2$$

$$= (2(2\Delta))^2 = 16\Delta^2 \qquad \text{[By (1)]}$$

$$\text{R.H.S} = (a+b+c)(b+c-a)(c+a-b)(a+b-c)$$
$$= [2s(a+b+c-2a)(a+b+c-2b)(a+b+c-2c)]$$
$$(\text{Using } 2s = a+b+c)$$
$$= 2s(2s-2a)(2s-2b)(2s-2c)$$
$$= 16s(s-a)(s-b)(s-c)$$
$$= 16\left(\sqrt{s(s-a)(s-b)(s-c)}\right)^2$$
$$= 16\Delta^2 \qquad \text{(By Area formula)}$$
$$\therefore \text{L.H.S} = \text{R.H.S.}$$

### *Applications of simultaneous linear equations*

**1. The sum of three numbers is 6. If we multiply the third number by 2 and add the first number to the result, we get 7. By adding second and third numbers to three times the first number, we get 12. Using matrices find the numbers.**

**Soln:-** Let the three numbers be x, y and z respectively, then,

$$x + y + z = 6.$$

Also, $x + 2z = 7$[given] and,

$$3x + y + z = 12$$

Thus, we obtain the following system of simultaneous linear equations:

$$x + y + z = 6$$
$$x + 0y + 2z = 7$$
$$3x + y + z = 12$$

The above system of equations can be written in matrix form as

# ಎತ್ತಿನಹೊಳೆ ಯೋಜನೆಗೆ ಹಿನ್ನಡೆ

## 432 ಎಕರೆ ಅರಣ್ಯ ಬಳಕೆಗೆ ಸಿಗದ ಒಪ್ಪಿಗೆ
## ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬಯಲುಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ₹23 ಸಾವಿರ ಕೋಟಿ ವೆಚ್ಚದ ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ ಹೆಚ್ಚುವರಿಯಾಗಿ 423 ಎಕರೆ ಅರಣ್ಯ ಬಳಕೆಗೆ ಅನುಮೋದನೆ ನೀಡಬೇಕೆಂಬ ಕರ್ನಾಟಕ ಸರ್ಕಾರದ ಪ್ರಸ್ತಾವಕ್ಕೆ ಕೇಂದ್ರ ಅರಣ್ಯ, ಪರಿಸರ ಸಚಿವಾಲಯದ ಅರಣ್ಯ ಸಲಹಾ ಸಮಿತಿ ಒಪ್ಪಿಗೆ ಕೊಟ್ಟಿಲ್ಲ. ಇದರಿಂದಾಗಿ, ಎತ್ತಿನಹೊಳೆ ಯೋಜನೆಗೆ ಹಿನ್ನಡೆಯಾಗಿದೆ.


ಗುರುತ್ವಾಕರ್ಷಣೆ ಕಾಲುವೆ ನಿರ್ಮಾಣಕ್ಕೆ ಹಾಸನ ಹಾಗೂ ತುಮಕೂರು ಜಿಲ್ಲೆಗಳಲ್ಲಿ 432 ಎಕರೆ ಅರಣ್ಯ ಬಳಕೆಗೆ ಒಪ್ಪಿಗೆ ನೀಡುವಂತೆ ಕೋರಿ ರಾಜ್ಯ ಸರ್ಕಾರವು ಪರಿಸರ ಸಚಿವಾಲಯಕ್ಕೆ ಮಾರ್ಚ್‌ನಲ್ಲಿ ಪ್ರಸ್ತಾವನೆ ಸಲ್ಲಿಸಿತ್ತು. ಸಚಿವಾಲಯದ ಡಿಐಜಿಎಫ್ ಪ್ರಣೀತಾ ಪೌಲ್ ನೇತೃತ್ವದ ಅಧಿಕಾರಿಗಳ ತಂಡವು ಯೋಜನಾ ಸ್ಥಳದಲ್ಲಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿತ್ತು. ರಾಜ್ಯ ಸರ್ಕಾರವು ಲೋಪಗಳನ್ನು ಸರಿಪಡಿಸಿ ಸೂಕ್ತ ಸಮಜಾಯಿಷಿ ನೀಡಿದ ಬಳಿಕವೇ ಹೆಚ್ಚುವರಿ ಅರಣ್ಯ ಬಳಕೆಗೆ ಅನುಮೋದನೆ ನೀಡಬಹುದು ಎಂದು ಸಮಿತಿ ಶಿಫಾರಸು ಮಾಡಿತ್ತು.


ನವದೆಹಲಿಯಲ್ಲಿ ಜೂನ್ 26ರಂದು ನಡೆದ ಸಲಹಾ ಸಮಿತಿಯ ಸಭೆಯಲ್ಲಿ ಈ ಯೋಜನೆಗೆ ಹೆಚ್ಚುವರಿ ಅರಣ್ಯ ಭೂಮಿ ನೀಡುವ ಬಗ್ಗೆ ಚರ್ಚೆ ನಡೆಯಿತು. 'ಕೇಂದ್ರದಿಂದ ಅನುಮೋದನೆ ಪಡೆಯುವ ಮುನ್ನವೇ ಈ ಯೋಜನೆಗಾಗಿ ಅರಣ್ಯ ಭೂಮಿ ಬಳಕೆ ಮಾಡಲಾಗಿದೆ ಎಂಬುದನ್ನು ಅಧಿಕಾರಿಗಳ ತಂಡವು ಬೊಟ್ಟು ಮಾಡಿ ತೋರಿಸಿದೆ. ನಿಯಮ ಉಲ್ಲಂಘಿಸಿದ ಸರ್ಕಾರಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಹಾಗೂ ದಂಡ ವಿಧಿಸಬೇಕು' ಎಂದು ಸಲಹಾ ಸಮಿತಿ ನಿರ್ದೇಶನ ನೀಡಿತು. ಬಳಿಕ, ಪ್ರಸ್ತಾವನ್ನು ಮುಂದಿನ ಸಭೆಗೆ ಮುಂದೂಡಿತು.

ಪಶ್ಚಿಮ ಘಟ್ಟದ ಎತ್ತಿನಹೊಳೆಯಿಂದ 24 ಟಿಎಂಸಿ ನೀರು ಹರಿಸುವ ಈ ಯೋಜನೆಗೆ ಈ ಹಿಂದೆ 13.93 ಹೆಕ್ಟೇರ್ ಅರಣ್ಯ ಬಳಕೆಗೆ 2016ರಲ್ಲಿ ಪ್ರಸ್ತಾವ ಸಲ್ಲಿಸಲಾಗಿತ್ತು. 33 ಷರತ್ತುಗಳನ್ನು ವಿಧಿಸಿ 2016ರಲ್ಲಿ ಅನುಮೋದನೆ ಕೊಡಲಾಗಿತ್ತು. ಆದರೆ, ಬಹುತೇಕ ಷರತ್ತುಗಳನ್ನು ಪಾಲನೆ ಮಾಡಿಲ್ಲ. ಕಾಮಗಾರಿ ಸಂದರ್ಭದಲ್ಲಿ ಭೂಕುಸಿತ ಉಂಟಾಗಿದೆ ಎಂದು ಎನ್‌ಜಿಟಿಯ ಮೇಲ್ವಿಚಾರಣಾ ತಂಡವು 2019ರಲ್ಲಿ ವರದಿ ಸಲ್ಲಿಸಿತ್ತು. ಭೂಕುಸಿತ ತಡೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಜತೆಗೆ, ಅನುಮೋದನೆಗಿಂತ ಹೆಚ್ಚು ಅರಣ್ಯ ಬಳಸಲಾಗಿದೆ. ಕಾಮಗಾರಿಯಿಂದಾಗಿ ಅನೇಕ ಮನೆಗಳಿಗೆ ಹಾನಿಯಾಗಿದೆ. ಆದರೆ, ಸಂತ್ರಸ್ತರಿಗೆ ಯಾವುದೇ ಪರಿಹಾರ ನೀಡಿಲ್ಲ ಎಂದು ತಜ್ಞರ ತಂಡವು ಆಕ್ಷೇಪ ವ್ಯಕ್ತಪಡಿಸಿತ್ತು.

# ಪ್ರೇಮಶೇಖರ್, ವಿಕಾಸ ಹೊಸಮನಿಗೆ ವರ್ಧಮಾನ ಸಾಹಿತ್ಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಪ್ರೇಮಶೇಖರ್


ವಿಕಾಸ

**ಮೂಡುಬಿದಿರೆ (ದಕ್ಷಿಣ ಕನ್ನಡ):** ಮೂಡುಬಿದಿರೆಯ ವರ್ಧಮಾನ ಪ್ರಶಸ್ತಿ ಪೀಠದ 2024ರ ಸಾಲಿನ ವರ್ಧಮಾನ ಸಾಹಿತ್ಯ ಪ್ರಶಸ್ತಿಗೆ ಸಾಹಿತಿ ಉಡುಪಿಯ ಪ್ರೇಮಶೇಖರ್ ಹಾಗೂ ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿಗೆ ವಿಮರ್ಶಕ ಹಾವೇರಿಯ ವಿಕಾಸ ಹೊಸಮನಿ ಅವರನ್ನು ಆಯ್ಕೆ ಮಾಡಲಾಗಿದೆ. ಸಾಹಿತ್ಯ ಪ್ರಶಸ್ತಿಯು ₹25 ಸಾವಿರ ಗೌರವ ಸಂಭಾವನೆ, ಉದಯೋನ್ಮುಖ ಪ್ರಶಸ್ತಿಯು ₹15ಸಾವಿರ ಗೌರವ ಸಂಭಾವನೆ ಒಳಗೊಂಡಿದೆ. ಸೆಪ್ಟೆಂಬರ್‌ನಲ್ಲಿ ನಡೆಯುವ ದಸರಾ ಸಾಹಿತ್ಯೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪೀಠದ ಪ್ರಧಾನ ನಿರ್ದೇಶಕ ನಾ.ಮೊಗಸಾಲೆ ತಿಳಿಸಿದ್ದಾರೆ.

# 10 ಪಾಲಿಕೆ ನೌಕರರ ಪ್ರತಿಭಟನೆ ಇಂದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯದಲ್ಲಿನ 10 ಮಹಾನಗರ ಪಾಲಿಕೆಗಳ ನೌಕರರು ಜುಲೈ 8ರಂದು ಸಾಮೂಹಿಕ ರಜೆ ಹಾಕಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಮೈಸೂರು, ಹುಬ್ಬಳ್ಳಿ, ಧಾರವಾಡ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ, ಬಳ್ಳಾರಿ, ಶಿವಮೊಗ್ಗ, ವಿಜಯಪುರ ಮಹಾನಗರ ಪಾಲಿಕೆಗಳ ನೌಕರರ ಸಂಘದ ಮುಖಂಡರು ನಗರದಲ್ಲಿ ಪ್ರತಿಭಟನೆ ನಡೆಸಲಿದ್ದಾರೆ. ಉಳಿದ ನೌಕರರು ಆಯಾ ನಗರ ಪಾಲಿಕೆಗಳ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಿದ್ದಾರೆ ಎಂದು ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ತಿನ ಅಧ್ಯಕ್ಷ ಎ. ಅಮೃತರಾಜ್ ತಿಳಿಸಿದರು.

'ಪಾಲಿಕೆಗಳ ಅಧಿಕಾರಿಗಳಿಗೆ, ಹಲವು ಬಾರಿ ಮನವಿ ಪತ್ರಗಳನ್ನು ನೀಡಲಾಗಿದೆ. ಆದರೂ ಸ್ಪಂದಿಸಿಲ್ಲ. ಹೀಗಾಗಿ, ಪ್ರತಿಭಟನೆ ನಡೆಸಲಾಗುತ್ತಿದೆ' ಎಂದು ಹೇಳಿದರು.

'ಸರ್ಕಾರಿ ನೌಕರರಿಗೆ ನೀಡಿರುವ 7ನೇ ವೇತನ ಆಯೋಗದ ಸೌಲಭ್ಯ ನೀಡಲು ಪಾಲಿಕೆಗಳ ಸಿಬ್ಬಂದಿಗೂ ಆರ್ಥಿಕ ಇಲಾಖೆಯೊಂದಿಗೆ ಅನುದಾನ ಬಿಡುಗಡೆ ಮಾಡಬೇಕು ಎನ್ನುವುದೂ ಸೇರಿದಂತೆ ವಿವಿಧ ಬೇಡಿಕೆ ಇರಿಸಲಾಗಿದೆ' ಎಂದರು. 'ಪೌರಕಾರ್ಮಿಕರು ಸೇರಿದಂತೆ ನಗರ ಪಾಲಿಕೆಗಳಲ್ಲಿರುವ ಎಲ್ಲ ವಿಭಾಗದ ಸಿಬ್ಬಂದಿಯೂ ಹೋರಾಟಕ್ಕೆ ಬೆಂಬಲ ನೀಡಿದ್ದಾರೆ' ಎಂದು ತಿಳಿಸಿದರು.

# ಸಿ.ಎಂ ಆರೋಗ್ಯ ತಪಾಸಣೆ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಬೆಳಿಗ್ಗೆ ಶೇಷಾದ್ರಿಪುರದಲ್ಲಿರುವ ಅಪೋಲೋ ಆಸ್ಪತ್ರೆಗೆ ತೆರಳಿ ನಿಯಮಿತ ಆರೋಗ್ಯ ತಪಾಸಣೆಗೆ ಒಳಗಾದರು. 'ಸ್ವಲ್ಪ ತಲೆ ಸುತ್ತು ಬಂದಿದ್ದರಿಂದ, ಎಂಆರ್‌ಐ ಸ್ಕ್ಯಾನಿಂಗ್ ಮಾಡಿಸಲಾಯಿತು. ಯಾವುದೇ ಸಮಸ್ಯೆ ಇಲ್ಲ' ಎಂದು ಸಿ.ಎಂ ಸಚಿವಾಲಯ ಹೇಳಿದೆ.

## ಚಿಟಿಕೆ ಸುದ್ದಿ

### ವಿಡಿಯೊ ಮಾಡುವಾಗ ನದಿಗೆ ಬಿದ್ದ ಚಾಲಕ

**ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ):** ತಾಲ್ಲೂಕಿನ ಬೆಳಗೊಳ ಸಮೀಪದ ಭಂಭಂ ಸರ್ವಧರ್ಮ ಆಶ್ರಮದ ಬಳಿ ಭಾನುವಾರ ಸಂಜೆ ಕಾವೇರಿ ನದಿ ದಡದಲ್ಲಿ ನಿಂತು ವಿಡಿಯೊ ಮಾಡುತ್ತಿದ್ದ ವ್ಯಕ್ತಿಯೊಬ್ಬರು ಆಯತಪ್ಪಿ ನದಿಗೆ ಬಿದ್ದು ಕೊಚ್ಚಿಕೊಂಡು ಹೋಗಿದ್ದಾರೆ. ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು ಉಲ್ಲಂಗಾಲ ಗ್ರಾಮದ ಮಲ್ಲೇಶ್ ಅವರ ಮಗ ಮಹೇಶ್ (30) ಕೊಚ್ಚಿ ಹೋದವರು. ಅವರು ಆಟೊರಿಕ್ಷಾ ಚಾಲಕರಾಗಿದ್ದರು. ನೀರಿನ ಸೆಳೆತ ಹೆಚ್ಚಾಗಿದ್ದು ಪತ್ತೆ ಕಾರ್ಯಕ್ಕೆ ತೊಡಕಾಗಿದೆ ಎನ್ನಲಾಗಿದೆ.

### ವಾಂತಿ–ಭೇದಿ: ಮೂವರ ಸಾವು?

**ಕೆಂಭಾವಿ (ಯಾದಗಿರಿ ಜಿಲ್ಲೆ):** ವಾಂತಿ–ಭೇದಿಯಿಂದ ಆಸ್ಪತ್ರೆಗೆ ದಾಖಲಾಗಿದ್ದರು ಎನ್ನಲಾದ ಸುರಪುರ ತಾಲ್ಲೂಕಿನ ತಿಪ್ಪನಟಗಿ ಗ್ರಾಮದ ಮೂವರು ಮೃತಪಟ್ಟಿದ್ದಾರೆ. 'ಇವರ ಸಾವಿಗೆ ಕಲುಷಿತ ನೀರು ಸೇವನೆಯೇ ಕಾರಣ' ಎಂದು ಗ್ರಾಮಸ್ಥರು ಶಂಕಿಸಿದ್ದಾರೆ. ಆದರೆ, ಅಧಿಕಾರಿಗಳು ಇದನ್ನು ಖಚಿತಪಡಿಸಿಲ್ಲ.

ಹಲವು ದಿನಗಳಿಂದ ತಿಪ್ಪನಟಗಿ ಗ್ರಾಮದಲ್ಲಿ ವಾಂತಿ–ಭೇದಿ ಕಾಣಿಸಿಕೊಂಡಿದೆ. ಹಲವರು ಆಸ್ಪತ್ರೆಗೆ ಸೇರಿ ಚಿಕಿತ್ಸೆ ಪಡೆದಿದ್ದಾರೆ. ಈ ನಡುವೆ 10 ದಿನಗಳ ಹಿಂದೆ ವಾಂತಿ–ಭೇದಿಯಿಂದ ವಿವಿಧ ಆಸ್ಪತ್ರೆಗಳಿಗೆ ದಾಖಲಾಗಿದ್ದರು ಎನ್ನಲಾದ ದೇವಿಕೆಮ್ಮ ಹೊಟ್ಟಿ (60), ವೆಂಕಮ್ಮ (50) ಹಾಗೂ ರಾಮಣ್ಣ ಪೂಜಾರಿ (64) ಅಸುನೀಗಿದ್ದಾರೆ. ಇನ್ನೂ ನಾಲ್ವರ ಸ್ಥಿತಿ ಚಿಂತಾಜನಕವಾಗಿದ್ದು, ಕಲಬುರಗಿ ಸೇರಿದಂತೆ ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ತಾತ್ಕಾಲಿಕ ಆರೋಗ್ಯ ಕೇಂದ್ರ ಸ್ಥಾಪಿಸಲಾಗಿದೆ. ಸೋಮವಾರ 13 ಜನರಿಗೆ ಚಿಕಿತ್ಸೆ ನೀಡಲಾಗಿದೆ' ಎಂದು ಆರೋಗ್ಯ ಇಲಾಖೆ ಸಿಬ್ಬಂದಿ ತಿಳಿಸಿದ್ದಾರೆ.

ತಿಪ್ಪನಟಗಿ ಗ್ರಾಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು.

## ನಿಧನ ವಾರ್ತೆ

### ಶಶಿರೇಖಾ




**ಮೈಸೂರು:** ಮಹಾರಾಷ್ಟ್ರದ ವಾರ್ಧಾದ ಗಾಂಧಿ ಆಶ್ರಮದಲ್ಲಿ ಸೇವೆ ಮಾಡಿದ್ದ ಗಾಂಧಿವಾದಿ ಶಶಿರೇಖಾ (86) ಅವರು ಸೋಮವಾರ ವಯೋಸಹಜ ಅನಾರೋಗ್ಯದಿಂದ ನಂಜನಗೂಡು ತಾಲ್ಲೂಕಿನ ತಗಡೂರಿನಲ್ಲಿ ನಿಧನರಾದರು. ಅವರಿಗೆ ಪುತ್ರ, ಮೂವರು ಪುತ್ರಿಯರು ಇದ್ದಾರೆ. ಪತಿ, ಗಾಂಧಿವಾದಿ ತಗಡೂರು ಸತ್ಯನಾರಾಯಣ ಅವರೊಂದಿಗೆ ವಾರ್ಧಾ ಆಶ್ರಮದಲ್ಲಿ 2 ದಶಕಗಳಿಗೂ ಹೆಚ್ಚು ಕಾಲ ಸೇವೆ ಮಾಡಿದ್ದರು. ಬಳಿಕ ಅರಸೀಕೆರೆ ಆಶ್ರಮ, ನಂತರ ತಗಡೂರಿನ ಗಾಂಧಿ ಆಶ್ರಮದಲ್ಲಿ ನೆಲಸಿದ್ದರು.

ಮಂಗಳವಾರ (ಜುಲೈ 8) ಬೆಳಿಗ್ಗೆ 10ರವರೆಗೆ ಗಾಂಧಿ ಆಶ್ರಮದಲ್ಲಿ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಇಡಲಾಗಿದ್ದು, ಬಳಿಕ ಜೆಎಸ್‌ಎಸ್ ಆಸ್ಪತ್ರೆಗೆ ದಾನ ಮಾಡುವುದಾಗಿ ಕುಟುಂಬದವರು ತಿಳಿಸಿದ್ದಾರೆ.

**ಅಭಿಮತದ ವಿಳಾಸ:** ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in





## ಸುಭಾಷಿತ

ಕೇಳಿ ಪಡೆದ ಪ್ರೇಮ ಒಳ್ಳೆಯದು. ಕೇಳದೆಯೇ ಪಡೆದ ಪ್ರೇಮ ಇನ್ನೂ ಒಳ್ಳೆಯದು.

–ವಿಲಿಯಂ ಷೇಕ್ಸ್‌ಪಿಯರ್

**ಸಂಪಾದಕೀಯ**

# ಗೌರವಕ್ಕೆ ಚ್ಯುತಿ ತಾರದಿರಲಿ ನಡವಳಿಕೆ ಅಧಿಕಾರಿಗಳ ಆತ್ಮಸ್ಥೈರ್ಯ ಕುಂದಿಸದಿರಿ

**ಪ್ರಜಾಪ್ರಭುತ್ವವು** ಸದೃಢವಾಗಿ ಹೆಜ್ಜೆ ಇಡುವಂತಾಗಲು ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿ ವರ್ಗದವರು ನೆಲದ ಕಾನೂನನ್ನು ಎತ್ತಿ ಹಿಡಿಯುವ ಜೊತೆಗೆ, ಸಾರ್ವಜನಿಕ ಸೇವೆಯಲ್ಲಿ ಒಟ್ಟಾಗಿ ಮತ್ತು ಪರಸ್ಪರ ಗೌರವದಿಂದ ಕೆಲಸ ಮಾಡಬೇಕು. ಯಾರೇ ಆಗಲಿ ಅಹಮಿಕೆ ತೋರಿ ಪರಸ್ಪರರ ನಡುವಿನ ಸಂಬಂಧಗಳು ಹದಗೆಟ್ಟರೆ, ಅದರಿಂದಾಗುವ ಹಾನಿಯು ಆ ವ್ಯಕ್ತಿಗಳಿಗೆ ಸೀಮಿತವಾಗಿ ಉಳಿಯದೆ, ಇಡೀ ವ್ಯವಸ್ಥೆಗೆ ವಿಸ್ತರಿಸುತ್ತದೆ. ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ (ಎಎಸ್‌ಪಿ) ಎನ್.ವಿ. ಭರಮನಿ ಅವರ ಪ್ರಕರಣ ಈ ಮಾತಿಗೊಂದು ಜ್ವಲಂತ ಉದಾಹರಣೆ. ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಆದ ಅವಮಾನದಿಂದ ಮನನೊಂದಿರುವ ಭರಮನಿ ಅವರು ಸ್ವಯಂನಿವೃತ್ತಿ ಹೊಂದಲು ಅನುಮತಿ ನೀಡುವಂತೆ ಸರ್ಕಾರವನ್ನು ಕೋರಿದ್ದಾರೆ. ತಾವು ಮಾತನಾಡುವ ಹೊತ್ತಿನಲ್ಲಿ ಬಿಜೆಪಿಯ ಕಾರ್ಯಕರ್ತೆಯರು ಕಪ್ಪು ಬಾವುಟ ಪ್ರದರ್ಶಿಸಿದ್ದನ್ನು ಕಂಡು ಅಸಮಾಧಾನ-ಗೊಂಡಿದ್ದ ಮುಖ್ಯಮಂತ್ರಿ ಅವರು, ಎಎಸ್‌ಪಿ ಅವರತ್ತ ಕೈ ಎತ್ತಿ ತೋರಿಸಿದ್ದರು. ಈ ಒರಟು ನಡವಳಿಕೆಯಿಂದ ಎಎಸ್‌ಪಿ ಅವರು ಮುಜುಗರ ಅನುಭವಿಸಿದ್ದರು. ಸಿದ್ದರಾಮಯ್ಯ ಅವರು ಹೀಗೆ ವರ್ತಿಸಿರುವುದು ಅದೇ ಮೊದಲ ಬಾರಿಯೇನಲ್ಲ. ಈ ಹಿಂದೆ ಸಭೆಯೊಂದರಲ್ಲಿ ಸಾರ್ವಜನಿಕರ ಎದುರೇ ಜಿಲ್ಲಾಧಿಕಾರಿ ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಈ ರೀತಿಯ ಸಿಡುಕಿನ ನಡವಳಿಕೆಗಳು ರಾಜಕೀಯದ ಭೂಮಿಕೆಯಲ್ಲಿ ತಾತ್ಕಾಲಿಕವಾಗಿ ರಂಗು ತುಂಬಬಹುದು. ಆದರೆ, ಕೊನೆಗೆ ದೊಡ್ಡ ಹಾನಿಯನ್ನೇ ಉಂಟು ಮಾಡುತ್ತವೆ. ಅವಮಾನದ ಘಟನೆಗಳಿಂದ ಅಧಿಕಾರಿಗಳ ಆತ್ಮಸ್ಥೈರ್ಯ ಕುಂದುತ್ತದೆ, ತಮ್ಮ ಕೆಳಹಂತದ ಸಿಬ್ಬಂದಿಯ ಮುಂದೆ ಅವರು ದುರ್ಬಲರಂತೆ ಗೋಚರಿಸ ತೊಡಗುತ್ತಾರೆ. ಅಲ್ಲದೆ, ಆದೇಶ ಪರಿಪಾಲನಾ ಶ್ರೇಣಿಯ ಸರಪಳಿಯನ್ನೂ ಇಂತಹ ಘಟನೆಗಳು ತುಂಡರಿಸಿ ಹಾಕುತ್ತವೆ.




> ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಹೊಣೆ ಹೊಂದಿರುವವರನ್ನು ರಾಜಕಾರಣಿಗಳು ಕೀಳಾಗಿ ಕಾಣುವುದನ್ನು ಮುಂದುವರಿಸಿದರೆ, ವ್ಯವಸ್ಥೆ ಸಂಕಷ್ಟಕ್ಕೆ ಸಿಲುಕುತ್ತದೆ.

ಭರಮನಿ ಅವರು ಸರ್ಕಾರಕ್ಕೆ ಬರೆದ ಪತ್ರದಲ್ಲಿ, 'ಮಾಡದೇ ಇರುವ ತಪ್ಪಿಗೆ ಸಾರ್ವಜನಿಕವಾಗಿ ನಿಂದನೆಗೆ ಒಳಗಾಗಿ ಅವಮಾನಗೊಂಡ ನನಗೆ ಅನ್ಯಮಾರ್ಗವಿಲ್ಲದೇ ಸ್ವಯಂನಿವೃತ್ತಿಗಾಗಿ ಮನವಿ ಸಲ್ಲಿಸುತ್ತಿದ್ದೇನೆ' ಎಂಬ ಉಲ್ಲೇಖ ಇದೆ. 'ವೇದಿಕೆಯ ಭದ್ರತೆಯಷ್ಟೇ ನನ್ನ ಹೊಣೆಯಾಗಿತ್ತು. ಅದನ್ನು ಸಮರ್ಥವಾಗಿಯೇ ನಿಭಾಯಿಸಿದ್ದೇನೆ. ಕಾರಣವಿಲ್ಲದೆ ನನ್ನನ್ನು ಅವಮಾನಿಸಿದ ಘಟನೆ ಕಂಡು ನನ್ನ ಪತ್ನಿ ಹಾಗೂ ಮಕ್ಕಳು ಕಣ್ಣೀರು ಸುರಿಸಿದರು' ಎಂದೂ ಅವರು ಬರೆದಿದ್ದಾರೆ. ಒಬ್ಬ ಹಿರಿಯ ಪೊಲೀಸ್ ಅಧಿಕಾರಿಯೂ ಇದುವರೆಗೆ ಅವರನ್ನು ಭೇಟಿ ಮಾಡಿ ಸಂತೈಸುವ ಕೆಲಸ ಮಾಡಿಲ್ಲ. ಪೊಲೀಸ್ ವ್ಯವಸ್ಥೆಯಲ್ಲಿ ನಾಯಕತ್ವದ ಕೊರತೆ ಇರುವುದರತ್ತ ಇದು ಬೊಟ್ಟು ಮಾಡುತ್ತದೆ. ಸ್ವಯಂನಿವೃತ್ತಿಗೆ ಸಲ್ಲಿಸಿದ ಮನವಿ ಪತ್ರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿ, ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾದ ಬಳಿಕ ಮುಖ್ಯಮಂತ್ರಿ ಹಾಗೂ ಗೃಹ ಸಚಿವ ಜಿ. ಪರಮೇಶ್ವರ ಇಬ್ಬರೂ ಭರಮನಿ ಅವರೊಂದಿಗೆ ಮಾತನಾಡಿ, ಸಮಾಧಾನ ಪಡಿಸುವ ಮತ್ತು ಸ್ವಯಂನಿವೃತ್ತಿ ನಿರ್ಧಾರದಿಂದ ಹಿಂದೆ ಸರಿಯುವಂತೆ ಮನವೊಲಿಸುವ ಪ್ರಯತ್ನ ಮಾಡಿದ್ದಾರೆ. ಆದರೆ, ರಾಜೀನಾಮೆ ಪತ್ರವನ್ನು ಭರಮನಿ ಅವರು ಇನ್ನೂ ಹಿಂಪಡೆದಿಲ್ಲ. 'ಶಿಸ್ತಿನ ಇಲಾಖೆಯಲ್ಲಿ ಇದ್ದೇನೆ. ನನ್ನ ಭಾವನೆಗಳನ್ನು ಮೇಲಧಿಕಾರಿಗಳಿಗೆ ತಿಳಿಸಿರುವೆ. ಮುಖ್ಯಮಂತ್ರಿ, ಗೃಹ ಸಚಿವರು ಮತ್ತು ಮೇಲಧಿಕಾರಿಗಳು ನನ್ನೊಂದಿಗೆ ಮಾತನಾಡಿದ್ದಾರೆ. ದೈನಂದಿನ ಕೆಲಸಕ್ಕೆ ಹಾಜರಾಗಿರುವೆ. ಮುಂದಿನದ್ದು ಸರ್ಕಾರ ನಿರ್ಧರಿಸಲಿದೆ' ಎಂದವರು ಹೇಳಿದ್ದಾರೆ.

ದುರದೃಷ್ಟವಶಾತ್, ಇಂತಹ ನಡವಳಿಕೆ ಯಾವುದೇ ಒಂದು ಪಕ್ಷದ ನಾಯಕರಿಗೆ ಸೀಮಿತವಾಗಿಲ್ಲ. ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಕೂಡ ಇತ್ತೀಚೆಗೆ ಪೊಲೀಸ್ ಅಧಿಕಾರಿಯೊಬ್ಬರನ್ನು ನಿಂದಿಸುತ್ತಿರುವ ವಿಡಿಯೊ ಹರಿದಾಡಿತ್ತು. ದೊಡ್ಡ ಹುದ್ದೆಯಲ್ಲಿದ್ದವರೇ ಇಂತಹ ಕೆಟ್ಟ ನಡವಳಿಕೆ ಪ್ರದರ್ಶಿಸಿದರೆ ಮಿಕ್ಕವರಿಂದ ಏನನ್ನು ನಿರೀಕ್ಷಿಸಬಹುದು? ಪ್ರತಿಯೊಬ್ಬ ಅಧಿಕಾರಿಯಿಂದ ಉತ್ತರದಾಯಿತ್ವ ಬಯಸುವ ಅಧಿಕಾರ ಸರ್ಕಾರಕ್ಕೆ ಇದ್ದೇ ಇದೆ. ಹಾಗೆ ಉತ್ತರದಾಯಿತ್ವವನ್ನು ಬಯಸುವಾಗ ಸಮಯ, ಸಂದರ್ಭ, ಸ್ಥಳ ಮತ್ತು ಕೇಳುವ ಧಾಟಿ ಮುಖ್ಯವಾಗುತ್ತದೆ. ಸಾರ್ವಜನಿಕವಾಗಿ ಅವಮಾನಿಸುವುದು ಒಳ್ಳೆಯ ನಾಯಕತ್ವದ ಲಕ್ಷಣವಲ್ಲ. ಮುತ್ಸದ್ದಿತನಕ್ಕೂ ಇಂತಹ ವರ್ತನೆ ಶೋಭೆ ತರುವುದಿಲ್ಲ. ಅಧಿಕಾರಿ ವರ್ಗ ಮತ್ತು ಪೊಲೀಸ್ ಪಡೆಯೇ ಸರ್ಕಾರದ ಬೆನ್ನೆಲುಬು ಎಂಬುದನ್ನು ಆಡಳಿತದ ಹೊಣೆ ಹೊತ್ತವರು ಸದಾ ನೆನಪಿಡಬೇಕು. ಸರ್ಕಾರ ರೂಪಿಸುವಂತಹ ನೀತಿಗಳನ್ನು ಅನುಷ್ಠಾನಕ್ಕೆ ತರುವ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಕಾರ್ಯದ ಹೊಣೆ ಹೊಂದಿರುವವರನ್ನು ರಾಜಕಾರಣಿಗಳು ಕೀಳಾಗಿ ಕಾಣುವುದನ್ನು ಮುಂದುವರಿಸಿದರೆ, ಇಡೀ ವ್ಯವಸ್ಥೆಯೇ ಸಂಕಷ್ಟಕ್ಕೆ ಸಿಲುಕುತ್ತದೆ. ಸಂಯಮದ ಕೊರತೆಯು ಸಾರ್ವಜನಿಕ ಸೇವೆಯ ಸಮಗ್ರತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ನಾಗರಿಕ ಸೇವೆಯಲ್ಲಿ ಇರುವವರನ್ನು ಘನತೆಯಿಂದ ನಡೆಸಿಕೊಳ್ಳುವುದು ಅತ್ಯಗತ್ಯ. ಅದಕ್ಕಾಗಿ ಅನುಭವಿ ರಾಜಕಾರಣಿಗಳು ವಿವೇಕ ಮತ್ತು ಸ್ಥಾನಮಾನದ ಜವಾಬ್ದಾರಿ ಅರಿತು ವರ್ತಿಸುವ ನಡವಳಿಕೆಯನ್ನು ತೋರಬೇಕು. ಅಧಿಕಾರವನ್ನು ವೃತ್ತಿಪರತೆ, ನ್ಯಾಯತತ್ಪರತೆ ಮತ್ತು ಗೌರವದ ಮೂಲಕ ಅನುಭವಿಸಬೇಕೇ ಹೊರತು ಅವಮಾನಿಸುವುದು ಇಲ್ಲವೇ ಬೆದರಿಸುವ ಮೂಲಕ ಅಲ್ಲ ಎಂಬುದನ್ನು ನಾಯಕರು ಅರ್ಥಮಾಡಿಕೊಳ್ಳಬೇಕು.

### ದೀರ್ಘ ಆಟದ ಗುಟ್ಟು



**ಬಹಳಷ್ಟು ಜನರು ದಿಢೀರ್ ಫಲಿತಾಂಶ ಕಾಣದ ಕಾರಣ ಆಟವನ್ನು ಬಿಟ್ಟು ಬಿಡುತ್ತಾರೆ. ನೀವು ದೊಡ್ಡ ಗೆಲುವು ಸಾಧಿಸಲು ಇಚ್ಛಿಸಿದರೆ, ದೀರ್ಘಕಾಲದ ವರೆಗೆ ಆಟವನ್ನು ಆಡಬೇಕಾಗುತ್ತದೆ.**

**ರಾಜ್ ಶಾಮಣಿ,** ವಾಣಿಜ್ಯೋದ್ಯಮಿ, 'ಎಕ್ಸ್'ನಿಂದ

### ಕಿಡಿನುಡಿ



**ರಾಜ್ಯದಲ್ಲಿ ಹಿಂದೆ ಆಡಳಿತ ನಡೆಸಿದ್ದ ಬಿಜೆಪಿ ಬಜೆಟ್‌ನಲ್ಲಿ ಅನುದಾನ ಮೀಸಲಿಡದೇ ಯೋಜನೆಗಳನ್ನು ಘೋಷಣೆ ಮಾಡಿತ್ತು. ಹಾಗಾಗಿ, ನಮ್ಮ ಸರ್ಕಾರದ ಮೇಲೆ ಆರ್ಥಿಕ ಹೊರೆ ಬಿದ್ದಿದೆ.**

**ಬಸವರಾಜ ರಾಯರಡ್ಡಿ,** ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ

### 25 ವರ್ಷಗಳ ಹಿಂದೆ

**ಶನಿವಾರ, 8-7-2000**

**• ಹಾಸನ: ಮತ್ತಷ್ಟು ವ್ಯಾಪಿಸಿದ ಮಲೇರಿಯಾ**

ಹಾಸನ, ಜುಲೈ 7– ತುಮಕೂರು ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಗಡಿಯಲ್ಲಿರುವ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಹಲವು ಹಳ್ಳಿಗಳಲ್ಲಿ ಜೂನ್ ತಿಂಗಳಿನಲ್ಲೂ ಮಲೇರಿಯಾ ರೋಗ ಹೆಚ್ಚಾಗಿ ಕಾಣಿಸಿಕೊಂಡಿದೆ.

ಅರಸೀಕೆರೆ ತಾಲ್ಲೂಕಿನಲ್ಲಿ ಕಳೆದ ಮೇ ತಿಂಗಳಿನಲ್ಲಿ 252 ಪ್ರಕರಣಗಳು ವರದಿಯಾಗಿದ್ದರೆ, ಜೂನ್ ತಿಂಗಳಿನಲ್ಲಿ 345 ಪ್ರಕರಣಗಳು ವರದಿಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**• ಜಲ ನೀತಿಗೆ ಮಾರ್ಗಸೂಚಿ: ಒಮ್ಮತಕ್ಕೆ ಕೇಂದ್ರ ವಿಫಲ**

ನವದೆಹಲಿ, ಜುಲೈ 7– ಅಂತರರಾಜ್ಯ ನದಿ ನೀರು ಹಂಚಿಕೆಗೆ ಪೂರಕವಾಗುವಂತೆ ನದಿ ಕಣಿವೆ ಸಂಸ್ಥೆ ರಚನೆಯ ಕೇಂದ್ರದ ಸಲಹೆಯನ್ನು ರಾಜ್ಯಗಳು ತಿರಸ್ಕರಿಸಿವೆ. ರಾಷ್ಟ್ರೀಯ ಜಲ ನೀತಿಗೆ ಮಾರ್ಗಸೂಚಿಗಳ ರಚನೆಯ ಬಗೆಗೆ ಒಮ್ಮತ ಮೂಡಿಸಲು ಇಂದಿನ ಸಭೆಯು ವಿಫಲಗೊಂಡಿದ್ದರಿಂದ ಈ ವಿವಾದ ಮತ್ತೆ ಅನಿರ್ದಿಷ್ಟ ಕಾಲದವರೆಗೆ ಮುಂದಕ್ಕೆ ಹೋಯಿತು.

### 75 ವರ್ಷಗಳ ಹಿಂದೆ

**ಶನಿವಾರ, 8-7-1950**

**• ಚುನಾವಣೆ ಬಗ್ಗೆ ಜನತೆಗೆ ತಿಳಿವಳಿಕೆ ಕೊಡಬೇಕು**

ಬೆಂಗಳೂರು, ಜುಲೈ 7– ಪಕ್ಷ, ಪ್ರತಿಪಕ್ಷಗಳ ಪರವಾಗಿರುವುದೇ ಅಲ್ಲದೆ, ಪತ್ರಿಕೆಗಳು ಮಹಾ ಚುನಾವಣೆಗಳ ಸಂಬಂಧವಾಗಿ ಜನತೆಗೆ ತಿಳಿವಳಿಕೆ ಕೊಡಬೇಕೆಂದು ಭಾರತದ ಚುನಾವಣಾ ಕಮಿಷನರ್ ಎಸ್. ಸೇನ್ ಅವರು, ಇಂದು ಶಾಸನಸಭಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಾರ್ಥಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನ್ಯಾಯಾಂಗ ಕಾರ್ಯದರ್ಶಿ ಬಿ.ಎಸ್. ಪುಟ್ಟಸ್ವಾಮಿ ಮತ್ತು ಸುದ್ದಿ ಶಾಖಾ ಡೈರೆಕ್ಟರ್ ಬಿ.ಎನ್. ಶ್ರೀಸತ್ಯನ್ ಅವರು ಹಾಜರಿದ್ದರು.

# ವಿಷವರ್ತುಲದ ಒಳ'ಶುಂಠಿ'



**ವಿಶ್ಲೇಷಣೆ**

**ಅಖಿಲೇಶ್ ಚಿಪ್ಪಳಿ**

ಮಲೆನಾಡಿನಲ್ಲಿ ಪಾರಂಪರಿಕವಾಗಿ ಭತ್ತ ಬೆಳೆಯುವ ಪ್ರದೇಶಗಳು ಅಡಿಕೆ ತೋಟಗಳಾಗಿ ಬದಲಾಗುವುದಕ್ಕೂ ಮುನ್ನ, ಆ ಪ್ರದೇಶದಲ್ಲಿ ಮುಂಗಾರಿನಲ್ಲಿ ಭತ್ತದ ಪೈರಿನ ನಾಟಿ ನಡೆಯುತ್ತಿತ್ತು. ಕೆರೆಯ ನೀರನ್ನು ಬಳಸಿ ಬೇಸಿಗೆಯಲ್ಲೂ ಕೊಂಚ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತಿತ್ತು. ಒಂದಷ್ಟು ಜಾಗದಲ್ಲಿ ಮಣ್ಣಿನ ಏರಿ ನಿರ್ಮಿಸಿ ಒಂದಷ್ಟು ಸಾವಯವ ಶುಂಠಿ ಬೆಳೆಯುತ್ತಿದ್ದುದು ಸಾಮಾನ್ಯವಾಗಿತ್ತು. ಶುಂಠಿಯಲ್ಲಿ ಮಿಶ್ರಬೆಳೆಯಾಗಿ ಹಸಿ ಮೆಣಸು, ಬದನೆ, ಟೊಮೆಟೊ ಬೆಳೆಯಲಾಗುತ್ತಿತ್ತು. ಮುಂದಿನ ಮುಂಗಾರಿಗೆ ಮುಂಚಿತವಾಗಿ ಶುಂಠಿಯ ಕೊಯ್ಲು ಮುಗಿದು, ಆ ಜಾಗ ಮತ್ತೆ ಭತ್ತ ಬೆಳೆಯಲು ಅನುವಾಗುತ್ತಿತ್ತು.

ಅಪಾರ ಔಷಧೀಯ ಗುಣಗಳನ್ನು ಹೊಂದಿರುವ ಶುಂಠಿಯ ಮೂಲ ಭಾರತ ಮತ್ತು ಚೀನಾ. ಪಶ್ಚಿಮಘಟ್ಟ ಹಾಗೂ ಭಾರತದ ಈಶಾನ್ಯ ಭಾಗದ ಗುಡ್ಡಗಾಡು ಪ್ರದೇಶಗಳಲ್ಲಿ ನೈಸರ್ಗಿಕವಾಗಿ ಬೆಳೆಯುತ್ತಿದ್ದ ಶುಂಠಿಯ ಘಮ ದೂರದ ಜಾವಾದವರೆಗೂ ಪಸರಿಸಿತ್ತು. ಕೇರಳದ ಕರಾವಳಿ ಮೂಲಕ ಶುಂಠಿಯನ್ನು ಯೂರೋಪ್ ದೇಶಗಳಿಗೆ ಅರಬ್ಬರು ಮಾರುತ್ತಿದ್ದರು. 1498ರಲ್ಲಿ ಭಾರತಕ್ಕೆ ಬಂದ ಪೋರ್ಚುಗೀಸರು ಶುಂಠಿಯನ್ನು ಏಕಜಾತಿ ಬೆಳೆಯನ್ನಾಗಿ ಬೆಳೆಯುವಂತೆ ಇಲ್ಲಿನ ಮಲಬಾರಿ ರೈತರಿಗೆ ಆಮಿಷವೊಡ್ಡಿದರು.

ಮಲಬಾರಿ ರೈತರಿಗೆ ಶುಂಠಿಯನ್ನಷ್ಟೇ ಬೆಳೆಯುವ ಆಮಿಷ ಒಪ್ಪಿಗೆಯಾಗಲಿಲ್ಲ. ಆಗಿನ ರಾಜರು ಪೋರ್ಚುಗೀಸರನ್ನು ವ್ಯಾಪಾರದ ಸಲುವಾಗಿ ರಾಜ್ಯದೊಳಗೆ ರತ್ನಗಂಬಳಿ ಹಾಸಿ ಬರಮಾಡಿಕೊಂಡಿದ್ದರು. ಹೀಗಾಗಿ, ಪೋರ್ಚುಗೀಸರ ಆಸೆಗೆ ರಾಜರ ಆದೇಶವೂ ಜೊತೆಯಾಗಿ, ಏಕಜಾತಿಯ ಸಂಬಾರ ಪದಾರ್ಥವಾಗಿ ಶುಂಠಿಯನ್ನು ಬೆಳೆಯುವುದು ಮಲಬಾರಿಗಳಿಗೆ ಅನಿವಾರ್ಯವಾಯಿತು. ನಂತರದಲ್ಲಿ ಡಚ್ಚರು ಪೋರ್ಚುಗೀಸರನ್ನು ಓಡಿಸಿ, ಇಲ್ಲಿನ ಸಂಬಾರ ಪದಾರ್ಥಗಳಿಗೆ ಜಾಗತಿಕ ಮಾರುಕಟ್ಟೆ ಒದಗಿಸಿದರು. 1608ರಲ್ಲಿ ಭಾರತಕ್ಕೆ ಬಂದು ಡಚ್ಚರ ಜಾಗವನ್ನು ಆಕ್ರಮಿಸಿದ ಈಸ್ಟ್ ಇಂಡಿಯಾ ಕಂಪನಿ, 250 ವರ್ಷಗಳ ಕಾಲ ಭಾರತದಲ್ಲಿ ಆಡಳಿತ ನಡೆಸಿದ್ದು ಈಗ ಇತಿಹಾಸ.

ಭತ್ತದ ಗದ್ದೆಗಳಲ್ಲಿ ಬೆಳೆಯುವ ಶುಂಠಿಗೆ 'ಮಹಾಕಾಳಿ' ಎಂಬ ರೋಗ ಶುರುವಾಗುವುದರೊಂದಿಗೆ ಶುಂಠಿ ಬೆಳೆ ಹೊಸತೊಂದು ಬದಲಾವಣೆಗೆ ತನ್ನನ್ನೊಡ್ಡಿಕೊಂಡಿತು. ಮೊದಲನೇ ವರ್ಷದಲ್ಲಿ ಚೆನ್ನಾಗಿ ಫಸಲು ನೀಡುವ ಗದ್ದೆಯೊಂದರಲ್ಲಿ, ಎರಡನೇ ವರ್ಷದ ಬೆಳೆಗೆ ಈ ರೋಗ ಬಾಧಿಸತೊಡಗಿತು. ಬಹು ಲಾಭದ ಬೆಳೆಯಾದ ಶುಂಠಿ ಕೃಷಿಯನ್ನು ಕೈಬಿಡಲು ರೈತರು ತಯಾರಿರಲಿಲ್ಲ. ಅವರೆಗೂ ಶುಂಠಿ ಬೆಳೆಯದಿರುವ ಗದ್ದೆಗಳನ್ನು ಹುಡುಕಿಕೊಂಡು ಹೊರಟರು.

ನೀರು ಬಸಿದು ಹೋಗುವ ಗುಡ್ಡಗಳಲ್ಲಿ ಶುಂಠಿ ಬೆಳೆಯುವ ಪರಿಪಾಟ ಪ್ರಾರಂಭವಾಯಿತು. ಹಸಿರು ಕ್ರಾಂತಿಯ ನಂತರದಲ್ಲಿ ಭತ್ತದ ಬೆಳೆಗೆ ಬೀಳುವ ಬೆಂಕಿ ರೋಗವನ್ನು ಹತೋಟಿಯಲ್ಲಿ ಇಡಲು ಫಾಲಿಡಾಲ್ ಎಂಬ ಕೀಟನಾಶಕ ಬಳಕೆಗೆ ಬಂತು. ಜಾಗತೀಕರಣದ ನಂತರದಲ್ಲಿ ಕಾಫಿ ಬೆಳೆಗೆ ಉತ್ತಮ ಬೆಲೆ ಬಂತು. ಕೊಡಗಿನಲ್ಲಿ ಕಾಫಿ ಬೆಳೆಯ ವಿಸ್ತರಣೆ ಪ್ರಾರಂಭವಾಯಿತು. ಕೇರಳದ ಸಿರಿಯನ್ ಕ್ಯಾಥೋಲಿಕ್ ಜನರು ಮೀನು ಮಾರಲು ಕೊಡಗಿನವರೆಗೂ ಬರುತ್ತಿದ್ದರು. ಅವರು ಕಾಫಿ ತೋಟಗಳ ವಿಸ್ತರಣೆಗೆ ಕಾಡು ಕಡಿಯುವ ಕೆಲಸಕ್ಕೆ ಕೇರಳದವರನ್ನು ಕರೆ ತಂದರು.

ಕೇರಳದಿಂದ ಬಂದವರು ಕಾಡು ಸವರಿ, ಅಲ್ಲಿ ಶುಂಠಿ ಬೆಳೆಯುವುದರ ಜೊತೆಗೆ, ಕೊಡಗಿನವರಿಗೆ ಕಾಫಿ ಗಿಡಗಳನ್ನು ನಾಟಿ ಮಾಡಿಕೊಡುತ್ತಿದ್ದರು. ಹೀಗೆ, ಪ್ರತಿ ವರ್ಷ ಹೊಸ ಜಾಗಗಳಲ್ಲಿ ಶುಂಠಿ ತನ್ನ ಪಾರಮ್ಯ ಮೆರೆಯಿತು. ಜೊತೆಗೆ ವಿವಿಧ ಕಳೆಗಳನ್ನು ನಿವಾರಿಸಲು ಶುಂಠಿ ಬೆಳೆ ನಾಟಿ ಮಾಡುವುದಕ್ಕೂ ಮೊದಲು ಹಾಗೂ ಬೆಳೆ ಬಂದ ನಂತರದಲ್ಲಿ ಬೆಳೆ ಬರುವವರೆಗೂ ಕಾಯುವ ಸಮಯದಲ್ಲಿ ಶುಂಠಿ ಎಲೆಗಳ ಸಮೇತ ಬಾಕಿ ಕಳೆಗಳ ನಾಶ ಮಾಡಲು ಕಳೆನಾಶಕಗಳ ವ್ಯಾಪಕ ಬಳಕೆ ಪ್ರಾರಂಭವಾಯಿತು.

ಶುಂಠಿಗೆ ಬರುವ ಸಂಭಾವ್ಯ ರೋಗಗಳನ್ನು ಹತೋಟಿಯಲ್ಲಿಡಲು ಅಮೆರಿಕ ಮತ್ತು ಯೂರೋಪ್‌ನ ದೇಶಗಳಲ್ಲಿ ನಿಷೇಧಗೊಂಡ ಕ್ಲೋರೋಫೈರಿಫಾಸ್, ಕಾರ್ಬೋಫ್ಯೂರಾನ್ ಅಂತಹ ಘೋರ ರಾಸಾಯನಿಕಗಳ ಅನಿಯಂತ್ರಿತ ಬಳಕೆ ಪ್ರಾರಂಭವಾಯಿತು. ಇದನ್ನು ಸಿಂಪಡಣೆ ಮಾಡುವ ಕೆಲಸಗಾರರು ಆರೋಗ್ಯದ ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಪ್ಯಾರಾಕ್ವಾಟ್ ಡೈ ಕ್ಲೋರೈಡ್ ಕಳೆನಾಶಕ ಸಿಂಪಡಣೆ ಮಾಡುವ ಸಮಯದಲ್ಲಿ ಕೆಲಸಗಾರರು ಮೃತಪಟ್ಟ ಉದಾಹರಣೆಗಳೂ ಇವೆ.

ಮೊದಲಿಗೆ ಕೊಡಗು, ಚಿಕ್ಕಮಗಳೂರು, ಶಿವಮೊಗ್ಗದಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಅಧಿಕ ಪ್ರಮಾಣದಲ್ಲಿ ಶುಂಠಿ ಬೆಳೆಯಲಾಗುತ್ತಿತ್ತು. ಪ್ರಸ್ತುತ, ಯಾದಗಿರಿ ಜಿಲ್ಲೆಯೊಂದನ್ನು ಹೊರತುಪಡಿಸಿ, ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಶುಂಠಿಯನ್ನು ಹಣದ ಬೆಳೆಯಾಗಿ ಬೆಳೆಯಲಾಗುತ್ತಿದೆ. ಶುಂಠಿ ಬೆಳೆ ವಾಣಿಜ್ಯ ಬೆಳೆ ಆಗುವ ಮೊದಲು ಆರೋಗ್ಯಯುಕ್ತ ಶುಂಠಿ ಬೆಳೆಯುವುದರಲ್ಲಿ ಭಾರತ ಮೊದಲನೇ ಸ್ಥಾನದಲ್ಲಿತ್ತು. ಈಗಲೂ, ವಿಷಯುಕ್ತ ಶುಂಠಿ ಬೆಳೆಯುವುದರಲ್ಲೂ ಮೊದಲನೇ ಸ್ಥಾನದಲ್ಲಿದೆ. ತೋಟಗಾರಿಕೆ ಇಲಾಖೆಯ ಅಧಿಕೃತ ಮಾಹಿತಿ ಪ್ರಕಾರ, ಶಿವಮೊಗ್ಗ ಜಿಲ್ಲೆಯಲ್ಲಿ ಶುಂಠಿ ಬೆಳೆಯುವ ಪ್ರದೇಶ ಸುಮಾರು ಆರು ಸಾವಿರ ಹೆಕ್ಟೇರ್. ಅನಧಿಕೃತವಾಗಿ ಶುಂಠಿ ಬೆಳೆಯುತ್ತಿರುವ ಪ್ರದೇಶ 10ರಿಂದ 20 ಪಟ್ಟು ಹೆಚ್ಚಿದೆ ಎಂದು ಶುಂಠಿ ಕುರಿತು ಸಂಶೋಧನೆ ಮಾಡುತ್ತಿರುವ ಭರತ್ ಅನಂತನಾರಾಯಣ ಹೇಳುತ್ತಾರೆ.

ಕರ್ನಾಟಕದಲ್ಲಿ ಬೆಳೆಯಲಾಗುವ ಶುಂಠಿಯನ್ನು ಬಳಸುವವರು ಉತ್ತರ ಭಾರತೀಯರು. ಶುಂಠಿಯನ್ನು ವ್ಯಾಪಕವಾಗಿ ಬಳಸುವವರಿಗೆ, ಅದನ್ನು ಬೆಳೆಯುವ ಹಿಂದಿನ ಕರಾಳತೆಯ ಅರಿವಿಲ್ಲ. ವ್ಯಾಪಕವಾಗಿ ಶುಂಠಿ ಬೆಳೆಯುವ ರೈತರು ತಾವು ಬೆಳೆದ ವಿಷಯುಕ್ತ ಶುಂಠಿಯನ್ನು ತಾವೇ ಬಳಸುವುದಿಲ್ಲವೆಂಬುದೂ ಸತ್ಯ. ಈ ಹಿಂದೆ, ಪಂಜಾಬ್ ರಾಜ್ಯದ ಭಟಿಂಡಾದಲ್ಲಿ ವಿಪರೀತ ರಾಸಾಯನಿಕಗಳನ್ನು ಬಳಸಿದ್ದರಿಂದ, ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಯಿತು. ಅಲ್ಲಿ ಕ್ಯಾನ್ಸರ್‌ಗೆ ಸುಲಭ ಚಿಕಿತ್ಸೆ ಲಭ್ಯವಿಲ್ಲದ ಕಾರಣಕ್ಕೆ, ರಾಜಸ್ಥಾನದ ಬೀಕಾನೇರ್ ಕ್ಯಾನ್ಸರ್ ಆಸ್ಪತ್ರೆಗೆ ರೈಲಿನ ಮುಖಾಂತರ ರೋಗಿಗಳು ಸಂಚರಿಸುತ್ತಿದ್ದರು. ಆ ರೈಲನ್ನು 'ಕ್ಯಾನ್ಸರ್ ರೈಲು' ಎಂದೇ ಕರೆಯಲಾಗುತ್ತಿತ್ತು.

> ಆರೋಗ್ಯಕರ ಬೆಳೆಯಾಗಿದ್ದ ಶುಂಠಿ ವ್ಯಾಪಾರಿ ಬೆಳೆಯ ಸ್ವರೂಪ ಪಡೆದುಕೊಂಡಂತೆ ಸಮಸ್ಯೆಗಳ ಚಕ್ರವ್ಯೂಹವೂ ಶುರುವಾಯಿತು. ವಾಣಿಜ್ಯ ಬೆಳೆ ಆಗುವ ಮೊದಲು ಉತ್ತಮ ಶುಂಠಿಯನ್ನು ಬೆಳೆಯುವುದರಲ್ಲಿ ಭಾರತ ಮೊದಲನೇ ಸ್ಥಾನದಲ್ಲಿತ್ತು. ಈಗಲೂ ಮೊದಲನೇ ಸ್ಥಾನದಲ್ಲಿದೆ, ವಿಷಯುಕ್ತ ಶುಂಠಿ ಉತ್ಪಾದನೆಯಲ್ಲಿ!

ಮಲೆನಾಡಿನಲ್ಲಿ ಶುಂಠಿ ಬೆಳೆಯಲು ಬಳಸುವ ಇಮಿಡಾಕ್ಲೋಪ್ರಿಡ್ ಎಂಬ ರಾಸಾಯನಿಕವನ್ನು ಇದೀಗ ಪಂಜಾಬ್ ರಾಜ್ಯದಲ್ಲಿ ನಿಷೇಧಿಸಲಾಗಿದೆ. 2014ರಿಂದ 2018ರ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ 270 ರೈತರು– ಇಮಿಡಾಕ್ಲೋಪ್ರಿಡ್, ಮೊನೋಕ್ರೋಟೋಫಾಸ್, ಫಿಪ್ರೋನಿಲ್, ಸೈಪರ್ಮೆಥ್ರಿನ್, ಪ್ರೋಫೆಫೋನಾಸ್ ರಾಸಾಯನಿಕಗಳನ್ನು ಬಳಸಿದ್ದರಿಂದ ಮೃತಪಟ್ಟಿದ್ದು ದೃಢಗೊಂಡಿತ್ತು. ಆ ದುರಂತದ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಸರ್ಕಾರ, ರೈತರ ಸಾವಿಗೆ ಕಾರಣವಾದ ರಾಸಾಯನಿಕಗಳ ಬಳಕೆಯನ್ನು ನಿಷೇಧಿಸಿದೆ.

ಯಾವುದೇ ಬೆಳೆಗೆ ರಾಸಾಯನಿಕಗಳನ್ನು ಸಿಂಪಡಣೆ ಮಾಡುವಾಗ ನಿರ್ದಿಷ್ಟ ಅನುಪಾತವನ್ನು ಅನುಸರಿಸಬೇಕಾಗುತ್ತದೆ. ಅಂದರೆ, ನೂರು ಲೀಟರ್ ನೀರಿಗೆ ಒಂದು ಮಿಲಿ ರಾಸಾಯನಿಕವನ್ನು ಹಾಕಬೇಕು ಎಂದಿಟ್ಟುಕೊಳ್ಳಿ. ಈ ತಿಳಿವಳಿಕೆ ವಿಷಕಾರಿ ರಾಸಾಯನಿಕಗಳನ್ನು ಮಾರುವವರಿಗೆ ಇರುವುದಿಲ್ಲ. ಜನರ ಜೀವಕ್ಕಿಂತಲೂ ತಮ್ಮ ದಾಸ್ತಾನು ಖಾಲಿ ಮಾಡಿಕೊಳ್ಳುವುದಕ್ಕೆ ಒತ್ತು ನೀಡುವ ಅವರು, ನೂರು ಲೀಟರ್ ನೀರಿಗೆ 50 ಮಿಲಿ ಹಾಕಿ ಎಂದು ರೈತರಿಗೆ ಸಲಹೆ ನೀಡುತ್ತಾರೆ. ರೋಗ ಬೇಗ ವಾಸಿ ಆಗುತ್ತದೆಂದು ರೈತ ನೂರು ಮಿಲಿ ರಾಸಾಯನಿಕ ಬೆರೆಸಿ ಸಿಂಪಡಣೆ ಮಾಡುತ್ತಾನೆ. ತಪ್ಪು ಲೆಕ್ಕಾಚಾರ, ಹೊಲದಲ್ಲಿ ದುಡಿಯುವ ಕೃಷಿಕಾರ್ಮಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಈ ವಿಷಚಕ್ರದಿಂದಾಗಿ, ಶುಂಠಿ ಬೆಳೆದ ಪ್ರದೇಶದಲ್ಲಿ ಸೀಸ, ಕ್ರೋಮಿಯಂ, ನಿಕ್ಕಲ್, ಆರ್ಸೆನಿಕ್ ಮುಂತಾದ ಭಾರ ಲೋಹಗಳ ಪ್ರಮಾಣ ನಿಗದಿತ ಪ್ರಮಾಣಕ್ಕಿಂತಲೂ ಹೆಚ್ಚಾಗಿರುವುದನ್ನು ಸಂಶೋಧಕರು ದಾಖಲು ಮಾಡಿದ್ದಾರೆ.

ಮುಂಗಾರಿನಲ್ಲಿ ಬೆಳೆಯುವ ಶುಂಠಿ ಬದುಗಳ ಪಕ್ಕದಲ್ಲಿ ಹೆಚ್ಚುವರಿ ನೀರು ಬಸಿದು ಹೋಗಲು ಚಿಕ್ಕ ಚಿಕ್ಕ ಕಾಲುವೆಗಳನ್ನು ನಿರ್ಮಿಸಲಾಗುತ್ತದೆ. ಇದರಿಂದಾಗಿ, ಮಣ್ಣಿನ ಫಲವತ್ತತೆಯನ್ನು ಹೆಚ್ಚು ಮಾಡುವ ಸಾವಯವ ಜೈವಿಕ ಪದಾರ್ಥಗಳು ಕೊಚ್ಚಿ ಹೋಗುತ್ತವೆ. ಹೀಗೆ, ಒಂದು ಹೆಕ್ಟೇರ್ ಪ್ರದೇಶದಿಂದ 16.4 ಟನ್‌ನಷ್ಟು ಸಾರದ ಮೇಲ್ಮಣ್ಣು ಕೊಚ್ಚಿ ಹೋಗುತ್ತದೆ. ಈ ಪ್ರಕ್ರಿಯೆಯಿಂದಾಗಿ ಮಣ್ಣಿನ ಉತ್ಪಾದಕ ಶಕ್ತಿ ಕ್ಷೀಣಿಸುತ್ತದೆ. ಭಾರತದಲ್ಲಿ ಪ್ರತಿ ವರ್ಷ ಸವಕಳಿಯಾಗುವ ಮಣ್ಣಿನ ಪ್ರಮಾಣ 74 ಮಿಲಿಯನ್ ಟನ್ ಮತ್ತು ಮಣ್ಣಿನ ಅನುತ್ಪಾದಕತೆ-ಯಿಂದ ಸಂಭವಿಸುವ ಆರ್ಥಿಕ ನಷ್ಟ ₹89 ಸಾವಿರ ಕೋಟಿ. ಶುಂಠಿ ಬೆಳೆಯಲು ಜಮೀನನ್ನು 18 ತಿಂಗಳು ಕಾಲ ಗುತ್ತಿಗೆ ನೀಡುವ ರೈತ, ₹30 ಸಾವಿರದಿಂದ ₹60 ಸಾವಿರವನ್ನು ನೇರವಾಗಿ ಪಡೆಯುತ್ತಾನೆ. ಆದರೆ, ಮಣ್ಣಿನ ಸವಕಳಿಯಿಂದಾಗಿ ಉಂಟಾಗುವ ನಷ್ಟದ ಪ್ರಮಾಣ ಗಳಿಕೆಗಿಂತಲೂ ತುಂಬಾ ಹೆಚ್ಚಾಗಿರುತ್ತದೆ.

ನೆಲದಲ್ಲಿ ಬೆಳೆಯುವ ಶುಂಠಿಯಲ್ಲಿ ಮಣ್ಣಿನ ಅಂಶವಿರುತ್ತದೆ. ಉತ್ತರ ಭಾರತ ಹಾಗೂ ಬಾಂಗ್ಲಾದೇಶದಲ್ಲಿ ತೊಳೆದ ಶುಂಠಿಗೆ ಬೇಡಿಕೆ ಹೆಚ್ಚು. ಕೊಡಗು, ಮೈಸೂರು, ಹಾಸನ, ಶಿವಮೊಗ್ಗ ಜಿಲ್ಲೆಗಳಲ್ಲಿ ಶುಂಠಿ ತೊಳೆಯುವ ನೂರಾರು ಕೇಂದ್ರಗಳಿವೆ. ಉದಾಹರಣೆಗೆ, ಕಾವೇರಿ, ಕಬಿನಿ, ಹಾರಂಗಿ ಮತ್ತು ಹೇಮಾವತಿ ನದಿ ತಟಗಳಲ್ಲಿರುವ ಶುಂಠಿ ತೊಳೆಯುವ ಕೇಂದ್ರಗಳು, ನದಿಯ ಪಕ್ಕದಲ್ಲೇ ಕೊಳವೆ ಬಾವಿಗಳನ್ನು ಕೊರೆದು, ಆ ನೀರನ್ನು ಶುಂಠಿ ತೊಳೆಯಲು ಬಳಸುತ್ತಿವೆ.

2023ರಲ್ಲಿ 43,200 ಲೋಡು ತೊಳೆದ ಶುಂಠಿಯನ್ನು ಹೊರರಾಜ್ಯಗಳಿಗೆ ಕಳುಹಿಸಲಾಗಿತ್ತು. ಒಂದು ಲೋಡು ಶುಂಠಿ ತೊಳೆಯಲು 10 ಸಾವಿರ ಲೀಟರ್‌ಗೂ ಹೆಚ್ಚು ನೀರು ಬೇಕಾಗುತ್ತದೆ. ರಾಜಸ್ಥಾನವನ್ನು ಬಿಟ್ಟರೆ ಕರ್ನಾಟಕವು ಭಾರತದ ಎರಡನೇ ಬರಪೀಡಿತ ರಾಜ್ಯವಾಗಿದೆ. 2023ರಲ್ಲಿ 432 ಮಿಲಿಯನ್ ಲೀಟರ್ ಕುಡಿಯುವ ನೀರನ್ನು ಶುಂಠಿ ತೊಳೆಯಲು ಬಳಸಲಾಗಿದೆ ಎನ್ನುವುದು ಆತಂಕ ಉಂಟುಮಾಡುವ ವಿಷಯ. ಶುಂಠಿ ತೊಳೆದ ನೀರನ್ನು ಶುದ್ಧೀಕರಿಸದೇ ನದಿ ಪಾತ್ರಗಳಲ್ಲಿ ಬಿಡಲಾಗುತ್ತದೆ. ಇದರಿಂದಾಗಿ ನದಿಯ ನೀರು ವಿಷದ ಮಡುವಾಗುತ್ತದೆ, ತನ್ನ ಹರಿವಿನುದ್ದಕ್ಕೂ ವಿಷವನ್ನು ಕೊಂಡೊಯ್ಯುತ್ತದೆ. ಬೆಂಗಳೂರಿನವರು ಈ ನೀರನ್ನೇ ಕುಡಿಯುತ್ತಾರೆ ಎಂಬುದು ಒಪ್ಪಿಕೊಳ್ಳಲೇಬೇಕಾದ ಸತ್ಯ.

ಅತಿಹೆಚ್ಚು ರಾಸಾಯನಿಕಗಳನ್ನು ಬಳಸುವುದರಿಂದ ಪರಾಗಸ್ಪರ್ಶಕ್ಕೆ ಕಾರಣವಾಗುವ ಜೀವಿಗಳು, ಕಶೇರುಕ ಅಕಶೇರುಕಗಳು, ಜಲಚರಗಳು, ಮಣ್ಣಿನಲ್ಲಿರುವ ಸೂಕ್ಷ್ಮಾಣುಗಳು ನಾಶವಾಗುತ್ತವೆ. ಈ ಲೆಕ್ಕ ಎಲ್ಲಿಯೂ ಸಿಗುವುದಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ, ಮುಂದೊಂದು ದಿನ ಕರ್ನಾಟಕದಲ್ಲಿ ತಾಲ್ಲೂಕಿಗೊಂದು ಕ್ಯಾನ್ಸರ್ ಆಸ್ಪತ್ರೆ ತೆರೆಯುವ ಅನಿವಾರ್ಯತೆಯು ಸರ್ಕಾರಕ್ಕೆ ಬರಬಹುದು. ಈಗ ಹಳತಾಗಿರುವ 'ಭಟಿಂಡಾ ಟು ಬೀಕಾನೇರ್ ಕ್ಯಾನ್ಸರ್ ರೈಲಿನ ಕಥೆ' ಕರ್ನಾಟಕದಲ್ಲಿ ಹೊಸ ಹುಟ್ಟು ಪಡೆಯಬಹುದು.

## ವಾಚಕರ ವಾಣಿ

### ಆನ್‌ಲೈನ್ ಬೆಟ್ಟಿಂಗ್ ನಿಷೇಧ ಸ್ವಾಗತಾರ್ಹ

**ಇತ್ತೀಚೆಗೆ** ವ್ಯಾಪಕವಾಗಿ ಹಬ್ಬಿರುವ ಆನ್‌ಲೈನ್ ಬೆಟ್ಟಿಂಗ್‌ಗೆ ನಿಷೇಧ ಹೇರಲು ಸರ್ಕಾರ ಮುಂದಾಗಿರುವ ಸುದ್ದಿ ಓದಿ ಆನಂದವಾಯಿತು (ಪ್ರ.ವಾ., ಜುಲೈ 7). ಕಳೆದ ವಾರವಷ್ಟೇ ದಾವಣಗೆರೆಯ ಯುವಕನೊಬ್ಬ ಆನ್‌ಲೈನ್ ಬೆಟ್ಟಿಂಗ್‌ನಲ್ಲಿ ₹18 ಲಕ್ಷ ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ. ಆತ್ಮಹತ್ಯೆಗೂ ಮುನ್ನ ಬರೆದಿಟ್ಟಿದ್ದ ಪತ್ರದಲ್ಲಿ ಬೆಟ್ಟಿಂಗ್ ಆ್ಯಪ್‌ಗಳ ವಂಚನೆ ಬಗ್ಗೆ ವಿವರಿಸಿದ್ದ. ಆತನ ಸಾವಿಗೆ ಸ್ಪಂದನದ ರೂಪದಲ್ಲಿ, ಆನ್‌ಲೈನ್ ಬೆಟ್ಟಿಂಗ್‌ಗೆ ಅಂಕುಶ ಹಾಕಲು ಸರ್ಕಾರ ಮುಂದಾಗಿರುವುದು ಶ್ಲಾಘನೀಯ. ಆನ್‌ಲೈನ್ ಬೆಟ್ಟಿಂಗ್‌ಗೆ ಸಂಪೂರ್ಣ ನಿಯಂತ್ರಣ ಹೇರುವ ಕಾನೂನು ಆದಷ್ಟು ಬೇಗ ಜಾರಿಗೆ ಬಂದು, ಅಮಾಯಕರನ್ನು ಆರ್ಥಿಕ ನಷ್ಟ ಮತ್ತು ಪ್ರಾಣಪಾಯದಿಂದ ರಕ್ಷಿಸಲಿ.

**ಆಶಾ ಅಪ್ರಮೇಯ,** ದಾವಣಗೆರೆ

### ದೇಗುಲದಲ್ಲಿ ವೃದ್ಧರಿಗೆ ಪ್ರತ್ಯೇಕ ಸಾಲಿರಲಿ

**ತಿರುಪತಿ,** ಧರ್ಮಸ್ಥಳ, ಮಂತ್ರಾಲಯ, ಕುಕ್ಕೆ ಸುಬ್ರಹ್ಮಣ್ಯ, ಕೊಲ್ಲೂರುಗಳಂಥ ತೀರ್ಥಕ್ಷೇತ್ರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುವುದು ವಾಡಿಕೆ. ಯುವಜನರಿಗೆ ಸಮನಾಗಿ ವಯೋವೃದ್ಧರು ಸರತಿ ಸಾಲಿನಲ್ಲಿ ನಿಂತು ಮುಂದೆ ಸಾಗುವುದು ಪ್ರಯಾಸದ ಕೆಲಸ. ಹಾಗಾಗಿ, ದೇವರ ದರ್ಶನಕ್ಕೆ ಹೆಚ್ಚು ಜನ ಸೇರುವ ಕ್ಷೇತ್ರಗಳಲ್ಲಿ ಹಿರಿಯ ನಾಗರಿಕರಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸುವುದು ಸೂಕ್ತ. ಕಾಲ್ತುಳಿತದ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿರುವುದರಿಂದಲೂ ಹಿರಿಯರ ಸುರಕ್ಷತೆ ಬಗ್ಗೆ ಜಾಗರೂಕತೆ ವಹಿಸಬೇಕಾಗಿದೆ.

**ನರಸಿಂಹಮೂರ್ತಿ,** ಬೆಂಗಳೂರು

### ಮಕ್ಕಳ ತಪಾಸಣೆ: ತರಾತುರಿ ಬೇಡ

**ರಾಜ್ಯದಲ್ಲಿ** ಹೆಚ್ಚುತ್ತಿರುವ ಹೃದಯಾಘಾತಗಳ ಹಿನ್ನೆಲೆಯಲ್ಲಿ 15 ವರ್ಷದೊಳಗಿನ ಮಕ್ಕಳ ಹೃದಯ ತಪಾಸಣೆ ಮಾಡುವಂತೆ ತಜ್ಞರ ಸಮಿತಿ ಸಲಹೆ ನೀಡಿದೆ (ಪ್ರ.ವಾ., ಜುಲೈ 6). ಸರ್ಕಾರ ತಪಾಸಣೆಯ ಆದೇಶವನ್ನು ತರಾತುರಿಯಲ್ಲಿ ಹೊರಡಿಸಬಾರದು. ಹೃದಯ ತಪಾಸಣೆ ಸರಳ ಪ್ರಕ್ರಿಯೆ-ಯಲ್ಲ. ಅದಕ್ಕೆ, ನುರಿತ ಹೃದ್ರೋಗ ತಜ್ಞರು ಹಾಗೂ ಪರಿಕರಗಳ ಅಗತ್ಯವಿದೆ. ಸಾಕಷ್ಟು ತಯಾರಿಯೂ ಆಗಬೇಕಿದೆ. ಇಂತಹ ತಪಾಸಣೆಗೆ ಶಾಲೆ ಸೂಕ್ತ ಸ್ಥಳವಲ್ಲ. ತಪಾಸಣೆ ಬಗೆಗೆ ಪಾಲಕರಿಗೆ ಆತಂಕವೂ ಇರುತ್ತದೆ. ಹಾಗಾಗಿ, ಪಾಲಕರೇ ಸ್ವಇಚ್ಛೆಯಿಂದ ತಮ್ಮ ಮಕ್ಕಳೊಂದಿಗೆ ತಾಲ್ಲೂಕು ಆರೋಗ್ಯ ಕೇಂದ್ರಗಳಿಗೆ ತೆರಳಿ ತಪಾಸಣೆ ಮಾಡಿಸಿಕೊಳ್ಳುವ ಅವಕಾಶ ಕಲ್ಪಿಸಬೇಕು. ತಪಾಸಣೆ ಮಾಡಿಸಿಕೊಳ್ಳುವುದನ್ನು ಮಕ್ಕಳ ಶೈಕ್ಷಣಿಕ ದಾಖಲೆಯೊಂದಿಗೆ ಜೋಡಿಸುವುದಾಗಲೀ, ಕಡ್ಡಾಯ ಮಾಡುವುದಾಗಲೀ ಮಾಡಬಾರದು.

**ಸುರೇಂದ್ರ ಪೈ,** ಭಟ್ಕಳ

### ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆ ರದ್ದುಗೊಳಿಸಿ

**ಸರ್ಕಾರಿ** ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಗುರ್ತಿಸುವ ಪ್ರಕ್ರಿಯೆಯು ಗೊಂದಲದ ಗೂಡಾಗಿದೆ. ಆಯಾ ಶಾಲೆಯಲ್ಲಿ ಕಳೆದ ವರ್ಷದ ಡಿಸೆಂಬರ್ ಅಂತ್ಯಕ್ಕೆ ಇದ್ದ ಮಕ್ಕಳ ದಾಖಲಾತಿಯ ಮಾನದಂಡದಲ್ಲಿ ಹೆಚ್ಚುವರಿ ಶಿಕ್ಷಕರನ್ನು ಗುರ್ತಿಸಲಾಗುತ್ತಿದೆ. ಆದರೆ, ಪ್ರಸಕ್ತ ಶೈಕ್ಷಣಿಕ ವರ್ಷದ ಜೂನ್‌ನಲ್ಲಿ ನಡೆದ ಮಕ್ಕಳ ದಾಖಲಾತಿ ಸಂದರ್ಭದಲ್ಲಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಈಗ ಮಕ್ಕಳು ಹೆಚ್ಚಿದ್ದರೂ ಆಯಾ ಶಾಲೆಯ ಶಿಕ್ಷಕರು ಹೆಚ್ಚುವರಿ ಪ್ರಕ್ರಿಯೆಗೆ ಒಳಪಡುತ್ತಾರೆ.

2017ರ ವೃಂದ ಮತ್ತು ನೇಮಕಾತಿ ನಿಯಮದಂತೆ ಪ್ರಾಥಮಿಕ ಶಾಲಾ ಶಿಕ್ಷಕರು (ಪಿಎಸ್‌ಟಿ) ಹಿಂಬಡ್ತಿ ಅನುಭವಿಸುವಂತಾಗಿದೆ. ಈ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ಈ ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಿದರೆ, ಆಯಾ ತಾಲ್ಲೂಕಿನ ಒಳಗೆ ಸೂಕ್ತ ಹುದ್ದೆಗಳು ಲಭ್ಯವಾಗದಿದ್ದರೆ ಅಂತರತಾಲ್ಲೂಕು ಅಥವಾ ಅಂತರಜಿಲ್ಲೆಗೆ ವರ್ಗಾವಣೆಯಾಗಬೇಕಾದ ಪರಿಸ್ಥಿತಿ ಸೃಷ್ಟಿಯಾಗಲಿದೆ. ಹಾಗಾಗಿ, ವೃಂದ ಮತ್ತು ನೇಮಕಾತಿ ನಿಯಮವು ತಿದ್ದುಪಡಿ ಆಗುವವರೆಗೆ ಹಾಗೂ ಈ ಸಂಬಂಧ ನ್ಯಾಯಾಲಯದ ತೀರ್ಪು ಬರುವವರೆಗೂ ಹೆಚ್ಚುವರಿ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ರದ್ದುಪಡಿಸಬೇಕಿದೆ.

**ಹರಳಹಳ್ಳಿ ಪುಟ್ಟರಾಜು,** ಪಾಂಡವಪುರ

### ಕನ್ನಡ ನಮ್ಮ ಧ್ವನಿಯಾಗಿರಲಿ

**ಪ್ರತಿದಿನವೂ** ವಿವಿಧ ಬ್ಯಾಂಕ್‌ಗಳಿಂದ ವೈಯಕ್ತಿಕ ಸಾಲ ಅಥವಾ ಕ್ರೆಡಿಟ್ ಕಾರ್ಡ್ ನೀಡುವ ಬಗ್ಗೆ ಮೊಬೈಲ್ ಕರೆಗಳು ಬರುತ್ತವೆ. ಸಾಮಾನ್ಯವಾಗಿ ಅವರು ಮಾತನಾಡುವ ಭಾಷೆ ಹಿಂದಿ. ನನಗೆ ಹಿಂದಿ ಅಲ್ಪಸ್ವಲ್ಪ ತಿಳಿದಿದ್ದರೂ ಹಿಂದಿಯಲ್ಲಿ ಪ್ರತಿಕ್ರಿಯಿಸುವುದಿಲ್ಲ. ಇತ್ತೀಚೆಗೆ, ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ನಗರಗಳ ಅಂಗಡಿಗಳು, ಹೋಟೆಲ್‌ಗಳು ಮತ್ತು ಖಾಸಗಿ ಕಚೇರಿಗಳಲ್ಲಿ ಹಿಂದಿ ಭಾಷಿಕರು ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆ. ನಾವು ಕಡ್ಡಾಯವಾಗಿ ಕನ್ನಡದಲ್ಲಿಯೇ ವ್ಯವಹರಿಸುವುದನ್ನು ರೂಢಿಸಿಕೊಳ್ಳಬೇಕಾಗಿದೆ. ನಮ್ಮ ಜಾಗದಲ್ಲಿ ಕನ್ನಡವೊಂದೇ ನಮ್ಮ ಧ್ವನಿಯಾಗಿರಲಿ.

**ಅಶೋಕ ಎನ್.ಎಚ್.,** ಕೋಲಾರ

### ನಾಡ ಕಚೇರಿಯಲ್ಲಿ ಕೆಲಸ ವಿಳಂಬ

**ಕೆಲ** ತಿಂಗಳ ಹಿಂದೆ ನನ್ನ ಕೃಷಿ ಭೂಮಿಗೆ ಸಂಬಂಧಿಸಿದ ಸಣ್ಣ ಕೆಲಸವೊಂದರ ನಿಮಿತ್ತ ನಾಡ ಕಚೇರಿಗೆ ತೆರಳಿ ಅರ್ಜಿ ಸಲ್ಲಿಸಿದ್ದೆ. ಅಧಿಕಾರಿಗಳು 'ಮುಂದಿನ ವಾರ ಬನ್ನಿ' ಎಂದು ಹೇಳಿದ್ದರು. ಎರಡು, ಮೂರು ತಿಂಗಳು ಕಳೆದರೂ ಬೇಜವಾಬ್ದಾರಿ-ತನದ ಉತ್ತರ ನೀಡುತ್ತಾ ನನ್ನ ಕೆಲಸವನ್ನು ಮಾಡಿಕೊಡದೆ ಅಲೆದಾಡಿಸುತ್ತಿದ್ದಾರೆ. ವಿದ್ಯಾವಂತನಾದ ನನ್ನದೇ ಈ ಪಾಡಾದರೆ, ಅನಕ್ಷರಸ್ಥರ ಗೋಳು ಕೇಳುವವರು ಯಾರು? ಸರ್ಕಾರಿ ಕಚೇರಿಗಳಲ್ಲಿ ರೈತರ ಕೆಲಸಗಳು ಸುಗಮವಾಗಿ ಆಗುತ್ತಿಲ್ಲ. ಸಾಕಷ್ಟು ವಿಳಂಬವಾಗುತ್ತಿದೆ. ಜಿಲ್ಲಾಧಿಕಾರಿ ಹಾಗೂ ಕಂದಾಯ ಸಚಿವರು ಈ ಬಗ್ಗೆ ಗಮನಹರಿಸಬೇಕಿದೆ.

**ಸಚಿನ್ ಎಚ್.ಪಿ. ಹೊಳಲು,** ಮಂಡ್ಯ

**ಚುರುಮುರಿ**



### ಪ್ರಾರ್ಥನೆ ಮತ್ತು ಪ್ರಯತ್ನ

• ಲಿಂಗರಾಜು ಡಿ.ಎಸ್.

**ಬಂಡೆ** ಶಾಖಾ ಮಠದ ಗುರುಗಳಿಗೆ ಜೀವನದಲ್ಲಿ ಒಂದ್ಸಾರಿಯಾದ್ರೂ ಜಗದ್ಗುರುವಾಗಲೇಬೇಕು ಅಂತ ಬಲು ಆಸೆ. ಜಗದ್ಗುರುಗಳು ಜಾಗಬುಟ್ಟು ಏಳ್ತಲೇ ಇರಲಿಲ್ಲವಾಗಿ ಶಾಖಾ ಮಠದ ಪೋಸ್ಟೇ ಗ್ಯಾರಂಟಿ ಆಗುವಂಗೆ ಕಾಣ್ತಿತ್ತು. ಗುರುಗಳ ಖಾಸಾ ಶಿಷ್ಯಕೋಟಿಗಳೂ ಟೈಮು ಸಿಕ್ಕಾಗಲೆಲ್ಲ, 'ಜಗದ್ಗುರು ಆಗಾಕೆ ನಮ್ಮ ಗುರುಗಳನ್ನ ಬುಟ್ರೆ ಯಾರಿಗೆ ಯೇಗ್ತೆ ಅದೆ' ಅಂತ ಹೇಳಿಕೆ ಕೊಟ್ಟು ರಂಕಲು ಎಬ್ಬಿಸ್ತಿದ್ರು.

ಇನ್ನೇನು ಜಗದ್ಗುರು ಆಗೋದೆ ಅನ್ನೋವಷ್ಟು ಹೊತ್ತಿಗೆ ಬೇರೆ ಶಾಖಾ ಮಠದ ಗುನ್ನಮತೀಯ ಸ್ವಾಮಿಗಳು ಅಡ್ಡ ಬಂದು ಕಾಲು ತುಳಿದು ಬುಡೋರು. ಇದು ಸಾಲದು ಅಂತ ಇಡಿ, ಐಟಿ ವೈರಸ್ ಬ್ಯಾರೆ ತೊಂದ್ರೆ ಕೊಡ್ತಿದ್ದೊ.

ಗುರುಗಳಿಗೆ ಹೈಕಮಾಂಡ್ ದೇವರ ದಯೆ ಇದ್ದರೆ ಮಾತ್ರ ಜಗದ್ಗುರುವಾಗಲು ಸಾಧ್ಯ ಅನ್ನಿಸಿ ಪ್ರಾರ್ಥನೆ ಮಾಡುತ್ತಿದ್ದರೂ ಫಲ ದೊರೆಯುತ್ತಿರಲಿಲ್ಲ. 'ಹೈಕಮಾಂಡ್ ದೇವರೇ, ನಾನು ಜಗದ್ಗುರು ಪದವಿ ಪಡೆದು ಸ್ಕೈಡೆಕ್ ಮಾಡಬಕು, ಸುರಂಗ ತೋಡಬಕು, ನಮ್ಮೂರಿಗೆ ಇಮಾನ ಬುಡಬಕು ಅಂತ ಎಷ್ಟೊಂದು ಆಸೆ ಮಡಿಕಂಡಿವ್ನಿ ಎನ್ನುವುದು ನಿನಗೆ ಗೊತ್ತಿಲ್ಲವೇ?' ಎಂದು ಗುರುಗಳು ಬೇಸರಗೊಂಡಿದ್ದರು.

'ಅಣ್ತಮ್ಮಾ, ಜಗದ್ಗುರುವು ಮುಂದಿನ ಜಲ್ಮದಲ್ಲೂ ತಾನು ಇದೇ ಪದವಿಯಲ್ಲಿರಬೇಕು ಅಂತ ವೇಣುಗೋಪಾಲ ಶತಕ, ಸುರ್ಜೇವಾಲ ಶ್ಲೋಕ, ಮಾತಾ–ಸುತ ಪೂಜೆ ಮತ್ತು ಅಹಿಂದ ಯಾಗ ಮಾಡುತ್ತಿದ್ದಾನೆ. ನೀನು ಕಾಣಾ?' ಅಂದರು ಹೈಕಮಾಂಡ್ ದೇವರು.

'ಮಾಡ್ಲಿ ಕನ ದೇವರೆ, ನೀನೇ ಕಂಡಂಗೆ ನಿನ್ನ ಮುಂದೇಲೆ ಒಪ್ಪಂದಾಗಿತ್ತಲ್ಲ. ಅಂತರಂಗ ಬಹಿರಂಗವಾಗಲಿ ಮಹಾಪ್ರಭೋ' ಗುರುಗಳು ಗೋಳಾಡಿದರು.

'ಪ್ರಾರ್ಥನೆ ವಿಫಲವಾದರೂ ಪ್ರಯತ್ನ ವಿಫಲವಾಗುವುದಿಲ್ಲ ಭಕ್ತಾ. ಪ್ರಯತ್ನ ಮುಂದುವರೆಸು. ನಾನು ಜಗದ್ಗುರುವನ್ನು ಯಾವುದಾದರೂ ರಾಷ್ಟ್ರೀಯ ಕಲಹಾ ಮಂಡಳಿಗೆ ಅಧ್ಯಕ್ಷನ್ನ ಮಾಡಿ ಕಳುಹಿಸಿ ನಿನಗೆ ಜಾಗ ಮಾಡಿಕೊಡಲು ಪ್ರಯತ್ನಿಸುವೆ' ಎಂದು ದೇವರು ಆಶೀರ್ವದಿಸಿ, ಟಣ್ಣನೆ ಮಾಯವಾದೇಟಿಗೆ ಗುರುಗಳು ಉತ್ಸಾಹದಿಂದ ಪ್ರಾರ್ಥನೆಗೆ ಹೊಂಟರು.

**ಸಂಗತ**

# ತಾಯ್ತನದ ಹಕ್ಕು: ಅವಮಾನ ಸಲ್ಲ

**ಐವಿಎಫ್ ಮೂಲಕ ನಟಿ ಭಾವನಾ ತಾಯಿಯಾಗಲು ಹೊರಟಿದ್ದಾರೆ. ಅವರ ತಾಯ್ತನದ ಹಕ್ಕನ್ನು ಗೌರವಿಸುವುದು ಸ್ವಸ್ಥ ಸಮಾಜದ ಲಕ್ಷಣ.**

• ರಾಘವೇಂದ್ರ ಕೆ. ತೊಗರ್ಸಿ

**ಸಿನಿಮಾ** ನಟಿ ಭಾವನಾ ರಾಮಣ್ಣ ಅವರು, 'ಐವಿಎಫ್' ತಂತ್ರಜ್ಞಾನದ ಮೂಲಕ ತಾಯಿಯಾಗುವ ತಮ್ಮ ಹಂಬಲ ಪೂರೈಸಿಕೊಳ್ಳಲು ಹೊರಟಿದ್ದಾರೆ. ತಾವು ಅಮ್ಮನಾಗುತ್ತಿರುವ ವಿಷಯವನ್ನು ಸ್ವತಃ ಅವರು ಹೇಳಿಕೊಂಡಿದ್ದಾರೆ. ಅವರು ಸೆಲೆಬ್ರಿಟಿಯಾದ ಕಾರಣದಿಂದಾಗಿ, ಖಾಸಗಿ ವಿಷಯ ದೊಡ್ಡ ಸುದ್ದಿಯಾಗಿದೆ; ಟ್ರೋಲ್‌ಪ್ರಿಯರಿಗೆ ಆಹಾರವಾಗಿದೆ.

ಭಾವನಾ ಅವರ ತಾಯ್ತನದ ನಿರ್ಧಾರಕ್ಕೆ ಸಂಬಂಧಿಸಿದ ಪ್ರತಿಕ್ರಿಯೆಗಳು ಓರ್ವ ಕಲಾವಿದೆಯ ಬಗ್ಗೆ ಜನರಿಗೆ ಇರುವ ಕುತೂಹಲವನ್ನು ತೋರಿಸುವಂತಿವೆ. ಹೆಣ್ಣಿನ ಬಗ್ಗೆ ಸಮಾಜಕ್ಕೆ ಇರುವ ಪೂರ್ವಗ್ರಹಗಳನ್ನೂ ಸಂಕೇತಿಸುವಂತಿವೆ. ಹೆಚ್ಚಿನ ಪ್ರತಿಕ್ರಿಯೆಗಳು ಭಾವನಾ ಅವರ ನೈತಿಕತೆಯನ್ನು ಮೌಲ್ಯಮಾಪನ ಮಾಡಲು ಹೊರಟಿವೆ. ಧರ್ಮ, ಸಂಸ್ಕೃತಿಯ ಹೆಸರಿನಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನ ನಡೆಸಿವೆ.

'ತಾಯ್ತನ ಅವರ ಹಕ್ಕು ಎನ್ನುವುದು ನಿಜವಾದರೂ, ಮದುವೆ ಆಗದೆ ಆ ಹಕ್ಕನ್ನು ಅನುಭವಿಸುವುದು ಎಷ್ಟು ಸರಿ? ಐವಿಎಫ್ ಮೂಲಕ ತಾಯಿಯಾಗಲು ಹೊರಟಿರುವ ಅವರು ಸಮಾಜಕ್ಕೆ ಎಂತಹ ಸಂದೇಶ ಕೊಡುತ್ತಿದ್ದಾರೆ? ಇಂಥ ಅನೈಸರ್ಗಿಕ ಪ್ರಯತ್ನಗಳು ಸರಿಯಲ್ಲ...' ಎನ್ನುವಂಥ ಟೀಕೆ ಟಿಪ್ಪಣಿಗಳು ವ್ಯಕ್ತವಾಗಿವೆ. ಇನ್ನೂ ಕೆಲವರು, ತಂದೆಯ ಅಗತ್ಯ ಮತ್ತು ಸಾಮಾಜಿಕ ಮಹತ್ವವನ್ನು ಪ್ರತಿಪಾದಿಸಿದ್ದಾರೆ. ಭಾವನಾ ಅವರ ರಾಜಕೀಯ ನಿಲುವನ್ನು ಪ್ರಶ್ನಿಸಿ, ಅವರ ತಾಯ್ತನವನ್ನು ಅಪರಾಧ ಮತ್ತು ಅಕ್ಷಮ್ಯ ಎನ್ನುವಂತೆ ನೋಡಿರುವವರೂ ಇದ್ದಾರೆ. ಈ ಪ್ರತಿಕ್ರಿಯೆಗಳು ನಮ್ಮ ಸಮಾಜದ ಮನಃಸ್ಥಿತಿ ಯಾವ ದಿಕ್ಕಿನಲ್ಲಿದೆ ಎನ್ನುವುದರ ಅಧ್ಯಯನಕ್ಕೆ ಸೂಕ್ತವಾಗಿವೆ.

ಶೀಲದ ಅಸ್ತ್ರ ಬಳಸಿ ಮಹಿಳೆಯನ್ನು ನಿಯಂತ್ರಿಸುವ ಪ್ರಕ್ರಿಯೆ ಈಗಂತೂ ಹೆಚ್ಚಾಗಿದೆ. ಬೆಳಗಾವಿ ಚಳಿಗಾಲದ ವಿಧಾನಸಭೆ ಅಧಿವೇಶನದಲ್ಲಿ ಜನಪ್ರತಿನಿಧಿಯೊಬ್ಬರು ಸಚಿವೆಯನ್ನು ಉದ್ದೇಶಿಸಿ ಆಕ್ಷೇಪಾರ್ಹ ಪದ ಬಳಸಿದ್ದರು ಎನ್ನುವ ಆರೋಪ ಕೇಳಿಬಂದಿತ್ತು. ಕಳೆದ ವಾರ ಮತ್ತೊಬ್ಬ ಜನಪ್ರತಿನಿಧಿ, ಐಎಎಸ್ ಅಧಿಕಾರಿಣಿ ಬಗ್ಗೆ ಅವಹೇಳನಕಾರಿ ಮಾತುಗಳನ್ನು ಆಡಿರುವ ಬಗ್ಗೆ ದೂರು ದಾಖಲಾಗಿದೆ. ಹೆಣ್ಣಿನ ಬಗ್ಗೆ ಅವಹೇಳನದಿಂದ ಮಾತನಾಡುವ ಬೆಳವಣಿಗೆಯನ್ನು ವಕೀಲರೂ, ಬುಕರ್ ಪ್ರಶಸ್ತಿ ಪುರಸ್ಕೃತರೂ ಆಗಿರುವ ಬಾನು ಮುಷ್ತಾಕ್ 'ಗಂಡಾಳ್ವಿಕೆ' ಎಂದು ಟೀಕಿಸಿದ್ದಾರೆ.



ಪುರುಷನೊಬ್ಬ ತನ್ನ ಕುಟುಂಬದ ಯಾವ ಮಹಿಳೆಯ ಬಗ್ಗೆಯೂ ನಿಂದನೆ ಮತ್ತು ಆಕ್ಷೇಪದ ಮಾತನ್ನು ಆಡುವಂತಿಲ್ಲ. ಹಾಗೇನಾದರೂ ನಿಂದಿಸಿದರೆ, ಆತನನ್ನು ಕಾನೂನು ಪ್ರಕಾರ ಶಿಕ್ಷೆಗೆ ಗುರಿಪಡಿಸಲಾಗುತ್ತದೆ. ಸಾರ್ವಜನಿಕವಾಗಿ ಹೆಣ್ಣನ್ನು ನಿಂದಿಸುವವರಿಗೆ ಶಿಕ್ಷೆಗೊಳಪಡಿಸುವ ಕಾನೂನನ್ನೂ ಜಾರಿಗೆ ತರಬೇಕು ಎನ್ನುವುದು ಬಾನು ಮುಷ್ತಾಕ್ ಅವರ ಅಭಿಪ್ರಾಯ. 'ಯಾರಿಂದಲೂ ಯಾರೂ ನಡತೆಯ ಪ್ರಮಾಣ ಪತ್ರವನ್ನು ಪಡೆಯುವ ಅಗತ್ಯ ಇಲ್ಲ. ಗಂಡಾಳ್ವಿಕೆಯ ಮನಃಸ್ಥಿತಿಯು ಮಾತು, ಸನ್ನೆ, ಕೃತ್ಯ, ಬಲದ ಮೂಲಕ ಹೆಣ್ಣನ್ನು ಅಧೀನ ಮಾಡಿಕೊಳ್ಳುತ್ತಿದೆ. ಅದನ್ನು ಒಪ್ಪಲು ಸಾಧ್ಯವಿಲ್ಲ. ಓರ್ವ ಮಹಿಳೆಯ ಖಾಸಗೀತನವನ್ನು ಪ್ರಶ್ನಿಸುವುದು ತಪ್ಪು' ಎನ್ನುವ ಅವರ ಮಾತು, ಸಾರ್ವಜನಿಕ ತಿಳಿವಳಿಕೆಯೂ ಆಗಬೇಕಾಗಿದೆ.


ಭಾವನಾ ರಾಮಣ್ಣ ವಿಜ್ಞಾನ ಪದವೀಧರೆ, ಅವಿವಾಹಿತೆ. ತಾಯ್ತನದ ಆಸೆಯನ್ನು ಐವಿಎಫ್ ತಂತ್ರಜ್ಞಾನದ ಮೂಲಕ ಪೂರೈಸಿಕೊಳ್ಳುವ ಅವರ ಪ್ರಯತ್ನದಲ್ಲಿ ಸಮಾಜಕ್ಕೆ ಕೆಡುಕಾಗುವಂತಹದ್ದೇನೂ ಇಲ್ಲ. ವೈಜ್ಞಾನಿಕ ಸವಲತ್ತುಗಳ ಮೂಲಕ ಮಕ್ಕಳನ್ನು ಪಡೆಯುವುದು ಹಾಗೂ 'ಸಿಂಗಲ್ ಪೇರೆಂಟಿಂಗ್' ಪರಿಕಲ್ಪನೆ ಹೊಸತೇನೂ ಅಲ್ಲ.

ಬಾಲಿವುಡ್‌ನ ಕರಣ್ ಜೋಹರ್, ತುಷಾರ್ ಕಪೂರ್ 'ಸಿಂಗಲ್ ಪೇರೆಂಟಿಂಗ್'ಗೆ ಉದಾಹರಣೆಯಾಗಿದ್ದಾರೆ. ಕನ್ನಡದ ನಿರ್ದೇಶಕಿ ಕವಿತಾ ಲಂಕೇಶ್ ಅವರು ಕೂಡ 'ಸಿಂಗಲ್ ಪೇರೆಂಟಿಂಗ್'ಗೆ ಮಾದರಿಯಾಗಿದ್ದಾರೆ. ಏಕ ಪೋಷಕತ್ವಕ್ಕೆ ಕಾನೂನಿನಲ್ಲಿಯೂ ಮಾನ್ಯತೆ ಇದೆ. ಮಕ್ಕಳ ಶಾಲಾ ದಾಖಲಾತಿಯಲ್ಲಿ ತಂದೆಯ ಹೆಸರು ಈಗ ಕಡ್ಡಾಯ ಅಲ್ಲ. ಮಕ್ಕಳ ದಾಖಲಾತಿಯಲ್ಲಿ ಅಮ್ಮನ ಹೆಸರಿನ ಸೇರ್ಪಡೆಗೆ ಅವಕಾಶ ಇರುವುದರಿಂದ, ದೇವದಾಸಿ ತಾಯಂದಿರ ಮಕ್ಕಳೂ ವಿದ್ಯಾಭ್ಯಾಸವನ್ನು ಮಾಡಲು ಸಾಧ್ಯ ಆಗಿದೆ.

ಆಧುನಿಕ ಕುಟುಂಬ ವ್ಯವಸ್ಥೆಯಲ್ಲಿ ಏಕ ಪೋಷಕರ ಕುಟುಂಬಗಳು ಅವರವರ ಅನುಕೂಲಕ್ಕೆ ತಕ್ಕಂತೆ ರೂಪಿತಗೊಳ್ಳುತ್ತವೆ. ಅಲ್ಲಿ, ತಂದೆ ಅಥವಾ ತಾಯಿ ಜೈವಿಕವಾಗಿ ಗುರುತಿಸಬಹುದಾದ ಅಂತರಲಿಂಗಿ ಸಂಗಾತಿ ಇಲ್ಲದೆಯೇ ಮಗುವನ್ನು ಪಡೆಯುವ ಹಾಗೂ ಒಂಟಿಯಾಗಿಯೇ ಪಾಲನೆ– ಪೋಷಣೆ ಮಾಡುವ ಹಕ್ಕನ್ನು ಹೊಂದಿರುತ್ತಾರೆ. ಕುಟುಂಬದಲ್ಲಿ ತಾಯಿಯೇ ತಂದೆಯ ಪಾತ್ರವನ್ನೂ ನಿರ್ವಹಿಸುವುದು ಇಲ್ಲವೇ ತಾಯಿಯ ಪಾತ್ರವನ್ನು ತಂದೆಯೇ ನಿಭಾಯಿಸುವುದು ಸಹಜ. ಪುರುಷನ ಯಜಮಾನಿಕೆಯಲ್ಲಿ ಇರಲು ಬಯಸದ ಸ್ವತಂತ್ರ ಮನೋಭಾವದ ಯುವತಿಯರು ಅವಿವಾಹಿತರಾಗಿಲು ಬಯಸುತ್ತಾರೆ. ಅವರು ತಂತ್ರಜ್ಞಾನದ ನೆರವಿನಿಂದ ಮಗು ಪಡೆಯುವ ಅಥವಾ ದತ್ತು ಪಡೆಯುವ ಹಕ್ಕನ್ನು ಹೊಂದಿದ್ದಾರೆ.

ವೃತ್ತಿಪರ ಬದುಕಿನ ಸಾಧನೆಯ ಕನಸಿರುವ ಅನೇಕರು 'ಸಿಂಗಲ್ ಪೇರೆಂಟ್' ಮಾದರಿಯ ಕುಟುಂಬವನ್ನು ಬಯಸುವುದಿದೆ. ಅದಕ್ಕೆ ಆಧುನಿಕ ತಂತ್ರಜ್ಞಾನವೂ ಅವಕಾಶ ಮಾಡಿಕೊಟ್ಟಿದೆ. ಕೃತಕ ಗರ್ಭಧಾರಣೆ ಒಬ್ಬರ ವೈಯಕ್ತಿಕ ಹಕ್ಕು ಮತ್ತು ಸ್ವಾತಂತ್ರ್ಯ. ಅದರ ಮೇಲೆ ನಡೆಯುವ ದಾಳಿ ಅನಾರೋಗ್ಯಕರ ಮನಃಸ್ಥಿತಿಯದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 



ಬಿಹಾರ ವಿಶೇಷ ಸಮಗ್ರ ಪರಿಷ್ಕರಣೆ

ಬಿಹಾರದಲ್ಲಿ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ವಿವಾದಕ್ಕೀಡಾಗಿದೆ. ಚುನಾವಣೆ ಹತ್ತಿರದಲ್ಲಿರುವಾಗ ಪರಿಷ್ಕರಣೆ ನಡೆಸುವ ಅಗತ್ಯವನ್ನು ಕಾಂಗ್ರೆಸ್, ಆರ್‌ಜೆಡಿ ಸೇರಿದಂತೆ ವಿರೋಧ ಪಕ್ಷಗಳು ಪ್ರಶ್ನಿಸಿವೆ. ದೊಡ್ಡ ಪ್ರಮಾಣದಲ್ಲಿ ಮತದಾರರ ಹೆಸರನ್ನು ಕೈಬಿಡುವ ದುರುದ್ದೇಶದಿಂದ ಪರಿಷ್ಕರಣೆ ನಡೆಸಲಾಗುತ್ತಿದೆ ಎಂದು ಅವು ಆರೋಪಿಸಿವೆ. ತನ್ನ ನಿರ್ಧಾರವನ್ನು ಆಯೋಗ ಸಮರ್ಥಿಸಿಕೊಂಡಿದೆ. ಸ್ಥಳೀಯ ವಲಸಿಗರು, ವಿದೇಶದ ಅಕ್ರಮ ವಲಸಿಗರು ಸೇರಿದಂತೆ ಹಲವು ವಿಚಾರಗಳು ಇದರ ಹಿಂದೆ ತಳುಕುಹಾಕಿಕೊಂಡಿವೆ. ಈ ವಿಚಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿರುವ ಹೊತ್ತಿಗೆ ಮೊದಲ ಹಂತದ ಪರಿಷ್ಕರಣೆ ಬಹುತೇಕ ಮುಗಿದಿದೆ. ಕಳೆದ ವರ್ಷದ ಮಹಾರಾಷ್ಟ್ರ ವಿಧಾನಸಭಾ ಚುನಾವಣಾ ಫಲಿತಾಂಶದ ಬಳಿಕ ಚುನಾವಣಾ ಆಯೋಗದ ವಿಶ್ವಾಸಾರ್ಹತೆಯ ಬಗ್ಗೆ ಚರ್ಚೆ ನಡೆದಿತ್ತು. ಈಗ ಮತ್ತೆ ಅಂತಹುದೇ ಚರ್ಚೆಯನ್ನು ಬಿಹಾರದ ವಿಶೇಷ ಸಮಗ್ರ ಪರಿಷ್ಕರಣೆ ಹುಟ್ಟುಹಾಕಿದೆ

# ಚುನಾವಣಾ ಆಯೋಗದ ವಿಶ್ವಾಸಾರ್ಹತೆ ಮತ್ತೆ ಚರ್ಚೆಗೆ

• ಸೂರ್ಯನಾರಾಯಣ ವಿ.

ಈ ವರ್ಷದ ಅಕ್ಟೋಬರ್-ನವೆಂಬರ್‌ನಲ್ಲಿ ಬಿಹಾರದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. 'ಜನತಂತ್ರದ ಹಬ್ಬ'ಕ್ಕೆ ಕೆಲವೇ ತಿಂಗಳುಗಳಿರುವಾಗ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಸ್ಪೆಷಲ್ ಇಂಟೆನ್ಸಿವ್ ರಿವಿಷನ್) ಚುನಾವಣಾ ಆಯೋಗ ಆರಂಭಿಸಿದೆ. ಇದು ಕಾಂಗ್ರೆಸ್, ಆರ್‌ಜೆಡಿ, ಟಿಎಂಸಿ ಸೇರಿದಂತೆ ಹಲವು ವಿರೋಧ ಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿದೆ. ಕಳೆದ ವರ್ಷದ ನವೆಂಬರ್‌ನಲ್ಲಿ ನಡೆದಿದ್ದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೂ ಮುನ್ನ ಆಯೋಗ ನಡೆಸಿದ್ದ ಮತದಾರರ ಪಟ್ಟಿ ಪರಿಷ್ಕರಣೆಯ ಸಂದರ್ಭದಲ್ಲಿ ರಾಜ್ಯದಾದ್ಯಂತ ಭಾರಿ ಪ್ರಮಾಣದಲ್ಲಿ ಹೊಸ ಮತದಾರರನ್ನು ಸೇರ್ಪಡೆಗೊಳಿಸಲಾಗಿತ್ತು; 'ಇದರಿಂದ ಬಿಜೆಪಿಗೆ ಅನುಕೂಲವಾಗಿದೆ' ಎಂದು ಕಾಂಗ್ರೆಸ್ ನಾಯಕ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದರು. 'ಮಹಾರಾಷ್ಟ್ರದಲ್ಲಿ 2024ರ ಲೋಕಸಭೆ ಮತ್ತು ನವೆಂಬರ್‌ನಲ್ಲಿ ನಡೆದಿದ್ದ ವಿಧಾನಸಭಾ ಚುನಾವಣೆಗಳ ನಡುವೆ ಮತದಾರರ ಸಂಖ್ಯೆಯಲ್ಲಿ 41 ಲಕ್ಷ ಹೆಚ್ಚಳವಾಗಿದೆ. ಚುನಾವಣೆಯಲ್ಲಿ ವಂಚನೆ ನಡೆದಿದೆ' ಎಂದು ಹೇಳಿದ್ದ ಅವರು, 'ಮ್ಯಾಚ್ ಫಿಕ್ಸಿಂಗ್' ಮೂಲಕ ಬಿಜೆಪಿ ಅಲ್ಲಿ ಗೆದ್ದಿದೆ ಎಂದು ದೂರಿದ್ದರು. ಆದರೆ, ಅದನ್ನು ಚುನಾವಣಾ ಆಯೋಗ ತಳ್ಳಿಹಾಕಿತ್ತು. ಬಿಹಾರದಲ್ಲೂ ಮಹಾರಾಷ್ಟ್ರದ ರೀತಿಯಲ್ಲಿಯೇ 'ಮ್ಯಾಚ್ ಫಿಕ್ಸಿಂಗ್' ನಡೆಯಲಿದೆ ಎಂದು ಜೂನ್ ತಿಂಗಳ ಆರಂಭದಲ್ಲಿ ರಾಹುಲ್ ಹೇಳಿದ್ದರು.

ಇದಾಗಿ ಎರಡು ವಾರಗಳಲ್ಲಿ, ಜೂನ್ 24ರಂದು ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸುವ ಸಂಬಂಧ ಚುನಾವಣಾ ಆಯೋಗ ಆದೇಶ ಹೊರಡಿಸಿತ್ತು. ಇದಕ್ಕೆ ವಿರೋಧ ಪಕ್ಷಗಳಿಂದ ಆಕ್ಷೇಪ ವ್ಯಕ್ತವಾಗುತ್ತಿದ್ದಂತೆಯೇ, 'ಆಗಿನ ಮತದಾರರ ಪಟ್ಟಿ ಸರಿಯಿಲ್ಲ ಎಂದು ಬಿಹಾರದ ಬಹುತೇಕ ಪಕ್ಷಗಳು ಹೇಳಿದ್ದವು. ಪರಿಷ್ಕರಣೆ ಮಾಡಬೇಕು ಎಂದು ಒತ್ತಾಯಿಸಿದ್ದವು. ಕಾನೂನಿನ ಅಡಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಿಸುವುದು ಅನಿವಾರ್ಯವಾಗಿದೆ' ಎಂದು ಬಿಹಾರದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹೇಳಿದ್ದಾರೆ. ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಕಾರ್ಯ ವಾರದಿಂದ ನಡೆಯುತ್ತಿದೆ. ಮೊದಲ ಹಂತದ ಪರಿಷ್ಕರಣೆ ಕಾರ್ಯ ಬಹುತೇಕ ಮುಗಿದಿದೆ. ಇದರ ನಡುವೆಯೇ ಆರ್‌ಜೆಡಿ, ಪಿಯುಸಿಎಲ್, ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ, ಸಾಮಾಜಿಕ ಕಾರ್ಯಕರ್ತ ಯೋಗೇಂದ್ರ ಯಾದವ್ ಅವರು ಚುನಾವಣಾ ಆಯೋಗದ ನಿರ್ಧಾರದ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ಗುರುವಾರ ವಿಚಾರಣೆ ನಡೆಸುವುದಾಗಿ 'ಸುಪ್ರೀಂ' ಹೇಳಿದೆ.

## ಏನಿದು 'ವಿಶೇಷ ಸಮಗ್ರ ಪರಿಷ್ಕರಣೆ'?

ಚುನಾವಣಾ ಆಯೋಗವು ನಾಲ್ಕು ರೀತಿಯಲ್ಲಿ ಮತದಾರರ ಪಟ್ಟಿಯನ್ನು ಪರಿಷ್ಕರಿಸುತ್ತದೆ. ಅವುಗಳಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಒಂದು. ಸಮಗ್ರ (ಇಂಟೆನ್ಸಿವ್), ಸಂಕ್ಷಿಪ್ತ (ಸಮ್ಮರಿ) ಹಾಗೂ ಭಾಗಶಃ ಸಮಗ್ರ ಮತ್ತು ಭಾಗಶಃ ಸಂಕ್ಷಿಪ್ತ ಎನ್ನುವುದು ಇನ್ನುಳಿದ ಪರಿಷ್ಕರಣೆಯ ವಿಧಾನಗಳು.

ಸಮಗ್ರ ಪರಿಷ್ಕರಣೆಯಲ್ಲಿ ಪ್ರತಿ ಕುಟುಂಬದ ಪರಿಶೀಲನೆ ನಡೆಸಲಾಗುತ್ತದೆ. ಸಂಕ್ಷಿಪ್ತ ಪರಿಷ್ಕರಣೆಯಲ್ಲಿ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮತ್ತು ತೆಗೆಯುವುದಕ್ಕೆ ಸಂಬಂಧಿಸಿದಂತೆ ಜನರಿಂದ ಬಂದ ಕೋರಿಕೆಗಳು ಮತ್ತು ಆಕ್ಷೇಪಣೆಗಳನ್ನು ಆಹ್ವಾನ ಮಾಡಿ, ನಂತರ ಪಟ್ಟಿಯನ್ನು ಪರಿಷ್ಕರಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಮನೆ ಮನೆಗೆ ತೆರಳಿ ಪರಿಶೀಲನೆ ನಡೆಸಲಾಗುವುದಿಲ್ಲ. ಭಾಗಶಃ ಸಮಗ್ರ ಮತ್ತು ಭಾಗಶಃ ಸಂಕ್ಷಿಪ್ತ ಪರಿಷ್ಕರಣೆಯಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಇದೇ ಸಮಯದಲ್ಲಿ ಮತಗಟ್ಟೆ ಅಧಿಕಾರಿಗಳು ಮನೆಮಂದಿಯ ಪರಿಶೀಲನೆ ನಡೆಸುತ್ತಾರೆ.

| | | |
|---|---|---|
| **7.89** ಕೋಟಿ — ಬಿಹಾರದಲ್ಲಿ ಪ್ರಸ್ತುತ ಇರುವ ಮತದಾರರ ಸಂಖ್ಯೆ | **4.96** ಕೋಟಿ — 2003ಕ್ಕೂ ಮೊದಲು ಬಿಹಾರದಲ್ಲಿದ್ದ ನೋಂದಾಯಿತ ಮತದಾರರು | **2.93** ಕೋಟಿ — 2003ರ ನಂತರ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿರುವವರು |

**2003** ಬಿಹಾರದಲ್ಲಿ ಈ ಹಿಂದೆ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ನಡೆದ ವರ್ಷ

### ಆಧಾರ್ ಪಟ್ಟಿಯಲ್ಲಿಲ್ಲ

ಭರ್ತಿ ಮಾಡಿರುವ ಅರ್ಜಿಗಳೊಂದಿಗೆ ನೀಡಬೇಕಾದ ದಾಖಲೆಗಳ ಪಟ್ಟಿಯನ್ನು ಚುನಾವಣಾ ಆಯೋಗ ನೀಡಿದೆ. ಆದರೆ, ಈ ಪಟ್ಟಿಯಲ್ಲಿ ಆಧಾರ್ ಅನ್ನು ಸೇರಿಸಲಾಗಿಲ್ಲ. ಜನನ ಪ್ರಮಾಣಪತ್ರ, ಪಾಸ್‌ಪೋರ್ಟ್, ಗುರುತಿನ ಚೀಟಿಗಳು ಅಥವಾ ಪಿಂಚಣಿ ಪಾವತಿ ಆದೇಶಗಳು, ಕಾಯಂ ನಿವಾಸಿ ಪ್ರಮಾಣಪತ್ರ, ಅರಣ್ಯ ಹಕ್ಕು ಪ್ರಮಾಣಪತ್ರ, ಜಾತಿ ಪ್ರಮಾಣಪತ್ರ, ರಾಜ್ಯ ಅಥವಾ ಸ್ಥಳೀಯ ಆಡಳಿತಗಳು ನೀಡುವ ಕುಟುಂಬ ನೋಂದಣಿ ಪ್ರಮಾಣಪತ್ರ, ಜಮೀನು ಅಥವಾ ಮನೆ ಹಂಚಿಕೆ ಪ್ರಮಾಣಪತ್ರ. ಇವುಗಳಲ್ಲಿ ಯಾವುದಾದರೊಂದು ದಾಖಲೆ ಸಲ್ಲಿಸಿದರೆ ಸಾಕು. ಈಗ ವಿರೋಧ ಪಕ್ಷಗಳು ಹಾಗೂ ವಿವಿಧ ವಲಯಗಳಿಂದ ವಿರೋಧ ವ್ಯಕ್ತವಾದ ನಂತರ ಆಯೋಗವು ದಾಖಲೆ ಸಲ್ಲಿಕೆ ನಿಯಮದಲ್ಲಿ ಕೊಂಚ ಬದಲಾವಣೆ ಮಾಡಿದ್ದು, ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸಿದ ನಂತರವೂ ಪೂರಕ ದಾಖಲೆಗಳನ್ನು ನೀಡಲು ಅವಕಾಶ ಕಲ್ಪಿಸಿದೆ.

### ಚುನಾವಣಾ ಆಯೋಗ ಹೇಳುವುದೇನು?

ಎರಡು ದಶಕಗಳಲ್ಲಿ ಮತದಾರರ ಪಟ್ಟಿಯಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ದೊಡ್ಡ ಮಟ್ಟದಲ್ಲಿ ಮತದಾರರ ಹೆಸರು ಸೇರ್ಪಡೆಯಾಗಿದೆ ಮತ್ತು ಕೈಬಿಡಲಾಗಿದೆ. ನಗರೀಕರಣ ಮತ್ತು ಶಿಕ್ಷಣ, ಜೀವನೋಪಾಯದ ಕಾರಣದಿಂದ ಜನರ ವಲಸೆ ಹೆಚ್ಚಿದೆ. ಅರ್ಹರ ಹೆಸರು ಪಟ್ಟಿಯಲ್ಲಿ ಇಲ್ಲ. ನಿಧನರಾದವರ ಹೆಸರನ್ನು ಕೈಬಿಡಲಾಗಿಲ್ಲ. ಅಕ್ರಮ ವಲಸಿಗರ ಹೆಸರುಗಳು ಕೂಡ ಪಟ್ಟಿಗೆ ಸೇರ್ಪಡೆಗೊಂಡಿವೆ. ಒಬ್ಬ ಮತದಾರರ ಹೆಸರು ಎರಡೆರಡು ಕ್ಷೇತ್ರಗಳಲ್ಲಿ ನೋಂದಣಿಯಾಗಿದೆ. ಹೀಗಾಗಿ, ಮತದಾರರ ಪಟ್ಟಿಯನ್ನು ಸಮಗ್ರವಾಗಿ ಪರಿಷ್ಕರಿಸುವುದು ಅನಿವಾರ್ಯವಾಗಿದೆ. ಅರ್ಹ ಮತದಾರರ ಹೆಸರನ್ನು ಸೇರ್ಪಡೆಗೊಳಿಸುವುದು ಮತ್ತು ಅನರ್ಹರ ಹೆಸರನ್ನು ಕೈಬಿಡುವ ಮೂಲಕ ಅತ್ಯಂತ ಪಾರದರ್ಶಕವಾಗಿ ದೋಷರಹಿತವಾದ ಮತದಾರರ ಪಟ್ಟಿಯನ್ನು ಸಿದ್ಧಪಡಿಸಬೇಕಾಗಿದೆ ಎಂದು ಚುನಾವಣಾ ಆಯೋಗ ಹೇಳಿದೆ.

ತನ್ನ ನಿರ್ಧಾರಕ್ಕೆ ಸಂವಿಧಾನದ 326ನೇ ವಿಧಿಯನ್ನು ಆಯೋಗವು ಉಲ್ಲೇಖಿಸಿದೆ. ಅದರ ಪ್ರಕಾರ, ಭಾರತದ ನಾಗರಿಕರು ಮಾತ್ರ ಮತದಾನದ ಹಕ್ಕು ಚಲಾಯಿಸಲು ಅರ್ಹರು. ಜನ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 16ರನ್ನೂ ಅದು ಪ್ರಸ್ತಾಪಿಸಿದೆ (ಮತದಾರರ ಪಟ್ಟಿಯಿಂದ ಹೆಸರನ್ನು ಕೈಬಿಡುವ ಬಗ್ಗೆ ಈ ಸೆಕ್ಷನ್ ಹೇಳುತ್ತದೆ).

### ವಿರೋಧ ಪಕ್ಷಗಳು ಆಕ್ಷೇಪಿಸುತ್ತಿರುವುದೇಕೆ?

ಕಾಂಗ್ರೆಸ್, ಆರ್‌ಜೆಡಿ, ತೃಣಮೂಲ ಕಾಂಗ್ರೆಸ್, ಸಿಪಿಎಂ, ಸಿಪಿಎಂಎಲ್‌ಎಲ್ ಸೇರಿದಂತೆ ಹಲವು ಪಕ್ಷಗಳು, ಪಿಯುಸಿಎಲ್, ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್‌ನಂತಹ ಪ್ರಗತಿಪರ ಸಂಘಟನೆಗಳು, ಎನ್‌ಜಿಒಗಳು ಕೂಡ ಈ ಪರಿಷ್ಕರಣೆಯನ್ನು ತೀವ್ರವಾಗಿ ವಿರೋಧಿಸುತ್ತಿವೆ. ಈ ಪರಿಷ್ಕರಣೆಯನ್ನು 2016ರಲ್ಲಿ ನಡೆದ ನೋಟು ರದ್ದತಿಗೆ (ನೋಟ್‌ಬಂದಿ) ಹೋಲಿಸಿರುವ ವಿರೋಧ ಪಕ್ಷಗಳು 'ವೋಟ್‌ಬಂದಿ' ಎಂದು ವ್ಯಂಗ್ಯವಾಡಿವೆ.

ಪರಿಷ್ಕರಣೆಗೆ ಆಯ್ಕೆ ಮಾಡಿರುವ ಸಮಯವನ್ನು (ಚುನಾವಣೆ ಹತ್ತಿರದಲ್ಲಿರುವಾಗ) ಪ್ರಶ್ನಿಸಿರುವ ವಿರೋಧ ಪಕ್ಷಗಳ ಮುಖಂಡರು, 'ದೊಡ್ಡ ಸಂಖ್ಯೆಯಲ್ಲಿ ಮತದಾರರನ್ನು ಪಟ್ಟಿಯಿಂದ ಉದ್ದೇಶಪೂರ್ವಕವಾಗಿ ಕೈ ಬಿಡುವ ಹುನ್ನಾರ ಇದರ ಹಿಂದಿದೆ' ಎಂದು ಆರೋಪಿಸಿದ್ದಾರೆ.



ಬಿಹಾರದ ಮತದಾರರ ಪೈಕಿ ಶೇ 20ರಷ್ಟು ವಲಸಿಗರಿದ್ದಾರೆ. ಉದ್ಯೋಗವನ್ನು ಅರಸಿ ಕೆಲವರು ಅಲ್ಪ ಅವಧಿಗೆ ವಲಸೆ ಹೋದರೆ, ಇನ್ನೂ ಕೆಲವರು ದೀರ್ಘಾವಧಿಗೆ ವಲಸೆ ಹೋಗುತ್ತಾರೆ. ಈಗ ನಡೆಯುತ್ತಿರುವ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಇವರು ಭಾಗವಹಿಸಿ, ದಾಖಲೆಗಳನ್ನು ಸಲ್ಲಿಸದಿದ್ದರೆ, ಆಯೋಗ ಅವರ ಹೆಸರನ್ನು ಪಟ್ಟಿಯಿಂದ ಕೈಬಿಡಲಿದೆ. ಹೀಗಾದ ಪಕ್ಷದಲ್ಲಿ ದೊಡ್ಡ ಸಂಖ್ಯೆಯ ಜನರು ಚುನಾವಣಾ ಪ್ರಕ್ರಿಯೆಯಿಂದ ಹೊರಗುಳಿಯುವ ಸಾಧ್ಯತೆ ಇದೆ ಎಂದು ವಿಶ್ಲೇಷಕರು ಕಳವಳ ವ್ಯಕ್ತಪಡಿಸಿದ್ದಾರೆ.

ಚುನಾವಣಾ ಆಯೋಗದ ಈ ಕ್ರಮವು 1950ರ ಜನಪ್ರಾತಿನಿಧ್ಯ ಕಾಯ್ದೆಯ ನಿಯಮಗಳು ಮತ್ತು 1960ರ ಮತದಾರರ ನೋಂದಣಿ ನಿಯಮಾವಳಿಯ 21ಎ ನಿಯಮದ ಉಲ್ಲಂಘನೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಹೇಳಿದೆ. ಆಯೋಗದ ನಿರ್ಧಾರದ ವಿರುದ್ಧ ಅದು ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

'2024ರ ಅ. 29ರಿಂದ 2025ರ ಜನವರಿ 6ರ ನಡುವೆ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಮುಕ್ತಾಯವಾಗಿದೆ. ಹಾಗಿರುವಾಗ ಮತ್ತೆ ಇದರ ಅಗತ್ಯವೇನಿದೆ' ಎಂದು ಅದು ತನ್ನ ಅರ್ಜಿಯಲ್ಲಿ ಪ್ರಶ್ನಿಸಿದೆ.

ವಿಶೇಷ ಸಮಗ್ರ ಪರಿಷ್ಕರಣೆಯನ್ನು ಮತದಾರರ ಪಟ್ಟಿಯನ್ನು ಯಾವುದೇ ದೋಷವಿಲ್ಲದಂತೆ ಸಿದ್ಧಪಡಿಸುವುದಕ್ಕಾಗಿ ತುರ್ತು ಕ್ರಮವಾಗಿ ಕೈಗೊಳ್ಳಲಾಗುತ್ತದೆ. ಸದ್ಯ ಬಿಹಾರದಲ್ಲಿ ಇದನ್ನು ಮಾಡಲಾಗುತ್ತಿದೆ. ಚುನಾವಣಾ ಆಯೋಗವು ಗಣತಿ ಅರ್ಜಿಯನ್ನು ಮುದ್ರಿಸಿ ಮತದಾರರಿಗೆ ಹಂಚುತ್ತಿದ್ದು, ಅದರಲ್ಲಿ ವಿವರಗಳನ್ನು ತುಂಬಿ ಪೂರಕ ದಾಖಲೆಗಳೊಂದಿಗೆ ಆಯೋಗಕ್ಕೆ ನೀಡಬೇಕು.

ಬಿಹಾರದಲ್ಲಿ ಈ ಹಿಂದೆ 2003ರಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆದಿತ್ತು. ಇದರ ಅಡಿಯಲ್ಲಿ 2003ರ ಮತದಾರರ ಪಟ್ಟಿಯಲ್ಲಿದ್ದವರು ತಾವು ರಾಜ್ಯದ ಮತದಾರರು ಎಂಬುದಕ್ಕೆ ಯಾವುದೇ ಆಧಾರ ಅಥವಾ ದಾಖಲೆ ನೀಡಬೇಕಾಗಿಲ್ಲ. 2003ರ ನಂತರ 2024ರವರೆಗೆ ನಡೆದಿದ್ದ ಪರಿಷ್ಕರಣೆಯಲ್ಲಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಿದವರು ಪೂರಕ ದಾಖಲೆಯನ್ನು (ಹುಟ್ಟಿದ ಸ್ಥಳ, ದಿನಾಂಕಕ್ಕೆ ಸಂಬಂಧಿಸಿದ ದಾಖಲೆ ಮತ್ತು ಅವರ ಪೋಷಕರಿಗೆ ಸಂಬಂಧಿಸಿದ ದಾಖಲೆ) ಸಲ್ಲಿಸಿ, ತಾವು ರಾಜ್ಯದ ಮತದಾರರು ಎಂಬುದನ್ನು ಖಾತರಿ ಪಡಿಸಿಕೊಳ್ಳಬೇಕಾಗುತ್ತದೆ. ಆಗಿನ ಪಟ್ಟಿಯಲ್ಲಿದ್ದ 4.96 ಕೋಟಿ ಮತದಾರರು ಈಗಿನ ಪರಿಷ್ಕರಣೆಯಲ್ಲಿ ಯಾವುದೇ ದಾಖಲೆಯನ್ನು ನೀಡಬೇಕಾಗಿಲ್ಲ. ಆದರೆ, ಗಣತಿ ಅರ್ಜಿಯನ್ನು ಭರ್ತಿ ಮಾಡಬೇಕು.


## ಎಷ್ಟು ಮಂದಿ ದಾಖಲೆ ಕೊಡಬೇಕಾಗುತ್ತದೆ?

2003ರ ನಂತರ ಬಿಹಾರದಲ್ಲಿ 2.93 ಕೋಟಿ ಮಂದಿಯ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡಿದೆ, 2003–2024ರ ನಡುವೆ ಪಟ್ಟಿಯಲ್ಲಿ ಹೆಸರು ನೋಂದಾಯಿಸಿದವರು ತಮ್ಮ ಜನನ ಸ್ಥಳ /ಜನ್ಮದಿನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕು. ಅಲ್ಲದೇ, ಇಬ್ಬರು ಪೋಷಕರ ಪೈಕಿ ಒಬ್ಬರ ಜನ್ಮದಿನ/ ಜನನ ಸ್ಥಳದ ದಾಖಲೆಯನ್ನು ಸಲ್ಲಿಸಬೇಕು. ಪರಿಷ್ಕರಣೆಯ ಮೊದಲ ಹಂತ ಬಹುತೇಕ ಪೂರ್ಣಗೊಂಡಿದ್ದು, 2.88 ಕೋಟಿಯಷ್ಟು ಮತದಾರರಿಂದ ಭರ್ತಿ ಮಾಡಿದ ಅರ್ಜಿಗಳನ್ನು ಸಂಗ್ರಹಿಸಲಾಗಿದೆ. ಅರ್ಜಿ ಸಲ್ಲಿಕೆಗೆ ಇನ್ನೂ 18 ದಿನಗಳ ಕಾಲಾವಕಾಶ ಇದೆ.

ಆಧಾರ: ಪಿಟಿಐ, ಪಿಐಬಿ ಪ್ರಕಟಣೆ, ಚುನಾವಣಾ ಆಯೋಗ ಪ್ರಕಟಣೆ

## ರಾಷ್ಟ್ರೀಯ

# ಸಿಖ್ ವಿರೋಧಿ ಗಲಭೆ : ಹೇಳಿಕೆ ದಾಖಲಿಸಿದ ಸಜ್ಜನ್ ಕುಮಾರ್



ಸಜ್ಜನ್ ಕುಮಾರ್

ನವದೆಹಲಿ (ಪಿಟಿಐ): 1984ರ ಸಿಖ್ ವಿರೋಧಿ ಗಲಭೆ ಸಂದರ್ಭದಲ್ಲಿ ದೆಹಲಿಯ ಜನಕಪುರಿ ಮತ್ತು ವಿಕಾಸಪುರಿ ಪ್ರದೇಶಗಳಲ್ಲಿ ನಡೆದ ಹಿಂಸಾಚಾರ ಸಂಬಂಧ ಕಾಂಗ್ರೆಸ್ ಮಾಜಿ ಸಂಸದ ಸಜ್ಜನ್ ಕುಮಾರ್ ಅವರ ಹೇಳಿಕೆಯನ್ನು ದೆಹಲಿಯ ನ್ಯಾಯಾಲಯವು ಸೋಮವಾರ ದಾಖಲಿಸಿಕೊಂಡಿತು.

ವಿಶೇಷ ನ್ಯಾಯಾಧೀಶ ದಿಗ್ವಿನಯ್ ಸಿಂಗ್ ಅವರು ಸಜ್ಜನ್ ಅವರ ಹೇಳಿಕೆಯನ್ನು ದಾಖಲಿಸಿಕೊಂಡರು.

ಸಜ್ಜನ್ ಕುಮಾರ್ ಅವರು, 'ನಾನು ನಿರಪರಾಧಿ, ನನ್ನ ವಿರುದ್ಧ ಯಾವುದೇ ಸಾಕ್ಷ್ಯ ಇಲ್ಲ. ಪ್ರಕರಣದಲ್ಲಿ ನ್ಯಾಯಯುತ ತನಿಖೆ ನಡೆಯುತ್ತಿಲ್ಲ. ಆಧಾರರಹಿತ ಆರೋಪಗಳನ್ನು ಮಾಡಿ ಪ್ರಕರಣದಲ್ಲಿ ನನ್ನನ್ನು ಸಿಲುಕಿಸಲಾಗಿದೆ' ಎಂದರು.


'ಸಾಕ್ಷಿಗಳು ನನ್ನ ಹೆಸರನ್ನು ಉಲ್ಲೇಖಿಸಿರಲಿಲ್ಲ. ದಶಕಗಳ ನಂತರ ನನ್ನ ಹೆಸರನ್ನು ಎಳೆದು ತರಲಾಗಿದೆ.

ನನ್ನ ವಿರುದ್ಧದ ಪ್ರಕರಣವು ಸುಳ್ಳು ಮತ್ತು ರಾಜಕೀಯ ಪ್ರೇರಿತ. ಘಟನೆ ಸಂದರ್ಭದಲ್ಲಿ ನಾನು ರಕ್ತದಾನ ಶಿಬಿರ ಮತ್ತು ಶಾಂತಿಯುತ ಮೆರವಣಿಗೆ ಆಯೋಜಿಸಿದ್ದೆ' ಎಂದೂ ತಿಳಿಸಿದರು.

ನಂತರ ನ್ಯಾಯಾಲಯವು ವಿಚಾರಣೆಯನ್ನು ಜುಲೈ 29ಕ್ಕೆ ಮುಂದೂಡಿತು. ಸಿಖ್ ವಿರೋಧಿ ಗಲಭೆಯಲ್ಲಿ ನಡೆದ ಹಿಂಸಾಚಾರದ ವಿರುದ್ಧ ದಾಖಲಾದ ದೂರುಗಳ ಆಧಾರದಲ್ಲಿ ಸಜ್ಜನ್ ಅವರ ವಿರುದ್ಧ ವಿಶೇಷ ತನಿಖಾ ತಂಡವು 2015 ಫೆಬ್ರುವರಿಯಲ್ಲಿ ಎರಡು ಎಫ್‌ಐಆರ್ ದಾಖಲಿಸಿತ್ತು.

# ನಿಫಾ ರೋಗಿ ಸ್ಥಿತಿ ಗಂಭೀರ; ಕಂಟೈನ್‌ಮೆಂಟ್ ವಲಯ ಘೋಷಣೆ

ಪಾಲಕ್ಕಾಡ್, ಕೇರಳ (ಪಿಟಿಐ): 'ಉತ್ತರ ಕೇರಳದಲ್ಲಿ ನಿಫಾ ವೈರಾಣು ಸೋಂಕಿಗೆ ಒಳಗಾದ ರೋಗಿಯ ಸ್ಥಿತಿಯು ಗಂಭೀರವಾಗಿದ್ದು, ಅಗತ್ಯ ಚಿಕಿತ್ಸೆಗಳನ್ನು ನೀಡಲು ಕ್ರಮ ವಹಿಸಲಾಗುವುದು' ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.



ತಚ್ಚನಾಟ್ಟುಕರದ 38 ವರ್ಷದ ಮಹಿಳೆಗೆ ಕೋಯಿಕ್ಕೋಡ್‌ನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ. ಮಲಪ್ಪುರಂ ಮೂಲದ ರೋಗಿಯೊಬ್ಬರು ಕಳೆದ ವಾರ ನಿಫಾ ಸೋಂಕಿನಿಂದ ಮೃತಪಟ್ಟಿದ್ದರು.

'ಪಾಲಕ್ಕಾಡ್ ವೈದ್ಯಕೀಯ ಕಾಲೇಜಿನಲ್ಲಿ ಉನ್ನತ ಮಟ್ಟದ ಸಭೆ ನಡೆಸಿದ ಸಚಿವೆ ವೀಣಾ ಜಾರ್ಜ್ ಅವರು, 'ರೋಗ ನಿಯಂತ್ರಣಕ್ಕೆ ಪ್ರತಿಕಾಯಗಳಂತೆ ಕಾರ್ಯನಿರ್ವಹಿಸುವ ಜೀವಕೋಶದ ಚಿಕಿತ್ಸೆಯನ್ನು ರೋಗಿಗೆ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಮೊದಲ ಪ್ರಕರಣ ದಾಖಲಾಗಿದ್ದು, ರೋಗಿಯ ಪರಿಸ್ಥಿತಿ ಗಂಭೀರವಾಗಿದೆ. ಲಭ್ಯವಿರುವ ಎಲ್ಲ ಚಿಕಿತ್ಸೆಗಳನ್ನು ಮುಂದುವರಿಸಲಾಗಿದೆ' ಎಂದು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

'ರೋಗಿಯ ಸಂಪರ್ಕಕ್ಕೆ ಬಂದ 173 ಮಂದಿಯ ಪೈಕಿ 52 ಮಂದಿಯನ್ನು ಹೆಚ್ಚಿನ ಅಪಾಯದಲ್ಲಿರುವವರು, 48 ಮಂದಿಯನ್ನು ಕಡಿಮೆ ಅಪಾಯ ಇರುವ ಸೋಂಕಿತರು ಎಂದು ಪ್ರತ್ಯೇಕಿಸಲಾಗಿದೆ. ಎಲ್ಲರನ್ನೂ ಮಲಪ್ಪುರಂನ ಮಂಜೇರಿ ವೈದ್ಯಕೀಯ ಕಾಲೇಜಿನಲ್ಲಿ ಪರೀಕ್ಷೆಗೆ ಒಳಪಡಿಸಲಾಗಿದೆ. ರೋಗಿ ಮನೆಯ ಮೂರು ಕಿ.ಲೋ ಮೀಟರ್ ಸುತ್ತಲೂ ಕಂಟೈನ್‌ಮೆಂಟ್ ವಲಯ ಎಂದು ಗುರುತಿಸಲಾಗಿದೆ' ಎಂದರು.

# ಪಹಲ್ಗಾಮ್: ಬಂಧಿತರ ಕಸ್ಟಡಿ ವಿಸ್ತರಣೆ

ಜಮ್ಮು (ಪಿಟಿಐ): ಪಹಲ್ಗಾಮ್ ಭಯೋತ್ಪಾದಕ ದಾಳಿ ಪ್ರಕರಣದಲ್ಲಿ ಬಂಧಿಸಿರುವ ಇಬ್ಬರು ಆರೋಪಿಗಳನ್ನು ಮತ್ತೆ 10 ದಿನ ಎನ್‌ಐಎ ವಶಕ್ಕೆ ನೀಡಿ ಇಲ್ಲಿನ ವಿಶೇಷ ನ್ಯಾಯಾಲಯ ಸೋಮವಾರ ಆದೇಶ ಹೊರಡಿಸಿದೆ.

ಆರೋಪಿಗಳಾದ ಪರ್ವೇಜ್ ಅಹ್ಮದ್ ಜೋಥರ್ ಹಾಗೂ ಬಶೀರ್ ಅಹ್ಮದ್ ಜೋಥರ್ ಅವರನ್ನು ಎನ್‌ಐಎ ವಿಶೇಷ ನ್ಯಾಯಾಲಯದ ಎದುರು ಸೋಮವಾರ ಹಾಜರುಪಡಿಸಲಾಗಿತ್ತು. ಈ ವೇಳೆ ಆರೋಪಿಗಳ ಕಸ್ಟಡಿ ಅವಧಿಯನ್ನು ನ್ಯಾಯಾಲಯವು ವಿಸ್ತರಿಸಿತು ಎಂದು ಅಧಿಕಾರಿಗಳು ತಿಳಿಸಿದರು. ಇವರನ್ನು ಜೂನ್ 22ರಂದು ಬಂಧಿಸಲಾಗಿದೆ.


ಪ್ರವಾಸಿಗರ ಮೇಲೆ ದಾಳಿ ನಡೆಸಿದ ಮೂವರು ಸಶಸ್ತ್ರ ಉಗ್ರರ ಗುರುತನ್ನು ಬಂಧಿತ ಆರೋಪಿಗಳು ಬಹಿರಂಗ ಪಡಿಸಿದ್ದಾರೆ. ಬಂಧಿತರು ಪಾಕಿಸ್ತಾನ ಪ್ರಜೆಗಳಾಗಿದ್ದು, ನಿಷೇಧಿತ ಲಷ್ಕರ್–ಎ–ತಯಬಾ ಜೊತೆ ನಂಟು ಹೊಂದಿದ್ದಾರೆ ಎಂದೂ ತಿಳಿಸಿದ್ದಾರೆ ಎನ್‌ಐಎ ಹೇಳಿದೆ.

ಆರೋಪಿಗಳು ದಾಳಿ ನಡೆಸಿದ ಉಗ್ರರಿಗೆ ಆಹಾರ, ವಸತಿ ಸೌಲಭ್ಯ ಒದಗಿಸಿದ್ದರು ಎಂದು ತಿಳಿದುಬಂದಿದೆ ಎಂದು ಎನ್‌ಐಎ ತಿಳಿಸಿದೆ.

## ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ರೈಲು** ಹಳಿಗಳ ನಡುವೆ ಸೌರ ಫಲಕಗಳನ್ನು ಅಳವಡಿಸಿ ವಿದ್ಯುತ್ ಉತ್ಪಾದಿಸಲು ಭಾರತೀಯ ರೈಲ್ವೆ ಮುಂದಾಗಿದೆ. ಭಾರತದ ನವೋದ್ಯಮ 'ಸನ್‌–ವೇಸ್', ಕಳಚಬಹುದಾದಂತಹ ಸೌರಫಲಕಗಳನ್ನು ಅಳವಡಿಸಲಿದೆ. ಇದರಿಂದಾಗಿ ವಾರ್ಷಿಕವಾಗಿ ಒಂದು ಟೆರಾ ವ್ಯಾಟ್‌ನಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ ಎಂದು ಹೇಳಿಕೊಳ್ಳುವ ಪೋಸ್ಟ್ ಒಂದು ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಇದು ಸುಳ್ಳು.





**ಪೋಸ್ಟ್‌ನೊಂದಿಗೆ** ಇರುವ ಫೋಟೊವನ್ನು ಗೂಗಲ್ ರಿವರ್ಸ್ ಸರ್ಚ್ ವಿಧಾನದಲ್ಲಿ ಹುಡುಕಾಟ ನಡೆಸಿದಾಗ ಹಲವರು ಈ ಪೋಸ್ಟ್ ಅನ್ನು ಹಂಚಿಕೊಂಡಿರುವುದು ಕಂಡು ಬಂತು. ನಂತರ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಡಿದಾಗ ಸ್ವಿಟ್ಜರ್ಲೆಂಡ್‌ನ ಸುದ್ದಿ ಪೋರ್ಟಲ್ swissinfo.ch ನಲ್ಲಿ ಈ ವರ್ಷದ ಏಪ್ರಿಲ್ 25ರಂದು ಪ್ರಕಟವಾದ ವರದಿ ಸಿಕ್ಕಿತು. ಆ ವರದಿಯಲ್ಲಿದ್ದ ಚಿತ್ರ ಹಾಗೂ ಪೋಸ್ಟ್‌ನಲ್ಲಿದ್ದ ಚಿತ್ರ ಒಂದೇ ಆಗಿತ್ತು. ಆ ಯೋಜನೆಯನ್ನು ಸ್ವಿಟ್ಜರ್ಲೆಂಡ್‌ನಲ್ಲಿ ಜಾರಿಗೊಳಿಸಲಾಗುತ್ತಿದೆ ಎಂದು ಸ್ಪಷ್ಟವಾಗಿ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಆ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ನವೋದ್ಯಮ ಸನ್‌–ವೇಸ್ ಕೂಡ ಅಲ್ಲಿಯದ್ದೇ ಎಂದು ವರದಿಯಲ್ಲಿ ಹೇಳಲಾಗಿತ್ತು. ಇಂಡೊನೇಷ್ಯಾ ಬ್ಯುಸಿನೆಸ್ ಪೋಸ್ಟ್ ಎಂಬ ಮಾಧ್ಯಮದಲ್ಲೂ ಈ ಬಗ್ಗೆ ಪ್ರಕಟವಾದ ವರದಿ ಸಿಕ್ಕಿತು. ಇನ್ನಷ್ಟು ಹುಡುಕಿದಾಗ ಭಾರತೀಯ ರೈಲ್ವೆಯು ಇಂತಹ ಯೋಜನೆ ರೂಪಿಸಿರುವ ಬಗ್ಗೆ ನಂಬಲರ್ಹ ಸುದ್ದಿಗಳು ಸಿಗಲಿಲ್ಲ. ಸ್ವಿಟ್ಜರ್ಲೆಂಡ್‌ನಲ್ಲಿ ಜಾರಿಯಾಗುತ್ತಿರುವ ಯೋಜನೆಯನ್ನು ಭಾರತೀಯ ರೈಲ್ವೆಯ ಯೋಜನೆ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

## ಪದಬಂಧ 6097

ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1. ನೀರನ್ನು ಶುದ್ಧಿಮಾಡುವ ಒಂದು ವಸ್ತು (4)
3. ಊಟ ಮಾಡದಿರುವುದು (4)
5. ಕಠೋರವಾಗಿರುವ ಕೈ! (2)
6. ಮತಿ ಇಟ್ಟುಕೊಂಡು ನೀಡಿದ ಒಪ್ಪಿಗೆ (4)
8. ಕೊಡು ಕೊಡು ಎನ್ನುತ್ತಿರುವ ಅಜ್ಜ (2)
9. ಉಮೇದುವಾರನಿಗಿರುವ ಹುರುಪು (3)
10. ವರನ ಜೊತೆಗಿರುವ ಮದುವೆ ಹೆಣ್ಣು (2)
11. ಕಾಡಿನಲ್ಲಿನ ವಾಸ (4)
12. ಮಂಗಳ ಕಾರ್ಯದಲ್ಲಿ ಬಂದಿತೇ ಕೋತಿ? (2)
14. ದಿನವೆಲ್ಲಾ ಕಳೆದ ಹೊಳೆಯ ದಂಡೆ (4)
15. ಸಭೆ ಮುಂತಾದುದನ್ನು ಸಮಾಪ್ತಿಗೊಳಿಸುವುದು (4)

**ಮೇಲಿಂದ ಕೆಳಕ್ಕೆ**
1. ಪತಿಯ ಜೊತೆಯಿರುವ ಹೆಂಡತಿ (2)
2. ಕಾರನ್ನೇರಲು ತೋರಿದ ಉತ್ಸುಕತೆ (3)
4. ಒಳ್ಳೆಯ ಗತಿ ಅಥವಾ ಮೋಕ್ಷ (3)
5. ಚಪ್ಪಾಳೆಯನ್ನು ಹೀಗೆನ್ನಿ (5)
6. ಆ ಮದುವೆಗೆ ತರಿಸಿಕೊಂಡ ವಸ್ತು! (3)
7. ಮದುವೆಮಾಡಿಕೊಳ್ಳುತ್ತಿರುವವನು (5)
9. ಸಂತೋಷ ಹೀಗೆ ಬಂದಿದೆ (3)
11. ದನದ ಕಡೆ ನೋಡುತ್ತಿರುವವನ ಮುಖ! (3)
12. ಮಂದಿ ಹೊಕ್ಕಿರುವ ಗುಡಿ (3)
13. ವಸ್ತು ತರುವಾಗ ಆದ ಆಯಾಸ! (2)



### 6096ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
2.ವಕ್ರೋಕ್ತಿ 4.ದರ್ಶನ 5.ಸಮೀಕ್ಷಕ 6.ಪಾರುಪತ್ಯ 7.ಕವಿ 9.ತತ 13.ಸರದಾರ 14.ಅರಾಜಕ 15.ಲಾವಣಿ 16.ಉರಗ

**ಮೇಲಿಂದ ಕೆಳಕ್ಕೆ:**
1.ಉದಯೋನ್ಮುಖ 2.ವನಪಾಲಕ 3.ಪ್ರೋಕ್ಷಣೆ 5.ಸತ್ಯವಂತ 8.ವಿಧ್ವಂಸಕ 10.ತಪ್ಪರಲಾಗ 11.ಉರವಣಿಸು 12.ಗುರಾಣಿ

## ಸುಡೊಕು 6481

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| | | | 4 | | 3 | 9 | 6 | |
| 7 | | 8 | | | | | | 5 |
| 4 | | | 5 | | 8 | 7 | | 1 |
| | | 9 | | | | | | 7 |
| | 3 | 7 | 1 | | 6 | 4 | 5 | |
| 8 | | | | | | 2 | 1 | |
| 6 | | 5 | | 2 | | | 3 | 4 |
| 3 | | | | | | 5 | | 2 |
| | 8 | 2 | | 5 | | | 7 | |

### 6480 ಸುಡೊಕು

| | | | | | | | | |
|---|---|---|---|---|---|---|---|---|
| 3 | 4 | 8 | 2 | 7 | 9 | 6 | 5 | 1 |
| 9 | 6 | 1 | 5 | 8 | 3 | 2 | 7 | 4 |
| 5 | 7 | 2 | 1 | 6 | 4 | 3 | 9 | 8 |
| 6 | 9 | 4 | 7 | 3 | 5 | 1 | 8 | 2 |
| 2 | 8 | 5 | 6 | 9 | 1 | 7 | 4 | 3 |
| 1 | 3 | 7 | 4 | 2 | 8 | 9 | 6 | 5 |
| 8 | 5 | 9 | 3 | 1 | 6 | 4 | 2 | 7 |
| 7 | 1 | 6 | 8 | 4 | 2 | 5 | 3 | 9 |
| 4 | 2 | 3 | 9 | 5 | 7 | 8 | 1 | 6 |

# ಆಡದೇ ಮಾಡುವವನು ರೂಢಿಯೊಳಗುತ್ತಮನು

ನುಡಿ ಬೆಳಗು



ದೀಪಾ ಹಿರೇಗುತ್ತಿ

**ಕ್ರೊವೇಶಿಯಾದ** ರಾಜಧಾನಿ ಝಾಗ್ರೆಬ್‌ನಲ್ಲಿ ನಿನ್ನೆಯಷ್ಟೇ ಮುಗಿದ ಚೆಸ್ ಪಂದ್ಯಾವಳಿಗೂ ಮುನ್ನ ವಿಶ್ವದ ನಂಬರ್ ಒನ್ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಪತ್ರಕರ್ತರೊಬ್ಬರು ಹಾಲಿ ವಿಶ್ವ ಚಾಂಪಿಯನ್ ಭಾರತದ ಡಿ. ಗುಕೇಶ್ ಅವರ ಬಗ್ಗೆ ಕೇಳಿದಾಗ ಆತನೊಬ್ಬ ದುರ್ಬಲ ಆಟಗಾರ ಎಂದರು ಮ್ಯಾಗ್ನಸ್. ತಿಂಗಳ ಹಿಂದಷ್ಟೇ ನಾರ್ವೆ ಚಾಂಪಿಯನ್‌ಶಿಪ್‌ನ ಪಂದ್ಯವೊಂದರಲ್ಲಿ ಮ್ಯಾಗ್ನಸ್ ಅವರನ್ನು ಗುಕೇಶ್ ಸೋಲಿಸಿದ್ದರು. ಅಷ್ಟೇ ಅಲ್ಲ, ಗುಕೇಶ್ ಝಾಗ್ರೆಬ್‌ನಲ್ಲಿಯೇ ಮ್ಯಾಗ್ನಸ್ ಅವರನ್ನು ಮತ್ತೊಮ್ಮೆ ಸೋಲಿಸಿದರು. ಅದೂ ಕಪ್ಪು ಕಾಯಿಗಳೊಂದಿಗೆ ಆಟವಾಡಿ. ಮುಂದುವರಿದು, ಅಲ್ಲಿಯೇ ರ್‍ಯಾಪಿಡ್ ಚಾಂಪಿಯನ್‌ಶಿಪ್ ಕೂಡ ಗೆದ್ದರು.

ಈ ಘಟನೆಯಿಂದ ನಾವು ಕಲಿಯಬಹುದಾದ ಸಂಗತಿಗಳು ಎರಡು. ಒಂದು ಮ್ಯಾಗ್ನಸ್ ಅವರ ನಡತೆಯಿಂದ. ವಿದ್ಯೆಗೆ ವಿನಯವೇ ಭೂಷಣ ಅನ್ನುತ್ತಾರೆ. ಮ್ಯಾಗ್ನಸ್ ಪ್ರತಿಭಾವಂತರಿರಬಹುದು, ತಮ್ಮ ಸಾಮರ್ಥ್ಯದ ಬಗ್ಗೆ ಅವರಿಗೆ ಅಪಾರವಾದ ನಂಬಿಕೆ ಇರಬಹುದು. ಆದರೆ, ಬೇರೆ ಆಟಗಾರರನ್ನು ಹಗುರವಾಗಿ ಕಾಣುವ ಅಧಿಕಾರ, ಅದನ್ನು ಬಾಯಿಬಿಟ್ಟು ಹೇಳುವ ಅಹಂಕಾರ ಯಾರೂ ಒಪ್ಪುವಂತಹುದಲ್ಲ. ತಾವಾಡಿದ ಮಾತು ತಮಗೇ ತಿರುಗುಬಾಣವಾಗಿ ಅದೇ ಗುಕೇಶ್‌ರಿಂದ ಪಂದ್ಯವೊಂದರಲ್ಲಿ ಸೋಲಿಸಲ್ಪಟ್ಟರಲ್ಲ. ಯಾವಾಗಲೂ ಬೇರೆಯವರ ಸಾಮರ್ಥ್ಯವನ್ನು ಕಡೆಗಣಿಸುವುದು ಮತ್ತು ತಮ್ಮ ಪ್ರತಿಭೆಯ ಬಗ್ಗೆ ವಿಪರೀತ ಅಹಂಕಾರ ಪಡುವುದು ಒಪ್ಪುವಂತಹುದ್ದಲ್ಲ.

ಇನ್ನು ಗುಕೇಶರ ಗೆಲುವಿನಿಂದ ಸಿಗುವ ಪಾಠ ಬಹು ಮುಖ್ಯವಾದದ್ದು. ಮ್ಯಾಗ್ನಸ್ ಆಡಿದ ಮಾತಿಗೆ ಗುಕೇಶ್ ಯಾವ ಪ್ರತಿಕ್ರಿಯೆಯನ್ನೂ ನೀಡಲಿಲ್ಲ. ಆದರೆ ಮೌನವಾಗಿ ತಮ್ಮ ತಯಾರಿ ಮಾಡುತ್ತಿದ್ದರು. ತೆರೆಯ ಹಿಂದಿನ ಬೆವರು ಹರಿಸುವಿಕೆ ಬೇರೆಯವರಿಗೆ ಕಾಣುವುದಿಲ್ಲ. ಅದರಲ್ಲೂ ಒಂದು ಪ್ರಮುಖ ಚಾಂಪಿಯನ್‌ಶಿಪ್‌ನಲ್ಲಿ ಆಟವಾಡುವಾಗ ಮನಸ್ಸನ್ನು ಕುಗ್ಗಿಸುವ ಈ ರೀತಿಯ ಟೀಕೆಗಳಿಂದ ಪ್ರಚೋದಿತರಾಗದೇ, ತಾಳ್ಮೆ ಕಳೆದುಕೊಳ್ಳದೇ ಆಡುವುದು ಅಷ್ಟು ಸುಲಭವಲ್ಲ. ಕಪ್ಪು ಕಾಯಿಗಳಿದ್ದರೂ ಮ್ಯಾಗ್ನಸ್ ಅವರನ್ನು ಸೋಲಿಸಿ ಗುಕೇಶ್ ಅದ್ಭುತ ಸಾಧನೆ ಮಾಡಿದರು. ಜತೆಗೆ ತಮ್ಮ ವಿಶ್ವಚಾಂಪಿಯನ್ ಪಟ್ಟ ಆಕಸ್ಮಿಕವಲ್ಲ ಅನ್ನುವುದನ್ನೂ ಈ ಮೂಲಕ ಸಾಬೀತುಪಡಿಸಿದರು. ಆಡದೇ ಮಾಡುವವನು ರೂಢಿಯೊಳಗುತ್ತಮನು ಎಂಬ ಹಳೆಯ ಮಾತಿಗೆ ಹೊಸ ಉದಾಹರಣೆಯಾದರು ಗುಕೇಶ್.

ನಮ್ಮ ಬದುಕಿನಲ್ಲಿಯೂ ಅಷ್ಟೇ. ಗೆಲುವುಗಳು ನಮ್ಮನ್ನು ಅಹಂಕಾರಿಯಾಗಿಸಬಾರದು, ಟೀಕೆಗಳು ನಮ್ಮನ್ನು ಕುಗ್ಗಿಸಬಾರದು. 'ಸೂಳ್ಪಡೆಯಲಪ್ಪುದು ಕಾಣಾ ಮಹಾಜಿರಂಗದೊಳ್' ಎಂದು ಪಂಪಭಾರತದಲ್ಲಿ ಪಂಪ ಹೇಳುತ್ತಾನೆ. ಅಂದರೆ ಯುದ್ಧದಲ್ಲಿ ಪ್ರತಿಯೊಬ್ಬರ ಸರದಿಯೂ ಬರುತ್ತದೆ ಎಂಬುದು ಇದರರ್ಥ. ಕ್ರೊವೇಶಿಯಾದ ಈ ಪಂದ್ಯಾವಳಿಯಲ್ಲಿ ಮ್ಯಾಗ್ನಸ್ ಚಾಂಪಿಯನ್ ಆದರು. ನಾಳೆ ಮತ್ತ್ಯಾರೋ ಆಗುತ್ತಾರೆ. ಬದುಕಿನ ಚಕ್ರದಲ್ಲಿ ಏರಿದವನು ಕೆಳಗಿಳಿಯಲೇಬೇಕು, ಕೆಳಗಿರುವವನು ಮೇಲೇರಲೇಬೇಕು. ತಾಳ್ಮೆಯಿಂದ ಇದ್ದು, ಭರವಸೆಯನ್ನು ಕಳೆದುಕೊಳ್ಳದೇ ಕಠಿಣ ಪರಿಶ್ರಮ ಮತ್ತು ದೃಢನಿರ್ಧಾರದಿಂದ ಏನನ್ನು ಬೇಕಾದರೂ ಸಾಧಿಸಬಹುದು ಎನ್ನುವುದಕ್ಕೆ ಸ್ಫೂರ್ತಿಯ ಸೆಲೆಯಾಗಿದ್ದಾರೆ ಗುಕೇಶ್.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

**08 ಜುಲೈ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ:** ಆಷಾಢ ಶುಕ್ಲ ತ್ರಯೋದಶಿ ಗಂ. 24-39 **ನಕ್ಷತ್ರ:** ಜ್ಯೇಷ್ಠ ಗಂ. 27-15 **ಯೋಗ:** ಶುಕ್ಲ (ಶುಕ್ರ) ಗಂ. 22-17 ಕರಣ: ಕೌಲವ ಗಂ. 11-58, ಮಿಥುನ ಮಾಸದ 24 ನೇ ದಿನ. **ಮಳೆ ನಕ್ಷತ್ರ** : ಪುನರ್ವಸು 1 ನೇ ಪಾದ. **ರಾಹುಕಾಲ** : ಮಧ್ಯಾಹ್ನ 03-00 – 04-30 ಸೂರ್ಯೋದಯ : 06-13 ಸೂರ್ಯಾಸ್ತ : 06-58, ಮುಸ್ಲಿಂ ದಿನಾಂಕ : 12 ಮೊಹರಮ್ ,ದಿನ ವಿಶೇಷ : ಪಕ್ಷ ಪ್ರದೋಷ , ಅದೃಷ್ಟ ಸಂಖ್ಯೆ : 7, 9

**ಮೇಷ:** ಸಂಕೋಚವಿಲ್ಲದೆ ನೂತನ ಕಾರ್ಯಭಾರ ಹೆಗಲಿಗೇರಿಸಿಕೊಳ್ಳಿ. ನಂಬುಗೆ ಮತ್ತು ವಿಶ್ವಾಸದಿಂದ ಅವಕಾಶಗಳು ನಿಮ್ಮದಾಗಲಿವೆ. ವಾದ–ವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.

**ವೃಷಭ:** ನಾನಾ ರೀತಿಯಲ್ಲಿ ಹಣವು ಕೈ ಸೇರಲಿದೆ. ಬಂಧುಮಿತ್ರರಿಂದ ಉತ್ತಮ ಸಹಕಾರ ಲಭ್ಯ. ಗಣ್ಯವ್ಯಕ್ತಿಗಳಿಗೆ ಸಮಾಜ ಮತ್ತು ರಾಜಕೀಯ ಕ್ಷೇತ್ರದಲ್ಲಿ ಸ್ಥಾನ-ಮಾನ, ಗೌರವಗಳು ಲಭಿಸಲಿವೆ.

**ಮಿಥುನ:** ದೇವರ ಕೃಪೆ ಹಾಗೂ ಹಿರಿಯರ ಆಶೀರ್ವಾದದಿಂದ ಸಮಸ್ಯೆಗಳಿಗೂ ಸೂಕ್ತ ಪರಿಹಾರ ಸಿಗಲಿದೆ. ಗಣನೀಯ ಆದಾಯವಿದ್ದರೂ ಜೊತೆಯಲ್ಲಿಯೇ ಬಹುಮುಖದ ಖರ್ಚು-ವೆಚ್ಚಗಳನ್ನು ನಿರ್ವಹಿಸ ಬೇಕಾಗಬಹುದು.

**ಕರ್ಕಾಟಕ:** ನಿಜ ಮಾರ್ಗದಿಂದ ಕಾರ್ಯಪ್ರವೃತ್ತರಾದಲ್ಲಿ ಅಭಿವೃದ್ಧಿ ಅನುಭವಕ್ಕೆ ಬರಲಿದೆ. ತಾಯಿಗೆ ಕಣ್ಣಿನ ದೋಷ ಕಾಣಿಸಿಕೊಂಡಲ್ಲಿ ತಕ್ಷಣದಲ್ಲಿ ವೈದ್ಯರನ್ನು ಭೇಟಿ ಮಾಡಿ. ಭಿನ್ನಾಭಿಪ್ರಾಯಗಳಿಗೆ ಪ್ರತಿಕ್ರಿಯಿಸದಿರಿ.

**ಸಿಂಹ:** ತಾಂತ್ರಿಕ ಕ್ಷೇತ್ರದಲ್ಲಿ ಜೀವನ ನಡೆಸುವವರು ಉದ್ಯೋಗದಲ್ಲಿ ದಂಡ ಕಟ್ಟುವ ಸ್ಥಿತಿ ಬರಬಹುದು. ಜಾಗ್ರತೆಯಿಂದ ಕೆಲಸ ಮಾಡಿ. ಹಸಿರು ಬಣ್ಣ ಶುಭ ತರಲಿದೆ.

**ಕನ್ಯಾ:** ಗಣಿತದಲ್ಲಿ ಅಥವಾ ಸಂಗೀತದಲ್ಲಿ ಪರಿಣತಿ ಹೊಂದಿರುವವರಿಗೆ ಅವಕಾಶಗಳು ಅರಸಿ ಬರಲಿವೆ. ಸರ್ಕಾರಿ ಸಂಸ್ಥೆಗಳಲ್ಲಿ ಅಧ್ಯಾಪಕ ವೃತ್ತಿ ಕೈಗೊಳ್ಳುವ ಬಗ್ಗೆ ಪರಿಶ್ರಮವಿರಲಿ. ಶುಭ ಕಾರ್ಯಗಳು ನೆರವೇರುವುದು.

**ತುಲಾ:** ಕಾರ್ಮಿಕ ಜನರಿಗೆ ಆಡಳಿತ ವರ್ಗದವರಿಂದ ಅನುಕೂಲಗಳು ಉಂಟಾಗಲಿವೆ. ಹಣ್ಣು ತರಕಾರಿ ವ್ಯಾಪಾರಿಗಳಿಗೆ ಸರಕು ಸಾಗಣೆಯಲ್ಲಿ ತೊಂದರೆಗಳಾಗಬಹುದು. ವೈದ್ಯರಿಗೆ ವೃತ್ತಿಯಲ್ಲಿ ಸಮಸ್ಯೆಗಳು ಎದುರಾಗಬಹುದು.

**ವೃಶ್ಚಿಕ:** ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟ ಲಾಭದಾಯಕ . ವಿದ್ಯಾರ್ಥಿಗಳಿಗೆ ಶ್ರಮದಿಂದ ಉನ್ನತ ಶ್ರೇಣಿ ಲಭಿಸುವುದು. ಗಂಟಲು ಬೇನೆ ಬರಬಹುದು. ಸಮ್ಮಿಶ್ರ ಫಲ ಕಾಣುವಿರಿ. ಕುಲದೇವರ ಸೇವೆಯಿಂದ ಫಲ ಲಭಿಸಲಿದೆ.

**ಧನು:** ಜನರನ್ನು ಆಕರ್ಷಿಸುವ ಕಲೆ ಕರಗತವಾಗಿದೆ. ಭರವಸೆಯಂತೆ ನಡೆದು-ಕೊಳ್ಳುವಿರಿ. ಎಲ್ಲಾ ವಿಷಯಗಳನ್ನೂ ಸಮಗ್ರವಾಗಿ ಅವಲೋಕಿಸಲು ಉತ್ತಮ ದಿನ . ಮೇಲಧಿಕಾರಿಗಳ ಮೆಚ್ಚುಗೆ ಪಡೆಯಲು ವಾಮಮಾರ್ಗ ಬೇಡ.

**ಮಕರ:** ಕೆಲಸಗಳು ಮಂದಗತಿಯಲ್ಲಿ ಸಾಗುವುದು. ಕೆಲವು ಮೂಲಭೂತ ಬದಲಾವಣೆಗಳಾಗುವ ಸಾಧ್ಯತೆ ಇದೆ. ಭವಿಷ್ಯದ ದೃಷ್ಟಿಯಿಂದ ಕೆಲಸ ದೊಡ್ಡದು ಸಣ್ಣದು ಎಂಬ ಯೋಚನೆ ಮಾಡದೇ ಕಾರ್ಯೋನ್ಮುಖರಾಗುವುದು ಉತ್ತಮ.

**ಕುಂಭ:** ಆಹಾರ ಪದಾರ್ಥಗಳಿಂದ ಲಾಭ ಸಿಗಲಿದೆ. ಮುಖ್ಯ ಸಲಹೆ ಪಡೆಯಲಿದ್ದು, ಅದನ್ನು ಜೀವನದಲ್ಲಿ ರೂಢಿಸಿಕೊಳ್ಳಿ. ಮುಂದಿನ ಹಾದಿ ಏನೆಂಬುದು ಸ್ಪಷ್ಟವಾಗಲಿದೆ. ಕುಟುಂಬದ ಜವಾಬ್ದಾರಿ ವಹಿಸಿಕೊಳ್ಳಲಿದ್ದೀರಿ.


**ಮೀನ:** ಏನನ್ನಾದರೂ ಸಾಧಿಸಲೇಬೇಕೆಂದಿರುವ ನಿಮಗೆ ಆತ್ಮವಿಶ್ವಾಸದ ಕೊರತೆ ಕಾಣಿಸದು. ಅಸೂಯೆ ಉಂಟಾಗದಂತೆ ಕಾರ್ಯ ಸಾಧಿಸಿ. ಅತಿ ಔದರ್ಯತನ ತೋರಬೇಕೆನಿಸಿದಲ್ಲಿ ಹಣಕಾಸಿನ ಸ್ಥಿತಿ ಗಮನಿಸಿಕೊಳ್ಳಿ.

## ಗುಂಡಣ್ಣ



ವಿನಿಮಯ ದರ | ಡಾಲರ್ 85.94 ↑ | ಪೌಂಡ್ 116.87 ↓ | ಯುರೊ 100.76 ↓ | ಯೆನ್ (100ಕ್ಕೆ) 59

ಷೇರುಪೇಟೆ ವಹಿವಾಟು




ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ: | 25,461 |
| ಇಂದಿನ ಅಂತ್ಯ: | 25,461 |
| ದಿನದ ಗರಿಷ್ಠ: | 25,489 |
| ↑ | 0.30 |

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

| | | |
|---|---|---|
| | 100 ಕ್ಕೆ | ₹620 |
| | 12 ಕ್ಕೆ | ₹80 |
| ಮೈಸೂರು: | 100 ಕ್ಕೆ | ₹625 |

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

| | |
|---|---|
| ದೊಡ್ಡ | ₹1500-2000 |
| ಮಧ್ಯಮ | ₹1000-1500 |
| ಸಣ್ಣ | ₹500-1000 |

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹20500-27200 |
| ದಾವಣಗೆರೆ | ₹20500-20500 |
| ತುಮಕೂರು | ₹25100-27000 |
| ಬೆಳ್ತಂಗಡಿ | ₹27300-28500 |

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1405 (1405) |
| ಸೋಯಾ (ರಿಫೈನ್ಡ್) | ₹1200 (1210) |
| ಸೂರ್ಯಕಾಂತಿ (ರಿಫೈನ್ಡ್) | ₹1350 (1350) |
| ಪಾಮೋಲಿನ್ | ₹1170 (1170) |

## ಅಡಿಕೆ ಧಾರಣೆ

| ಕುಮಟಾ | | ಶಿವಮೊಗ್ಗ | | ಶಿರಸಿ | |
|---|---|---|---|---|---|
| ಚಾಲಿ | 35010-42119 | ಬೆಟ್ಟೆ | 53099-60609 | ಬೆಟ್ಟೆ | 24099-38210 |
| ಚಿಪ್ಪು | 23089-29089 | ಗೊರಬಲು | 18001-29299 | ಬಿಳಿಗೋಟು | 18599-32699 |
| ಕೋಕ | 7589-21009 | ರಾಶಿ | 46858-56899 | ಚಾಲಿ | 35649-42899 |
| ಫ್ಯಾಕ್ಟರಿ | 6029-24600 | ಸರಕು | 55000-97796 | ಕೆಂಪುಗೋಟು | 17669-20699 |
| ಹಳೆಚಾಲಿ | 39019-42899 | | | ರಾಶಿ | 41389-46518 |
| **ಸಾಗರ** | | **ಸಿದ್ದಾಪುರ** | | **ಯಲ್ಲಾಪುರ** | |
| ಬಿಳಿಗೋಟು | 13099-25599 | ಬಿಳಿಗೋಟು | 23919-30899 | ಬಿಳಿಗೋಟು | 13299-30499 |
| ಚಾಲಿ | 18699-36699 | ಚಾಲಿ | 34399-40109 | ಚಾಲಿ | 32169-40899 |
| ಕೋಕ | 9100-22599 | ಕೋಕ | 15799-21699 | ಕೋಕ | 6291-20212 |
| ಕೆಂಪುಗೋಟು | 14699-27500 | ಕೆಂಪುಗೋಟು | 22119-23419 | ಕೆಂಪುಗೋಟು | 15499-25099 |
| ರಾಶಿ | 23099-56370 | ರಾಶಿ | 40699-46699 | ರಾಶಿ | 43999-54599 |
| ಸಿಪ್ಪೆಗೋಟು | 6099-18899 | ತಟ್ಟಿಬೆಟ್ಟೆ | 30119-36699 | ತಟ್ಟಿಬೆಟ್ಟೆ | 30999-36199 |

# ಭಾರತ್ ಬಂದ್: ಕಾರ್ಮಿಕರು ಸಜ್ಜು

## ಬುಧವಾರ ಸಾರ್ವತ್ರಿಕ ಮುಷ್ಕರಕ್ಕೆ ಕರೆ, ಕೇಂದ್ರದ ನೀತಿಗಳ ವಿರುದ್ಧ ಹೋರಾಟ

ನವದೆಹಲಿ (ಪಿಟಿಐ): ಬ್ಯಾಂಕಿಂಗ್, ವಿಮೆ, ಅಂಚೆ, ಕಲ್ಲಿದ್ದಲು ಗಣಿಗಾರಿಕೆ, ಹೆದ್ದಾರಿಗಳು ಮತ್ತು ನಿರ್ಮಾಣ ವಲಯದಲ್ಲಿ ಕೆಲಸ ಮಾಡುತ್ತಿರುವ 25 ಕೋಟಿಗೂ ಹೆಚ್ಚು ಕಾರ್ಮಿಕರು ಬುಧವಾರ ಸಾರ್ವತ್ರಿಕ ಮುಷ್ಕರ ನಡೆಸುವ ಸಾಧ್ಯತೆ ಇದ್ದು, ದೇಶದಾದ್ಯಂತ ವಿವಿಧ ಸೇವೆಗಳಲ್ಲಿ ವ್ಯತ್ಯಯವಾಗುವ ಸಂಭವ ಇದೆ.

ಕಾರ್ಮಿಕರ ಹತ್ತು ಸಂಘಟನೆಗಳು ಮತ್ತು ಅವುಗಳ ಸಹವರ್ತಿ ಸಂಘಟನೆಗಳ ವೇದಿಕೆಯು, 'ಕೇಂದ್ರ ಸರ್ಕಾರವು ಕಾರ್ಮಿಕ ವಿರೋಧಿ, ರೈತ ವಿರೋಧಿ, ರಾಷ್ಟ್ರ ವಿರೋಧಿ ಮತ್ತು ಕಾರ್ಪೊರೇಟ್ ಪರವಾದ ನೀತಿಗಳನ್ನು ಅನುಸರಿಸುತ್ತಿದೆ' ಎಂದು ಆರೋಪಿಸಿದೆ. ಇದನ್ನು ವಿರೋಧಿಸಿ ವೇದಿಕೆಯು ಭಾರತ್ ಬಂದ್‌ಗೆ ಕರೆ ನೀಡಿದೆ.

**ಮುಖ್ಯಾಂಶಗಳು**

- ಕೆಲವು ಸೇವೆಗಳಲ್ಲಿ ವ್ಯತ್ಯಯವಾಗುವ ಸಾಧ್ಯತೆ
- 25 ಕೋಟಿಗೂ ಹೆಚ್ಚು ಕಾರ್ಮಿಕರು ಭಾಗಿಯಾಗುವ ನಿರೀಕ್ಷೆ
- ಕೇಂದ್ರದ ನೀತಿಗಳಿಂದ ಅಸಮಾನತೆ ಏರಿಕೆ: ಆರೋಪ

'ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಭಾರಿ ಯಶಸ್ಸು ದೊರಕಿಸಿಕೊಡಬೇಕು' ಎಂದು ವೇದಿಕೆಯು ಕರೆ ನೀಡಿದೆ.



ಅರ್ಥ ವ್ಯವಸ್ಥೆಯ ಸಂಘಟಿತ ಹಾಗೂ ಅಸಂಘಟಿತ ವಲಯಗಳಲ್ಲಿ ಕಾರ್ಮಿಕ ಸಂಘಟನೆಗಳು ಮುಷ್ಕರಕ್ಕೆ ಸಿದ್ಧತೆ ನಡೆಸಿವೆ ಎಂದು ತಿಳಿಸಿದೆ.

'ಮುಷ್ಕರದಲ್ಲಿ 25 ಕೋಟಿಗೂ ಹೆಚ್ಚು ಕಾರ್ಮಿಕರು ಭಾಗಿಯಾಗುವ ನಿರೀಕ್ಷೆ ಇದೆ. ರೈತರು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ಕಾರ್ಮಿಕರು ಕೂಡ ಪ್ರತಿಭಟನೆಯಲ್ಲಿ ಭಾಗಿಯಾಗಲಿದ್ದಾರೆ' ಎಂದು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಅಮರ್ಜೀತ್ ಕೌರ್ ಅವರು ಹೇಳಿದ್ದಾರೆ.

ವೇದಿಕೆಯು 17 ಅಂಶಗಳ ಬೇಡಿಕೆಗಳನ್ನು ಕೇಂದ್ರ ಕಾರ್ಮಿಕ ಸಚಿವ ಮನಸುಖ್ ಮಾಂಡವೀಯ ಅವರಿಗೆ ಕಳೆದ ವರ್ಷ ಸಲ್ಲಿಸಿತ್ತು.

ಕೇಂದ್ರ ಸರ್ಕಾರವು ವಾರ್ಷಿಕ ಕಾರ್ಮಿಕ ಸಮಾವೇಶವನ್ನು 10 ವರ್ಷಗಳಿಂದ ಆಯೋಜಿಸಿಲ್ಲ. ಕಾರ್ಮಿಕ ವರ್ಗದ ಹಿತಕ್ಕೆ ವಿರುದ್ಧವಾದ ತೀರ್ಮಾನಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ ಎಂದು ವೇದಿಕೆ ಆರೋಪಿಸಿದೆ.

ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು ಮತ್ತಷ್ಟು ನಿರುದ್ಯೋಗಕ್ಕೆ, ಅಗತ್ಯ ವಸ್ತುಗಳ ಬೆಲೆ ಹೆಚ್ಚಳಕ್ಕೆ, ವೇತನ ಇಳಿಕೆಗೆ, ಸಾಮಾಜಿಕ ವಲಯಗಳ ಮೇಲಿನ ವೆಚ್ಚ ಇಳಿಕೆಗೆ ಕಾರಣವಾಗುತ್ತಿವೆ. ಇವೆಲ್ಲವೂ ಅಸಮಾನತೆಯನ್ನು ಇನ್ನಷ್ಟು ಹೆಚ್ಚಿಸುತ್ತಿವೆ ಎಂದು ಅದು ಹೇಳಿದೆ.

# ಸುದ್ದಿ 2 ನಿಮಿಷ

## ವಾಹನಗಳ ಮಾರಾಟ ಏರಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ವಾಹನಗಳ ಚಿಲ್ಲರೆ ಮಾರಾಟವು ಜೂನ್ ತಿಂಗಳಲ್ಲಿ ಶೇ 5ರಷ್ಟು ಏರಿಕೆಯಾಗಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಸೋಮವಾರ ತಿಳಿಸಿದೆ.

ಕಳೆದ ವರ್ಷದ ಜೂನ್‌ನಲ್ಲಿ ಒಟ್ಟು 19,11,354 ವಾಹನಗಳು ಮಾರಾಟವಾಗಿದ್ದವು. ಈ ಬಾರಿ 20,03,873 ಮಾರಾಟವಾಗಿವೆ ಎಂದು ತಿಳಿಸಿದೆ.

ಪ್ರಯಾಣಿಕ ವಾಹನಗಳ ಚಿಲ್ಲರೆ ಮಾರಾಟವು ಶೇ 2ರಷ್ಟು ಹೆಚ್ಚಳವಾಗಿದ್ದು, 2,97,722 ವಾಹನಗಳು ಮಾರಾಟವಾಗಿವೆ. ದ್ವಿಚಕ್ರ ವಾಹನಗಳ ಮಾರಾಟವು 14,46,387 ಆಗಿದೆ. ವಾಣಿಜ್ಯ ವಾಹನ ಮತ್ತು ತ್ರಿಚಕ್ರ ವಾಹನಗಳ ಮಾರಾಟ ಶೇ 7ರಷ್ಟು ಏರಿಕೆಯಾಗಿದ್ದು, ಕ್ರಮವಾಗಿ 73,367 ಮತ್ತು 1,00,625 ಆಗಿದೆ. ಟ್ರ್ಯಾಕ್ಟರ್ ಮಾರಾಟವು 77,214 (ಶೇ 9ರಷ್ಟು ಹೆಚ್ಚಳ) ಆಗಿದೆ.

ಏಪ್ರಿಲ್–ಜೂನ್ ಅವಧಿಯಲ್ಲಿ ಒಟ್ಟಾರೆ ವಾಹನಗಳ ಚಿಲ್ಲರೆ ಮಾರಾಟ ಶೇ 5ರಷ್ಟು ಏರಿಕೆಯಾಗಿದ್ದು, 65,42,586 ಆಗಿದೆ ಎಂದು ತಿಳಿಸಿದೆ.

ಹೆಚ್ಚುತ್ತಿರುವ ಜಾಗತಿಕ ರಾಜಕೀಯ ಬಿಕ್ಕಟ್ಟು ಮತ್ತು ಅಮೆರಿಕ ಸುಂಕ ನೀತಿಯು ಎಚ್ಚರಿಕೆ ನಡೆ ಅನುಸರಿಸುವಂತೆ ಮಾಡಿದೆ. ಇದು ಗ್ರಾಹಕರ ಖರೀದಿಸುವ ಭಾವನೆ ಮೇಲೆ ಪರಿಣಾಮ ಬೀರಬಹುದು.



ಅಲ್ಲದೆ, ವಿರಳ ಲೋಹಗಳ ಮೇಲಿನ ನಿರ್ಬಂಧದಿಂದ ಘಟಕಗಳು ವಾಹನಗಳ ಬಿಡಿಭಾಗ ತಯಾರಿಕೆಯನ್ನು ಸ್ಥಗಿತಗೊಳಿಸಿವೆ ಎಂದು ಹೇಳಿದೆ.

## ಜಿಯೋ ಬ್ಲ್ಯಾಕ್‌ರಾಕ್ ₹17 ಸಾವಿರ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಜಿಯೊ ಫೈನಾನ್ಸಿಯಲ್ ಸರ್ವಿಸಸ್ ಲಿಮಿಟೆಡ್ ಮತ್ತು ಅಮೆರಿಕದ ಬ್ಲ್ಯಾಕ್‌ರಾಕ್ ಜಂಟಿ ಪಾಲುದಾರಿಕೆಯ ಜಿಯೊ ಬ್ಲ್ಯಾಕ್‌ರಾಕ್ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯು ತನ್ನ ಆರಂಭಿಕ ಮೂರು ಮ್ಯೂಚುವಲ್ ಫಂಡ್‌ಗಳ ಮೂಲಕ ₹17,800 ಕೋಟಿ ಹೂಡಿಕೆ ಸಂಗ್ರಹಿಸಿರುವುದಾಗಿ ತಿಳಿಸಿದೆ.

ಒಟ್ಟು ಮೂರು ಹೊಸ ಮ್ಯೂಚುವಲ್ ಫಂಡ್‌ಗಳ ಮೂಲಕ ಕಂಪನಿಯು ಈ ಮೊತ್ತದ ಹೂಡಿಕೆ ಸಂಗ್ರಹಿಸಿದೆ. ಹೊಸ ಫಂಡ್‌ಗಳಲ್ಲಿ ಆರಂಭಿಕ ಹಂತದಲ್ಲಿ ಹೂಡಿಕೆ ಮಾಡಲು ಮೂರು ದಿನಗಳ ಅವಕಾಶ ನೀಡಲಾಗಿತ್ತು. 90ಕ್ಕೂ ಹೆಚ್ಚು ಸಾಂಸ್ಥಿಕ ಹೂಡಿಕೆದಾರರು ಹಣ ತೊಡಗಿಸಿದ್ದಾರೆ. ಇದು ಜಿಯೊ ಬ್ಲ್ಯಾಕ್‌ರಾಕ್ ಅಸೆಟ್ ಮ್ಯಾನೇಜ್‌ಮೆಂಟ್‌ನಲ್ಲಿ ಅವರಿಗೆ ಇರುವ ವಿಶ್ವಾಸವನ್ನು ತೋರಿಸುತ್ತಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಈ ಫಂಡ್‌ಗಳಲ್ಲಿ ಹಣ ಹೂಡಿಕೆ ಮಾಡುವಲ್ಲಿ ಸಣ್ಣ ಹೂಡಿಕೆದಾರರೂ ಹೆಚ್ಚಿನ ಆಸಕ್ತಿ ತೋರಿಸಿದ್ದಾರೆ. ಎನ್‌ಎಫ್‌ಒ ಅವಧಿಯಲ್ಲಿ 67 ಸಾವಿರಕ್ಕೂ ಹೆಚ್ಚು ಮಂದಿ ಹಣ ತೊಡಗಿಸಿದ್ದಾರೆ ಎಂದು ಕಂಪನಿ ಹೇಳಿದೆ.

## ಚಿಟಿಕೆ ಸುದ್ದಿ

### ಬಿಒಬಿ: ಉಳಿತಾಯ ಖಾತೆಗೆ ಶುಲ್ಕ ಇಲ್ಲ

ಬೆಂಗಳೂರು: ಉಳಿತಾಯ ಖಾತೆಗಳಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳದೆ ಇದ್ದರೆ ಶುಲ್ಕ ವಿಧಿಸುವ ಕ್ರಮವನ್ನು ಜುಲೈ 1ರಿಂದ ಕೈಬಿಡಲಾಗಿದೆ ಎಂದು ಬ್ಯಾಂಕ್ ಆಫ್ ಬರೋಡಾ (ಬಿಒಬಿ) ತಿಳಿಸಿದೆ.

'ಉಳಿತಾಯ ಖಾತೆಗಳಲ್ಲಿ ಮಾಸಿಕ ಸರಾಸರಿ ಮೊತ್ತ ಕಾಯ್ದುಕೊಳ್ಳದಿದ್ದರೂ ಗ್ರಾಹಕರಿಗೆ ಯಾವುದೇ ಶುಲ್ಕ ವಿಧಿಸುವುದಿಲ್ಲ. ಇದು ಬ್ಯಾಂಕ್‌ನ ಗ್ರಾಹಕ ಸ್ನೇಹಿ ಕ್ರಮ. ಆದರೆ, ಪ್ರೀಮಿಯಂ ಉಳಿತಾಯ ಖಾತೆಯ ಯೋಜನೆಗಳಿಗೆ ಈ ವಿನಾಯಿತಿ ಇರುವುದಿಲ್ಲ' ಎಂದು ಬ್ಯಾಂಕ್ ತಿಳಿಸಿದೆ.

### ಜಪಾನ್ ಸರಕುಗಳ ಮೇಲೆ ಶೇ 25 ಸುಂಕ

ವಾಷಿಂಗ್ಟನ್ (ಎಪಿ): ಜಪಾನ್ ಮತ್ತು ದಕ್ಷಿಣ ಕೊರಿಯಾದಿಂದ ಆಮದಾಗುವ ಸರಕುಗಳ ಮೇಲೆ ಆಗಸ್ಟ್ 1ರಿಂದ ಶೇಕಡ 25ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಏಷ್ಯಾದ ಈ ಎರಡು ಮಿತ್ರ-ರಾಷ್ಟ್ರಗಳ ಜತೆಗಿನ 'ವ್ಯಾಪಾರ ಅಸಮತೋಲನ'ವನ್ನು ಉಲ್ಲೇಖಿಸಿ ಟ್ರಂಪ್ ಅವರು ಸೋಮವಾರ ಈ ನಿರ್ಧಾರ ಪ್ರಕಟಿಸಿದ್ದಾರೆ. ಎರಡೂ ದೇಶಗಳ ನಾಯಕರನ್ನು ಉದ್ದೇಶಿಸಿ ಬರೆದ ಪತ್ರಗಳನ್ನು ಅವರು 'ಟ್ರುತ್ ಸೋಷಿಯಲ್' ವೇದಿಕೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಅಮೆರಿಕದೊಂದಿಗೆ ಇನ್ನೂ ವ್ಯಾಪಾರ ಒಪ್ಪಂದ ಮಾಡಿಕೊಳ್ಳದ 12ರಿಂದ 15 ದೇಶಗಳಿಗೆ ಸುಂಕ ವಿಧಿಸುವುದಕ್ಕೆ ಸಂಬಂಧಿಸಿದ ಪತ್ರಗಳನ್ನು ಕಳುಹಿಸುವುದಾಗಿ ಟ್ರಂಪ್ ಈ ಹಿಂದೆ ಹೇಳಿದ್ದರು.

### 'ಜಗತ್ತು ಮೂರನೇ ಮಹಾಯುದ್ಧದತ್ತ'

ಮುಂಬೈ: ರಷ್ಯಾ–ಉಕ್ರೇನ್ ಮತ್ತು ಇರಾನ್–ಇಸ್ರೇಲ್ ಯುದ್ಧಗಳು ವಿಶ್ವದ ಮೂರನೇ ಮಹಾಯುದ್ಧ ಆಗುವ ಹಂತವನ್ನು ಮುಟ್ಟುತ್ತಿವೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಆತಂಕ ವ್ಯಕ್ತಪಡಿಸಿದ್ದಾರೆ.

## ಮುಂಬೈ ಧಾರಣೆ (ಶೇಂಗಾ)

07-07-2025

| | |
|---|---|
| ಜಾವಾ 70/80(ಹೊಸ) | 9600-9700 |
| ಜಾವಾ 80/90(ಹೊಸ) | 9100-9200 |
| ದಪ್ಪ ಮಧ್ಯಪ್ರದೇಶ (ಹೊಸ) | 7600-7700 |
| ದಪ್ಪ ಗುಜರಾತ್ (ಹೊಸ) | 7900-8000 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1415 (1415) |
| ಒಂದು ವಾರದ ಡೆಲಿವರಿ | 1410 (1410) |
| ಪಾಮ್ ವಾರದ ಡೆಲಿವರಿ | 1168 (1168) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1260 (1265) |
| **ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 96,400 (96,700) |
| ಬೆಳ್ಳಿ ಕೆ.ಜಿಗೆ | 1,06,600 (1,07,650) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

### 'ಸೆ.15ರ ವೇಳೆಗೆ ಆರ್‌ಆರ್‌ಬಿ ಐ.ಟಿ ಸಂಯೋಜನೆ ಪೂರ್ಣ'

ನವದೆಹಲಿ (ಪಿಟಿಐ): 'ಇತ್ತೀಚೆಗೆ ವಿಲೀನಗೊಂಡಿರುವ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ (ಆರ್‌ಆರ್‌ಬಿ) ಐ.ಟಿ ಸಂಯೋಜನೆ ಪ್ರಕ್ರಿಯೆ ಸೆಪ್ಟೆಂಬರ್ 15ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ' ಎಂದು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ (ನಬಾರ್ಡ್) ಅಧ್ಯಕ್ಷ ಶಾಜಿ ಕೆ.ವಿ ಹೇಳಿದ್ದಾರೆ.

'ಒಂದು ರಾಜ್ಯ, ಒಂದು ಆರ್‌ಆರ್‌ಬಿ' ತತ್ವದ ಅಡಿ ಮೇ 1ರಂದು ಬ್ಯಾಂಕ್‌ಗಳು ವಿಲೀನಗೊಂಡವು. ಬ್ಯಾಂಕ್‌ಗಳ ಪರಿಣಾಮಕಾರಿ ಕಾರ್ಯಾಚರಣೆ ಮತ್ತು ವೆಚ್ಚ ಕಡಿತಗೊಳಿಸುವುದು ಇದರ ಮುಖ್ಯ ಉದ್ದೇಶ. ಪ್ರಸ್ತುತ 26 ರಾಜ್ಯ ಮತ್ತು ಎರಡು ಕೇಂದ್ರಾಡಳಿತ ಪ್ರದೇಶದಲ್ಲಿ ಒಟ್ಟು 28 ಆರ್‌ಆರ್‌ಬಿಗಳಿದ್ದು, 22 ಸಾವಿರಕ್ಕೂ ಹೆಚ್ಚು ಶಾಖೆಗಳನ್ನು ಹೊಂದಿದೆ.

ಆರ್‌ಆರ್‌ಬಿ ಜೊತೆ ನಬಾರ್ಡ್ ಡಿಜಿಟಲ್ ಮೂಲಸೌಕರ್ಯ ನಿರ್ಮಾಣದ ಕಾರ್ಯನಿರ್ವಹಿಸುತ್ತಿದೆ ಎಂದು ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಆಯೋಜಿಸಿರುವ ಕಾರ್ಯಕ್ರಮದಲ್ಲಿ ಸೋಮವಾರ ಹೇಳಿದ್ದಾರೆ. ಇಂಟರ್‌ನೆಟ್ ವೇಗ ಕಡಿಮೆ ಇರುವುದು ಮತ್ತು ಅರಿವಿನ ಕೊರತೆ ಪ್ರಮುಖ ಸವಾಲುಗಳಾಗಿವೆ ಎಂದು ಹೇಳಿದ್ದಾರೆ.

**ರಾಮನಗರ ರೇಷ್ಮೆಗೂಡು**

| | |
|---|---|
| ಮಿಶ್ರತಳಿ(ಸಿ.ಬಿ) | ₹293-544 |
| ದ್ವಿತಳಿ (ಬಿ.ವಿ) | ₹336-755 |

# ಡಿಎಪಿ, ಯೂರಿಯಾ ಒದಗಿಸಿ ಕೇಂದ್ರಕ್ಕೆ ರಾಜ್ಯ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಜ್ಯದಲ್ಲಿ ಶೇ 60ರಷ್ಟು ಕೃಷಿ ಬಿತ್ತನೆ ಪೂರ್ಣಗೊಂಡಿದ್ದು, ಅಗತ್ಯ ಪ್ರಮಾಣದ ಡಿಎಪಿ ಹಾಗೂ ಯೂರಿಯಾ ರಸಗೊಬ್ಬರ ಒದಗಿಸಬೇಕು' ಎಂದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸೋಮವಾರ ಮನವಿ ಮಾಡಿದೆ.

ಕೇಂದ್ರ ಕೃಷಿ ಸಚಿವ ಶಿವರಾಜ ಸಿಂಗ್ ಚೌಹಾಣ್ ಅವರನ್ನು ಇಲ್ಲಿ ಭೇಟಿ ಮಾಡಿದ ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ಈ ಮನವಿ ಮಾಡಿದರು. 'ಯೂರಿಯಾ ಬಳಕೆಯನ್ನು ಶೇ 50ರಷ್ಟು ಕಡಿಮೆ ಮಾಡುವಂತೆ ಕೇಂದ್ರ ಸೂಚಿಸಿದೆ. ಈ ವರ್ಷ ರಾಜ್ಯದ ರೈತರಿಗೆ ಬೇಕಿರುವ ಯೂರಿಯಾ ಪೂರೈಸಲು ದಾಸ್ತಾನು ಮಾಡಿಕೊಳ್ಳಲಾಗಿದೆ. ಮುಂದಿನ ವರ್ಷದಿಂದ ಸಮಸ್ಯೆಯಾಗಲಿದೆ' ಎಂದು ಸಚಿವರು ಗಮನಕ್ಕೆ ತಂದರು.

'ರಾಜ್ಯದಲ್ಲಿ ಮುಂಗಾರು ಬಿತ್ತನೆ ಹಂಗಾಮಿಗೆ 4 ಲಕ್ಷ ಟನ್ ಡಿಎಪಿಯನ್ನು ಕೇಂದ್ರ ಹಂಚಿಕೆ ಮಾಡಿದೆ. ಏಪ್ರಿಲ್‌ನಿಂದ ಜುಲೈ ವರೆಗೆ 3.02 ಲಕ್ಷ ಟನ್ ಡಿಎಪಿ ಅಗತ್ಯ ಇದೆ. ಈ ಸಲ ಮುಂಗಾರು ಅವಧಿಗಿಂತ ಮುಂಚಿತವಾಗಿ ಪ್ರವೇಶಿಸಿದ್ದು, ಕೃಷಿ ಚಟುವಟಿಕೆಗೆ ಬಿರುಸಿನಿಂದ ಸಾಗಿದೆ. ಬೇಡಿಕೆಯ ಅವಧಿಯಲ್ಲಿ ರೈತರಿಗೆ ಡಿಎಪಿ ಪೂರೈಸಲು ಕೇಂದ್ರ ಸರ್ಕಾರ ನೆರವು ನೀಡಬೇಕು ಎಂದು ಅವರು ಮನವಿ ಮಾಡಿದರು.



'ಮುಂಗಾರು ಹಂಗಾಮಿಗೆ 11.17 ಲಕ್ಷ ಟನ್ ಯೂರಿಯಾ ಹಂಚಿಕೆ ಮಾಡಲಾಗಿದೆ. ಏಪ್ರಿಲ್‌ನಿಂದ ಜುಲೈ ವರೆಗೆ 6.80 ಲಕ್ಷ ಟನ್ ಯೂರಿಯಾ ಅಗತ್ಯವಿದೆ. ಆದರೆ, ಈವರೆಗೆ ರಾಜ್ಯಕ್ಕೆ 3.98 ಲಕ್ಷ ಟನ್ ಯೂರಿಯಾ ಪೂರೈಕೆ ಆಗಿದೆ. ಜುಲೈ ತಿಂಗಳಲ್ಲಿ 2.25 ಲಕ್ಷ ಟನ್ ಯೂರಿಯಾ ಬೇಕಿದೆ. ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ರೈತರು ಅತೀ ಹೆಚ್ಚು ಯೂರಿಯಾ ಬಳಕೆ ಮಾಡುತ್ತಾರೆ. ಹೀಗಾಗಿ, ಕೇಂದ್ರವು ಅಗತ್ಯ ಪ್ರಮಾಣದ ರಸಗೊಬ್ಬರ ಸರಬರಾಜು ಮಾಡಬೇಕು' ಎಂದು ಅವರು ಒತ್ತಾಯಿಸಿದರು.

'ಮುಂಗಾರು ಹಂಗಾಮಿನಲ್ಲಿ ರಾಗಿ ಹಾಗೂ ಜೋಳಕ್ಕೆ ಕನಿಷ್ಠ ಬೆಂಬಲ ಬೆಲೆ ನೀಡಲಾಗುತ್ತಿದೆ. ಆದರೆ, ರಾಜ್ಯದಲ್ಲಿ ಹಿಂಗಾರಿನಲ್ಲಿ ಜೋಳ ಹಾಗೂ ರಾಗಿ ಬೆಳೆಯಲಾಗುತ್ತಿದೆ. ಹಿಂಗಾರಿನಲ್ಲಿ ಕನಿಷ್ಠ ಬೆಂಬಲ ಬೆಲೆ ಒದಗಿಸಲು ಕೇಂದ್ರ ತುರ್ತು ಕ್ರಮ ಕೈಗೊಳ್ಳಬೇಕು' ಎಂದು ಅವರು ಆಗ್ರಹಿಸಿದರು.

'ಸಂಶೋಧನಾ ಚಟುವಟಿಕೆಗಳಿಗೆ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು ಖಾಸಗಿ ಸಂಸ್ಥೆಗಳಿಂದ ನೆರವು ಪಡೆಯುತ್ತಿವೆ. ಇದಕ್ಕೆ ಜಿಎಸ್‌ಟಿ ವಿಧಿಸಲಾಗುತ್ತಿದೆ. ಇದರಿಂದ ಹೊರೆಯಾಗಿದೆ. ಈ ಅನುದಾನಕ್ಕೆ ಜಿಎಸ್‌ಟಿಯಿಂದ ವಿನಾಯಿತಿ ನೀಡಬೇಕು ಎಂದು ಕೃಷಿ ಸಚಿವಾಲಯವು ಜಿಎಸ್‌ಟಿ ಮಂಡಳಿಗೆ ಪ್ರಸ್ತಾವ ಸಲ್ಲಿಸಬೇಕು' ಎಂದು ಅವರು ಮನವಿ ಮಾಡಿದರು.

ಕೃಷಿ ನವೋದ್ಯಮ ಚಟುವಟಿಕೆಗಳಿಗೆ ಇನ್ನಷ್ಟು ಉತ್ತೇಜನ ನೀಡಲು ಕೃಷಿ ನವೋದ್ಯಮ ಮೂಲನಿಧಿಯನ್ನು ಕೇಂದ್ರ ಸರ್ಕಾರ ಸ್ಥಾಪಿಸಬೇಕು ಎಂದು ಅವರು ಕೋರಿದರು.

## 'ಸುರಕ್ಷಿತ ಪ್ರಯಾಣ: ಇಸ್ರೊ ಪ್ರಯತ್ನ ಗಮನಾರ್ಹ'

ಬೆಂಗಳೂರು (ಪಿಟಿಐ): 'ಆ್ಯಕ್ಸಿಯಂ-4' ಮಿಷನ್‌ನ ಭಾಗವಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿರುವ (ಐಎಸ್‌ಎಸ್) ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ತಮ್ಮ ಸುರಕ್ಷಿತ ಪ್ರಯಾಣದಲ್ಲಿ ಇಸ್ರೊ ತಂಡದ ಪಾತ್ರ ಹಾಗೂ ಪ್ರಯತ್ನ ಗಮನಾರ್ಹವಾಗಿತ್ತು ಎಂದಿದ್ದಾರೆ.

ಶುಕ್ಲಾ ಅವರು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಅವರಿಗೆ ಭಾನುವಾರ ಕರೆ ಮಾಡಿದ್ದರು ಎಂದು ಇಸ್ರೊ ತಿಳಿಸಿದೆ.


ನಾರಾಯಣನ್ ಅವರು ಶುಕ್ಲಾ ಅವರ ಯೋಗಕ್ಷೇಮದ ಬಗ್ಗೆ ವಿಚಾರಿಸಿದ್ದಲ್ಲದೆ, ಐಎಸ್‌ಎಸ್‌ನಲ್ಲಿ ನಡೆಸುತ್ತಿರುವ ವಿವಿಧ ವೈಜ್ಞಾನಿಕ ಪ್ರಯೋಗಗಳು ಹಾಗೂ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದಿದ್ದಾರೆ.

ಶುಕ್ಲಾ ಅವರು ಭೂಮಿಗೆ ಮರಳಿದ ಬಳಿಕ ಎಲ್ಲ ಪ್ರಯೋಗಗಳು ಹಾಗೂ ಚಟುವಟಿಕೆಗಳನ್ನು ನಿಖರವಾಗಿ ದಾಖಲಿಸಲಾಗುತ್ತದೆ. ಇದು ಭಾರತದ ಮಾನವಸಹಿತ ಗಗನಯಾನ ಕಾರ್ಯಕ್ರಮವನ್ನು ಮತ್ತಷ್ಟು ಸುಧಾರಿಸಲು ಒಳನೋಟಗಳನ್ನು ನೀಡಲಿದೆ ಎಂದು ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿಯೂ ಆದ ನಾರಾಯಣನ್ ತಿಳಿಸಿದ್ದಾರೆ.

ಇಸ್ರೊ ಪ್ರಕಾರ, ಗಗನಯಾನಿಗಳನ್ನೊಳಗೊಂಡ ನೌಕೆಯನ್ನು ಕೆಳ ಭೂಕಕ್ಷೆಗೆ ಉಡಾಯಿಸುವ ಭಾರತದ ಸಾಮರ್ಥ್ಯವನ್ನು ಪ್ರದರ್ಶಿಸುವ ಗುರಿ ಹೊಂದಲಾಗಿದೆ. ಈ ಕಾರ್ಯಾಚರಣೆಯಿಂದ ಪಡೆಯಲಿರುವ ಜ್ಞಾನ ಹಾಗೂ ಅನುಭವವು ಅದರ ಯಶಸ್ಸಿಗೆ ಕಾರಣವಾಗುತ್ತದೆ. ಇಸ್ರೊ–ಆ್ಯಕ್ಸಿಯಂ ಅಂತರಿಕ್ಷಯಾನ ಒಪ್ಪಂದದಡಿ ಶುಕ್ಲಾ ಅವರ 'ಐಎಸ್‌ಎಸ್ ಮಿಷನ್' ಕಾರ್ಯಗತಗೊಂಡಿದೆ.

## 'ಎಫ್ ಆ್ಯಂಡ್ ಒ ಅಕ್ರಮದ ಬಗ್ಗೆ ಮೌನ ಏಕೆ?'

ನವದೆಹಲಿ (ಪಿಟಿಐ): 'ಫ್ಯೂಚರ್ಸ್ ಮತ್ತು ಆಪ್ಷನ್' (ಎಫ್ ಆ್ಯಂಡ್ ಒ–ವಾಯಿದಾ ವಹಿವಾಟು) ವಹಿವಾಟಿನಲ್ಲಿ ದೊಡ್ಡ ವ್ಯಕ್ತಿಗಳು ನಡೆಸುತ್ತಿರುವ ಅಕ್ರಮಗಳ ಬಗ್ಗೆ ಮೌನವಹಿಸುವ ಮೂಲಕ ಮೋದಿ ಸರ್ಕಾರವು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರಾಗಲು ಬಿಟ್ಟು, ಸಾಮಾನ್ಯ ಹೂಡಿಕೆದಾರರನ್ನು ಅವಸಾನದ ಅಂಚಿಗೆ ಕೊಂಡೊಯ್ಯುತ್ತಿದೆ' ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.


ರಾಹುಲ್ ಗಾಂಧಿ

ಅಮೆರಿಕ ಮೂಲದ ಟ್ರೇಡಿಂಗ್ ಸಂಸ್ಥೆ ಜೇನ್ ಸ್ಟ್ರೀಟ್ ಸಮೂಹವನ್ನು ಸೆಬಿ ನಿಷೇಧಿಸಿರುವ ಬೆನ್ನಲ್ಲೇ ರಾಹುಲ್ ಅವರು ಕೇಂದ್ರದ ವಿರುದ್ಧ ಈ ವಾಗ್ದಾಳಿ ನಡೆಸಿದ್ದಾರೆ.

'ಎಕ್ಸ್'ನಲ್ಲಿ ಈ ಬಗ್ಗೆ ಪೋಸ್ಟ್ ಮಾಡಿರುವ ಅವರು, 'ಎಫ್ ಆ್ಯಂಡ್ ಒ ವಹಿವಾಟು ದೊಡ್ಡ ವ್ಯಕ್ತಿಗಳ ಜೇಬು ತುಂಬಿಸುವ ಸ್ವರೂಪದ್ದಾಗಿ ಬದಲಾಗಿದ್ದು, ಸಣ್ಣ ಹೂಡಿಕೆದಾರರಿಗೆ ಹಾನಿಯಾಗುತ್ತಿದೆ ಎಂದು 2024ರಲ್ಲೇ ನಾನು ಸ್ಪಷ್ಟವಾಗಿ ಹೇಳಿದ್ದೆ. ಇದೀಗ ಸ್ವತಃ ಸೆಬಿಯೇ ಜೇನ್ ಸ್ಟ್ರೀಟ್ ಸಮೂಹವು ಸಾವಿರಾರು ಕೋಟಿ ವಂಚಿಸಿದೆ ಎಂಬುದನ್ನು ಒಪ್ಪಿಕೊಂಡಿದೆ. ಇಷ್ಟು ದೀರ್ಘ ಕಾಲದವರೆಗೆ ಸೆಬಿ ಏಕೆ ಮೌನ ವಹಿಸಿತ್ತು' ಎಂದು ಪ್ರಶ್ನಿಸಿದ್ದಾರೆ.

ಅಲ್ಲದೇ, 'ಇಷ್ಟೆಲ್ಲಾ ಅಕ್ರಮ ನಡೆಯುತ್ತಿದ್ದರೂ ಯಾರ ಆಜ್ಞೆಯ ಮೇರೆಗೆ ಮೋದಿ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ? ಇನ್ನೂ ಎಷ್ಟು ಮಂದಿ ದೊಡ್ಡ ವ್ಯಕ್ತಿಗಳು ಸಣ್ಣ ಹೂಡಿಕೆದಾರರನ್ನು ಲೂಟಿ ಹೊಡೆಯುತ್ತಿದ್ದಾರೆ? ಇಂಥ ಪ್ರತಿ ಪ್ರಕರಣದಲ್ಲೂ ಮೋದಿ ಸರ್ಕಾರ ಶ್ರೀಮಂತರ ಪರವಿರುವುದು ಸ್ಪಷ್ಟವಾಗುತ್ತಿದೆ' ಎಂದೂ ರಾಹುಲ್ ದೂರಿದ್ದಾರೆ.

2024ರ ಸೆಪ್ಟೆಂಬರ್ 24ರಂದೂ 'ಎಫ್ ಆ್ಯಂಡ್ ಒ' ವಿಚಾರದ ಕುರಿತು ರಾಹುಲ್ ಆಕ್ಷೇಪಿಸಿದ್ದರು.

# ಭಾರತದ ವಿರುದ್ಧ ಪ್ರತಿಭಟನೆ ದಾಖಲಿಸಿದ ಚೀನಾ

ಬೀಜಿಂಗ್ (ಪಿಟಿಐ): ಟಿಬೆಟಿಯನ್ ಧರ್ಮಗುರು ದಲೈ ಲಾಮಾ ಅವರ 90ನೇ ಜನ್ಮ ದಿನಕ್ಕೆ ಶುಭಾಶಯ ಕೋರಿದ ಪ್ರಧಾನಿ ನರೇಂದ್ರ ಮೋದಿ ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಭಾರತದ ಸರ್ಕಾರದ ಅಧಿಕಾರಿಗಳ ನಡೆಯ ವಿರುದ್ಧ ಚೀನಾ ಸರ್ಕಾರವು ಪ್ರತಿಭಟನೆ ದಾಖಲಿಸಿದೆ.

'ಟಿಬೆಟ್‌ನ ಸೂಕ್ಷ್ಮ ವಿಚಾರದಲ್ಲಿ ಭಾರತವು ಚೀನಾದ ನಡೆಯನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ಹೇಳಿದೆ.

'ಟಿಬೆಟ್ ವಿಚಾರದಲ್ಲಿ ಚೀನಾವು ನಿರಂತರವಾಗಿ ಸ್ಪಷ್ಟ ನಿಲುವು ಹೊಂದಿದ್ದು, ಎಲ್ಲರಿಗೂ ತಿಳಿದಿರುವ ವಿಚಾರ' ಎಂದು ಚೀನಾದ ವಿದೇಶಾಂಗ ಇಲಾಖೆಯ ವಕ್ತಾರ ಮಾವೊ ನಿಂಗ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

'ಟಿಬೆಟ್ ಪ್ರಾಂತ್ಯವನ್ನು 'ಕ್ಸಿಯಾಂಗ್' ಎಂದು ಕರೆಯುತ್ತಿದೆ. ಅಲ್ಲಿನ ಸೂಕ್ಷ್ಮ ವಿಷಯಗಳ ಕುರಿತು ಚೀನಾದ ನಿಲುವನ್ನು ಭಾರತವು ಬೆಂಬಲಿಸಬೇಕು. ಪ್ರತ್ಯೇಕತಾವಾದಿ ವಿರೋಧಿ ಸ್ವಭಾವ ಹೊಂದಿರುವ 14ನೇ ದಲೈ ಲಾಮಾ ವಿಚಾರ ಹಾಗೂ ಕ್ಸಿಯಾಂಗ್ ವಿಚಾರದಲ್ಲಿ ಚೀನಾವು ಹೊಂದಿರುವ ಬದ್ಧತೆಯನ್ನು ಗೌರವಿಸಬೇಕು' ಎಂದು ತಿಳಿಸಿದ್ದಾರೆ.

'ಚೀನಾದ ಆತಂರಿಕ ವಿಚಾರದಲ್ಲಿ ಭಾರತವು ನಡೆಯು ವಿವೇಕದಿಂದ ಕೂಡಿರಬೇಕು ಮತ್ತು ಮಧ್ಯಪ್ರವೇಶಿಸುವುದನ್ನು ನಿಲ್ಲಿಸಬೇಕು' ಎಂದು ಹೇಳಿದ್ದಾರೆ.

## 'ಪಾಕ್‌ಗೆ ಬಾಹ್ಯ ಬೆಂಬಲ ದೊರೆತಿಲ್ಲ'

ಇಸ್ಲಾಮಾಬಾದ್ (ಪಿಟಿಐ): 'ಭಾರತ ಜೊತೆಗೆ ನಾಲ್ಕು ದಿನಗಳ ಕಾಲ ನಡೆದ ಸಂಘರ್ಷದ ವೇಳೆ ಪಾಕಿಸ್ತಾನಕ್ಕೆ ಬಾಹ್ಯ ನೆರವು ದೊರಕಿತ್ತು ಎಂಬುದು ವಾಸ್ತವದಲ್ಲಿ ತಪ್ಪು ಮಾಹಿತಿ' ಎಂದು ಪಾಕಿಸ್ತಾನ ಸೇನೆಯ ಮುಖ್ಯಸ್ಥ ಜನರಲ್ ಅಸೀಂ ಮುನೀರ್ ತಿಳಿಸಿದ್ದಾರೆ.

ಇಸ್ಲಾಮಾಬಾದ್‌ನಲ್ಲಿ ರಾಷ್ಟ್ರೀಯ ರಕ್ಷಣಾ ವಿಶ್ವವಿದ್ಯಾಲಯದಲ್ಲಿ ಪದವಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 'ಪಾಕಿಸ್ತಾನದ ಸಾರ್ವಭೌಮತೆಯನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಸಿದವರಿಗೆ ತ್ವರಿತವಾಗಿ ಪ್ರತಿದಾಳಿ ನಡೆಸುವ ಮೂಲಕ ಪ್ರತ್ಯುತ್ತರ ನೀಡಲಾಗಿದೆ. 'ಆಪರೇಷನ್ ಬುನ್ಯಾನ್ ಮರ್ಸೂಸ್' ಅನ್ನು ಸ್ವಂತ ಬಲದಿಂದಲೇ ಭಾರತದ ವಿರುದ್ಧ ನಡೆಸಲಾಗಿದೆ. ಬೇಜವಾಬ್ದಾರಿ ಹಾಗೂ ವಾಸ್ತವಿಕವಾಗಿ ತಪ್ಪು ಮಾಹಿತಿ ಮಾಹಿತಿ ಹರಡುತ್ತಿರುವುದು ಸರಿಯಲ್ಲ' ಎಂದು ಭಾರತಕ್ಕೆ ತಿರುಗೇಟು ನೀಡಿದ್ದಾರೆ.

ಕಳೆದ ವಾರ ಮಾತನಾಡಿದ್ದ ಭಾರತದ ಸೇನಾ ಉಪಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ರಾಹುಲ್ ಆರ್ ಸಿಂಗ್, 'ಆಪರೇಷನ್ ಸಿಂಧೂರ' ವೇಳೆ ಪಾಕಿಸ್ತಾನವು ಹೋರಾಟದ ಮುಂದಿನ ಮುಖವಾದರೆ, ಚೀನಾ ಎಲ್ಲ ರೀತಿಯ ಬೆಂಬಲ ಒದಗಿಸಿತ್ತು. ಟರ್ಕಿಯು ಸೇನಾ ಉಪಕರಣಗಳನ್ನು ಒದಗಿಸಿತ್ತು' ಎಂದು ಹೇಳಿದ್ದರು.

**ಚೀನಾ ಸಮರ್ಥನೆ:** 'ಚೀನಾ ಹಾಗೂ ಪಾಕಿಸ್ತಾನವು ಸಾಂಪ್ರದಾಯಿಕವಾಗಿ ಸ್ನೇಹ ಸಂಬಂಧವನ್ನು ಹೊಂದಿದೆ. ರಕ್ಷಣೆ ಹಾಗೂ ಭದ್ರತಾ ಸಹಕಾರವು ಮಾಮೂಲಿಯಾಗಿದ್ದು, ಮೂರನೇ ರಾಷ್ಟ್ರವನ್ನು ನಾವು ಎಂದಿಗೂ ಗುರಿಯಾಗಿಸಿಕೊಂಡಿಲ್ಲ' ಎಂದು ವಿದೇಶಾಂಗ ಇಲಾಖೆ ವಕ್ತಾರೆ ಮಾವೊ ನಿಂಗ್ ತಿಳಿಸಿದ್ದಾರೆ.

## 'ಮಸ್ಕ್ ಹೊಸ ಪಕ್ಷವು ಹಾಸ್ಯಾಸ್ಪದ'

ನ್ಯೂಯಾರ್ಕ್ (ಪಿಟಿಐ): 'ಉದ್ಯಮಿ ಇಲಾನ್ ಮಸ್ಕ್ ಅವರು ಹೊಸ ಪಕ್ಷ ಘೋಷಣೆ ಮಾಡಿರುವುದು 'ಹಾಸ್ಯಾಸ್ಪದ'ವಾಗಿದ್ದು, ಅವರು ಸಂಪೂರ್ಣವಾಗಿ ದಾರಿ ತಪ್ಪಿದ್ದಾರೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಲೇವಡಿ ಮಾಡಿದ್ದಾರೆ.

ಒಂದು ಕಾಲದಲ್ಲಿ ಟ್ರಂಪ್ ಜೊತೆಗೆ ಗುರುತಿಸಿಕೊಂಡಿದ್ದ ಮಸ್ಕ್ ಅವರು, ಈಗ ರಿಪಬ್ಲಿಕನ್ ಹಾಗೂ ಡೆಮಾಕ್ರಟಿಕ್ ಪಕ್ಷಕ್ಕೆ ಪರ್ಯಾಯವಾಗಿ 'ಅಮೆರಿಕನ್ ಪಕ್ಷ' ಸ್ಥಾಪನೆ ಮಾಡುವುದಾಗಿ ಘೋಷಣೆ ಮಾಡಿದ್ದಾರೆ.

'ದೇಶದಲ್ಲಿ ಎರಡು ಪಕ್ಷಗಳ ವ್ಯವಸ್ಥೆಯಷ್ಟೇ ಉಳಿಯಲಿದೆ. ಮೂರನೇ ಪಕ್ಷವು ಸ್ಥಾಪನೆಯಾದರೆ, ಜನರಿಗೆ ಗೊಂದಲ ಉಂಟುಮಾಡಲಿದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

# ಯುವಕನ ವಿವಸ್ತ್ರಗೊಳಿಸಿ, ಮರ್ಮಾಂಗಕ್ಕೆ ಹಲ್ಲೆ

ಒಂದನೇ ಪುಟದಿಂದ...

ಆದರೆ, ಇತ್ತೀಚೆಗೆ ಆಕೆ ಬೇರೆ ಹುಡುಗನ ಜತೆ ಸಲುಗೆಯಿಂದ ಇದ್ದಳು. ಹಾಗಾಗಿ ನಮ್ಮಿಬ್ಬರ ನಡುವೆ ಜಗಳ ನಡೆಯುತ್ತಿತ್ತು. ಜೂನ್ 30ರಂದು ಆಕೆಗೆ ಸಂದೇಶ ಕಳುಹಿಸಿದ್ದೆ. ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳೋಣ ಎಂದು ನನ್ನನ್ನು ಹೆಸರಘಟ್ಟಕ್ಕೆ ಕರೆಯಿಸಿಕೊಂಡಿದ್ದಳು. ಅಲ್ಲಿಗೆ ತೆರಳಿದಾಗ ಹೇಮಂತ್ ಹಾಗೂ ಇತರರು, ಮೊಬೈಲ್‌ನಲ್ಲಿದ್ದ ಬಾಲಕಿಯ ಫೋಟೊಗಳನ್ನು ಅಳಿಸಿ ಹಾಕುವಂತೆ ಹೇಳಿ ಹಲ್ಲೆ ನಡೆಸಿದರು. ಬಲವಂತವಾಗಿ ಕಾರಿನಲ್ಲಿ ಆರ್.ಆರ್. ಕಾಲೇಜು ಬಳಿ ಕರೆದೊಯ್ದು ಥಳಿಸಿದರು' ಎಂದು ಕುಶಾಲ್ ದೂರಿನಲ್ಲಿ ತಿಳಿಸಿದ್ದಾರೆ.

'ಮೊಬೈಲ್‌ನಲ್ಲಿದ್ದ ಬಾಲಕಿಯ ಫೋಟೊಗಳನ್ನು ಆರೋಪಿಗಳು ಅಳಿಸಿ ಹಾಕಿದರು. ನಂತರ ಅದೇ ಕಾರಿನಲ್ಲಿ ಕೂರಿಸಿಕೊಂಡು ಆಲೂರು ಕೆರೆಯ ತೋಪಿಗೆ ನನ್ನನ್ನು ಕರೆದೊಯ್ದು, ವಿವಸ್ತ್ರಗೊಳಿಸಿ, ಮರದ ಕಟ್ಟಿಗೆಯಿಂದ ಥಳಿಸಿ, ಬಾಲಕಿ ಸಹವಾಸಕ್ಕೆ ಬಾರದಂತೆ ಜೀವ ಬೆದರಿಕೆ ಹಾಕಿದರು. ನನ್ನನ್ನು ಬೆತ್ತಲೆಗೊಳಿಸಿ, ಹಲ್ಲೆ ಮಾಡಿದವರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು' ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.


ಶಿವಶಂಕರ್ | ಹೇಮಂತ್ | ರಾಹುಲ್ | ರಾಕೇಶ್
ಯಶವಂತ್ | ಸಲ್ಮಾನ್ ಖಾನ್ | ತೇಜಸ್ | ಶಶಾಂಕ್ ಗೌಡ

### ರೇಣುಕಸ್ವಾಮಿ ಪ್ರಕರಣ ಉಲ್ಲೇಖಿಸಿದ ಹಲ್ಲೆ?

ಎಂಟು ಜನರ ಯುವಕರ ತಂಡ, ಕುಶಾಲ್‌ಗೆ ಒದ್ದು, ಹಲ್ಲೆ ಮಾಡಿರುವುದು, ಅವಾಚ್ಯ ಪದಗಳಿಂದ ನಿಂದಿಸಿ, ಮಾರ್ಮಾಂಗ ತುಳಿದು ಹಿಂಸೆ ಮಾಡಿರುವ ದೃಶ್ಯ ಸೆರೆಯಾಗಿದೆ. 'ತಪ್ಪಾಯ್ತು ಅಣ್ಣಾ, ಬಿಡ್ರೋ' ಎಂದು ಕೈಮುಗಿದು ಯುವಕ ಬೇಡಿಕೊಂಡರೂ ಬಾಲಕಿ ಮುಂದೆಯೇ ಹಾಡು ಹೇಳುವಂತೆ ಆರೋಪಿಗಳು ಒತ್ತಾಯಿಸಿದ್ದಾರೆ. ಚಿತ್ರದುರ್ಗದ ರೇಣುಕಸ್ವಾಮಿ ಪ್ರಕರಣವನ್ನು ಉಲ್ಲೇಖಿಸಿ, ಮುಖ ತೋರಿಸುತ್ತಾ ಇವರೇ ಎ1, ಎ2, ಎ3 ಎಂದು ಮಾತನಾಡಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಹಲ್ಲೆಯ ದೃಶ್ಯ ಮೊಬೈಲ್‌ನಲ್ಲಿ ಸೆರೆ ಹಿಡಿದಿರುವ ಆರೋಪಿಗಳು, ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಡುವುದಾಗಿ ಬೆದರಿಕೆ ಹಾಕಿದ್ದಾರೆ.

2024ರ ಜೂನ್‌ನಲ್ಲಿ ಚಿತ್ರದುರ್ಗದ ರೇಣುಕಸ್ವಾಮಿ ಮೇಲೆ ಹಲ್ಲೆ ನಡೆಸಿ, ಕೊಲೆ ಮಾಡಲಾಗಿತ್ತು. ಈ ಸಂಬಂಧ ನಟ ದರ್ಶನ್ ಸೇರಿ ಹಲವರ ಮೇಲೆ ಪ್ರಕರಣ ದಾಖಲಾಗಿತ್ತು. ಇದರ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿದೆ.




















ಪ್ರಜಾವಾಣಿ
ಪ್ರಜಾಪ್ಲಸ್
ಮಂಗಳವಾರ • ಜುಲೈ 8, 2025
ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ



# ಸಮಾಜಕ್ಕೆ ಕೈಗನ್ನಡಿ ಹೆಬ್ಬುಲಿ ಕಟ್



**ನಾವು ನೋಡಿದ ಸಿನಿಮಾ**

**ಹೆಬ್ಬುಲಿ ಕಟ್ (ಕನ್ನಡ)**

- ಪ್ರಸ್ತುತಿ: ನೀನಾಸಂ ಸತೀಶ್
- ನಿರ್ದೇಶನ: ಭೀಮರಾವ್ ಪಿ.
- ತಾರಾಗಣ: ಮೌನೇಶ್ ನಟರಂಗ, ಅನನ್ಯ, ಮಹಾದೇವ ಹಡಪದ, ಉಮಾ ವೈ.ಜಿ., ವಿನಯ್ ಮಹಾದೇವನ್, ಮಹಂತೇಶ್ ಹಿರೇಮಠ, ಪುನೀತ್ ಶೆಟ್ಟಿ ಮತ್ತಿತರರು

ಕ್ಷೌರ ಮಾಡುವಂತೆ ಪರಿಶಿಷ್ಟರು ಕೇಳಿದ್ದಕ್ಕೆ ಅಂಗಡಿಗಳನ್ನೇ ಕ್ಷೌರಿಕರು ಬಂದ್ ಮಾಡಿದ್ದಾರೆ...ಪರಿಶಿಷ್ಟ ಜಾತಿಯ ಯುವಕರಿಗೆ ಕ್ಷೌರ ಮಾಡಲು ನಿರಾಕರಿಸಿದ ಆರೋಪದಡಿ ಅಂಗಡಿ ಮಾಲೀಕನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು...ಇಂತಹ ಘಟನೆಗಳು ನಮ್ಮದೇ ನೆಲೆದಲ್ಲಿ ವರದಿಯಾದವು. ಇಂತಹ ಸಾಲು ಸಾಲು ಅಸ್ಪೃಶ್ಯತೆ ಆಚರಣೆ, ಜಾತಿ ತಾರತಮ್ಯ, ದಬ್ಬಾಳಿಕೆಯ ಘಟನೆಗಳ ಚಿತ್ರಣಗಳಿಗೆ ಕಮರ್ಷಿಯಲ್ ಸ್ಪರ್ಶ ನೀಡಿ 'ಹೆಬ್ಬುಲಿ ಕಟ್' ಎಂಬ ಸಿನಿಮಾ ತಂದಿದ್ದಾರೆ ನಿರ್ದೇಶಕ ಭೀಮರಾವ್.

ತಮಿಳಿನಲ್ಲಿ 2021ರಲ್ಲಿ ಯೋಗಿ ಬಾಬು ನಟನೆಯ 'ಮಂಡೇಲಾ' ಸಿನಿಮಾ ಬಂದಿತ್ತು. ರಾಜಕೀಯ ವಿಡಂಬನೆಯ ಈ ಸಿನಿಮಾ ಹಲವು ಸೂಕ್ಷ್ಮಗಳನ್ನು ತೆರೆದಿಟ್ಟಿತ್ತು. ಕ್ಷೌರಿಕನೊಬ್ಬನ ಕುರಿತ ಈ ಸಿನಿಮಾ ಒಂದು ಮತ ಆತನ ಜೀವನವನ್ನು ಹೇಗೆ ಆಟವಾಡಿಸಿತು ಎನ್ನುವುದರ ಕುರಿತಾಗಿತ್ತು. 'ಹೆಬ್ಬುಲಿ ಕಟ್' ತನ್ನೂರಿನ ಐಷಾರಾಮಿ ಕ್ಷೌರದಂಗಡಿಯಲ್ಲಿ ಕ್ಷೌರ ಮಾಡಿಸಿಕೊಳ್ಳಲು ಆಸೆ ಪಡುವ ಹುಡುಗನ ಕಥೆಯಾಗಿದೆ.

ಅಸ್ಪೃಶ್ಯತೆ, ಜಾತಿ ತಾರತಮ್ಯವನ್ನು ಆಧರಿಸಿದ ಸಿನಿಮಾಗಳು ತಮಿಳಿನಲ್ಲಿ ಬರುತ್ತಿರುವಂತೆ ಕನ್ನಡದಲ್ಲಿಯೂ ಬರುತ್ತಿವೆ. 'ಕಾಟೇರ' ಈ ನಿಟ್ಟಿನಲ್ಲಿ ಕಮರ್ಷಿಯಲ್ ವಿಚಾರದಲ್ಲಿ ಗಟ್ಟಿಯಾದ ಕಥೆ ಹೊಂದಿದ್ದ ಚಿತ್ರ. 'ಹೆಬ್ಬುಲಿ ಕಟ್' ಕೂಡಾ ತನ್ನ ಕಥಾವಸ್ತುವಿನಿಂದ ಉತ್ಕೃಷ್ಟವಾಗಿದೆ. ಪ್ರಬಲ ವರ್ಗದಿಂದ ದುರ್ಬಲ ವರ್ಗದ ಮೇಲಿನ ದಬ್ಬಾಳಿಕೆಯ ಕಥೆ ಇದು.

ಚಿತ್ರದ ನಾಯಕ–ನಾಯಕಿ ಇಬ್ಬರೂ ಹೈಸ್ಕೂಲ್ ವಿದ್ಯಾರ್ಥಿಗಳು. ಮಲಿಯಾಬಾದ್ ಗ್ರಾಮದ ಚಮ್ಮಾರನ ಮಗನಾದ ನಾಯಕ 'ವಿನ್ಯಾ' (ವಿನಯ)ನಿಗೆ ಊರಿನಲ್ಲಿರುವ 'ನಾದರಿ ಚೆನ್ನ'ನ 'ಮಾಡರ್ನ್ ಮೆನ್ಸ್ ಬ್ಯೂಟಿ ಪಾರ್ಲರ್'ನಲ್ಲಿ ಹೇರ್‌ಕಟಿಂಗ್ ಮಾಡಿಕೊಳ್ಳುವಾಸೆ. ಆದರೆ ತಾಯಿಯ ಹಟಕ್ಕೆ 'ಮೌಲಾ'ನ ಕತ್ತರಿಗೆ ಪ್ರತಿ ಬಾರಿಯೂ ವಿನ್ಯಾನ ಉದ್ದುದ್ದ ಕೂದಲು ಸಿಕ್ಕಿಬೀಳುತ್ತಿರುತ್ತದೆ. ಹೀಗಿರುವಾಗ ತನ್ನ ತರಗತಿಯಲ್ಲೇ ಓದುತ್ತಿರುವ ಊರಿನ ಗೌಡ್ರ ತಂಗಿಯ ಮೇಲೆ ವಿನ್ಯಾನಿಗೆ ಮುಗುಳ್ನಗೆಯ ಪ್ರೀತಿ, ಆಕೆಗೂ. ಅವಳಿಗೆ ನಟ ಸುದೀಪ್ ಹಾಗೂ ಅವರ 'ಹೆಬ್ಬುಲಿ' ಸಿನಿಮಾದ ಹೇರ್‌ಕಟ್ ಬಹಳ ಇಷ್ಟ. ಇದನ್ನರಿತ ನಾಯಕ 'ನಾದರಿ ಚೆನ್ನ'ನ ಬಳಿ ಆ ರೀತಿ ಕೇಶ ವಿನ್ಯಾಸಕ್ಕಾಗಿ ಬೆಂಬೀಳುತ್ತಾನೆ. ನಂತರದ ಘಟನೆಗಳೇ ಚಿತ್ರದ ಕಥಾಹಂದರ.

ಧರ್ಮದೊಳಗಿನ ಅಸಮಾನತೆ, ಅಸ್ಪೃಶ್ಯತೆಯನ್ನು ಅಕ್ಷರ ರೂಪದಲ್ಲೂ, ದೃಶ್ಯ ರೂಪದಲ್ಲೂ ಕಟ್ಟಿಕೊಟ್ಟಿದೆ ಈ ಸಿನಿಮಾ. ಆರಂಭಿಕ ದೃಶ್ಯದಲ್ಲೇ ಶುಭ್ರವಾದ ನಂದಿಬಟ್ಟಲು ಹೂವೊಂದು ಶುಭ್ರವಾದ ತಿಳಿನೀರಿನಲ್ಲಿ ಸಾಗಿ, ಕೊಚ್ಚೆ ನೀರನ್ನು ಸೇರಿ ಸಮಾಜದ ವೇಗಕ್ಕೆ ಅಂತ್ಯ ಕಾಣುವುದು ಇಡೀ ಸಿನಿಮಾದ ಸಾರಾಂಶವನ್ನು ತೆರೆದಿಡುತ್ತದೆ. ಒಂದು ಲೆಕ್ಕಾಚಾರದ ಮುಖಾಂತರ ಸದ್ಯದ ಪರಿಸ್ಥಿತಿಯನ್ನು ಸಿನಿಮಾ ಹೇಳುತ್ತದೆ. ನಾಯಕನ ತಂದೆಯ ಬಳಿ ತೆರಳುವ ಪ್ರಬಲ ವರ್ಗದ ವ್ಯಕ್ತಿಯೋರ್ವ ಚಪ್ಪಲಿ ಹೊಲಿಯಲು ಕೊಟ್ಟು ಎಷ್ಟಾಯಿತು ಎಂದು ಕೇಳುತ್ತಾನೆ. '₹10' ಎಂಬ ಉತ್ತರ ಬಂದಾಗ, 'ಎರಡು ನಿಮಿಷದ ಕೆಲಸ, ಎರಡು ಹೊಲಿಗೆಗೆ ಹತ್ತು ರೂಪಾಯಿನಾ? ಅಂದ್ರೆ ತಾಸಿಗೆ ಮುನ್ನೂರು, ಒಂದು ದಿನಕ್ಕೆ ₹3 ಸಾವಿರ. ತಿಂಗ್ಳಿಗೆ ಲಕ್ಷ ರೂಪಾಯಿ ದುಡಿತಿದ್ದಿ. ರೇಷನ್ ಬೇರೆ ಪುಗಸಟ್ಟೆ...' ಇದು ಮೇಲಿನಿಂದಲೇ ನೋಡುವ ಕಣ್ಣುಗಳಿಗೆ ಪ್ರತಿಬಿಂಬ. ಸಾಮಾಜಿಕ ಅಸಮಾನತೆಯನ್ನು ವೇದಿಕೆಯಾಗಿಟ್ಟುಕೊಂಡು ಪ್ರೀತಿ, ಧರ್ಮ ದ್ವೇಷ, ಸಂಬಂಧ, ಸಾಮಾಜಿಕ ಮಾಧ್ಯಮಗಳಿಂದಾಗುವ ಅವಘಡಗಳನ್ನು ಈ ಸಿನಿಮಾ ಅನ್ವೇಷಿಸಿದೆ. ಮೆಕ್ಯಾನಿಕ್ ರಫೀಕ್ ಮೂಲಕವೂ ಕಥೆಯೊಳಗೆ ಕಥೆಯೊಂದನ್ನು ನಿರ್ದೇಶಕರು ಹೆಣೆದಿದ್ದಾರೆ.

ದುರ್ಬಲ ವರ್ಗವನ್ನು ಪ್ರಬಲ ವರ್ಗ ನೋಡುವ ಬಗೆಯನ್ನು 'ಗೌಡ್ರ' ಪಾತ್ರದ ಮೂಲಕ ರೂಪಕವಾಗಿ ಹೇಳಲಾಗಿದೆ. ಗ್ರಾಮೀಣ ಜೀವನವನ್ನು ಕಟ್ಟಿಕೊಟ್ಟಿರುವ ಈ ಸಿನಿಮಾ, ಹಳ್ಳಿಗಳೊಳಗೆ ಈಗಲೂ ಇರುವ ಮೂಲಸೌಕರ್ಯಗಳ ಅವ್ಯವಸ್ಥೆಯನ್ನೂ ಬಿಚ್ಚಿಟ್ಟಿದೆ. 'ವಿನ್ಯಾ'ನ ಮುಗ್ಧತೆ, ನಗು ಎಷ್ಟು ಶುಭ್ರವಾಗಿದೆಯೋ ಸಮಾಜದ ವರ್ತನೆ ಅಷ್ಟೇ ಕೊಳಕಾಗಿದೆ ಎನ್ನುವುದನ್ನು ತೆರೆ ಮೇಲೆ ನಿರ್ದೇಶಕರು ಚಿತ್ರಿಸಿದ್ದಾರೆ. ನೂರಾರು ಪ್ರಶ್ನೆಗಳಿಗೆ ಕಿಡಿ ಹೊತ್ತಿಸುವ ಉತ್ತರ ಕರ್ನಾಟಕ ಭಾಗದ ಕಥೆ ಹೊತ್ತ ಸಿನಿಮಾಗಳ ಪಟ್ಟಿಗೆ ಇದೂ ಸೇರ್ಪಡೆಯಾಗಿದೆ. ನಾಯಕನ ಕನಸಿಗೆ ನಿರ್ದೇಶಕರು ಜೀವ ತುಂಬಿರುವುದು ಚಿತ್ರದ ಪ್ಲಸ್ ಪಾಯಿಂಟ್. ಕಥೆಗೊಂದು ಸೂಕ್ತವಾದ ಅಂತ್ಯವಿಲ್ಲ. ಈ ಪಿಡುಗು, ವ್ಯವಸ್ಥೆ ಬದಲಾಗುವುದಿಲ್ಲ ಎನ್ನುವುದೇ ಅಂತ್ಯ! ಮೌನದಲ್ಲೇ ಇದನ್ನು ಹೇಳಲಾಗಿದೆ.

ನಟನೆಯಲ್ಲಿ ಮೌನೇಶ್ ನಟರಂಗ 'ವಿನ್ಯಾ'ನಾಗಿ ಜೀವಿಸಿದ್ದಾನೆ. ಮಹಾದೇವ ಹಡಪದ ಅಪ್ಪನ ಪಾತ್ರದಲ್ಲಿ, ಉಮಾ ವೈ.ಜಿ. ಅಮ್ಮನಾಗಿ ಈ ಪಾತ್ರಕ್ಕೆ ಜೊತೆಯಾಗಿದ್ದಾರೆ. ಅನನ್ಯ, ವಿನಯ್, ಮಹಂತೇಶ್ ಹಿರೇಮಠ, ಪುನೀತ್ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ.

ಭೀಮರಾವ್ ಜೊತೆ 'ಡೇರ್‌ಡೆವಿಲ್ ಮುಸ್ತಾಫಾ' ಚಿತ್ರದ ಚಿತ್ರಕಥೆ, ಸಂಭಾಷಣೆ ಬರೆದಿದ್ದ ಅನಂತ ಶಾಂದ್ರೇಯ ಈ ಸಿನಿಮಾಗೂ ಚಿತ್ರಕಥೆ ಬರೆದಿದ್ದು, ಚಿತ್ರಕ್ಕೆ ಇದೇ ಬೆನ್ನೆಲುಬಾಗಿದೆ. ದೀಪಕ್ ಯರಗೇರಾ ಛಾಯಾಚಿತ್ರಗ್ರಹಣ, ನವನೀತ್ ಶ್ಯಾಮ ಸಂಗೀತ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿವೆ. ಹೆಬ್ಬುಲಿ ಕಟ್ ಬೇಡ ಬದಲಿಗೆ ಅಸ್ಪೃಶ್ಯತೆ ಕಟ್ ಆಗಲಿ ಎಂಬ ಒಳಾರ್ಥವನ್ನು ನಗಿಸುತ್ತಾ, ಕಣ್ಣಸೆ ತರಿಸುತ್ತಾ ಈ ಸಿನಿಮಾದಲ್ಲಿ ಹೇಳಲಾಗಿದೆ.

**-ಅಭಿಲಾಷ್ ಪಿ.ಎಸ್.**

**ಇದು ನೋಡಬಹುದಾದ ಸಿನಿಮಾ.**




# 'ಕಾಂತಾರ'ದಲ್ಲಿ ಹೀಗಿರಲಿದ್ದಾರೆ ರಿಷಬ್

ನಟ ರಿಷಬ್ ಶೆಟ್ಟಿ ನಟಿಸಿ ನಿರ್ದೇಶಿಸುತ್ತಿರುವ 'ಕಾಂತಾರ' ಸಿನಿಮಾದ ಪ್ರೀಕ್ವೆಲ್(ಹಿಂದಿನ ಕಥೆ) ಅ.2ರಂದು ಬಿಡುಗಡೆಯಾಗಲಿದೆ. ರಿಷಬ್ ಜನ್ಮದಿನದಂದು (ಜುಲೈ 7) ಸಿನಿಮಾದ ಹೊಸ ಪೋಸ್ಟರ್ ರಿಲೀಸ್ ಆಗಿದ್ದು ಇದರಲ್ಲಿ ಅವರ ಪಾತ್ರವನ್ನು ಪರಿಚಯಿಸಲಾಗಿದೆ. ಜೊತೆಗೆ ಹಲವು ಕಥೆಗಳನ್ನು ಇದು ಅಡಗಿಸಿಟ್ಟುಕೊಂಡಿದೆ.

2022ರಲ್ಲಿ ತೆರೆಕಂಡು ಹೊಸ ದಾಖಲೆ ಬರೆದಿದ್ದ 'ಕಾಂತಾರ' ಸಿನಿಮಾ ರಿಷಬ್ ಶೆಟ್ಟಿ ಸಿನಿಗ್ರಾಫ್‌ಗೆ ದೊಡ್ಡ ತಿರುವು ನೀಡಿತ್ತು. ಬಾಕ್ಸ್ ಆಫೀಸ್‌ನಲ್ಲೂ ದೊಡ್ಡ ಮೊತ್ತವನ್ನು ಬಾಚಿತ್ತು. ಆರಂಭದಲ್ಲಿ ಕನ್ನಡದಲ್ಲಷ್ಟೇ ತೆರೆಕಂಡು ಬಳಿಕ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಮಿಂಚಿತ್ತು. ಇದೀಗ 'ಕಾಂತಾರ' ಪ್ರೀಕ್ವೆಲ್ ಶೂಟಿಂಗ್ ಪೂರ್ಣಗೊಂಡಿದ್ದು ಚಿತ್ರತಂಡ ಬಿಡುಗಡೆಗೆ ತಯಾರಿ ಆರಂಭಿಸಿದೆ. 'ದಂತಕಥೆಯ ಮುನ್ನುಡಿ..ಆ ನುಡಿಗೊಂದು ಪರಿಚಯ...ಮನದಾಳದ ಕಥೆಗೆ ಮತ್ತೊಮ್ಮೆ ಸ್ವಾಗತ' ಎಂಬ ಅಡಿಬರಹ ನೀಡಿ ಹೊಸ ಪೋಸ್ಟರ್ ಹಂಚಿಕೊಳ್ಳಲಾಗಿದೆ. ರಿಷಬ್ ಶೆಟ್ಟಿ ಹಿಂದೆಂದೂ ಕಾಣದ ಲುಕ್‌ನಲ್ಲಿ ಇಲ್ಲಿ ಕಾಣಿಸಿಕೊಂಡಿದ್ದಾರೆ. ಇದೊಂದು ಅಧ್ಯಾತ್ಮ ಮತ್ತು ಸಾಹಸಗಾಥೆಯ ಸಮ್ಮಿಶ್ರಣ ಎಂದು ಚಿತ್ರತಂಡ ಹೇಳಿದೆ.

ಕುಂದಾಪುರ ಬಳಿ 25 ಎಕರೆ ಪ್ರದೇಶದಲ್ಲಿ ಬೃಹತ್ ಸೆಟ್ ಹಾಕಿ ಈ ಸಿನಿಮಾದ ಕಾಲ್ಪನಿಕ ಊರನ್ನು ಸೃಷ್ಟಿಸಿ ಚಿತ್ರೀಕರಣ ನಡೆಸಲಾಗಿದೆ. ಭಾರತೀಯ ಹಾಗೂ ಅಂತರರಾಷ್ಟ್ರೀಯ ತಂತ್ರಜ್ಞರೂ ಈ ಸಿನಿಮಾಗೆ ಕೈ ಜೋಡಿಸಿದ್ದು, 45 ರಿಂದ 50 ದಿನಗಳ ಕಾಲ ಸುಮಾರು 500 ತರಬೇತಿದಾರರು, 3000ಕ್ಕೂ ಹೆಚ್ಚು ಜೂನಿಯರ್ ಕಲಾವಿದರು ಈ ಸಿನಿಮಾದ ಶೂಟಿಂಗ್‌ನಲ್ಲಿ ಭಾಗವಹಿಸಿದ್ದರು.

**ಆಸ್ಕರ್‌ಗಾಗಿಯೇ ಕಾಂತಾರ:** ಆಸ್ಕರ್ ಪ್ರಶಸ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡೇ 'ಕಾಂತಾರ' ಪ್ರೀಕ್ವೆಲ್ ಸಿನಿಮಾವನ್ನು ಹೊಂಬಾಳೆ ಫಿಲ್ಮ್ಸ್ ನಿರ್ಮಾಣ ಮಾಡುತ್ತಿದೆ. ಚಿತ್ರವನ್ನು ಆಸ್ಕರ್ ಸ್ಪರ್ಧೆಯ ಅಂಗಳಕ್ಕೆ ತಲುಪಿಸಲು ಈಗಿನಿಂದಲೇ ಪ್ರಯತ್ನ ನಡೆಸಿರುವುದಾಗಿ ಹೊಂಬಾಳೆ ಫಿಲ್ಮ್ಸ್‌ನ ಸಹ ಸಂಸ್ಥಾಪಕ ಚಲುವೇಗೌಡ ಅವರು ಇತ್ತೀಚೆಗೆ ತಿಳಿಸಿದ್ದರು.

'ಕಾಂತಾರ ಚಾಪ್ಟರ್ 1' ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆಯಾಗುತ್ತಿದೆ. ತಮ್ಮ ಪಾತ್ರದ ಸಲುವಾಗಿ ರಿಷಬ್ ಶೆಟ್ಟಿ ಕಳರಿಪಯಟ್ಟು ತರಬೇತಿ ಪಡೆದಿದ್ದಾರೆ. ತೆಲುಗಿನ ಹಿಟ್ ಸಿನಿಮಾ 'ಆರ್‌ಆರ್‌ಆರ್'ನ ಆ್ಯಕ್ಷನ್ ನಿರ್ದೇಶಕರಾಗಿದ್ದ ಟೊಡರ್ ಲ್ಯಾಜರೋವ್ 'ಕಾಂತಾರ'ದ ಸಾಹಸ ದೃಶ್ಯಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ.



ಕಿರೀಟಿ, ಶ್ರೀಲೀಲಾ

# ಬ್ಯಾಂಗಲ್ ಬಂಗಾರಿ ಆಯ್ತು ಬಂದಳು ವೈರಲ್ ವೈಯಾರಿ

**'ಮಾಯಾಬಜಾರ್'** ಖ್ಯಾತಿಯ ನಿರ್ದೇಶಕ ರಾಧಾಕೃಷ್ಣ ರೆಡ್ಡಿ ನಿರ್ದೇಶನದ, ಕಿರೀಟಿ ನಟನೆಯ ಚೊಚ್ಚಲ ಸಿನಿಮಾ 'ಜೂನಿಯರ್' ಜುಲೈ 18ರಂದು ತೆರೆಕಾಣಲಿದೆ. ಚಿತ್ರದ 'ವೈರಲ್ ವೈಯಾರಿ' ಹಾಡು ಬಿಡುಗಡೆಯಾಗಿದೆ. ಹಾಡಿಗೆ ಕಿರೀಟಿ ಹಾಗೂ ಶ್ರೀಲೀಲಾ ಭರ್ಜರಿಯಾಗಿ ಹೆಜ್ಜೆ ಹಾಕಿದ್ದಾರೆ.

'ವೈರಲ್ ವೈಯಾರಿ' ಹಾಡಿಗೆ ಪವನ್ ಭಟ್ ಸಾಹಿತ್ಯ ಬರೆದಿದ್ದು, ಹರಿಪ್ರಿಯಾ ಮತ್ತು ದೀಪಕ್ ಬ್ಲೂ ದನಿಯಾಗಿದ್ದಾರೆ. ದೇವಿಶ್ರೀ ಪ್ರಸಾದ್ ಸಂಗೀತ ಮೋಡಿ ಮಾಡುತ್ತಿದೆ. ಈ ಸಿನಿಮಾದಲ್ಲಿ ಕಿರೀಟಿ ಜೊತೆಗೆ ಕ್ರೇಜಿಸ್ಟಾರ್ ರವಿಚಂದ್ರನ್, ಜೆನಿಲಿಯಾ ಡಿಸೋಜಾ, ಶ್ರೀಲೀಲಾ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಸಿನಿಮಾ ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳಲ್ಲಿ ರಿಲೀಸ್ ಆಗಲಿದೆ. ದಕ್ಷಿಣ ಭಾರತದ ಖ್ಯಾತ ನಿರ್ಮಾಣ ಸಂಸ್ಥೆ ವಾರಾಹಿ ಫಿಲ್ಮಂ ಪ್ರೊಡಕ್ಷನ್ ಈ ಚಿತ್ರಕ್ಕೆ ಬಂಡವಾಳ ಹೂಡಿದೆ. ಖ್ಯಾತ ಸಂಗೀತ ನಿರ್ದೇಶಕ ದೇವಿಶ್ರೀ ಪ್ರಸಾದ್ ಸಂಗೀತ, 'ಬಾಹುಬಲಿ' ಸಿನಿಮಾ ಖ್ಯಾತಿಯ ಕೆ.ಕೆ.ಸೆಂಥಿಲ್ ಕುಮಾರ್ ಛಾಯಾಚಿತ್ರಗ್ರಹಣ, ಪೀಟರ್ ಹೆನ್ ಸಾಹಸ ನಿರ್ದೇಶನ ಚಿತ್ರಕ್ಕಿದೆ.

## ಐವರ ಸಜೀವ ದಹನ: ಮಾಟಮಂತ್ರ ಶಂಕೆ


**ಪೂರ್ಣಿಯಾ (ಪಿಟಿಐ):** ಬಿಹಾರದ ಪೂರ್ಣಿಯಾ ಜಿಲ್ಲೆಯಲ್ಲಿ ಒಂದೇ ಕುಟುಂಬದ ಐವರನ್ನು ಪೊದೆಯೊಂದರಲ್ಲಿ ಹಾಕಿ ಸಜೀವ ದಹನ ಮಾಡಲಾಗಿದ್ದು, ಪೊಲೀಸರು ಮಾಟ ಮಂತ್ರದ ಶಂಕೆ ವ್ಯಕ್ತಪಡಿಸಿದ್ದಾರೆ.

ಸೋಮವಾರ ಪ್ರಕರಣ ಬೆಳಕಿಗೆ ಬಂದಿದ್ದು, ಇಬ್ಬರನ್ನು ಬಂಧಿಸಲಾಗಿದೆ. ಇತರೆ ಆರೋಪಿಗಳಿಗೆ ಶೋಧ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಟೆಟ್ಮಾ ಗ್ರಾಮದಲ್ಲಿ ಭಾನುವಾರ ರಾತ್ರಿ ಮಾಟ-ಮಂತ್ರದ ಆಚರಣೆಗಾಗಿ ಐವರನ್ನೂ ಕೊಲೆ ಮಾಡಿ ಆನಂತರ ಪೊದೆಯೊಂದರಲ್ಲಿ ಹಾಕಿ ಸುಟ್ಟಿರಬಹುದು ಎಂದು ಡಿಐಜಿ ಪ್ರಮೋದ್ ಕುಮಾರ್ ಮಂಡಲ್ ತಿಳಿಸಿದ್ದಾರೆ.

ಸೋಮವಾರ ಬೆಳಿಗ್ಗೆ ಬಾಲಕ ಸೋನುಕುಮಾರ್ ಎಂಬಾತ ಪೊಲೀಸರಿಗೆ ಮಾಹಿತಿ ನೀಡಿದ್ದ. ಕೊಲೆ ಮಾಡಿದ್ದಾರೆ ಎನ್ನಲಾದವರೂ ಅದೇ ಕುಟುಂಬಕ್ಕೆ ಸೇರಿದವರು ಎಂದು ಹೇಳಲಾಗುತ್ತಿದೆ. ವಿಧಿವಿಜ್ಞಾನ ತಜ್ಞರ ತಂಡ ಸ್ಥಳ ಪರಿಶೀಲನೆ ಮಾಡಿದೆ.

## ಅನುಮಾನಾಸ್ಪದ ದೋಣಿ ಪತ್ತೆ: ಭದ್ರತೆ ಹೆಚ್ಚಳ



**ಮುಂಬೈ (ಪಿಟಿಐ):** ಇಲ್ಲಿನ ರಾಯಗಢ ಜಿಲ್ಲೆಯ ರೇವದಂಡಾ ಗ್ರಾಮದ ಕರಾವಳಿ ತೀರದಲ್ಲಿ ಅನುಮಾನಾಸ್ಪದವಾಗಿ ದೋಣಿಯೊಂದು ಪತ್ತೆಯಾಗಿದ್ದು, ರಾಜ್ಯದ ಕರಾವಳಿ ತೀರದುದ್ದಕ್ಕೂ ಭದ್ರತೆಯನ್ನು ಹೆಚ್ಚಿಸಲಾಗಿದೆ.

'ಗ್ರಾಮದಿಂದ ಎರಡು ನಾಟಿಕಲ್ ಮೈಲಿ ದೂರದಲ್ಲಿರುವ ಕೊರ್ಲಾಯಿ ಭಾಗದಲ್ಲಿ ದೋಣಿ ಕಂಡುಬಂದಿದೆ. ದೋಣಿಯ ಮೇಲೆ ಬೇರೆ ದೇಶದ ಗುರುತು ಇರುವುದು ಮೇಲ್ನೋಟಕ್ಕೆ ಕಂಡುಬಂದಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸ್ಥಳಕ್ಕೆ ರಾಯಗಢ ಪೊಲೀಸರು, ಬಾಂಬ್ ನಿಷ್ಕ್ರಿಯ ದಳ, ಕ್ಷಿಪ್ರ ಪ್ರತಿಕ್ರಿಯೆ ತಂಡ ಹಾಗೂ ನೌಕಾ ಸೇನೆ ಹಾಗೂ ಕರಾವಳಿ ರಕ್ಷಣಾ ಪಡೆಯ ಸಿಬ್ಬಂದಿ ಭೇಟಿ ನೀಡಿದ್ದಾರೆ.

'ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆಂಚಲ್ ದಲಾಲ್ ನೇತೃತ್ವದ ಹಿರಿಯ ಪೊಲೀಸ್ ಅಧಿಕಾರಿಗಳ ತಂಡವು ಪರಿಸ್ಥಿತಿ ಕುರಿತು ಪರಾಮರ್ಶೆ ನಡೆಸುತ್ತಿದೆ.

ಭಾರಿ ಮಳೆ ಹಾಗೂ ಬಿರುಸಾದ ಗಾಳಿಯ ನಡುವೆಯೂ ಬಾರ್ಜ್ ನೆರವಿನಿಂದ ಸ್ಥಳಕ್ಕೆ ತೆರಳಲು ದಲಾಲ್ ಯತ್ನಿಸಿದರು. ಆದರೆ, ಪ್ರತಿಕೂಲ ಹವಾಮಾನದಿಂದ ಅಲ್ಲಿಗೆ ತೆರಳಲು ಸಾಧ್ಯವಾಗಲಿಲ್ಲ. ಮುಂಜಾಗ್ರತಾ ಕ್ರಮವಾಗಿ ಇಡೀ ಜಿಲ್ಲೆಯಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ.

# ಈ ವರ್ಷ 40 ಮಂದಿಗಷ್ಟೇ 'ಸಾಗರೋತ್ತರ' ವಿದ್ಯಾರ್ಥಿ ವೇತನ

## 66 ಮಂದಿಗಿಲ್ಲ ವಿದ್ಯಾರ್ಥಿ ವೇತನ • ಬಜೆಟ್‌ನಲ್ಲಿ ₹130 ಕೋಟಿ ಮೀಸಲು

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಅನುದಾನ ಅಲಭ್ಯತೆ ಉಳಿದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕೆ ತಡೆ
- 440 ಅರ್ಜಿ ಸಲ್ಲಿಕೆ, 106 ಮಂದಿ ಆಯ್ಕೆ

**ನವದೆಹಲಿ:** ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಇಲಾಖೆಯು 2025–26ನೇ ಸಾಲಿನ ರಾಷ್ಟ್ರೀಯ ಸಾಗರೋತ್ತರ ವಿದ್ಯಾರ್ಥಿ ವೇತನಕ್ಕೆ 40 ವಿದ್ಯಾರ್ಥಿಗಳನ್ನಷ್ಟೇ ಆಯ್ಕೆ ಮಾಡಿದೆ. ಅನುದಾನದ ಲಭ್ಯತೆ ನೋಡಿಕೊಂಡು ಉಳಿದ 66 ಮಂದಿಗೆ ವಿದ್ಯಾರ್ಥಿ ವೇತನ ನೀಡುವುದಾಗಿ ಹೇಳಿಕೊಂಡಿದೆ.

ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯಲು ಈ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಪರಿಶಿಷ್ಟ ಜಾತಿ, ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳು, ಭೂರಹಿತ ಕೃಷಿ ಕಾರ್ಮಿಕರು ಮತ್ತು ಸಾಂಪ್ರದಾಯಿಕ ಕುಶಲಕರ್ಮಿಗಳ ವರ್ಗದ ವಿದ್ಯಾರ್ಥಿಗಳು ಈ ಯೋಜನೆಯ ಫಲಾನುಭವಿಗಳು. ಈ ವಿದ್ಯಾರ್ಥಿವೇತನದ ಮೂಲಕ ಸ್ನಾತಕೋತ್ತರ ಮತ್ತು ಪಿಎಚ್.ಡಿ ಅಧ್ಯಯನ ನಡೆಸಲು ಹಣಕಾಸಿನ ನೆರವು ನೀಡಲಾಗುತ್ತದೆ.

ಈ ಯೋಜನೆಗಾಗಿ ಈ ಸಲ ಮಾರ್ಚ್ 29ರಿಂದ ಏಪ್ರಿಲ್ 17ರ ನಡುವೆ 440 ವಿದ್ಯಾರ್ಥಿಗಳಿಂದ ಅರ್ಜಿ ಸ್ವೀಕರಿಸಲಾಗಿದೆ. ಈ ಪೈಕಿ, 106 ಮಂದಿಯನ್ನು ಆಯ್ಕೆ ಮಾಡಲಾಗಿದೆ. 64 ಮಂದಿಯನ್ನು ಆಯ್ಕೆಯಾಗದ ಪಟ್ಟಿಯಲ್ಲಿ ಸೇರಿಸಲಾಗಿದೆ (ಅಂದರೆ, ರಾಜ್ಯಗಳ ಪಟ್ಟಿ ಹಾಗೂ ಇತರ ಕೋಟಾ ಕಾರಣಕ್ಕೆ ಈ ತೀರ್ಮಾನಕ್ಕೆ ಬರಲಾಗಿದೆ) ಅರ್ಹತಾ ಮಾನದಂಡ ಪೂರೈಸದಿರುವುದು, ಅಪೂರ್ಣ ದಾಖಲಾತಿಹಾಗೂ ಇತರ ಕಾರಣಗಳಿಗಾಗಿ 270 ಮಂದಿಯ ಅರ್ಜಿಯನ್ನು ತಿರಸ್ಕರಿಸಲಾಗಿದೆ.



ಈ ಹಿಂದಿನ ವರ್ಷಗಳಲ್ಲಿ, ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ ಎಲ್ಲರಿಗೂ ವಿದ್ಯಾರ್ಥಿ ವೇತನದ ಪತ್ರಗಳನ್ನು ಒಂದೇ ಸಲ ನೀಡಲಾಗುತ್ತಿತ್ತು. ಆದರೆ, ಈ ಸಲ ಹಂತ ಹಂತವಾಗಿ ನೀಡುತ್ತಿರುವುದು ವಿದ್ಯಾರ್ಥಿಗಳ ಆತಂಕಕ್ಕೆ ಕಾರಣವಾಗಿದೆ.

ಫೆಬ್ರುವರಿಯಲ್ಲಿ ಮಂಡಿಸಿದ ಕೇಂದ್ರ ಬಜೆಟ್‌ನಲ್ಲಿ, ಈ ಯೋಜನೆಗಾಗಿ ₹130 ಕೋಟಿ ಮೀಸಲು ಇಡಲಾಗಿತ್ತು. ಕಳೆದ ವರ್ಷದ ಬಜೆಟ್‌ಗೆ ಹೋಲಿಸಿದರೆ ಈ ಮೊತ್ತ ಶೇ 38ರಷ್ಟು ಹೆಚ್ಚಳ ಆಗಿದೆ. 2024ರ ಡಿಸೆಂಬರ್ 19ರಿಂದ ಇಲ್ಲಿಯವರೆಗೆ ಸಚಿವಾಲಯವು 80 ವಿದ್ಯಾರ್ಥಿಗಳಿಗೆ ₹56 ಕೋಟಿ ವಿದ್ಯಾರ್ಥಿ ವೇತನ ನೀಡಿದೆ.

ಉಳಿದ 66 ಮಂದಿಗೆ ವಿದ್ಯಾರ್ಥಿ ವೇತನ ನೀಡಲು ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯ ಅನುಮೋದನೆ ಬೇಕಿದೆ. ನಮ್ಮಲ್ಲಿ ಅನುದಾನ ಲಭ್ಯ ಇದೆ. ಆದರೆ, ಸಂಪುಟ ಸಮಿತಿಯ ಅನುಮೋದನೆ ಸಿಗದೆ ಏನೂ ಮಾಡುವಂತಿಲ್ಲ' ಎಂದು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

ಇದಕ್ಕೂ ಮುನ್ನ, ಮೌಲಾನಾ ಅಜಾದ್ ರಾಷ್ಟ್ರೀಯ ಫೆಲೋಶಿಪ್ ಯೋಜನೆಯಲ್ಲೂ ಇದೇ ರೀತಿಯ ಸಮಸ್ಯೆ ಉಂಟಾಗಿತ್ತು. ಈ ವರ್ಷದ ಜನವರಿಯಿಂದ 1400 ಪಿಎಚ್.ಡಿ ವಿದ್ಯಾರ್ಥಿಗಳಿಗೆ ಸ್ಟೈಪೆಂಡ್ ಸಿಗದೆ ಪಡಿಪಾಟಲು ಅನುಭವಿಸಿದ್ದರು. ವಿವಿಧ ವಿದ್ಯಾರ್ಥಿ ವೇತನ ಯೋಜನೆಗಳಲ್ಲಿ ಉಂಟಾಗಿರುವ ಗೊಂದಲ ಪರಿಹರಿಸುವಂತೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ವಿಪಕ್ಷಗಳ ನಾಯಕರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದರು.

# ಜನರಿಂದಲೇ ದತ್ತಾಂಶಕ್ಕೆ ಪೋರ್ಟಲ್

ಒಂದನೇ ಪುಟದಿಂದ...

ಈ ಹಿಂದೆ ಗಣತಿ ಪ್ರಕ್ರಿಯೆ ನಡೆದ ಎರಡರಿಂದ ಮೂರು ವರ್ಷಗಳ ಬಳಿಕ ದತ್ತಾಂಶಗಳನ್ನು ಸಾರ್ವಜನಿಕರ ಮುಂದೆ ಇಡಲಾಗುತ್ತಿತ್ತು. ಡಿಜಿಟಲ್ ದತ್ತಾಂಶ ಸಂಗ್ರಹದಿಂದ ಕೆಲವೇ ತಿಂಗಳಲ್ಲಿ ಜನರಿಗೆ ಮಾಹಿತಿ ದೊರಕಲಿದೆ.



ಮನೆಗಳ ಗಣತಿ ಪ್ರಕ್ರಿಯೆಯು 2026ರ ಏಪ್ರಿಲ್ 1ರಿಂದ ಆರಂಭ ಗೊಳ್ಳಲಿದ್ದು, 2027ರ ಫೆಬ್ರುವರಿ 1ರಿಂದ ನಡೆಯುವ ಎರಡನೇ ಹಂತದಲ್ಲಿ ಜನಗಣತಿ ಪ್ರಕ್ರಿಯೆಯೂ ನಡೆಯಲಿದೆ. ಈ ವೇಳೆ ಜಾತಿವಾರು ಗಣತಿ ಪ್ರಕ್ರಿಯೆಯೂ ನಡೆಯಲಿದೆ.

'ನಿಯಾಮವಳಿಗಳ ಪ್ರಕಾರ, ಗಡುವು ಗೊತ್ತುಪಡಿಸಿದ ದಿನದಿಂದ ಮೂರು ತಿಂಗಳ ಒಳಗಾಗಿ ಗಣತಿ ಪ್ರಕ್ರಿಯೆ ಮುಗಿಯಲಿದೆ. ಜಿಲ್ಲೆ, ಉಪ ವಿಭಾಗ, ತಾಲ್ಲೂಕು ಹಾಗೂ ಪೊಲೀಸ್ ಠಾಣಾ ವ್ಯಾಪ್ತಿವಾರು ವಿಭಜಿಸಿ ಗಣತಿ ಪ್ರಕ್ರಿಯೆ ನಡೆಸಲಾಗುತ್ತದೆ. 2026ರ ಏಪ್ರಿಲ್ 1ರಿಂದ ಮನೆಗಳ ಪಟ್ಟಿ ಮಾಡುವ ಕೆಲಸ ಆರಂಭಗೊಳ್ಳಲಿದ್ದು, ಮೇಲ್ವಿಚಾರಕರು, ಗಣತಿದಾರರ ಕೆಲಸಗಳ ಹಂಚಿಕೆ ಪ್ರಕ್ರಿಯೆ ನಡೆಯಲಿದೆ' ಎಂದು ಭಾರತದ ರಿಜಿಸ್ಟ್ರಾರ್ ಜನರಲ್, ಗಣತಿ ಆಯುಕ್ತರಾದ ಮೃತ್ಯುಂಜಯ್ ಕುಮಾರ್ ನಾರಾಯಣ್ ತಿಳಿಸಿದ್ದಾರೆ.

**ಬಹು ಆಯಾಮದ ತರಬೇತಿ, ಜಾಗೃತಿ**

'ಮೂರು ಹಂತಗಳಲ್ಲಿ ಕೇಂದ್ರೀಕೃತ ಹಾಗೂ ಅಗತ್ಯ ತರಬೇತಿಯನ್ನು ನೀಡಲು ರಾಷ್ಟ್ರೀಯ ಟ್ರೇನರ್, ಮಾಸ್ಟರ್ ಹಾಗೂ ಫೀಲ್ಡ್ ಟ್ರೇನರ್‌ಗಳನ್ನು ನಿಯೋಜಿಸಲಾಗುವುದು. ಫೀಲ್ಡ್ ಟ್ರೇನರ್‌ಗಳು 34 ಲಕ್ಷ ತರಬೇತುದಾರರನ್ನು ಅಣಿಗೊಳಿಸಲಿದ್ದಾರೆ' ಎಂದು ಮೃತ್ಯುಂಜಯ್ ಕುಮಾರ್ ನಾರಾಯಣ್ ತಿಳಿಸಿದ್ದಾರೆ.

'ಗಣತಿ ಪ್ರಕ್ರಿಯೆಯನ್ನು ಯಶಸ್ವಿಗೊಳಿಸಲು ದೇಶದಾದ್ಯಂತ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಇದರಿಂದ ಕೊನೆಯ ಹಂತದವರೆಗೂ ಜನರ ಸಹಭಾಗಿತ್ವ ಹಾಗೂ ನೆರವು ಪಡೆಯಲು ಸಾಧ್ಯ. ನಿಖರ, ಅಧಿಕೃತ ಹಾಗೂ ಸಕಾಲಿತ ಮಾಹಿತಿ ಕಲೆಹಾಕುವ ಗಣತಿ ಪ್ರಕ್ರಿಯೆಯನ್ನು ಯಶಸ್ವಿಗೊಳಿಸುವ ಗುರಿ ಹೊಂದಲಾಗಿದೆ' ಎಂದು ವಿವರಿಸಿದ್ದಾರೆ.



> ಪ್ರತಿ ಗ್ರಾಮ ಹಾಗೂ ಪಟ್ಟಣವನ್ನು ಏಕರೂಪದ ಎಣಿಕೆ ಬ್ಲಾಕ್‌ಗಳಾಗಿ ವಿಂಗಡಿಸಲಾಗುತ್ತದೆ. ಇದರಿಂದ ಗಣತಿದಾರರು ಗಣತಿ ಬಿಟ್ಟು ಹೋಗುವ ಹಾಗೂ ಗಣತಿ ಪುನರಾವರ್ತನೆ ತಪ್ಪಿಸಬಹುದಾಗಿದೆ
>
> **ಮೃತ್ಯುಂಜಯ್ ಕುಮಾರ್ ನಾರಾಯಣ್,** ರಿಜಿಸ್ಟ್ರಾರ್ ಜನರಲ್, ಗಣತಿ ಆಯುಕ್ತರು, ಭಾರತ ಸರ್ಕಾರ

## ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿ ಇರಲಿ: ಆರ್‌ಎಸ್‌ಎಸ್ ಸಲಹೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಹೊಸ ಶಿಕ್ಷಣ ನೀತಿಯಲ್ಲಿ ಸೂಚಿಸಿರುವ ತ್ರಿಭಾಷಾ ನೀತಿಯ ಬಗ್ಗೆ ವಿವಾದ ಎದ್ದಿರುವ ನಡುವೆಯೇ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲೇ ನೀಡಬೇಕು ಎಂದು ಹೇಳಿದೆ.

'ಭಾರತದಲ್ಲಿರುವ ಎಲ್ಲಾ ಭಾಷೆಗಳು ರಾಷ್ಟ್ರೀಯ ಭಾಷೆಗಳು ಎಂದು ಆರ್‌ಎಸ್‌ಎಸ್ ಹೇಳಿದೆ. ಜನರು ತಮ್ಮ ರಾಜ್ಯಗಳಲ್ಲಿ ತಮ್ಮದೇ ಆದ ಭಾಷೆ ಮಾತನಾಡುತ್ತಾರೆ. ಪ್ರಾಥಮಿಕ ಶಿಕ್ಷಣವನ್ನು ತಮ್ಮ ರಾಜ್ಯದ ಭಾಷೆಯಲ್ಲೇ ನೀಡಬೇಕು. ಎಲ್ಲರೂ ಅದನ್ನೇ ಒತ್ತಾಯಿಸುತ್ತಿದ್ದಾರೆ. ಇದು ಈಗಾಗಲೇ ಸ್ಥಾಪಿತವಾಗಿರುವ ವಿಚಾರ' ಎಂದು ದೆಹಲಿಯಲ್ಲಿ ನಡೆದ ಮೂರು ದಿನಗಳ 'ಸಂಘ ಪ್ರಾಂತ ಪ್ರಚಾರಕ್' ಸಭೆಯ ನಂತರ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನಿಲ್ ಅಂಬೇಕರ್ ಹೇಳಿದರು.

ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಮಹಾರಾಷ್ಟ್ರದಲ್ಲಿ ಶಿವಸೇನೆ (ಯುಬಿಟಿ) ಹಾಗೂ ಎಂಎನ್‌ಎಸ್ ಪಕ್ಷಗಳು ಭಾಷೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾಡಿರುವ ಶಿಫಾರಸುಗಳನ್ನು ವಿರೋಧಿಸುತ್ತಿವೆ.

## ಪುಣೆ: ಗಾಂಧಿ ಪ್ರತಿಮೆ ಧ್ವಂಸಕ್ಕೆ ಯತ್ನ

**ಮುಂಬೈ:** ಮಾನಸಿಕ ಅಸ್ವಸ್ಥ ಎನ್ನಲಾದ 35 ವರ್ಷದ ವ್ಯಕ್ತಿಯೊಬ್ಬ ಪುಣೆ ರೈಲು ನಿಲ್ದಾಣದ ಹೊರಗಿರುವ ಮಹಾತ್ಮ ಗಾಂಧಿ ಅವರ ಪ್ರತಿಮೆಯನ್ನು ಧ್ವಂಸ ಮಾಡಲು ಮಾಡಲು ಯತ್ನಿಸಿದ ಘಟನೆ ಭಾನುವಾರ ರಾತ್ರಿ ನಡೆದಿದೆ.

ಆರೋಪಿಯನ್ನು ಸೂರಜ್ ಶುಕ್ಲಾ ಎಂದು ಗುರುತಿಸಲಾಗಿದೆ. ಈತ ಮೂಲತಃ ಉತ್ತರ ಪ್ರದೇಶದವನಾಗಿದ್ದು, ಪುಣೆಯ ವಿಶ್ರಾಂತವಾಡಿಯಲ್ಲಿ ನೆಲಸಿದ್ದಾನೆ. ರುದ್ರಾಕ್ಷಿ, ಪ್ರಾರ್ಥನಾ ಮಣಿಗಳು ಮತ್ತು ಧಾರ್ಮಿಕ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದ.

### ಮಕ್ಕಳ ಅನಾರೋಗ್ಯದಿಂದ ತೆರವು ಪ್ರಕ್ರಿಯೆ ತಡ: ಚಂದ್ರಚೂಡ್ ಸ್ಪಷ್ಟನೆ

# 'ಶೀಘ್ರದಲ್ಲೇ ಬಂಗಲೆ ತೆರವು'

**ನವದೆಹಲಿ (ಪಿಟಿಐ):** ಇಲ್ಲಿನ ಕೃಷ್ಣ ಮೆನನ್ ಮಾರ್ಗದ ಅಧಿಕೃತ ಬಂಗಲೆಯನ್ನು ಶೀಘ್ರದಲ್ಲೇ ತೆರವುಗೊಳಿಸುವುದಾಗಿ ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಸೋಮವಾರ ಹೇಳಿದ್ದಾರೆ.

ನಿಗದಿತ ಅವಧಿ ಮುಗಿದರೂ ಚಂದ್ರಚೂಡ್ ಅವರು ಬಂಗಲೆಯನ್ನು ತೆರವುಗೊಳಿಸದೇ ಇದ್ದುದು ವಿವಾದಕ್ಕೆ ಕಾರಣವಾಗಿತ್ತು. ಬಂಗಲೆ ತೆರವುಗೊಳಿಸಲು ತಕ್ಷಣ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಪತ್ರ ಬರೆದಿತ್ತು. ಇದರ ಬೆನ್ನಲ್ಲೇ ಅವರ ಹೇಳಿಕೆ ಹೊರಬಿದ್ದಿದೆ.

ಚಂದ್ರಚೂಡ್ ಅವರು ಪತ್ನಿ ಕಲ್ಪನಾ ಹಾಗೂ ಪುತ್ರಿಯರಾದ ಪ್ರಿಯಾಂಕಾ ಹಾಗೂ ಮಾಹಿ ಅವರ ಜೊತೆ ಸಿಜೆಐಗೆ ಮೀಸಲಿಟ್ಟ ಕೃಷ್ಣ ಮೆನನ್ ಮಾರ್ಗದ ಬಂಗಲೆ ಸಂಖ್ಯೆ 5ರಲ್ಲಿ ವಾಸಿಸುತ್ತಿದ್ದಾರೆ.

ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಪತ್ರ ಬರೆದಿರುವುದರ ಬಗ್ಗೆ ಪ್ರತಿಕ್ರಿಯಿಸಿದ ಚಂದ್ರಚೂಡ್, 'ಮನೆ ತೆರವು ಮಾಡಲು ನಾವು ಸಾಮಾನು ಸರಂಜಾಮುಗಳನ್ನು ಸಿದ್ಧವಾಗಿ ಇಟ್ಟುಕೊಂಡಿದ್ದೇವೆ. ಕೆಲವು ಸಾಮಾನುಗಳನ್ನು ಈಗಾಗಲೇ ಹೊಸ ಮನೆಗೆ ಸ್ಥಳಾಂತರಿಸಿದ್ದೇವೆ' ಎಂದು ಹೇಳಿದ್ದಾರೆ.

ಮನೆ ತೆರವು ಮಾಡದೇ ಇರುವುದು ವಿವಾದದ ರೂಪ ಪಡೆದಿರುವುದಕ್ಕೆ ವಿಷಾದ ವ್ಯಕ್ತಪಡಿಸಿದ ಅವರು, ತಮ್ಮ ಇಬ್ಬರು ಮಕ್ಕಳು ಅನಾರೋಗ್ಯದಿಂದ ಬಳಲುತ್ತಿರುವುದು ತೆರವು ಪ್ರಕ್ರಿಯೆ ತಡವಾಗಲು ಕಾರಣ ಎಂದು ಸ್ಪಷ್ಟಪಡಿಸಿದ್ದಾರೆ. ಮಕ್ಕಳಿಗೆ ಗಾಲಿಕುರ್ಚಿಯಲ್ಲಿ ಓಡಾಟ ನಡೆಸಲು ಅನುಕೂಲ ಹೊಂದಿರುವ ಮನೆಯ ಅಗತ್ಯವಿದೆ ಎಂದು ಹೇಳಿದ್ದಾರೆ.

ಚಂದ್ರಚೂಡ್ ಅವರು ಸುಪ್ರೀಂ ಕೋರ್ಟ್‌ನ 50ನೇ ಮುಖ್ಯ ನ್ಯಾಯಮೂರ್ತಿಯಾಗಿ 2022ರ ನವೆಂಬರ್‌ನಿಂದ 2024ರ ನವೆಂಬರ್‌ವರೆಗೆ ಕೆಲಸ ಮಾಡಿದ್ದಾರೆ. ನಿವೃತ್ತಿ ಪಡೆದು ಎಂಟು ತಿಂಗಳು ಕಳೆದರೂ ಸಿಜೆಐ ಅಧಿಕೃತ ನಿವಾಸದಲ್ಲಿಯೇ ವಾಸ್ತವ್ಯ ಹೂಡಿದ್ದಾರೆ.

**ಮುಖ್ಯಾಂಶಗಳು**

- ನಿವೃತ್ತಿಯಾಗಿ 8 ತಿಂಗಳು ಕಳೆದರೂ ಅಧಿಕೃತ ನಿವಾಸದಲ್ಲಿ ವಾಸ್ತವ್ಯ
- ಬಂಗಲೆ ತೆರವು ವಿವಾದ ಕೇಂದ್ರ ಸರ್ಕಾರಕ್ಕೆ 'ಸುಪ್ರೀಂ' ಪತ್ರ

**'ಮಕ್ಕಳಿಗೆ ವಿಶೇಷ ಕಾಳಜಿ ಬೇಕಿದೆ'**



ಡಿ.ವೈ. ಚಂದ್ರಚೂಡ್

'ನನ್ನ ಇಬ್ಬರು ಮಕ್ಕಳು– ಪ್ರಿಯಾಂಕಾ ಮತ್ತು ಮಾಹಿಗೆ ವಿಶೇಷ ಕಾಳಜಿಯ ಅಗತ್ಯವಿದೆ. ಅವರು ನೆಮಾಲಿನ್ ಮಯೋಪತಿ ಎಂಬ ಕಾಯಿಲೆಯಿಂದ ಬಳಲುತ್ತಿದ್ದಾರೆ. ಸ್ನಾಯುಗಳ ಮೇಲೆ ಪರಿಣಾಮ ಬೀರುವ ಅಪರೂಪದ ಆನುವಂಶಿಕ ಕಾಯಿಲೆ ಇದಾಗಿದೆ' ಎಂದು ಚಂದ್ರಚೂಡ್ ಹೇಳಿದ್ದಾರೆ.

'ಮನೆಯಲ್ಲಿ ನಾವು ಉತ್ತಮ ಗುಣಮಟ್ಟದ ನೈರ್ಮಲ್ಯ ಕಾಪಾಡಿಕೊಳ್ಳುತ್ತೇವೆ. ಇಬ್ಬರು ಮಕ್ಕಳ ಆರೈಕೆ ಮಾಡಲು ದಾದಿ ಇದ್ದಾರೆ. ಮನೆ ತೆರವು ಮಾಡಲು ಕೆಲವು ದಿನ ತಡವಾಗಿದೆ. ಹೊಸ ಮನೆಯಲ್ಲಿ ಮಕ್ಕಳಿಗೆ ಎಲ್ಲ ಸೌಲಭ್ಯಗಳು ಸಿದ್ಧವಾಗಿವೆ ಎಂದು ಹೇಳಿದ ಕೂಡಲೇ ಈ ಬಂಗಲೆ ತೆರವು ಮಾಡುತ್ತೇವೆ' ಎಂದಿದ್ದಾರೆ.

ಹಿರಿಯ ಮಗಳು ಪ್ರಿಯಾಂಕಾ ಅವರು 2022ರಲ್ಲಿ ಚಂಡೀಗಢದ ಆಸ್ಪತ್ರೆಯಲ್ಲಿ 44 ದಿನ ಐಸಿಯುನಲ್ಲಿ ಇದ್ದದ್ದನ್ನು ಅವರು ಇದೇ ವೇಳೆ ನೆನಪಿಸಿಕೊಂಡರು.

## ತೆರಿಗೆ ಸಂಗ್ರಹಕ್ಕಿಳಿದ ಮಹಿಳಾ ಪಡೆ

ಒಂದನೇ ಪುಟದಿಂದ...

ತೆರಿಗೆಗೆ ಯುಪಿಐ ಆಧಾರಿತ ಪಾವತಿ ವ್ಯವಸ್ಥೆಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ನಗದು ರೂಪದಲ್ಲಿ ತೆರಿಗೆ ಸಂಗ್ರಹಕ್ಕೆ ಅನುಮತಿ ನೀಡಿಲ್ಲ. ಕರ ವಸೂಲಿಗಾರರ ಕೊರತೆಯನ್ನು ಮಹಿಳಾ ಸ್ವಸಹಾಯ ಸಂಘದ ಸದಸ್ಯೆಯರು ನೀಗಿಸಿದ್ದಾರೆ.

'ತೆರಿಗೆ ಸಂಗ್ರಹಕ್ಕೆ ಮನೆಬಾಗಿಲಿಗೆ ತೆರಳಿದಾಗ ಜನರು ಅನುಮಾನದಿಂದ ನೋಡುತ್ತಿದ್ದಾರೆ. ಪಾಲಿಕೆ ವತಿಯಿಂದ ನೀಡಿದ ಗುರುತಿನ ಚೀಟಿ ತೋರಿಸಿ ಪಿಒಎಸ್ ಉಪಕರಣದಲ್ಲಿ ಪರಿಶೀಲಿಸುತ್ತೇವೆ. ಜನರ ಮನವೊಲಿಸಿ ತೆರಿಗೆ ಸಂಗ್ರಹಿಸುತ್ತಿದ್ದೇವೆ. ಮೇ ತಿಂಗಳಲ್ಲಿ ಒಬ್ಬಳೇ ₹5.5 ಲಕ್ಷ ತೆರಿಗೆ ಸಂಗ್ರಹಿಸಿದ್ದೇನೆ' ಎಂದು ಹೆಮ್ಮೆಯಿಂದ ಹೇಳುತ್ತಾರೆ ಈಶ್ವರಿ ಮಹಿಳಾ ಸ್ವಸಹಾಯ ಸಂಘದ ಸದಸ್ಯೆ ವಿಜಯಲಕ್ಷ್ಮಿ ಹಳ್ಳಿಕೆರೆ.

'ಉಪಕರಣವೊಂದನ್ನು ಕೈಯಲ್ಲಿ ಹಿಡಿದು ಮಹಿಳೆಯೊಬ್ಬರು ಮನೆ ಬಾಗಿಲಿಗೆ ಬಂದಿದ್ದರು. ಮಹಾನಗರ ಪಾಲಿಕೆ ತೆರಿಗೆ ಸಂಗ್ರಹಕ್ಕೆ ಮಹಿಳೆಯರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ ಮಾಹಿತಿ ಇರಲಿಲ್ಲ. ಪಾಲಿಕೆ ಕಚೇರಿಗೆ ತೆರಳಿ ತೆರಿಗೆ ಪಾವತಿಸುವುದಾಗಿ ಹೇಳಿ ಮಹಿಳೆಯನ್ನು ವಾಪಸ್ ಕಳುಹಿಸಿದೆವು. ಈ ಬಗ್ಗೆ ಇನ್ನಷ್ಟು ಜಾಗೃತಿ ಮೂಡಿಸಿದರೆ ಅನುಕೂಲ' ಎನ್ನುತ್ತಾರೆ ಎಂಸಿಸಿ ಬಡಾವಣೆಯ ಮಂಜಪ್ಪ.

# ಮಲ್ಡರ್ ಅಜೇಯ 367 'ಡಿಕ್ಲೇರ್'

## ಕ್ರಿಕೆಟ್ ದಂತಕತೆ ಬ್ರಯನ್ ಲಾರಾ ದಾಖಲೆಗೆ ಗೌರವ ಸಲ್ಲಿಸಿದ ದಕ್ಷಿಣ ಆಫ್ರಿಕಾ ನಾಯಕ

ಬ್ರಯನ್ ಲಾರಾ ಅವರು ಕ್ರಿಕೆಟ್‌ನ ದಂತಕಥೆ. ಆ ದಾಖಲೆಯನ್ನು (400 ರನ್) ಉಳಿಸಿಕೊಳ್ಳಲು ಅವರು ಅರ್ಹರು. ಮುಂದೆಯೂ ಇಂತಹ ಸಂದರ್ಭ ಬಂದರೆ, ನಾನು ಈಗ ಮಾಡಿದಂತೆಯೇ ಮಾಡುತ್ತೇನೆ
**ವಿಯಾನ್ ಮಲ್ಡರ್,** ದಕ್ಷಿಣ ಆಫ್ರಿಕಾ ತಂಡದ ನಾಯಕ

ಬುಲವಾಯೊ, ಜಿಂಬಾಬ್ವೆ (ಎಎಫ್‌ಪಿ): ದಕ್ಷಿಣ ಆಫ್ರಿಕಾ ತಂಡದ ನಾಯಕ ಮತ್ತು ಬ್ಯಾಟರ್ ವಿಯಾನ್ ಮಲ್ಡರ್ ಟೆಸ್ಟ್ ಕ್ರಿಕೆಟ್‌ನಲ್ಲಿ ವಿಶ್ವದಾಖಲೆ ನಿರ್ಮಿಸುವ ಅವಕಾಶವನ್ನು ತ್ಯಜಿಸಿದರು.

ಜಿಂಬಾಬ್ವೆ ಎದುರು ಇಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ಅಜೇಯ 367 (334ಎಸೆತ, 4X49, 6X4) ರನ್ ಗಳಿಸಿದ ಅವರು ದಶಕಗಳ ಹಿಂದೆ ವೆಸ್ಟ್ ಇಂಡೀಸ್‌ನ ಬ್ರಯನ್ ಲಾರಾ ನಿರ್ಮಿಸಿದ್ದ 400 ರನ್ ದಾಖಲೆಯನ್ನು ಮುರಿಯಬಹುದಿತ್ತು. ಆದರೆ ಇನಿಂಗ್ಸ್ ಡಿಕ್ಲೇರ್ ಮಾಡಿಕೊಳ್ಳುವ ಮೂಲಕ ಅಚ್ಚರಿ ಮೂಡಿಸಿದರು.

ಅವರ ಬ್ಯಾಟಿಂಗ್ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 114 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 626 ರನ್‌ಗಳ ಬೃಹತ್ ಮೊತ್ತ ಪೇರಿಸಿತು.

ದುರ್ಬಲ ತಂಡವಾಗಿರುವ ಜಿಂಬಾಬ್ವೆ ತಂಡವು ದಕ್ಷಿಣ ಆಫ್ರಿಕಾ ದಾಳಿಗೆ ಕುಸಿಯಿತು. 43 ಓವರ್‌ಗಳಲ್ಲಿ 170 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಮಲ್ಡರ್ ಬಳಗವು ಆತಿಥೇಯರ ಮೇಲೆ ಫಾಲೋ ಆನ್ ಹೇರಿತು. ಎರಡನೇ ಇನಿಂಗ್ಸ್‌ನಲ್ಲಿಯೂ ಜಿಂಬಾಬ್ವೆ ಆರಂಭಿಕ ಆಘಾತ ಎದುರಿಸಿತು. ಎರಡನೇ ದಿನದಾಟ ಮುಗಿದಾಗ 16 ಓವರ್‌ಗಳಲ್ಲಿ 1 ವಿಕೆಟ್‌ಗೆ 51 ರನ್ ಗಳಿಸಿತ್ತು. ಟಾಕುಚಾವಾಂಶೆ ಕೈಟ್ಯಾನೊ (ಬ್ಯಾಟಿಂಗ್ 34) ಮತ್ತು ನಿಕ್ ವೆಲ್ಚ್ (ಬ್ಯಾಟಿಂಗ್ 6) ಕ್ರೀಸ್‌ನಲ್ಲಿದ್ದಾರೆ.

**ವಿಯಾನ್ ಅಬ್ಬರ:** ದಕ್ಷಿಣ ಆಫ್ರಿಕಾ ತಂಡಕ್ಕೆ ಇದೇ ಮೊದಲ ಬಾರಿ ನಾಯಕತ್ವ ವಹಿಸಿರುವ 27 ವರ್ಷದ ವಿಯಾನ್ ಅವರು ಜಿಂಬಾಬ್ವೆಯ ದಾಳಿಯನ್ನು ಪುಡಿಗಟ್ಟಿದರು. ಸೋಮವಾರ ಅವರು ತ್ರಿಶತಕದ ಗಡಿ ದಾಟಿದರು. ಅವರು 311 ರನ್ ಗಳಿಸಿದ ಸಂದರ್ಭದಲ್ಲಿ ತಮ್ಮ ತಂಡದ ಮಾಜಿ ಆಟಗಾರ ಹಾಶೀಂ ಆಮ್ಲಾ ಅವರ ದಾಖಲೆಯನ್ನು ಮೀರಿದರು. ಆಮ್ಲಾ ಅವರು 2012ರಲ್ಲಿ ದಿ ಓವಲ್ ಮೈದಾನದಲ್ಲಿ ತ್ರಿಶತಕ ಸಾಧನೆ ಮಾಡಿದ್ದರು.

ಮಲ್ಡರ್ ಅವರು ವೇಗದ ತ್ರಿಶತಕ ದಾಖಲಿಸಿದ ಎರಡನೇ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅವರು 297 ಎಸೆತಗಳಲ್ಲಿ 300ರ ಗಡಿ ದಾಟಿದರು. 2007–08ರಲ್ಲಿ ಭಾರತದ ವೀರೇಂದ್ರ ಸೆಹ್ವಾಗ್ ಅವರು ಚೆನ್ನೈನಲ್ಲಿ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್‌ನಲ್ಲಿ 278 ಎಸೆತಗಳಲ್ಲಿ ತ್ರಿಶತಕ ಬಾರಿಸಿದ್ದರು. ವಿಯಾನ್ ಬೌಲಿಂಗ್‌ನಲ್ಲಿಯೂ ಮಿಂಚಿದರು. ಎರಡು ವಿಕೆಟ್ ಗಳಿಸಿದರು.

**ಸಂಕ್ಷಿಪ್ತ ಸ್ಕೋರು:** ದಕ್ಷಿಣ ಆಫ್ರಿಕಾ: 114 ಓವರ್‌ಗಳಲ್ಲಿ 5ಕ್ಕೆ626 ಡಿಕ್ಲೇರ್ಡ್: ವಿಯಾನ್ ಮಲ್ಡರ್ ಔಟಾಗದೇ 367, ಡೇವಿಡ್ ಬೆಡಿಂಗಾಮ್ 82, ಲುವಾನ್ ಡ್ರೆ ಪ್ರಿಟೋರಿಯಸ್ 78, ತನಾಕಾ ಚಿವಾಂಗಾ 112ಕ್ಕೆ2) ಜಿಂಬಾಬ್ವೆ: 43 ಓವರ್‌ಗಳಲ್ಲಿ 170 (ವೆಸ್ಲಿ ಮದೇವೆರೆ 25, ಸೀನ್ ವಿಲಿಯಮ್ಸ್ ಔಟಾಗದೇ 83, ವಿಯಾನ್ ಮಲ್ಡರ್ 20ಕ್ಕೆ2, ಪ್ರಿನೆಲನ್ ಸುಬ್ರಾಯನ್ 42ಕ್ಕೆ4) ಫಾಲೋಆನ್ ಜಿಂಬಾಬ್ವೆ: 16 ಓವರ್‌ಗಳಲ್ಲಿ 1 ವಿಕೆಟ್‌ಗೆ 51 (ಡಿಯಾನ್ ಮೇಯರ್ಸ್ 11, ಕಾರ್ಬಿನ್ ಬಾಷ್ 21ಕ್ಕೆ1)



ವಿಯಾನ್ ಮಲ್ಡರ್ ಐಸಿಸಿ 'ಎಕ್ಸ್' ಚಿತ್ರ

**ಟೆಸ್ಟ್ ಕ್ರಿಕೆಟ್: ಒಂದೇ ಇನಿಂಗ್ಸ್‌ನಲ್ಲಿ ವೈಯಕ್ತಿಕ ಗರಿಷ್ಠ ರನ್**

| ಬ್ಯಾಟರ್ | ರನ್ | ಎಸೆತ | ದೇಶ | ಎದುರಾಳಿ | ವರ್ಷ |
|---|---|---|---|---|---|
| ಬ್ರಯನ್ ಲಾರಾ | 400* | 582 | ವೆಸ್ಟ್ ಇಂಡೀಸ್ | ಇಂಗ್ಲೆಂಡ್ | 2004 |
| ಮ್ಯಾಥ್ಯೂ ಹೇಡನ್ | 380 | 437 | ಆಸ್ಟ್ರೇಲಿಯಾ | ಜಿಂಬಾಬ್ವೆ | 2003 |
| ಬ್ರಯನ್ ಲಾರಾ | 375 | 538 | ವೆಸ್ಟ್ ಇಂಡೀಸ್ | ಇಂಗ್ಲೆಂಡ್ | 1994 |
| ಮಹೇಲಾ ಜಯವರ್ಧನೆ | 374 | 572 | ಶ್ರೀಲಂಕಾ | ದ.ಆಫ್ರಿಕಾ | 2006 |
| ವಿಯಾನ್ ಮಲ್ಡರ್ | 367* | 334 | ದ.ಆಫ್ರಿಕಾ | ಜಿಂಬಾಬ್ವೆ | 2025 |

**ಟೆಸ್ಟ್ ಕ್ರಿಕೆಟ್: ವೇಗದ ತ್ರಿಶತಕ (ಎಸೆತಗಳಲ್ಲಿ)**

| ಎಸೆತ | ಆಟಗಾರ | ದೇಶ | ಎದುರಾಳಿ | ವರ್ಷ |
|---|---|---|---|---|
| 278 | ವೀರೇಂದ್ರ ಸೆಹ್ವಾಗ್ | ಭಾರತ | ದಕ್ಷಿಣ ಆಫ್ರಿಕಾ | 2008 |
| 297 | ವಿಯಾನ್ ಮಲ್ಡರ್ | ದಕ್ಷಿಣ ಆಫ್ರಿಕಾ | ಜಿಂಬಾಬ್ವೆ | 2025 |
| 310 | ಹ್ಯಾರಿ ಬ್ರೂಕ್ | ಇಂಗ್ಲೆಂಡ್ | ಪಾಕಿಸ್ತಾನ | 2024 |
| 362 | ಮ್ಯಾಥ್ಯೂ ಹೇಡನ್ | ಆಸ್ಟ್ರೇಲಿಯಾ | ಜಿಂಬಾಬ್ವೆ | 2003 |
| 364 | ವೀರೇಂದ್ರ ಸೆಹ್ವಾಗ್ | ಭಾರತ | ಪಾಕಿಸ್ತಾನ | 2004 |

# ಸಹೋದರಿಗೆ ಸಾಧನೆ ಸಮರ್ಪಣೆ

## ಎಜ್‌ಬಾಸ್ಟನ್ ಟೆಸ್ಟ್ ಪಂದ್ಯದಲ್ಲಿ ಒಟ್ಟು 10 ವಿಕೆಟ್ ಗಳಿಸಿದ್ದ ವೇಗಿ ಆಕಾಶ್ ದೀಪ್

ಬರ್ಮಿಂಗ್‌ಹ್ಯಾಮ್ (ಪಿಟಿಐ): 'ಪ್ರತಿಯೊಂದು ಎಸೆತ ಹಾಕುವಾಗಲೂ, ಕ್ಯಾನ್ಸರ್ ಕಾಯಿಲೆಯೊಂದಿಗೆ ಹೋರಾಟ ನಡೆಸುತ್ತಿರುವ ನನ್ನ ಸಹೋದರಿಯ ಕುರಿತ ಯೋಚನೆ ಹಾದುಹೋಗುತ್ತಿತ್ತು. ನನ್ನ ಈ ಸಾಧನೆಯು ಆಕೆಗೆ ಸಮರ್ಪಣೆ. ನಿನ್ನೊಂದಿಗೆ ನಾವೆಲ್ಲರೂ ಇದ್ದೇವೆ ಸಹೋದರಿ'–

ಎಜ್‌ಬಾಸ್ಟನ್‌ನಲ್ಲಿ ಭಾನುವಾರ ಮುಕ್ತಾಯವಾದ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಐತಿಹಾಸಿ ಜಯಸಾಧನೆ ಮಾಡಿದ ಭಾರತ ತಂಡದ ವೇಗಿ ಆಕಾಶ್ ದೀಪ್ ಅವರ ಭಾವುಕ ಮಾತುಗಳಿವು. ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಆರು ವಿಕೆಟ್ ಗಳಿಸಿ ತಂಡದ ಜಯದಲ್ಲಿ ಮಹತ್ವದ ಪಾತ್ರ ವಹಿಸಿದ್ದರು ಆಕಾಶ್. ಪಂದ್ಯದ ನಂತರ 'ಜಿಯೊ ಹಾಟ್‌ಸ್ಟಾರ್'ವಾಹಿನಿಯ ಸಂವಾದದಲ್ಲಿ ವೀಕ್ಷಕ ವಿವರಣೆಗಾರ ಚೇತೇಶ್ವರ್ ಪೂಜಾರ ಅವರೊಂದಿಗೆ ಆಕಾಶ್ ಮಾತನಾಡಿದರು. ಈ ಸಂದರ್ಭದಲ್ಲಿ ಅವರು ತಮ್ಮ ಸಹೋದರಿಯನ್ನು ನೆನಪಿಸಿಕೊಂಡರು.

'ಈ ವಿಷಯದ ಕುರಿತು ಯಾರೊಂದಿಗೂ ನಾನು ಮಾತನಾಡಿಲ್ಲ. ಎರಡು ತಿಂಗಳುಗಳ ಹಿಂದೆ ನನ್ನ ಅಕ್ಕನಿಗೆ ಕ್ಯಾನ್ಸರ್ ಇರುವುದು ಪತ್ತೆಯಾಯಿತು. ಇವತ್ತು ನಾನು ಉತ್ತಮವಾಗಿ ಆಡಿರುವುದು ಆಕೆಯಲ್ಲಿ ಸಂತಸ ಮೂಡಿಸಿದೆ. ಅವರ ಮುಖದ ಮೇಲೆ ನಗು ಮೂಡಿಸಲು ನನ್ನ ಆಟ ಕಾರಣವಾಗಿದೆ' ಎಂದು ಆಕಾಶ್ ಭಾವುಕರಾದರು.

ಪಂದ್ಯದ ಕುರಿತು ಮಾತನಾಡಿದ ಅವರು, 'ಪಿಚ್‌ನ ಗಟ್ಟಿ ಪ್ಯಾಚ್ ಇರುವಲ್ಲಿ ಚೆಂಡು ಪುಟಿದೇಳುವಂತೆ ಎಸೆತ ಹಾಕುವುದು ನನ್ನ ಗುರಿಯಾಗಿತ್ತು. ಜೋ ರೂಟ್ ಅವರಿಗೆ ತುಸು ಕ್ರೀಸ್‌ನ ವೈಡ್ ಲೆಂಗ್ತ್‌ನಲ್ಲಿ ಹಾಕಿದ್ದೆ. ಅದು ಫಲ ನೀಡಿತು. ಅದೇ ಹ್ಯಾರಿ ಬ್ರೂಕ್ ಅವರು ಬ್ಯಾಕ್‌ಫುಟ್‌ನಲ್ಲಿ ಚೆನ್ನಾಗಿ ಆಡುವ ಆಟಗಾರ. ಅವರಿಗೂ ಹಾರ್ಡ್ ಸೀಮ್ ಮತ್ತು ಫುಲ್ಲರ್ ಲೆಂಗ್ತ್‌ನಲ್ಲಿ ಎಸೆತಗಳನ್ನು ಹಾಕಿದೆ' ಎಂದರು.


ಜಸ್‌ಪ್ರೀತ್ ಬೂಮ್ರಾ ಅವರು ವಿಶ್ರಾಂತಿ ಪಡೆದ ಕಾರಣ ಆಕಾಶ್ ಅವರು ಆಡುವ ಅವಕಾಶ ಪಡೆದಿದ್ದರು. ಈ ಟೆಸ್ಟ್‌ನಲ್ಲಿ ಅವರು ಒಟ್ಟು 10 ವಿಕೆಟ್ ಗಳಿಸಿದರು. ಸರಣಿಯಲ್ಲಿ ಭಾರತವು ಈಗ 1–1ರ ಸಮಬಲ ಸಾಧಿಸಿತು. ಮೂರನೇ ಪಂದ್ಯವು ಲಾರ್ಡ್ಸ್‌ನಲ್ಲಿ ಇದೇ 10 ರಿಂದ 14ರವರೆಗೆ ನಡೆಯಲಿದೆ.

'ಮುಂದಿನ ಪಂದ್ಯದ ಕುರಿತು ನಾನಿನ್ನೂ ಯೋಚಿಸಿಲ್ಲ. ಲಾರ್ಡ್ಸ್‌ನಲ್ಲಿಯ ಸ್ಥಿತಿ ಇಲ್ಲಿಗಿಂತ ವಿಭಿನ್ನವಾಗಿರುವ ಸಾಧ್ಯತೆ ಇದೆ. ಪರಿಸ್ಥಿತಿ ಏನೇ ಇರಲಿ. ನಮ್ಮ ಸಾಮರ್ಥ್ಯ ಮತ್ತು ಆತ್ಮವಿಶ್ವಾಸವನ್ನು ಸಂಪೂರ್ಣವಾಗಿ ವಿನಿಯೋಗಿಸುವುದರತ್ತ ಪೂರ್ಣ ಗಮನ ನೀಡುತ್ತೇವೆ' ಎಂದರು.



ಸಹೋದರಿ ಅಖಂಡ ಜ್ಯೋತಿ ಸಿಂಗ್ ಜೊತೆಯಲ್ಲಿ ಆಕಾಶ್ ದೀಪ್ ಪಿಟಿಐ ಚಿತ್ರ

### ಕುಲದೀಪ್‌ಗೆ ಅವಕಾಶ ನೀಡುವ ಆಶಯವಿತ್ತು: ಗಿಲ್




ಬರ್ಮಿಂಗ್‌ಹ್ಯಾಮ್ (ಪಿಟಿಐ): ಎರಡನೇ ಟೆಸ್ಟ್ ಪಂದ್ಯದಲ್ಲಿ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರನ್ನೇ ಆಡಿಸಬೇಕು ಎಂಬ ಆಶಯ ತಮಗಿತ್ತು. ಆದರೆ, ಬ್ಯಾಟಿಂಗ್ ಕ್ರಮಾಂಕವನ್ನು ಹೆಚ್ಚು ಬೆಳೆಸುವ ಉದ್ದೇಶದಿಂದ ವಾಷಿಂಗ್ಟನ್ ಸುಂದರ್ ಅವರಿಗೆ ಅವಕಾಶ ನೀಡಲಾಯಿತು ಎಂದು ಭಾರತ ತಂಡದ ನಾಯಕ ಶುಭಮನ್ ಗಿಲ್ ಸ್ಪಷ್ಟಪಡಿಸಿದ್ದಾರೆ.

ಎಜ್‌ಬಾಸ್ಟನ್ ಟೆಸ್ಟ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಅವರಿಗೆ ವಿಶ್ರಾಂತಿ ನೀಡಲಾಗಿತ್ತು. ಆದ್ದರಿಂದ ವಿಕೆಟ್‌ಗಳಿಸುವ ಸಮರ್ಥ ಬೌಲರ್ ಕುಲದೀಪ್ ಅವರಿಗೆ ಅವಕಾಶ ನೀಡಬೇಕು ಎಂಬ ಚರ್ಚೆಗಳು ಮಾಧ್ಯಮಗಳಲ್ಲಿ ನಡೆದಿದ್ದವು. ಆದರೆ ಆಲ್‌ರೌಂಡರ್ ವಾಷಿಂಗ್ಟನ್ ಅವರನ್ನು ಕಣಕ್ಕಿಳಿಸಿದ ಸಂದರ್ಭದಲ್ಲಿ ತಂಡದ ವ್ಯವಸ್ಥಾಪನ ಮಂಡಳಿಯ ಕುರಿತು ಟೀಕೆಗಳೂ ಕೇಳಿಬಂದಿದ್ದವು.

ಪಂದ್ಯದ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಪ್ರತಿಕ್ರಿಯಿಸಿದ ಗಿಲ್, 'ನನ್ನ ಹಾಗೂ ವಾಷಿಂಗ್ಟನ್ ಜೊತೆಯಾಟವು ಮಹತ್ವದ್ದಾಗಿತ್ತು. 180 ರನ್‌ಗಳ ಮುನ್ನಡೆಯ ಬದಲು 70–80 ರ ಲೀಡ್‌ಗೆ ಬಹಳ ವ್ಯತ್ಯಾಸವಾಗುತ್ತದೆ. ಎದುರಾಳಿಗಳ ಮೇಲೆ ಇದು ಬೀರುವ ಪರಿಣಾಮವೂ ಬೇರೆಯೇ ಆಗುತ್ತದೆ. ಆದ್ದರಿಂದ ಮುನ್ನಡೆ ಬೆಳೆಸುವಲ್ಲಿ ಆ ಜೊತೆಯಾಟ ಮುಖ್ಯವಾಗಿತ್ತು' ಎಂದರು.

**ಚಿಟಿಕೆ ಸುದ್ದಿ**

## ಯುಕಿ– ಗ್ಯಾಲವೆ ಜೋಡಿಗೆ ನಿರಾಸೆ



ಯುಕಿ ಭಾಂಬ್ರಿ

ಲಂಡನ್ (ಪಿಟಿಐ): ಭಾರತದ ಯುಕಿ ಭಾಂಬ್ರಿ ಮತ್ತು ಅಮೆರಿಕದ ರಾಬರ್ಟ್ ಗ್ಯಾಲವೆ ಜೋಡಿಯು ಪುರುಷರ ಡಬಲ್ಸ್‌ನ ಮೂರನೇ ಸುತ್ತಿನಲ್ಲಿ ನಿರಾಸೆ ಅನುಭವಿಸಿತು.

16ನೇ ಶ್ರೇಯಾಂಕದ ಯುಕಿ– ಗ್ಯಾಲವೆ ಜೋಡಿ 4-6, 6-3, 6-7 (10) ರಿಂದ ನಾಲ್ಕನೇ ಶ್ರೇಯಾಂಕದ ಮಾರ್ಸೆಲ್ಲೊ ಗ್ರಾನೊಲ್ಲರ್ಸ್ (ಸ್ಪೇನ್) ಮತ್ತು ಹೊರಾಸಿಯೊ ಜೆಬೆಲ್ಲೊಸ್ (ಅರ್ಜೆಂಟೀನಾ) ಅವರಿಗೆ ಮಣಿಯಿತು. ಈ ರೋಚಕ ಪಂದ್ಯ ಎರಡು ಗಂಟೆ ಒಂಬತ್ತು ನಿಮಿಷ ನಡೆಯಿತು.

ಇದಕ್ಕೂ ಮುನ್ನ ಮಿಶ್ರ ಡಬಲ್ಸ್‌ನಲ್ಲೂ ಭಾಂಬ್ರಿ ಹೊರಬಿದ್ದರು. ಎರಡನೇ ಸುತ್ತಿನ ಪಂದ್ಯದಲ್ಲಿ ಯೂಕಿ ಮತ್ತು ಚೀನಾದ ಜೊತೆಗಾರ್ತಿ ಜಿಯಾಂಗ್ ಕ್ಸಿನ್ಯು 6–7(8), 6–3ರಿಂದ ಮಾರ್ಸೆಲೊ ಅರೆವಾಲೊ ಮತ್ತು ಜಾಂಗ್ ಶುವಾಯ್ ಜೋಡಿಗೆ ಶರಣಾದರು.

ಭಾಂಬ್ರಿ ನಿರ್ಗಮನದೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಕೂಡ ಅಂತ್ಯವಾಯಿತು.

## ಹಾಕಿ: ಭಾರತ ಎ ತಂಡಕ್ಕೆ ಐರ್ಲೆಂಡ್ ಸವಾಲು ಇಂದು

ಐನ್ಡ್‌ಹೋವನ್ (ನೆದರ್ಲೆಂಡ್ಸ್) (ಪಿಟಿಐ): ಯುರೋಪ್ ಪ್ರವಾಸ ಕೈಗೊಂಡಿರುವ ಭಾರತ ಎ ಹಾಕಿ ತಂಡವು, ಮಂಗಳವಾರ ಐರ್ಲೆಂಡ್ ಎದುರು ಮೊದಲ ಪಂದ್ಯ ಆಡಲಿದೆ.

ತಂಡವು ಯುವ ಮತ್ತು ಅನುಭವಿ ಆಟಗಾರರಿಂದ ಕೂಡಿದ್ದು, ಡಿಫೆಂಡರ್ ಸಂಜಯ್ ಅವರು ನಾಯಕತ್ವ ವಹಿಸಿದ್ದಾರೆ. ಭಾರತೀಯ ಕಾಲಮಾನ 9.30ಕ್ಕೆ ಪಂದ್ಯ ಆರಂಭವಾಗಲಿದೆ.

'ಯುರೋಪ್ ಪ್ರವಾಸವು ನಮಗೆಲ್ಲರಿಗೂ ಉತ್ತಮ ಅವಕಾಶವಾಗಿದೆ. ಬಲಿಷ್ಠ ತಂಡಗಳ ಎದುರು ಪಂದ್ಯಗಳಿದ್ದು, ನಮ್ಮ ಸಾಮರ್ಥ್ಯವನ್ನು ಪರೀಕ್ಷೆಗೆ ಒಡ್ಡಲು ಎದುರು ನೋಡುತ್ತಿದ್ದೇವೆ' ಎಂದು ಸಂಜಯ್ ಹೇಳಿದ್ದಾರೆ.

ಪ್ರವಾಸದಲ್ಲಿ ಭಾರತವು ಫ್ರಾನ್ಸ್, ಐರ್ಲೆಂಡ್ ಮತ್ತು ನೆದರ್ಲೆಂಡ್ಸ್ ವಿರುದ್ಧ ತಲಾ ಎರಡು ಹಾಗೂ ಇಂಗ್ಲೆಂಡ್, ಬೆಲ್ಜಿಯಂ ವಿರುದ್ಧ ತಲಾ ಒಂದು ಪಂದ್ಯಗಳನ್ನು ಆಡಲಿದೆ.

## ಫುಟ್ಬಾಲ್ ಆಟಗಾರ ಸ್ಟೀಫನ್ ನಿಧನ



ಬೆಂಗಳೂರು: ರಾಷ್ಟ್ರ ಮಟ್ಟದ ವಿವಿಧ ಟೂರ್ನಿಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದ ಫುಟ್ಬಾಲ್ ಹಿರಿಯ ಆಟಗಾರ, ಕೋಚ್ ಸ್ಟೀಫನ್ (38) ಅವರು ಸೋಮವಾರ ಮೃತಪಟ್ಟರು.

ಸ್ಟೀಫನ್ ಅವರು ಜಾಂಡೀಸ್ ರೋಗದಿಂದ ಬಳಲುತ್ತಿದ್ದರು. ವಿದ್ಯಾರಣ್ಯಪುರ ಸಮೀಪದ ಕ್ರೈಸ್ತ ಚಿತಾಗಾರದಲ್ಲಿ ಮಂಗಳವಾರ ಮಧ್ಯಾಹ್ನ 2ಕ್ಕೆ ಅಂತಿಮ ಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅವರು ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

## ಕ್ವಾರ್ಟರ್ ಫೈನಲ್‌ಗೆ ಕ್ಯಾಮೆರಾನ್ ನಾರ್ರಿ • ರುಬ್ಲೆವ್ ನಿರ್ಗಮನ

# ವಿಂಬಲ್ಡನ್: ಅಲ್ಕರಾಜ್ ಅಜೇಯ ಓಟ

ಲಂಡನ್ (ಎಎಫ್‌ಪಿ): ಆರಂಭಿಕ ಸೆಟ್‌ನ ಹಿನ್ನಡೆಯಿಂದ ಚೇತರಿಸಿಕೊಂಡ ಎರಡನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಅಜೇಯ ಓಟ ಮುಂದುವರಿಸಿದರು. ಹ್ಯಾಟ್ರಿಕ್ ಪ್ರಶಸ್ತಿ ಗೆಲುವಿನ ಛಲದಲ್ಲಿರುವ ಸ್ಪೇನ್‌ನ ಆಟಗಾರ ಪುರುಷರ ಸಿಂಗಲ್ಸ್ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 14ನೇ ಶ್ರೇಯಾಂಕದ ಆ್ಯಂಡ್ರೆ ರುಬ್ಲೆವ್ ಅವರನ್ನು ಸೋಲಿಸಿದರು.

ಐದು ಗ್ರ್ಯಾನ್‌ಸ್ಲಾಮ್ ಕಿರೀಟ ಗೆದ್ದಿರುವ ಅಲ್ಕರಾಜ್ 6-7 (5/7), 6-3, 6-4, 6-4ರಿಂದ ರಷ್ಯಾದ ರುಬ್ಲೆವ್ ಅವರ ಸವಾಲನ್ನು ಮೆಟ್ಟಿನಿಂತರು. ಇದರೊಂದಿಗೆ ಕಳೆದ ಏಪ್ರಿಲ್ ನಂತರ ಗೆಲುವಿನ ಓಟವನ್ನು 22 ಪಂದ್ಯಗಳಿಗೆ ವಿಸ್ತರಿಸಿದರು. ಇದು ಅವರ ವೃತ್ತಿಜೀವನದಲ್ಲೇ ಅತ್ಯುತ್ತಮ ಸಾಧನೆಯಾಗಿದೆ. ಅವರಿಗೆ ಕ್ವಾರ್ಟರ್ ಫೈನಲ್‌ನಲ್ಲಿ ಬ್ರಿಟನ್‌ನ ಕ್ಯಾಮೆರಾನ್ ನಾರ್ರಿ ಎದುರಾಳಿಯಾಗಿದ್ದಾರೆ.

22 ವರ್ಷ ವಯಸ್ಸಿನ ಅಲ್ಕರಾಜ್, ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲೂ ಅಜೇಯ ಓಟವನ್ನು 18 ಪಂದ್ಯಗಳಿಗೆ ಹೆಚ್ಚಿಸಿದರು. 2022ರ ಆವೃತ್ತಿಯ ನಾಲ್ಕನೇ ಸುತ್ತಿನಲ್ಲಿ ಇಟಲಿಯ ಯಾನಿಕ್ ಸಿನ್ನರ್ ವಿರುದ್ಧ ಕೊನೆಯ ಬಾರಿ ಸೋತಿದ್ದರು. ಕಳೆದ ಎರಡೂ ಆವೃತ್ತಿಗಳ ಫೈನಲ್‌ನಲ್ಲಿ ಅವರು ಸರ್ಬಿಯಾದ ನೊವಾಕ್ ಜೊಕೊವಿಚ್ ಅವರನ್ನು ಮಣಿಸಿ ಚಾಂಪಿಯನ್ ಆಗಿದ್ದರು.

ಅಲ್ಕರಾಜ್ ಈ ಬಾರಿಯೂ ಪ್ರಶಸ್ತಿ ಗೆದ್ದರೆ ಓಪನ್ ಯುಗದಲ್ಲಿ ಸತತ ಮೂರನೇ ಬಾರಿ ಚಾಂಪಿಯನ್ ಆದ ಐದನೇ ಆಟಗಾರ ಎಂಬ ಹಿರಿಮೆಗೆ ಪಾತ್ರವಾಗಲಿದ್ದಾರೆ. ಬ್ಯಾರ್ನ್ ಬೋರ್ಗ್, ರೋಜರ್ ಫೆಡರರ್, ಪೀಟ್ ಸಾಂಪ್ರಾಸ್ ಮತ್ತು ಜೊಕೊವಿಕ್ ಈ ಸಾಧನೆ ಮಾಡಿದ ಇತರರು.





ಗೆಲುವಿನ ಸಂಭ್ರಮದಲ್ಲಿ ನೊವಾಕ್ ಜೊಕೊವಿಚ್ (ಎಡಚಿತ್ರ) ಕಾರ್ಲೋಸ್ ಅಲ್ಕರಾಜ್ ಎಎಫ್‌ಪಿ ಚಿತ್ರಗಳು

### 16ನೇ ಬಾರಿ ಕ್ವಾರ್ಟರ್‌ಗೆ ಜೊಕೊವಿಚ್: ದಾಖಲೆ

ಏಳು ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಅವರು ವಿಂಬಲ್ಡನ್‌ನಲ್ಲಿ ದಾಖಲೆಯ 16ನೇ ಬಾರಿ ಕ್ವಾರ್ಟರ್ ಫೈನಲ್ ತಲುಪಿದರು. ಸೋಮವಾರ ನಡೆದ ಪಂದ್ಯದಲ್ಲಿ ಆರನೇ ಶ್ರೇಯಾಂಕದ ಜೊಕೊವಿಚ್ 1-6, 6-4, 6-4, 6-4ರಿಂದ 11ನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ ಅವರನ್ನು ಸೋಲಿಸಿದರು.

ಮೊದಲ ಸೆಟ್‌ನ ಹಿನ್ನಡೆಯಿಂದ ಪುಟಿದೆದ್ದ ಸರ್ಬಿಯಾದ ಜೊಕೊವಿಚ್ ನಂತರದ ಮೂರು ಸೆಟ್‌ಗಳನ್ನು ಗೆದ್ದು ಬೀಗಿದರು. ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಇದು ಅವರಿಗೆ 101ನೇ ಗೆಲುವು. ಪುರುಷರ ಸಿಂಗಲ್ಸ್‌ನಲ್ಲಿ ರೋಜರ್ ಫೆಡರರ್ (105) ಬಳಿಕ ಅತಿ ಹೆಚ್ಚು ಪಂದ್ಯ ಗೆದ್ದ ದಾಖಲೆಗೆ ಅವರು ಪಾತ್ರರಾಗಿದ್ದಾರೆ. ಮುಂದಿನ ಸುತ್ತಿನಲ್ಲಿ ಅವರಿಗೆ 22ನೇ ಶ್ರೇಯಾಂಕದ ಫ್ಲಾವಿಯೊ ಕೊಬೊಲ್ಲಿ ಎದುರಾಳಿ.

ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಹಾದಿಯಲ್ಲಿರುವ ಜೊಕೊವಿಚ್ ಅವರ ಆಟವನ್ನು ಎಂಟು ಬಾರಿ ಚಾಂಪಿಯನ್ ಫೆಡರರ್ ಅವರು ರಾಯಲ್ ಬಾಕ್ಸ್‌ನಲ್ಲಿ ಕುಳಿತು ಕಣ್ತುಂಬಿಕೊಂಡರು.

ಸ್ವಿಟ್ಜರ್ಲೆಂಡ್‌ನ 43 ವರ್ಷ ವಯಸ್ಸಿನ ಫೆಡರರ್ ಅವರು ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ 2019ರಲ್ಲಿ ಕೊನೆಯ ಬಾರಿ ಆಡಿದ್ದರು. ಅಂದು ಫೈನಲ್‌ನಲ್ಲಿ ಐದು ಸೆಟ್‌ಗಳ ಹೋರಾಟದಲ್ಲಿ ಜೊಕೊವಿಚ್ ವಿರುದ್ಧ ಅವರು ಸೋಲು ಕಂಡಿದ್ದರು. ಅದು ವಿಂಬಲ್ಡನ್ ಇತಿಹಾಸದಲ್ಲೇ ಅತಿ ದೀರ್ಘ ಅವಧಿಯ ಫೈನಲ್ ಪಂದ್ಯವಾಗಿತ್ತು.

ಶ್ರೇಯಾಂಕರಹಿತ ಆಟಗಾರ ಕ್ಯಾಮೆರಾನ್ 6-3, 7-6(4), 6-7(7), 6-7(5), 6-3ರ ಐದು ಸೆಟ್‌ಗಳ ರೋಚಕ ಹೋರಾಟದಲ್ಲಿ ಚಿಲಿಯ ನಿಕೋಲಸ್ ಜಾರ್ರಿ ಅವರನ್ನು ಮಣಿಸಿದರು. 2022ರಲ್ಲಿ ಸೆಮಿಫೈನಲ್ ತಲುಪಿದ್ದ ಕ್ಯಾಮೆರಾನ್, ಈ ಬಾರಿ ಸ್ಪರ್ಧೆಯಲ್ಲಿ ಉಳಿದಿರುವ ಆತಿಥೇಯ ದೇಶದ ಏಕೈಕ ಆಟಗಾರನಾಗಿದ್ದಾರೆ.

**ಕೊಬೊಲ್ಲಿ ಮುನ್ನಡೆ:** ಇಟಲಿಯ ಫ್ಲಾವಿಯೊ ಕೊಬೊಲ್ಲಿ 6-4, 6-4, 6-7(4), 7-6(3)ರಿಂದ ಮರಿನ್ ಸಿಲಿಕ್ (ಕ್ರೊವೇಷ್ಯಾ) ಅವರನ್ನು ಮಣಿಸಿ ಕಾರ್ಟರ್ ಫೈನಲ್ ತಲುಪಿದರು. 23 ವರ್ಷ ವಯಸ್ಸಿನ ಕೊಬೊಲ್ಲಿ, ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಎಂಟರ ಘಟ್ಟ ಪ್ರವೇಶಿಸಿದರು.

**ಬೆನ್ಸಿಕ್ ಮುನ್ನಡೆ:** ಟೋಕಿಯೊ ಒಲಿಂಪಿಕ್ಸ್ ಚಾಂಪಿಯನ್, ಸ್ವಿಟ್ಜರ್ಲೆಂಡ್‌ನ ಬೆಲಿಂಡಾ ಬೆನ್ಸಿಕ್ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 7-6(4, 6-4ರಿಂದ 18ನೇ ಶ್ರೇಯಾಂಕದ ಎಕಟೆರಿನಾ ಅಲೆಕ್ಸಾಂಡ್ರೊವಾ (ರಷ್ಯಾ) ಅವರಿಗೆ ಆಘಾತ ನೀಡಿದರು. ವಿಂಬಲ್ಡನ್‌ನಲ್ಲಿ ಒಂಬತ್ತನೇ ಬಾರಿ ಸ್ಪರ್ಧಿಸುತ್ತಿರುವ 28 ವರ್ಷ ವಯಸ್ಸಿನ ಬೆನ್ಸಿಕ್, ಇದೇ ಮೊದಲ ಬಾರಿ ಎಂಟರ ಘಟ್ಟ ತಲುಪಿದರು.

## ಐಸಿಸಿಗೆ ಸಂಜೋಗ್ ನೂತನ ಸಿಇಒ

ದುಬೈ (ಪಿಟಿಐ): ಭಾರತದ ಸಂಜೋಗ್ ಗುಪ್ತಾ ಅವರನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಹುದ್ದೆಗೆ ಸೋಮವಾರ ನೇಮಕ ಮಾಡಲಾಗಿದೆ.

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಗಿಂತ ಮುನ್ನ ಆಸ್ಟ್ರೇಲಿಯಾದ ಜೆಫ್ ಅಲಾರ್ಡಿಸ್ ಅವರು ಹುದ್ದೆಯಿಂದ ಕೆಳಗಿಳಿದ ನಂತರ ತೆರವಾಗಿದ್ದ ಸ್ಥಾನಕ್ಕೆ ಗುಪ್ತಾ ನೇಮಕವಾಗಿದ್ದಾರೆ. ಜೆಫ್ ಅವರು ಕೌಟುಂಬಿಕ ಕಾರಣಗಳಿಗಾಗಿ ಹುದ್ದೆ ತೊರೆಯುತ್ತಿರುವುದಾಗಿ ತಿಳಿಸಿದ್ದರು.

'ಮಾಧ್ಯಮ ಮೊಘಲ್' ಎಂದೇ ಕ್ರೀಡಾ ಮಾಧ್ಯಮಲೋಕದಲ್ಲಿ ಹೆಸರಾದವರು ಗುಪ್ತಾ, ಇದೀಗ ಐಸಿಸಿಯ ಏಳನೇ ಸಿಇಒ ಆಗಿ ಕಾರ್ಯಾರಂಭ ಮಾಡಿದ್ದಾರೆ. ಈ ಹುದ್ದೆಗೆ ಆಯ್ಕೆ ಬಯಸಿ 25 ದೇಶಗಳ 2500 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಅದರಲ್ಲಿ 12 ಜನರನ್ನು ಅಂತಿಮ ಪಟ್ಟಿಯಲ್ಲಿ ಉಳಿಸಲಾಗಿತ್ತು. ಈ ಪೈಕಿ ಗುಪ್ತಾ ಮೊದಲ ಆಯ್ಕೆಯಾದರು.

ಗುಪ್ತಾ ಅವರು ಪತ್ರಕರ್ತರಾಗಿ ವೃತ್ತಿಜೀವನ ಆರಂಭಿಸಿದ್ದರು. 2010ರಲ್ಲಿ ಸ್ಟಾರ್ ಇಂಡಿಯಾ ಸೇರ್ಪಡೆಯಾಗಿದ್ದರು. ಕಂಟೆಂಟ್, ಪ್ರೋಗ್ರಾಮಿಂಗ್ ಮತ್ತು ಸ್ಟ್ರಾಟೆಜಿ ವಿಭಾಗಗಳ ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು. 2020ರಲ್ಲಿ ಡಿಸ್ನಿ ಮತ್ತು ಸ್ಟಾರ್ ಇಂಡಿಯಾದ ಮುಖ್ಯಸ್ಥರಾಗಿ ನೇಮಕವಾದರು. ಹೋದ ವರ್ಷ ವಯಕಾಮ್ 18 ಮತ್ತು ಡಿಸ್ನಿ ಸ್ಟಾರ್ ವಿಲೀನಗೊಂಡವು. ತದನಂತರ ಗುಪ್ತಾ ಅವರು ಜಿಯೊಸ್ಟಾರ್ ಸ್ಪೋರ್ಟ್ಸ್ ಸಿಇಒ ಆಗಿದ್ದರು.



ಸಂಜೋಗ್ ಗುಪ್ತಾ

'ಅರ್ಜಿ ಸಲ್ಲಿಸಿದವರಲ್ಲಿ ಕ್ರೀಡಾ ಆಡಳಿತ ಸಂಘಟನೆಗಳ ಸೀನಿಯರ್ ಕಾರ್ಪೊರೇಟ್ ಅಧಿಕಾರಿಗಳೂ ಇದ್ದರು. ಭಾರತ ಮತ್ತು ವಿಶ್ವದಾದ್ಯಂತ ಕ್ರೀಡಾ ನೇರಪ್ರಸಾರ ಕ್ರಾಂತಿಯಲ್ಲಿ ಗುಪ್ತಾ ಅವರದ್ದು ಪ್ರಮುಖ ಪಾತ್ರವಾಗಿದೆ' ಎಂದೂ ಐಸಿಸಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಹಿಂದೆ ಆಸ್ಟ್ರೇಲಿಯಾದ ಡೇವಿಡ್ ರಿಚರ್ಡ್ಸ್, ಮಾಲ್ಕಂ ಸ್ಪೀಡ್, ಅಲಾರ್ಡಿಸ್, ದಕ್ಷಿಣ ಆಫ್ರಿಕಾದ ಡೇವಿಡ್ ರಿಚರ್ಡ್ಸನ್ ಮತ್ತು ಹರೂನ್ ಲಾರ್ಗಡ್ ಮತ್ತು ಭಾರತದ ಮನು ಸಾವನೆ ಅವರು ಕೂಡ ಸಿಇಒ ಆಗಿ ಕಾರ್ಯನಿರ್ವಹಿಸಿದ್ದಾರೆ. ಸದ್ಯ ಭಾರತದ ಜಯ್ ಶಾ ಅವರು ಐಸಿಸಿ ಮುಖ್ಯಸ್ಥರಾಗಿದ್ದಾರೆ.

## ನೋಂದಣಿಯಾಗದ ಕೋಚ್‌ಗಳಿಗೆ ಎಎಫ್‌ಐ ಕಡಿವಾಣ

ನವದೆಹಲಿ (ಪಿಟಿಐ): ಭಾರತ ಅಥ್ಲೆಟಿಕ್ಸ್ ಫೆಡರೇಷನ್‌ನಿಂದ (ಎಎಫ್‌ಐ) ನೋಂದಾಯಿತರಲ್ಲದ ಕೋಚ್‌ಗಳಿಂದ ತರಬೇತಿ ಪಡೆದ ಕ್ರೀಡಾಪಟುಗಳನ್ನು ರಾಷ್ಟ್ರೀಯ ಕ್ರೀಡಾ ಪ್ರಶಸ್ತಿಗಳಿಗೆ ಪರಿಗಣಿಸುವುದಿಲ್ಲ ಎಂದು ಎಎಫ್‌ಐ ಹೇಳಿದೆ.

ಅರ್ಜುನ ಮತ್ತು ಖೇಲ್ ರತ್ನ ಪ್ರಶಸ್ತಿಯಂತಹ ರಾಷ್ಟ್ರೀಯ ಗೌರವಗಳಿಗೂ ಇದು ಅನ್ವಯವಾಗುತ್ತದೆ. ಕ್ರೀಡೆಯ ರಾಷ್ಟ್ರೀಯ ಸರ್ಕ್ಯೂಟ್‌ನಲ್ಲಿ ಹೆಚ್ಚುತ್ತಿರುವ ಡೋಪಿಂಗ್ ಪ್ರಕರಣಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಈ ಕ್ರಮಕ್ಕೆ ಮುಂದಾಗಿದೆ.

ಅರ್ಹ ಕೋಚ್‌ಗಳ ನೋಂದಣಿಗೆ ಜುಲೈ 31ರ ಗಡುವನ್ನು ಎಎಫ್‌ಐ ನಿಗದಿಪಡಿಸಿದೆ.

'ತರಬೇತುದಾರರು ತಾವೇ ನೋಂದಾಯಿಸಿಕೊಳ್ಳಬೇಕು. ನಂತರದಲ್ಲಿ ನೋಂದಾಯಿತ ಕೋಚ್‌ಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗುತ್ತದೆ. ನೋಂದಣಿ ಮಾಡಿಕೊಳ್ಳದ ಕೋಚ್‌ಗಳನ್ನು ಕಪ್ಪುಪಟ್ಟಿಗೆ ಸೇರಿಸಲಾಗುತ್ತದೆ ಎಂದು ಎಎಫ್‌ಐ ವಕ್ತಾರ ದಿಲ್ ಸುಮರಿವಾಲಾ ಪಿಟಿಐಗೆ ತಿಳಿಸಿದ್ದಾರೆ.

ಅಥ್ಲೀಟ್‌ಗಳು ನೋಂದಣಿಯಾಗದ ಕೋಚ್‌ಗಳಿಂದ ತರಬೇತಿ ಪಡೆದು ಪದಕ ಗೆದ್ದರೂ ಅವರನ್ನೂ ರಾಷ್ಟ್ರೀಯ ಪ್ರಶಸ್ತಿಗೆ ಶಿಫಾರಸು ಮಾಡುವುದಿಲ್ಲ ಎಂದು ಮಾಹಿತಿ ನೀಡಿದ್ದಾರೆ.

# ಮಹಾರಾಷ್ಟ್ರ ತಂಡಕ್ಕೆ ಪೃಥ್ವಿ ಶಾ ಸೇರ್ಪಡೆ



ಮುಂಬೈ (ಪಿಟಿಐ): ಮುಂಬೈ ಕ್ರಿಕೆಟಿಗ ಪೃಥ್ವಿ ಶಾ ಅವರು ಸೋಮವಾರ ಮಹಾರಾಷ್ಟ್ರ ತಂಡವನ್ನು ಸೇರ್ಪಡೆಯಾಗಿದ್ದಾರೆ. ಮುಂಬರುವ ದೇಶಿ ಕ್ರಿಕೆಟ್ ಋತುವಿನಲ್ಲಿ ಅವರು ಮಹಾರಾಷ್ಟ್ರ ತಂಡದಲ್ಲಿ ಆಡುವರು ಎಂದು ರಾಜ್ಯ ಕ್ರಿಕೆಟ್ ಸಂಸ್ಥೆ ತಿಳಿಸಿದೆ.

ಬೇರೆ ರಾಜ್ಯದ ತಂಡಕ್ಕೆ ತೆರಳಲು ತಮಗೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡಬೇಕು ಎಂದು ಪೃಥ್ವಿ ಅವರು ಹೋದ ತಿಂಗಳು ಮುಂಬೈ ಕ್ರಿಕೆಟ್ ಸಂಸ್ಥೆಗೆ ಮನವಿಪತ್ರ ಸಲ್ಲಿಸಿದ್ದರು.

ಫಿಟ್‌ನೆಸ್ ಕೊರತೆ ಮತ್ತು ಅಶಿಸ್ತಿನ ಕಾರಣಕ್ಕಾಗಿ ಮುಂಬೈ ರಣಜಿ ಮತ್ತು ದುಲೀಪ್ ಟ್ರೋಫಿ ತಂಡಗಳಿಂದ ಅವರಿಗೆ ಅರ್ಧಚಂದ್ರ ನೀಡಲಾಗಿತ್ತು. ಹೋದ ಸಲದ ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮಧ್ಯಪ್ರದೇಶ ಎದುರು ಅವರು ಆಡಿದ್ದರು. ಮುಂಬೈ ಪರವಾಗಿ ಅವರು ಆಡಿದ ಕೊನೆಯ ಪಂದ್ಯ ಅದಾಗಿತ್ತು.

'ಭಾರತ ತಂಡದ ಆಟಗಾರ ಕೂಡ ಆಗಿರುವ ಆರಂಭಿಕ ಬ್ಯಾಟರ್ ಪೃಥ್ವಿ ಶಾ ಅವರು ಮುಂಬೈ ಕ್ರಿಕೆಟ್ ಸಂಸ್ಥೆಯಿಂದ ಅಧಿಕೃತವಾಗಿ ಹೊರನಡೆದಿದ್ದಾರೆ. ಅವರು ಈಗ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಸೇರ್ಪಡೆಗೊಂಡಿದ್ದಾರೆ' ಎಂದು ಪ್ರಕಟಣೆ ಯಲ್ಲಿ ತಿಳಿಸಲಾಗಿದೆ.


ಪೃಥ್ವಿ ಅವರು ಭಾರತ ತಂಡದಲ್ಲಿ ಐದು ಟೆಸ್ಟ್, ಆರು ಏಕದಿನ ಮತ್ತು ಒಂದು ಟಿ20 ಪಂದ್ಯದಲ್ಲಿ ಆಡಿದ್ದಾರೆ.

# ಭಾರತ ತಂಡಕ್ಕೆ ಭಾಕರ್ ನಾಯಕತ್ವ

ನವದೆಹಲಿ (ಪಿಟಿಐ): ಒಲಿಂಪಿಕ್ ಅವಳಿ ಪದಕ ವಿಜೇತೆ ಮನು ಭಾಕರ್ ಅವರು ಆಗಸ್ಟ್ 16ರಿಂದ 30ರವರೆಗೆ ಕಜಕಿಸ್ತಾನದಲ್ಲಿ ನಡೆಯಲಿರುವ 16ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ 35 ಶೂಟರ್‌ಗಳನ್ನು ಒಳಗೊಂಡ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆಯು (ಎನ್‌ಆರ್‌ಎಐ) ಸೋಮವಾರ ತಂಡವನ್ನು ಪ್ರಕಟಿಸಿದೆ. ಇದರೊಂದಿಗೆ ಸೆ.7ರಿಂದ 15ರವರೆಗೆ ಚೀನಾದಲ್ಲಿ ನಡೆಯಲಿರುವ ಐಎಸ್‌ಎಸ್‌ಎಫ್ ವಿಶ್ವಕಪ್ (ರೈಫಲ್/ಪಿಸ್ತೂಲ್), ಸೆ.24ರಿಂದ ಅ.2ರವರೆಗೆ ನವದೆಹಲಿಯಲ್ಲಿ ನಡೆಯಲಿರುವ ಜೂನಿಯರ್ ವಿಶ್ವಕಪ್ ಮತ್ತು ಕಜಕಸ್ತಾನದಲ್ಲಿ ನಡೆಯುವ ಏಷ್ಯನ್ ಜೂನಿಯರ್ ಚಾಂಪಿಯನ್‌ಷಿಪ್‌ಗೂ ತಂಡಗಳನ್ನು ಘೋಷಿಸಲಾಗಿದೆ.

ಏಷ್ಯನ್ ಚಾಂಪಿಯನ್‌ಷಿಪ್ ತಂಡದಲ್ಲಿರುವ 23 ವರ್ಷ ವಯಸ್ಸಿನ ಭಾಕರ್, ವೈಯಕ್ತಿಕ ವಿಭಾಗದ ಎರಡು ಸ್ಪರ್ಧೆಗಳಿಗೆ ಆಯ್ಕೆಯಾದ ಭಾರತದ ಏಕೈಕ ಶೂಟರ್ ಆಗಿದ್ದಾರೆ. ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಮತ್ತು ಮಹಿಳೆಯರ 25 ಮೀಟರ್ ಪಿಸ್ತೂಲ್ ಸ್ಪರ್ಧೆಗಳಲ್ಲಿ ಅವರು ಗುರಿಯಿಡಲಿದ್ದಾರೆ. ಮೂರು ಮಿಶ್ರ ತಂಡ ವಿಭಾಗ ಒಳಗೊಂಡಂತೆ 15 ಸ್ಪರ್ಧೆಗಳಲ್ಲಿ ಭಾರತದ ಶೂಟರ್‌ಗಳು ಪಾಲ್ಗೊಳ್ಳಲಿದ್ದಾರೆ.



ಮನು ಭಾಕರ್

ಏರ್ ರೈಫಲ್ (ಪುರುಷರ) ಮಾಜಿ ವಿಶ್ವ ಚಾಂಪಿಯನ್ ರುದ್ರಾಂಕ್ಷ್ ಪಾಟೀಲ್ ಮತ್ತು ಒಲಿಂಪಿಯನ್‌ಗಳಾದ ಅಂಜುಮ್ ಮೌದ್ಗಿಲ್ (ಮಹಿಳೆಯರ 50 ಮೀ ರೈಫಲ್ 3 ಪೊಸಿಷನ್), ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ (ಪುರುಷರ 50 ಮೀ ರೈಫಲ್ 3 ಪೊಸಿಷನ್), ಸೌರಭ್ ಚೌಧರಿ (ಪುರುಷರ 10 ಮೀ ಏರ್ ಪಿಸ್ತೂಲ್) ಮತ್ತು ಕೈನಾನ್ ಚೆನೈ (ಪುರುಷರ ಟ್ರ್ಯಾಪ್) ಅವರೂ ಏಷ್ಯನ್ ಚಾಂಪಿಯನ್‌ಷಿಪ್ ತಂಡದಲ್ಲಿದ್ದಾರೆ.

ಇಶಾ ಸಿಂಗ್ (ಮಹಿಳೆಯರ 25 ಮೀ ಪಿಸ್ತೂಲ್), ಮೆಹುಲಿ ಘೋಷ್ (ಏರ್ ರೈಫಲ್) ಮತ್ತು ಕಿರಣ್ ಅಂಕುಶ್ ಜಾಧವ್ (ಏರ್ ರೈಫಲ್) ಅವರು ಎರಡೂ ಸೀನಿಯರ್ ತಂಡಗಳಲ್ಲಿದ್ದಾರೆ. ಒಲಿಂಪಿಕ್ ಕಂಚಿನ ಪದಕ ವಿಜೇತ ಸ್ವಪ್ನಿಲ್ ಕುಸಾಳೆ ಮತ್ತು ಏಷ್ಯನ್ ಗೇಮ್ಸ್ ಮಾಜಿ ಚಾಂಪಿಯನ್ ರಾಹಿ ಸರ್ನೋಬತ್ ಅವರು ವಿಶ್ವಕಪ್‌ನ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

## ಅನಿಮೇಶ್ ಕುಜೂರ್ ರಾಷ್ಟ್ರೀಯ ದಾಖಲೆ



ನವದೆಹಲಿ (ಪಿಟಿಐ): ಭಾರತದ ಉದಯೋನ್ಮುಖ ಸ್ಪ್ರಿಂಟರ್ ಅನಿಮೇಶ್ ಕುಜೂರ್ ಅವರು ಗ್ರೀಸ್‌ನಲ್ಲಿ ನಡೆಯುತ್ತಿರುವ ಯುರೋಪಿಯನ್ ಅಥ್ಲೆಟಿಕ್ಸ್ 100 ಮೀ ಓಟದಲ್ಲಿ ರಾಷ್ಟ್ರೀಯ ದಾಖಲೆ ಬರೆದಿದ್ದಾರೆ.

22 ವರ್ಷ ವಯಸ್ಸಿನ ಕುಜೂರ್ ಅವರು 10.18 ಸೆಕೆಂಡುಗಳಲ್ಲಿ ಗುರಿಮುಟ್ಟುವ ಮೂಲಕ ಪ್ರಶಸ್ತಿ ಗೆದ್ದುಕೊಂಡರು. ಜೊತೆಗೆ, ಗುರಿಂದರ್ ವೀರ್ ಸಿಂಗ್ ಅವರ ಹೆಸರಿನಲ್ಲಿದ್ದ 10.20 ಸೆ.) ದಾಖಲೆಯನ್ನು ಮುರಿದರು.

ಒಡಿಶಾದ ಈ ಓಟಗಾರ, 100 ಮೀ. ಮತ್ತು 200 ಮೀ. ಎರಡರಲ್ಲೂ ರಾಷ್ಟ್ರೀಯ ದಾಖಲೆ ಹೊಂದಿರುವ ಭಾರತದ ಅಗ್ರಮಾನ್ಯ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ. ಅವರು ಈ ವರ್ಷದ ಫೆಡರೇಷನ್ ಕಪ್ ಸೀನಿಯರ್ ರಾಷ್ಟ್ರೀಯ ಅಥ್ಲೆಟಿಕ್ ಸ್ಪರ್ಧೆಗಳ 200 ಮೀ. ಓಟವನ್ನು 20.40 ಸೆಕೆಂಡುಗಳಲ್ಲಿ ಪೂರೈಸಿ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದರು.

**ದಾಖಲೆ ಸುಧಾರಿಸಿಕೊಂಡ ಅಫ್ಜಲ್:** ಮತ್ತೊಬ್ಬ ಅಥ್ಲೀಟ್ ಮೊಹಮ್ಮದ್ ಅಫ್ಜಲ್ ಅವರು 800 ಮೀ. ಓಟದಲ್ಲಿ ತಮ್ಮ ಹೆಸರಿನಲ್ಲಿಯೇ ಇದ್ದ ರಾಷ್ಟ್ರೀಯ ದಾಖಲೆಯನ್ನು ಸುಧಾರಿಸಿಕೊಂಡರು. ಅವರು, 1 ನಿ. 44.96 ಸೆಕೆಂಡುಗಳಲ್ಲಿ ಗುರಿ ತಲುಪಿ ಸ್ಪರ್ಧೆಯಲ್ಲಿ ಆರನೇ ಸ್ಥಾನ ಪಡೆದರು.